₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಶನಿವಾರ 28.02.2026 ಸಂಪುಟ: 11 ಸಂಚಿಕೆ: 44 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಕರ್ನಾಟಕದ ಕೈಜಾರಿದ ರಣಜಿ ಟ್ರೋಫಿ

ತನ್ನದೇ ನೆಲದಲ್ಲಿ ನಡೆಯುತ್ತಿರುವ ರಣಜಿ ಟ್ರೋಫಿ ಫೈನಲ್‌ನಲ್ಲಿ 1ನೇ ಇನಿಂಗ್ಸ್ ಹಿನ್ನಡೆ ಅನುಭವಿಸಿರುವ ಕರ್ನಾಟಕ, ಪ್ರಶಸ್ತಿ ಕಳೆದುಕೊಳ್ಳುವುದು ಖಚಿತವಾಗಿದೆ. ಶನಿವಾರ ಅಂತಿಮ ದಿನವಾಗಿದ್ದು ಪಂದ್ಯ ಡ್ರಾದತ್ತ ಸಾಗಿದೆ. 1ನೇ ಇನಿಂಗ್ಸ್ ಮುನ್ನಡೆ ಆಧಾರದಲ್ಲಿ ಮೊದಲ ಬಾರಿಗೆ ಜಮ್ಮುಕಾಶ್ಮೀರ ಟ್ರೋಫಿ ಗೆದ್ದು ಇತಿಹಾಸ ನಿರ್ಮಿಸುವುದು ಖಚಿತವಾಗಿದೆ.

ಸೊಂಪಾದ ಪುಟಗಳು

ಸಮಸ್ಯೆಗಳ ಸೂತ್ರಧಾರ ನೆಹರು

ವೀಕೆಂಡ್ ವಿತ್ ಮೋಹನ್ – ಮೋಹನ್ ವಿಶ್ವ 6

ಸ್ವರ್ಣಪ್ರಾಶನ: ಮಕ್ಕಳ ಆರೋಗ್ಯದ ಸುವರ್ಣ ಅಧ್ಯಾಯ

ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ – ಡಾ. ಸಾಧನಶ್ರೀ 7

ದಾರಿದೀಪೋಕ್ತಿ

ಪರಿಣತರು ಪ್ಲಾನ್ ಮಾಡ್ತಾರಲ್ಲ, ಆ ರೀತಿ ಪ್ಲಾನ್ ಮಾಡಬೇಕು. ಅದನ್ನು ಮಕ್ಕಳು ನಂಬುತ್ತಾರಲ್ಲ, ಆ ರೀತಿ ನಂಬಬೇಕು. ಆಗ ಯಾವ ಸಮಸ್ಯೆಯೂ ಆಗುವುದಿಲ್ಲ. ಇದರಲ್ಲಿ ಸ್ವಲ್ಪ ಏರುಪೇರಾದರೂ ಸಮಸ್ಯೆ ಆಗುತ್ತದೆ.

ವಕ್ರತುಂಡೋಕ್ತಿ

ನೀವು ಮಲಗಿದ್ದೀರಿ ಎಂಬುದು ಗೊತ್ತಾಗುವುದು ನಿಮಗೆ ಎಚ್ಚರವಾದಾಗಲೇ.

ಜಮೀರ್‌ಗೆ ಲೋಕಾ ನೋಟಿಸ್ ಜಾರಿ

ಬೆಂಗಳೂರು: ಅಲ್ಪಸಂಖ್ಯಾತ ಕಲ್ಯಾಣ ಇಲಾಖೆಯಲ್ಲಿ 625 ಕೋಟಿ ರುಪಾಯಿಗಳ ಅನುದಾನ ದುರ್ಬಳಕೆ ಮಾಡಿಕೊಂಡಿರುವ ಗಂಭೀರ ಆರೋಪದ ಹಿನ್ನೆಲೆಯಲ್ಲಿ ವಕ್ಫ್ ಮತ್ತು ಅಲ್ಪಸಂಖ್ಯಾತ ಕಲ್ಯಾಣ ಸಚಿವ ಜಮೀರ್ ಅಹ್ಮದ್ ಖಾನ್‌ಗೆ ಲೋಕಾಯುಕ್ತದಿಂದ ನೋಟಿಸ್ ಜಾರಿಯಾಗಿದೆ.

ಅಬಕಾರಿ ಹಗರಣದಲ್ಲಿ ದೋಷಮುಕ್ತಗೊಂಡ ಅರವಿಂದ್, ಸಿಸೋಡಿಯಾ

ದೆಹಲಿ ರಾಜಕಾರಣದಲ್ಲಿ ಧೂಳೆಬ್ಬಿಸಿ, ಪದತ್ಯಾಗಕ್ಕೆ ಕಾರಣವಾಗಿದ್ದ ಪ್ರಕರಣ

ಕೇಜ್ರಿವಾಲ್ ಖುಲಾಸೆ

ದೆಹಲಿ: ದೆಹಲಿ ಅಬಕಾರಿ ನೀತಿ ಪ್ರಕರಣದಲ್ಲಿ ಮಾಜಿ ಸಿಎಂ ಅರವಿಂದ ಕೇಜ್ರಿವಾಲ್ ಮತ್ತು ಮಾಜಿ ಡಿಸಿಎಂ ಮನೀಶ್ ಸಿಸೋಡಿಯಾ ಸೇರಿ ದಂತೆ 21 ಆರೋಪಿಗಳನ್ನು ದೆಹಲಿಯ ರೌಸ್ ಅವೆನ್ಯೂ ನ್ಯಾಯಾಲಯ ಶುಕ್ರವಾರ ಖುಲಾಸೆಗೊಳಿಸಿದೆ.

ದೆಹಲಿ ಅಬಕಾರಿ ನೀತಿ ಪ್ರಕರಣ ಕುರಿತು ಫೆಬ್ರವರಿ 12ರಂದು ಸಿಬಿಐ, ಕೇಜ್ರಿವಾಲ್, ಸಿಸೋ ಡಿಯಾ ಸೇರಿದಂತೆ ಇತರ 21 ಆರೋಪಿಗಳಿಂದ ವಿವರವಾದ ವಾದಗಳನ್ನು ಆಲಿಸಿದ ನಂತರ ನ್ಯಾಯಾಲಯ ತೀರ್ಪನ್ನು ಕಾಯ್ದಿರಿಸಲಾಗಿತ್ತು. ವಿಶೇಷ ನ್ಯಾಯಾಧೀಶ ಜಿತೇಂದ್ರ ಸಿಂಗ್ ಅವರು ಶುಕ್ರವಾರ ಆದೇಶ ಪ್ರಕಟಿಸಿದ್ದು, ಸಾಕ್ಷ್ಯಾಧಾರಗಳ ಕೊರತೆ ಮತ್ತು ಆರೋಪಪಟ್ಟಿಯಲ್ಲಿ ದೋಷಗಳು ಕಂಡುಬಂದ ಹಿನ್ನೆಲೆಯಲ್ಲಿ 21 ಆರೋಪಿಗಳನ್ನು ಖುಲಾಸೆಗೊಳಿಸಿದೆ.

ಸಿಬಿಐಗೆ ತರಾಟೆ: ಅಬಕಾರಿ ನೀತಿಯಲ್ಲಿ ಯಾವುದೇ ಪಿತೂರಿಯಾಗಲಿ ಅಥವಾ ಕ್ರಿಮಿನಲ್ ಉದ್ದೇಶಗಳಾಗಲಿ ಇರಲಿಲ್ಲ. ಆರೋಪಗಳಿಗೆ ಯಾವುದೇ ಅರ್ಹತೆ ಇಲ್ಲ. ಸಿಬಿಐ ಚಾರ್ಜ್‌ಶೀಟ್ ಅನೇಕ ದೋಷಗಳಿಂದ ಕೂಡಿದೆ. ಸಾಕ್ಷಿಗಳ ಹೇಳಿಕೆಗಳಿಂದ ಬೆಂಬಲಿತವಾಗಿಲ್ಲ. ಸಿಸೋಡಿಯಾ ಅವರ ವಿರುದ್ಧ ಹೆಸರಿಗಷ್ಟೆ ಪ್ರಕರಣ ದಾಖಲಿಸಲಾಗಿದೆ. ಕೇಜ್ರಿವಾಲ್ ವಿರುದ್ಧ ಸಾಕ್ಷ್ಯಾಧಾರಗಳಿಲ್ಲದೇ ಆರೋಪ ಹೊರಿಸಲಾಗಿದೆ ಎಂದು ಕೋರ್ಟ್ ಸಿಬಿಐ ಅನ್ನು ತರಾಟೆಗೆ ತೆಗೆದುಕೊಂಡಿದೆ.

ಏನಿದು ಹಗರಣ?: 2021ರ ನವೆಂಬರ್‌ನಲ್ಲಿ ದೆಹಲಿ ಅಬಕಾರಿ ನೀತಿಯನ್ನು ಜಾರಿಗೆ ತರಲಾಯಿತು. ವಿವಾದದ ಬಳಿಕ 2022ರ ಜುಲೈಯಲ್ಲಿ ಇದನ್ನು ರದ್ದುಪಡಿಸಲಾಯಿತು. 2022ರಲ್ಲಿ ದೆಹಲಿ ಮುಖ್ಯ ಕಾರ್ಯದರ್ಶಿ ನರೇಶ್ ಕುಮಾರ್ ಅವರು ಲೆಫ್ಟಿನೆಂಟ್ ಗವರ್ನರ್ ವಿನಯ್ ಕುಮಾರ್ ಸಕ್ಸೇನಾ ಅವರಿಗೆ ಈ ಕುರಿತು

ವರದಿಯನ್ನು ಸಲ್ಲಿಸಿದ್ದರು. ಆ ವರದಿಯಲ್ಲಿ, 2022ರ ಆರಂಭದಲ್ಲಿ ಪಂಜಾಬ್ ಮತ್ತು ಗೋವಾದಲ್ಲಿ ನಡೆದ ವಿಧಾನಸಭೆ ಚುನಾವಣೆಯಲ್ಲಿ ಪ್ರಭಾವ ಬೀರುವುದಕ್ಕಾಗಿ ಎಎಪಿ ಸರಕಾರವು ಅಬಕಾರಿ ಪರವಾನಗಿ ಶುಲ್ಕದಲ್ಲಿ ರಿಯಾಯಿತಿ, ದಂಡದ ಮೇಲಿನ ವಿನಾಯಿತಿ ಘೋಷಿಸಿತ್ತು. ಕೋವಿಡ್-19 ಸಾಂಕ್ರಾಮಿಕ ಸೇರಿದಂತೆ ವಿವಿಧ ಪರಿಹಾರ ಕ್ರಮಗಳಿಗಾಗಿ ಎಎಪಿ ನಾಯಕರು ಮದ್ಯದ ಅಂಗಡಿ ಮಾಲೀಕರಿಂದ ಪಡೆದ ಲಂಚ ಹಣವನ್ನು ಬಳಸಿದ್ದಾರೆ ಎಂದು ಉಲ್ಲೇಖಿಸಲಾಗಿತ್ತು. ಅಲ್ಲದೆ, ಎಎಪಿ ಸರಕಾರದ ಅವಧಿಯಲ್ಲಿ ಅಬಕಾರಿ ಸಚಿವರಾಗಿದ್ದ ಸಿಸೋಡಿಯಾ ಅವರು ತೆಗೆದುಕೊಂಡ ಏಕಪಕ್ಷೀಯ ನಿರ್ಧಾರದಿಂದ ಸರಕಾರದ ಖಜಾನೆಗೆ ₹580 ಕೋಟಿಗೂ ಅಧಿಕ ನಷ್ಟ ಉಂಟಾಗಿದೆ ಎಂದು ಆರೋಪಿಸಲಾಗಿತ್ತು. ಈ ವರದಿಯಿಂದಾಗಿ ಅಬಕಾರಿ ನೀತಿ ಪ್ರಕರಣ ಮುನ್ನೆಲೆಗೆ ಬಂದಿತ್ತು. ಬಳಿಕ ಈ ಪ್ರಕರಣ ದಾಖಲಿಸಿಕೊಂಡ ಸಿಬಿಐ ತನಿಖೆ ನಡೆಸಿತ್ತು.

→ 4

ಬಿಕ್ಕಿ ಬಿಕ್ಕಿ ಅತ್ತ ಕೇಜ್ರಿವಾಲ್

ನ್ಯಾಯಾಲಯದ ಆದೇಶ ಪ್ರಕಟಗೊಂಡ ಬಳಿಕ ಅರವಿಂದ ಕೇಜ್ರಿವಾಲ್ ಅವರು ಮಾಧ್ಯಮಗಳ ಎದುರು ಮಾತನಾಡುವ ವೇಳೆ ಬಿಕ್ಕಿ ಬಿಕ್ಕಿ ಅತ್ತರು. ದೆಹಲಿ ಅಬಕಾರಿ ನೀತಿ ಪ್ರಕರಣ ಸಂಬಂಧ ಕಳೆದ ಕೆಲವು ವರ್ಷಗಳಿಂದ ಬಿಜೆಪಿ ನಾಯಕರು ನಮ್ಮ ಮೇಲೆ ಆರೋಪ ಮಾಡುತ್ತಿದ್ದರು. ಇಂದು ನ್ಯಾಯಾಲ ಯವು ಈ ಎಲ್ಲ ಆರೋಪಗಳನ್ನು ತಿರಸ್ಕರಿಸಿದೆ. ಇದು ಸತ್ಯಕ್ಕೆ ಲಭಿಸಿದ ಗೆಲುವು. ನಾನು ಭ್ರಷ್ಟ ಅಲ್ಲ, ನಾನು ಮತ್ತು ಸಿಸೋಡಿಯಾ ಪ್ರಾಮಾಣಿಕರು ಎಂದು ಕಣ್ಣೀರು ಹಾಕಿದರು.

ಸಿಬಿಐ ಮೇಲ್ಮನವಿ

ಅಬಕಾರಿ ನೀತಿ ಹಗರಣದಲ್ಲಿ ದೆಹಲಿ ಮಾಜಿ ಸಿಎಂ ಅರವಿಂದ ಕೇಜ್ರಿವಾಲ್, ಮಾಜಿ ಡಿಸಿಎಂ ಮನೀಶ್ ಸಿಸೋಡಿಯಾ ಸೇರಿ 21 ಮಂದಿಯನ್ನು ಖುಲಾಸೆಗೊಳಿಸಿದ ವಿಶೇಷ ನ್ಯಾಯಾಲಯದ ಆದೇಶವನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸಲಾಗುವುದು ಎಂದು ಸಿಬಿಐ ಮೂಲಗಳು ತಿಳಿಸಿವೆ. ದೋಷಾ ರೋಪ ನಿಗದಿ ವೇಳೆ ಹಲವು ವಿಷಯಗಳನ್ನು ವಿಶೇಷ ನ್ಯಾಯಾ ಲಯ ಒಂದೋ ನಿರ್ಲಕ್ಷಿಸಿದೆ ಅಥವಾ ಪರಿಗಣಿಸಿಲ್ಲ. ಹೀಗಾಗಿ ಮೇಲ್ಮನವಿ ಸಲ್ಲಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇಂದಿನಿಂದ ದ್ವಿತೀಯ ಪಿಯುಸಿ ಪರೀಕ್ಷೆ

ಮಕ್ಕಳೇ ಆಲ್ ದಿ ಬೆಸ್ಟ್!

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯದಲ್ಲಿ ಇಂದಿನಿಂದ ದ್ವಿತೀಯ ಪಿಯುಸಿ ಪರೀಕ್ಷೆ ಆರಂಭವಾಗಲಿದ್ದು, ಈ ವೇಳೆ ಯಾವುದೇ ರೀತಿಯ ಅಕ್ರಮ ನಡೆಯದಂತೆ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ಹದ್ದಿನ ಕಣ್ಣಿಟ್ಟಿದೆ.

ಮಾ.17ರವರೆಗೆ ನಡೆಯುವ ಪರೀಕ್ಷೆಗೆ ರಾಜ್ಯಾದ್ಯಂತ 1,217 ಕೇಂದ್ರಗಳನ್ನು ಗುರುತಿಸಲಾಗಿದೆ. ಪರೀಕ್ಷೆಗೆ ನೋಂದಾಯಿಸಿರುವ 7.10 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳಲ್ಲಿ 6,46,801 ತರಗತಿ ವಿದ್ಯಾರ್ಥಿಗಳು (ಫ್ರೆಶರ್ಸ್), 50,540 ಪುನರಾವರ್ತಿತ, 13,022 ಖಾಸಗಿ ಅಭ್ಯರ್ಥಿಗಳಾಗಿದ್ದಾರೆ. ವಿಜ್ಞಾನ ವಿಭಾಗದಲ್ಲಿ ಅತಿ ಹೆಚ್ಚು 2,92,645 ವಿದ್ಯಾರ್ಥಿಗಳು, ವಾಣಿಜ್ಯ ವಿಭಾಗದಲ್ಲಿ 2,11,174, ಕಲಾ ವಿಭಾಗದಲ್ಲಿ 1,42,982 ಮಂದಿ ನೋಂದಾಯಿಸಿದ್ದಾರೆ.

ಯಾವುದೇ ಅಕ್ರಮ, ಗೊಂದಲಗಳಿಗೆ ಅವಕಾಶವಾಗದೆ ಸುಸೂತ್ರವಾಗಿ ಪರೀಕ್ಷೆ ನಡೆಸಲು ಸಕಲ ಸಿದ್ಧತೆ ಹಾಗೂ ಭದ್ರತಾ ವ್ಯವಸ್ಥೆ ಮಾಡಿಕೊಳ್ಳಲಾಗಿದೆ. ಎಲ್ಲ ಪರೀಕ್ಷಾ ಕೊಠಡಿಗಳಲ್ಲೂ ಸಿಸಿ ಕ್ಯಾಮೆರಾ ಕಣ್ಗಾವಲು ಮತ್ತು ಜಿಲ್ಲಾ ಕೇಂದ್ರದಲ್ಲಿ ಯಾವುದೇ ಕೇಂದ್ರದ ಯಾವುದೇ ಕೊಠಡಿ ವ್ಯವಸ್ಥೆಯನ್ನು ವೀಕ್ಷಿಸಬಹುದಾದ ವೆಬ್‌ಕಾಸ್ಟಿಂಗ್ ವ್ಯವಸ್ಥೆ ಈ ಬಾರಿಯೂ ಮುಂದುವರಿದಿದೆ. ಪರೀಕ್ಷಾ ಕೇಂದ್ರಗಳಲ್ಲಿ ಕಟ್ಟೆಚ್ಚರ, ಸಾಮಾಜಿಕ ಜಾಲತಾಣದ ಮೇಲೂ ಮಂಡಳಿ ಕಣ್ಣಿಟ್ಟಿದೆ. ಜತೆಗೆ ಪೇಪರ್ ಲೀಕ್ ಆಗದಂತೆ ಮುನ್ನೆಚ್ಚರಿಕೆ ಕ್ರಮವಹಿಸಲಾಗಿದ್ದು, ಪ್ರಶ್ನೆಪತ್ರಿಕೆ ರವಾನೆಗೂ ಬಿಗಿ ಭದ್ರತೆ ವಹಿಸಲಾಗಿದೆ ಎಂದು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ತಿಳಿಸಿದೆ.

→ 4

ಏನೆಲ್ಲಾ ಕ್ರಮ ಕೈಗೊಳ್ಳಲಾಗಿದೆ?

- ಪರೀಕ್ಷೆ ನಡೆಯುವ ದಿನದಿಂದ ಪರೀಕ್ಷಾ ಕೇಂದ್ರದ ಸುತ್ತ 200 ಮೀಟರ್‌ವರೆಗೆ ನಿಷೇಧಾಜ್ಞೆ ಜಾರಿ
- ಪರೀಕ್ಷಾ ಕೇಂದ್ರದ ಸುತ್ತಲಿನ ಜೆರಾಕ್ಸ್ ಅಂಗಡಿ, ಸೈಬರ್ ಸೆಂಟರ್, ಕಂಪ್ಯೂಟರ್ ಕೇಂದ್ರ ಬಂದ್
- ಹಿಂದಿನ ಪರೀಕ್ಷೆಗಳಲ್ಲಿ ಅಕ್ರಮದಲ್ಲಿ ಭಾಗಿಯಾಗಿರುವ ವ್ಯಕ್ತಿಗಳ ಮೇಲೆ ಪೊಲೀಸ್ ವಿಶೇಷ ನಿಗಾ
- ಪರೀಕ್ಷೆ ನಡೆಯುವ ರಾಜ್ಯದ ಎಲ್ಲ ಕೇಂದ್ರಗಳಲ್ಲಿ ಸಿಸಿಟಿವಿ ಕ್ಯಾಮೆರಾ ಅಳವಡಿಕೆ, ಕಣ್ಗಾವಲು
- ಸುಳ್ಳು ಸುದ್ದಿ ಹರಡಿಸುವ ಜಾಲತಾಣಗಳ ಮೇಲೆ ನಿಗಾ. ಪೊಲೀಸ್ ಇಲಾಖೆ ನೇತೃತ್ವದ ತಂಡ ರಚನೆ
- ಪರೀಕ್ಷಾ ವ್ಯವಸ್ಥೆ ಮಾನಿಟರ್ ಮಾಡಲು ವೆಬ್ ಕ್ಯಾಸ್ಟಿಂಗ್ ವ್ಯವಸ್ಥೆ, ಡಿಸಿ, ಎಸ್ಪಿಗಳಿಗೆ ಮಾನಿಟರ್ ವ್ಯವಸ್ಥೆ
- ಪ್ರಶ್ನೆಪತ್ರಿಕೆ ಖಜಾನೆಯಿಂದ ಕೇಂದ್ರಗಳಿಗೆ ಹೋಗುವಾಗ ಪೊಲೀಸ್ ಭದ್ರತೆ, ಪ್ರಶ್ನೆಪತ್ರಿಕೆ ರವಾನೆ ವಿಡಿಯೊ ಚಿತ್ರೀಕರಣ
- ನಿಗದಿ ಮಾಡಿದ ಸಮಯಕ್ಕಿಂತ ಮೊದಲು ಪ್ರಶ್ನೆಪತ್ರಿಕೆ ಖಜಾನೆಯಿಂದ ಓಪನ್ ಮಾಡುವಂತೆ ಇಲ್ಲ
- ಪ್ರಶ್ನೆಪತ್ರಿಕೆ ಜವಾಬ್ದಾರಿ ವಹಿಸಿರುವವರು ಅಕ್ರಮದಲ್ಲಿ ಭಾಗಿಯಾದರೆ ಕಾನೂನು ಕ್ರಮದ ಎಚ್ಚರಿಕೆ
- ಪರೀಕ್ಷಾ ಕೇಂದ್ರದಲ್ಲಿ ವಿದ್ಯಾರ್ಥಿಗಳು, ಸಿಬ್ಬಂದಿ, ಅಧಿಕಾರಿಗಳಿಗೆ ಸಂಪೂರ್ಣ ಫೋನ್ ನಿಷೇಧ
- ಪರೀಕ್ಷಾ ಕೇಂದ್ರಗಳಿಗೆ ವಾಚ್ ಸೇರಿ ಎಲ್ಲ ಎಲೆಕ್ಟ್ರಾನಿಕ್ ಉಪಕರಣಗಳು ನಿಷೇಧ

ಎಚ್‌ಡಿಕೆ ಮತ್ತೆ ಸಿಎಂ ನನ್ನ ಕೈಲಿಲ್ಲ: ಎಚ್ಡಿಡಿ

ವಿಜಯಪುರ: ಕುಮಾರಸ್ವಾಮಿ ಅವರನ್ನು ಮತ್ತೆ ಸಿಎಂ ಮಾಡುವುದು ನನ್ನ ಕೈಯಲ್ಲಿಲ್ಲ. ಅದೇನಿದ್ದರೂ ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ತೀರ್ಮಾನ ಮಾಡಬೇಕು ಎಂದು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಹೇಳಿದರು. ಜೆಡಿಎಸ್ ಬೆಳ್ಳಿಹಬ್ಬದ ಅಂಗವಾಗಿ ಶುಕ್ರವಾರ ಆಯೋಜಿಸಲಾಗಿದ್ದ ಜನತಾ ಸಮಾವೇಶದಲ್ಲಿ ಮಾತನಾಡಿ, ನಾವು ಎನ್‌ಡಿಎಗೆ ಕೊಡುವ ಶಕ್ತಿಯನ್ನು ಗುರುತಿಸಿ, ಬಳಸಿಕೊಳ್ಳುವ ರಾಜಕೀಯ ಜಾಣ್ಮೆ, ಪ್ರಬುದ್ಧತೆ ಮೋದಿ, ಶಾ ಅವರಿಗಿದೆ ಎಂದರು.

ಕಾಂಗ್ರೆಸ್ ಶಾಸಕ ಸುಬ್ಬಾರೆಡ್ಡಿಗೆ ರಿಲೀಫ್

ಬೆಂಗಳೂರು: ಬಾಗೇಪಲ್ಲಿ ಕ್ಷೇತ್ರದ ಕಾಂಗ್ರೆಸ್ ಶಾಸಕ ಎಸ್.ಎನ್.ಸುಬ್ಬಾರೆಡ್ಡಿ ಅವರ ಶಾಸಕ ಸ್ಥಾನ ಅಸಿಂಧುಗೊಳಿಸಿ ಕರ್ನಾಟಕ ಹೈಕೋರ್ಟ್ ನೀಡಿದ್ದ ಆದೇಶಕ್ಕೆ ಸುಪ್ರೀಂ ಕೋರ್ಟ್ ಮಧ್ಯಂತರ ತಡೆಯಾಜ್ಞೆ ನೀಡಿದೆ. ಈ ಮೂಲಕ ಶಾಸಕ ಸ್ಥಾನ ಕಳೆದುಕೊಳ್ಳುವ ಭೀತಿಯಲ್ಲಿದ್ದ ಸುಬ್ಬಾರೆಡ್ಡಿ ಅವರಿಗೆ ದೊಡ್ಡ ರಿಲೀಫ್ ಸಿಕ್ಕಂತಾಗಿದೆ. 2023ರ ಚುನಾವಣೆಯಲ್ಲಿ ಬಾಗೇಪಲ್ಲಿ ಕ್ಷೇತ್ರದಲ್ಲಿ ಸ್ಪರ್ಧಿಸಿದ್ದ ಸುಬ್ಬಾರೆಡ್ಡಿ 82,128 ಮತಗಳನ್ನು ಪಡೆದು ಜಯ ಗಳಿಸಿದ್ದರು. 62,949 ಮತ ಪಡೆದು ಸೋಲುಂಡಿದ್ದ ಸಿ.ಮುನಿರಾಜು ಅವರು 2023ರ ಜೂನ್ 24ರಂದು ಹೈಕೋರ್ಟ್ ಮೆಟ್ಟಿಲೇರಿದ್ದರು.

ವಿನಯ್ ಕುಲಕರ್ಣಿಗೆ ಜಾಮೀನು

ಬೆಂಗಳೂರು: ಧಾರವಾಡ ಗ್ರಾಮೀಣ ಮತಕ್ಷೇತ್ರದ ಜಿಲ್ಲಾ ಪಂಚಾಯತಿ ಮಾಜಿ ಸದಸ್ಯ ಯೋಗೇಶ್ ಗೌಡ ಹತ್ಯೆ ಪ್ರಕರಣದಲ್ಲಿ ಜೈಲುವಾಸ ಅನುಭವಿಸುತ್ತಿದ್ದ ಧಾರವಾಡ ಕ್ಷೇತ್ರದ ಕಾಂಗ್ರೆಸ್ ಶಾಸಕ ವಿನಯ್ ಕುಲಕರ್ಣಿ ಅವರಿಗೆ ಸುಪ್ರೀಂಕೋರ್ಟ್ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ. ಈ ಮೂಲಕ ಹಲವು ತಿಂಗಳಿಂದ ವಿಜಯಪುರದ ಜೈಲಿನಲ್ಲಿರುವ ಶಾಸಕ ವಿನಯ ಕುಲಕರ್ಣಿ ಅವರಿಗೆ ತಾತ್ಕಾಲಿಕವಾಗಿ ದೊಡ್ಡ ಸಮಾಧಾನ ಸಿಕ್ಕಂತಾಗಿದೆ. ಪ್ರಕರಣದ ವಿಚಾರಣೆಯನ್ನು ಮುಂದಿನ ಎರಡು ತಿಂಗಳೊಳಗೆ ಸಂಪೂರ್ಣವಾಗಿ ಮುಕ್ತಾಯಗೊಳಿಸುವಂತೆ ಸುಪ್ರೀಂಕೋರ್ಟ್ ವಿಚಾರಣಾ ನ್ಯಾಯಾಲಯಕ್ಕೆ ಕಟ್ಟುನಿಟ್ಟಿನ ಸೂಚನೆ ನೀಡಿದೆ.

ನಟ ವಿಜಯ್ ದಳಪತಿ ದಾಂಪತ್ಯದಲ್ಲಿ ಬಿರುಕು

ಚೆನ್ನೈ: ಕಾಲಿವುಡ್ ನಟ ದಳಪತಿ ವಿಜಯ್ ಸಂಸಾರದಲ್ಲಿ ಬಿರುಕು ಮೂಡಿದೆ. ವಿಜಯ್ ಪತ್ನಿ ಸಂಗೀತಾ ಅವರು ಫೆ.27ರಂದು ಚೆಂಗಲ್‌ಪಟ್ಟು ಕೌಟುಂಬಿಕ ಕೋರ್ಟ್‌ನಲ್ಲಿ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿದ್ದು, 27 ವರ್ಷಗಳ ದಾಂಪತ್ಯ ಜೀವನವನ್ನು ಕಡಿದುಕೊಳ್ಳಲು ಮುಂದಾಗಿದ್ದಾರೆ. ವಿಜಯ್ ಅವರಿಗೆ ನಟಿಯೊಬ್ಬರ ಜತೆ ಅನೈತಿಕ ಸಂಬಂಧ ಇದೆ ಎಂದು ಸಂಗೀತಾ ಆರೋಪಿಸಿದ್ದಾರೆ. ಇತ್ತೀಚೆಗಷ್ಟೇ ತಮಿಳುನಾಡು ಬಿಜೆಪಿ ರಾಜ್ಯಾಧ್ಯಕ್ಷ ನೈನಾರ್ ನಾಗೇಂದ್ರ ಅವರು ನಟಿ ತ್ರಿಶಾ ಹೆಸರಿನ ಜತೆ ವಿಜಯ್ ಅವರ ತಳುಕು ಹಾಕಿದ್ದರು.

ಲಾರಿಗೆ ಕಾರು ಡಿಕ್ಕಿ: ಮೂವರ ಸಾವು

ಚಿತ್ರದುರ್ಗ: ನಿಂತಿದ್ದ ಲಾರಿಗೆ ಕಾರೊಂದು ಡಿಕ್ಕಿಯಾಗಿ ಮೂವರು ಸಾವನ್ನಪ್ಪಿದ ಘಟನೆ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲೂಕಿನ ಹಿರೆಹಳ್ಳಿ ಬಳಿ ನಡೆದಿದೆ. ತುಮಕೂರು ಜಿಲ್ಲೆಯ ಕುಣಿಗಲ್ ಮೂಲದ ಐವರು ಕಾರಲ್ಲಿ ಮಂತ್ರಾಲಯಕ್ಕೆ ತೆರಳಿದ್ದರು. ರಾಯರ ದರ್ಶನ ಮುಗಿಸಿ ಮಂತ್ರಾಲಯದಿಂದ ಕುಣಿಗಲ್‌ಗೆ ಹಿಂದಿರುಗುವ ವೇಳೆ ಅಪಘಾತ ಸಂಭವಿಸಿದೆ. ಗುಬ್ಬಿ ತಾಲೂಕಿನ ಹೊಸಕೆರೆ ಗ್ರಾಮದ ನರಸಿಂಹ ಮೂರ್ತಿ (38), ಗಂಗಾಧರ್ (35), ಲೋಹಿತ್ (40) ಮೃತರು. ಉಳಿದ ಇಬ್ಬರು ಗಂಭೀರವಾಗಿ ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಫನ್‌ತರಂಗ

– ರಘುಪತಿ ಶೃಂಗೇರಿ –

ಜನರಲ್ಲಿ ಜಾಗೃತಿ ಮೂಡಿಸಲು ಮಾ. 1ಕ್ಕೆ ಪೊಲೀಸ್ ಓಟ.

ಸುದ್ದಿ

ವಿಶ್ವಸಂಸ್ಥೆ ಭದ್ರತಾ ಮಂಡಳಿ ಸಭೆಗೆ ಮೆಲಾನಿಯಾ ಅಧ್ಯಕ್ಷತೆ

ವಿಶ್ವಸಂಸ್ಥೆ: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಪತ್ನಿ ಮೆಲಾನಿಯಾ ಟ್ರಂಪ್ ಅವರು ಈ ಬಾರಿ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಸಭೆಯ ಅಧ್ಯಕ್ಷತೆ ವಹಿಸಿಕೊಳ್ಳಲಿದ್ದಾರೆ. ಈ ಮೂಲಕ ಇದೇ ಮೊದಲ ಬಾರಿಗೆ ಪ್ರಥಮ ಮಹಿಳೆಯೊಬ್ಬರು ಅಥವಾ ದೇಶದ ಪ್ರಥಮ ಪ್ರಜೆಯೊಬ್ಬರು ಭದ್ರತಾ ಮಂಡಳಿ ಸಭೆಯೊಂದರ ಅಧ್ಯಕ್ಷತೆ ವಹಿಸಿದಂತಾಗುತ್ತದೆ ಎಂದು ವಿಶ್ವಸಂಸ್ಥೆ ವಕ್ತಾರ ಸ್ಟೀಫನ್ ದುಜಾರಿಕ್ ತಿಳಿಸಿದ್ದಾರೆ. ವಿಶ್ವ ಆರೋಗ್ಯ ಸಂಸ್ಥೆ ಸೇರಿ ವಿಶ್ವಸಂಸ್ಥೆಯ ವಿವಿಧ ಸಂಘಟನೆಗಳಿಂದ ಟ್ರಂಪ್ ಆಡಳಿತ ಹೊರಬಂದಿದೆ. ಇದರ ನಡುವೆಯೇ, ಈಗ ಈ ಬೆಳವಣಿಗೆ ನಡೆದಿರುವುದು ಗಮನಾರ್ಹ.

ಡಿಎಂಕೆ ಸೇರಿದ ಪನ್ನೀರ್ ಸೆಲ್ವಂ



ಚೆನ್ನೈ: ತಮಿಳುನಾಡಿನ ಮಾಜಿ ಸಿಎಂ, ಉಚ್ಚಾಟಿತ ಎಐಎಡಿಎಂಕೆ ನಾಯಕ ಒ.ಪನ್ನೀರ್ ಸೆಲ್ವಂ ಅವರು ಶುಕ್ರವಾರ ಸಿಎಂ ಎಂ.ಕೆ. ಸ್ಟಾಲಿನ್ ಉಪಸ್ಥಿತಿಯಲ್ಲಿ ಆಡಳಿತಾರೂಢ ಡಿಎಂಕೆ ಪಕ್ಷಕ್ಕೆ ಸೇರ್ಪಡೆಯಾಗಿದ್ದಾರೆ. 2022ರ ಜುಲೈ 11ರಂದು ಎಐಎಡಿಎಂಕೆಯ ಮಧ್ಯಂತರ ಪ್ರಧಾನ ಕಾರ್ಯದರ್ಶಿಯಾಗಿ ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಎಡಪ್ಪಾಡಿ ಕೆ.ಪಳನಿಸ್ವಾಮಿ ಅವರನ್ನು ನೇಮಿಸಲಾಗಿತ್ತು. ಪ್ರತಿಸ್ಪರ್ಧಿಯಾಗಿದ್ದ ಒ.ಪನ್ನೀರಸೆಲ್ವಂ ಅವರನ್ನು ಪಕ್ಷದ ಖಜಾಂಚಿ ಹುದ್ದೆ ಮತ್ತು ಪ್ರಾಥಮಿಕ ಸದಸ್ಯತ್ವದಿಂದಲೇ ಉಚ್ಚಾಟಿಸಲಾಗಿತ್ತು.

274 ತಾಲಿಬಾನಿಗಳ ಹತ್ಯೆ: ಪಾಕಿಸ್ತಾನ

ಇಸ್ಲಾಮಾಬಾದ್: ಪಾಕಿಸ್ತಾನ ಹಾಗೂ ಅಫ್ಘಾನಿಸ್ತಾನ ನಡುವೆ ಸಂಘರ್ಷ ತೀವ್ರಗೊಂಡ ಬೆನ್ನಲ್ಲೇ ಅಫ್ಘಾನಿಸ್ತಾನದ ರಾಜಧಾನಿ ಕಾಬೂಲ್ ಸೇರಿದಂತೆ ಪ್ರಮುಖ ನಗರಗಳ ಮೇಲೆ ಪಾಕಿಸ್ತಾನವು ಬಾಂಬ್ ದಾಳಿ ನಡೆಸಿದೆ. ಕಳೆದೊಂದು ತಿಂಗಳಿನಿಂದ ಎರಡೂ ರಾಷ್ಟ್ರಗಳ ನಡುವೆ ದಾಳಿ-ಪ್ರತಿದಾಳಿ ನಡೆಯುತ್ತಿದ್ದು, ಅಫ್ಘಾನಿಸ್ತಾನದ ವಿರುದ್ಧ ಯುದ್ಧ ಆರಂಭಿಸಲಾಗಿದೆ ಎಂದು ಪಾಕಿಸ್ತಾನ ರಕ್ಷಣಾ ಸಚಿವ ಖ್ವಾಜಾ ಆಸಿಫ್ ಘೋಷಣೆ ಮಾಡಿದ್ದಾರೆ. 2021ರಲ್ಲಿ ತಾಲಿಬಾನಿಗಳು ಅಫ್ಘಾನಿಸ್ತಾನದಲ್ಲಿ ಅಧಿಕಾರ ಹಿಡಿದ ಬಳಿಕ ಇದೇ ಮೊದಲ ಬಾರಿಗೆ ವಾಯುದಾಳಿಗೆ ಸಾಕ್ಷಿಯಾಗಿದೆ. ಕಾಬೂಲ್ ಹಾಗೂ ಕಂದಹಾರ್‌ನಲ್ಲಿ ಭಾರಿ ಸ್ಫೋಟ ಸಂಭವಿಸಿವೆ. ಪಾಕಿಸ್ತಾನದ ಗಡಿ ಸೇನಾ ನೆಲೆಗಳನ್ನು ಗುರಿಯಾಗಿರಿಸಿ ಅಫ್ಘಾನ್ ಸೇನೆ ದಾಳಿ ನಡೆಸಿತ್ತು. ಇದಕ್ಕೆ ಪ್ರತಿಯಾಗಿ ಪಾಕಿಸ್ತಾನವು ನಡೆಸಿದ ಪ್ರತಿದಾಳಿಯಲ್ಲಿ ಅಫ್ಘಾನ್‌ನ 274 ಮಂದಿ ಮೃತಪಟ್ಟಿದ್ದಾರೆ ಎಂದು ಪಾಕಿಸ್ತಾನ ಸರಕಾರ ತಿಳಿಸಿದೆ. ಡುರಾಂಡ್ ಲೈನ್ ಉದ್ದಕ್ಕೂ ಕೈಗೊಂಡ ಪ್ರತಿದಾಳಿಗಳಲ್ಲಿ ಪಾಕಿಸ್ತಾನ ಸೇನೆಯ 55 ಯೋಧರನ್ನು ಹತ್ಯೆ ಮಾಡಲಾಗಿದೆ ಎಂದು ಅಫ್ಘಾನಿಸ್ತಾನದ ರಕ್ಷಣಾ ಸಚಿವಾಲಯ ತಿಳಿಸಿದೆ.

84ನೇ ವಯಸ್ಸಿಗೆ ಕಾಲಿಟ್ಟ ಯಡಿಯೂರಪ್ಪಗೆ ಶುಭ ಹಾರೈಕೆಗಳ ಮಹಾಪೂರ

ಬಿಎಸ್‌ವೈ ಹುಟ್ಟುಹಬ್ಬಕ್ಕೆ ಗಣ್ಯರ ದಂಡು

ಶಿಕಾರಿಪುರ: ದಣಿವರಿಯದ ಧೀಮಂತ ನಾಯಕ 84ನೇ ವಯಸ್ಸಿಗೆ ಪದಾರ್ಪಣೆ ಮಾಡಿದ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರ ಹುಟ್ಟುಹಬ್ಬ ಶುಕ್ರವಾರ ಸ್ವಕ್ಷೇತ್ರ ಶಿಕಾರಿಪುರದಲ್ಲಿ ಅಭಿಮಾನಿಗಳು ಅತ್ಯಂತ ವಿಜೃಂಭಣೆಯಿಂದ ಆಚರಿಸಿದರು.

ಬೆಳಗ್ಗೆ 10 ಗಂಟೆ ವೇಳೆಯಲ್ಲಿ ಯಡಿಯೂರಪ್ಪನವರು ಪುತ್ರ ಸಂಸದ ರಾಘವೇಂದ್ರ, ಹಾಗೂ ಶಾಸಕ ವಿಜಯೇಂದ್ರ, ಜತೆಗೆ ಶ್ರೀ ಹುಚ್ಚುರಾಯಸ್ವಾಮಿ ದೇವಾಲಯಕ್ಕೆ ಆಗಮಿಸಿ ಕ್ಷೇತ್ರ ದೇವತೆಗೆ ವಿಶೇಷ ಪೂಜೆ, ಪ್ರಾರ್ಥನೆ ಸಲ್ಲಿಸಿದರು. ನಂತರದಲ್ಲಿ ಸಮೀಪದ ಶ್ರೀ ರಾಘವೇಂದ್ರ ಸ್ವಾಮಿಗಳ ಮಠಕ್ಕೆ ತೆರಳಿ ರಾಯರ ವೃಂದಾವನದ ದರ್ಶನ ಪಡೆದು ಫಲ ಮಂತ್ರಾಕ್ಷತೆಯನ್ನು ಸ್ವೀಕರಿಸಿದರು. ಇದರೊಂದಿಗೆ ಜಯನಗರದಲ್ಲಿನ ಲಕ್ಷ್ಮಿ ವೆಂಕಟೇಶ್ವರ ದೇವಸ್ಥಾನ, ಕಾನೂರು ಬಸವೇಶ್ವರ ದೇವಾಲಯಕ್ಕೆ ತೆರಳಿ ಪೂಜೆ,



ಬಿಳಕಿ ಹಿರೇಮಠದ ರಾಚೋಟೇಶ್ವರ ಶಿವಾಚಾರ್ಯ ಸ್ವಾಮೀಜಿ, ತಾವರೆಕೆರೆ ಶ್ರೀಗಳು ಸೇರಿದಂತೆ ಹಲವು ಗಣ್ಯರು ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರಿಗೆ ಶುಭ ಕೋರಿದರು.

ಪ್ರಾರ್ಥನೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಸೊಸೆ ತೇಜಸ್ವಿನಿ ರಾಘವೇಂದ್ರ, ಪ್ರೇಮಾ ಪದ್ಮಾವತಿ, ಅರುಣಾದೇವಿ, ಉಮಾದೇವಿ ಮೊಮ್ಮಗ ಸುಭಾಷ್ ಭಗತ್ ಮೈತ್ರಿ, ಝೂನ್ಸಿ ಸಹಿತ ಕುಟುಂಬಸ್ಥರು ಜತೆಗಿದ್ದರು. ಕುಮದ್ವತಿ ಶಿಕ್ಷಣ ಸಂಸ್ಥೆಯ ಆಡಿಟೋರಿಯಂನಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ರಾಜ್ಯದ ನಾನಾ ಭಾಗಗಳಿಂದ ಅಪಾರ ಸಂಖ್ಯೆಯಲ್ಲಿ ಆಗಮಿಸಿದ್ದ ಗಣ್ಯರು, ಅಭಿಮಾನಿಗಳು ಕಾರ್ಯಕರ್ತರು ಶುಭಾಶಯ ಕೋರಿದರು.

ಈ ಸಂದರ್ಭದಲ್ಲಿ ಬಿಳಕಿ ಹಿರೇಮಠದ ಶ್ರೀಗಳಾದ ರಾಚೋಟೇಶ್ವರ ಸ್ವಾಮೀಜಿ, ಪ್ರತ್ಯಂಗಿರಾ ದೇವಾಲಯದ ಗುರುಗಳಾದ ಸುಪ್ರೀತ್ ಗುರೂಜಿ, ಆರಗ ಜ್ಞಾನೇಂದ್ರ, ಪ್ರಭು ಚೌವ್ಹಾಣ್, ಹರೀಶ್ ಪೂಂಜಾ, ಕಿರಣ್ ಕೊಡ್ಲಿ, ಬ್ರಿಜೇಶ್ ಚೌಟ, ಮಾಜಿ ಸಚಿವ ಶ್ರೀರಾಮುಲು, ಕರುಣಾಕರ ರೆಡ್ಡಿ, ಕಟ್ಟಾ ಸುಬ್ರಹ್ಮಣ್ಯ ನಾಯ್ಡು, ಬಿ.ಸಿ.ಪಾಟೀಲ್, ಶಶಿಕಲಾ ಜೊಲ್ಲೆ, ಪಿ.ರಾಜೀವ್, ಜೀವರಾಜ್, ಎಸ್. ರುದ್ರೇಗೌಡ, ಶಾಸಕರಾದ ಚನ್ನಬಸಪ್ಪ, ವಿಧಾನ ಪರಿಷತ್ ಸದಸ್ಯ ಡಾ.ಧನಂಜಯ್ ಸರ್ಜಿ ಸೇರಿ ಮತ್ತಿತರರು ಶುಭ ಕೋರಿದರು.

5.24 ಕೋಟಿ ರು. ಮೌಲ್ಯದ ಡ್ರಗ್ಸ್ ಜಪ್ತಿ

ಬೆಂಗಳೂರು: ಡ್ರಗ್ಸ್ ಪ್ರಕರಣಗಳಲ್ಲಿ ಇಬ್ಬರು ಮಹಿಳೆಯರು ಸೇರಿ ಒಟ್ಟು 16 ಪೆಡ್ಲರ್‌ಗಳನ್ನು ಬಂಧಿಸಿದ್ದಾರೆ. ಸಿಸಿಬಿ ಹಾಗೂ ನಗರದ ವಿವಿಧ ಠಾಣೆಗಳ ಪೊಲೀಸರು ಭರ್ಜರಿ ಕಾರ್ಯಾಚರಣೆ ನಡೆಸಿ ವಿದೇಶಿ ಪ್ರಜೆಗಳು ಸೇರಿದಂತೆ ಹೊರ ರಾಜ್ಯದ 8 ಆರೋಪಿಗಳ ಹೆಡೆಮುರಿ ಕಟ್ಟಿದ್ದಾರೆ. ಜತೆಗೆ ನಗರದಲ್ಲಿ 5.24 ಕೋಟಿ ರು. ಮೌಲ್ಯದ ಡ್ರಗ್ಸ್, ಮೂರು ಸಾವಿರ ಎಂಡಿಎಂ ಮಾತ್ರೆಗಳು ಮತ್ತು ಗಾಂಜಾ ಜಪ್ತಿ ಮಾಡಿದ್ದಾರೆ. ಇನ್ನು ನೈಜೀರಿಯಾ ಪ್ರಜೆಯ ಡ್ರಗ್ಸ್ ಡಿಲೀಂಗ್‌ಗೆ ಸಾಥ್ ಕೊಡುತ್ತಿದ್ದ ಕಿಲಾಡಿ ಲೇಡಿಯನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ. ಸುಭಾಷಿಣಿ ಬಂಧಿತ ಮಹಿಳೆ. ಬಾಗಲೂರು ಠಾಣಾ ವ್ಯಾಪ್ತಿಯ ಬಾಡಿಗೆ ಮನೆಯೊಂದರಲ್ಲಿ ವಾಸವಾ ಗಿದ್ದಳು. ಬಂಧಿತ ಸುಭಾಷಿಣಿ, ನೈಜೀರಿಯನ್ ಪ್ರಜೆಯೊಬ್ಬನ ಜತೆ ಸೇರಿ ಡ್ರಗ್ಸ್ ಡಿಲೀಂಗ್ ಮಾಡುತ್ತಿದ್ದಳು. ವಿದೇಶಿ ಪ್ರಜೆ ನೈಜೀರಿಯಾದಿಂದ ಡ್ರಗ್ಸ್ ತರಿಸಿಕೊಂಡು ಸುಭಾಷಿಣಿ ಮನೆಯಲ್ಲಿ ಶೇಖರಿಸಿಟ್ಟಿದ್ದ. ಆತ ಸೂಚಿಸಿದ್ದ ವಿಳಾಸ, ಗ್ರಾಹಕರಿಗೆ ಸುಭಾಷಿಣಿ ತಲುಪಿಸುತ್ತಿದ್ದಳು. ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದ್ದ ಸಿಸಿಬಿ ಮಾದಕ ದ್ರವ್ಯ ನಿಗ್ರಹ ದಳ, ಬಂಧಿತಳಿಂದ 2 ಕೋಟಿ ರು ಮೌಲ್ಯದ 300 ಎಕ್ಸ್‌ಟೆಸಿ ಮಾತ್ರೆಗಳನ್ನು ವಶಕ್ಕೆ ಪಡೆದುಕೊಂಡಿದ್ದಾರೆ. ಪರಾರಿಯಾಗಿರುವ ವಿದೇಶಿ ಡ್ರಗ್ ಪೆಡ್ಲರ್‌ಗಾಗಿ ಪೊಲೀಸರು ಬಲೆ ಬೀಸಿದ್ದಾರೆ.

ವಿರಾಮ
ಪ್ರತಿ ಭಾನುವಾರ

PUBLIC NOTICE

This is to bring to the notice of the general public that our client **Ms.Sushma D/o Mr.Rajendra Jogi** is intending to purchase the schedule property from **Mrs. Jyotsna Joshi W/o Mr.Karan Bahadur**; person/s objecting for the proposed purchase or are having any right, title, interest or any type of claim over the scheduled property is hereby called upon to file their objections/claims what so ever along with documentary proof on or before **7 days** from the date of publication of this notice with the under mentioned advocate failing which; our client shall proceed and complete the sale transaction with the above stated person.

SCHEDULE PROPERTY

All that piece and parcel of the Property bearing **Site. No. 63,** BBMP E-PID No. 9882445827 Katha No. 13/63, Formed in Property No. 13, Situated **KALKERE VILLAGE, K. R. Puram Hobli, Bangalore East Taluk,** now comes within limits of BBMP, Ward No. 26, Bangalore, measuring East to West **45 Feet** and North to South **30 Feet** in all measuring **1350 Sq. Feet** and bounded on:-
East by : Road; West by : Private Property; North by: Site. No. 62; South by : Site. No. 64;

C.K.V.K. LAW ASSOCIATES
Mr. VENKATESH CHANDRAN M.A., L.L.B.
Advocates & Legal Consultants Bangalore-43
M : 9845846428, 9108784843
E- Mail: rvlaw.76@gmail.com

PUBLIC NOTICE

I, AZEET K CHEBROLU, S/o Kameshwar Rao Chebrolu, No.8, SR Layout, Murugesh Palya, HAL Shiva Temple, Bengaluru City, I lost my Original Sale Deed Last page No. (08) Sr. No. 844, Site No-135 and 136, New Bengaluru Village Location Denkanikotta Taluk, Dharmapuri District, Krishnagiri Kelamangala, Kundamaranapalli Village & Original General Power of Attorney (GPA) document no. 30322 dated 18.06.2015 consisting of 3 pages, registered and issued by JSRO at Ongole, AP. We have lodge Police Complaint in Ramamurthy Nagar Police Station Bengaluru on date 19/02/2026 Vide Lost Report No. 2070180/2026 (Sale Deed) and Lost Report No. 2071959/2026 (GPA). If found please handover to the above address or contact Mobile No.9590813882

ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ., ಕನಕಪುರ
ಸಿ.ಮಿಸ್. ನಂ: 84/2026

ಅರ್ಜಿದಾರರು : ಶ್ರೀಮತಿ, ಕುಸುಮಬಾಲೆ ಹೆಚ್ ಕೋಂ ದೊಡ್ಡಯ್ಯ, ಬಿನ್ ಲೇಟ್ ಹುಚ್ಚಯ್ಯ, ವಯಸ್ಸು 35 ವರ್ಷ, ವಾಸ: ನಂ.69, 3ನೇ ಕ್ರಾಸ್, ಸ್ವರ್ಣ ಸಂದ್ರ, ಮಂಡ್ಯ. – 571403 ಮಂಡ್ಯ ಜಿಲ್ಲೆ ಮತ್ತು ಇನ್ನೊಬ್ಬರು,

ವಿರುದ್ಧ

ಪ್ರತಿ ಅರ್ಜಿದಾರರ : 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್, ಕನಕಪುರ ತಾಲ್ಲೂಕು. 2. ಗ್ರಾಮ ಲೆಕ್ಕಾಧಿಕಾರಿಗಳು, ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1 ಮತ್ತು 2 ನೇ ಅರ್ಜಿದಾರರ ತಂದೆಯವರಾದ ಕರಿಯಪ್ಪ @ ಹುಚ್ಚಯ್ಯ ಬಿನ್ ಲೇಟ್ ಚೆನ್ನಯ್ಯ ರವರು ಬೆಂಗಳೂರು ದಕ್ಷಿಣ ಜಿಲ್ಲೆ, ಕನಕಪುರ ತಾಲ್ಲೂಕು, ಕಸಬಾ ಹೋಬಳಿ, ವಿರುಪಸಂದ್ರ ಗ್ರಾಮದಲ್ಲಿ ದಿನಾಂಕ: 01.05.2024 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಮೇಲ್ಕಂಡ ಪ್ರಕರಣವನ್ನು ಸಲ್ಲಿಸಿದ್ದು ಇವರ ಮರಣ ದಿನಾಂಕ ಬಗ್ಗೆ ಯಾರಿಗಾದರೂ ತಕರಾರು ಇದ್ದರೆ ಖುದ್ದಾಗಿಯಾಗಲೀ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲಿ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ ದಿನಾಂಕ: 13–03–2026 ಬೆಳಿಗ್ಗೆ 11.00 ಗಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು. ತಪ್ಪಿದ್ದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಏಕಪಕ್ಷೀಯವಾಗಿ ಇತ್ಯರ್ಥಗೊಳಿಸಲಾಗುವುದು.

ದಿನಾಂಕ: 20.02.2026 ರಂದು ನನ್ನ ಹಸ್ತಾಕ್ಷರ ಮತ್ತು ನ್ಯಾಯಾಲಯದ ಮೋಹರಿನೊಂದಿಗೆ ನೀಡಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ

ಅರ್ಜಿದಾರರ ಪರ ವಕೀಲರು:
ಶ್ರೀ ಕಿರಣ್ ಕುಮಾರ್ ಬಿ.ಎನ್, ವಕೀಲರು, ಕನಕಪುರ ಟೌನ್
ಸ್ಥಳ : ಕನಕಪುರ **ದಿನಾಂಕ: 20/02/2026**

ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಕನಕಪುರ
ಸಿ.ಮಿಸ್.ನಂ. 121/2026

1. ಶ್ರೀ ರಾಮಚಂದ್ರ ಬಿನ್ ಲೇಟ್ ಮೇಲೇಗೌಡ, ವಯಸ್ಸು 54 ವರ್ಷ, ವಾಸ : ತಾಮಸಂದ್ರ ಗ್ರಾಮ, ಕಲ್ಲಹಳ್ಳಿ ಅಂಚೆ. ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ.

...ಅರ್ಜಿದಾರರು

ವಿರುದ್ಧ

1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್, ಕನಕಪುರ ತಾಲ್ಲೂಕು, ಕನಕಪುರ
2. ಗ್ರಾಮ ಲೆಕ್ಕಾಧಿಕಾರಿಗಳು, ಕಲ್ಲಹಳ್ಳಿ ಅಂಚೆ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ.

...ಎದುರುದಾರರು

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯ ಪಡಿಸುವುದೇನೆಂದರೇ, ಅರ್ಜಿದಾರರ ತಾತನವರಾದ ಶ್ರೀ ವೆಂಕಟೇಗೌಡ ಬಿನ್ ಲೇಟ್ ತಿಮ್ಮಪ್ಪ ರವರು ದಿನಾಂಕ: 02.03.1945 ರಂದು (ಹಿಂದೆ ರಾಮನಗರ ಜಿಲ್ಲೆ), ಬೆಂಗಳೂರು ದಕ್ಷಿಣ ಜಿಲ್ಲೆ, ಕನಕಪುರ ತಾಲ್ಲೂಕು, ಕಸಬಾ ಹೋಬಳಿ, ತಾಮಸಂದ್ರ ಗ್ರಾಮದಲ್ಲಿ ಮರಣ ಹೊಂದಿರುತ್ತಾರೆ, ಇವರ ಮರಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, 08.04.2026 ರ ಬೆಳಿಗ್ಗೆ ಸರಿಯಾಗಿ 11:00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದ್ದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಏಕಪಕ್ಷೀಯವಾಗಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ದಿನಾಂಕ 20ನೇ ಫೆಬ್ರವರಿ 2026 ರಂದು ಈ ದಿನ ನನ್ನ ಸ್ವಹಸ್ತಾಕ್ಷರ ಮತ್ತು ನ್ಯಾಯಾಲಯದ ಮೊಹರಿನಿಂದ ನೀಡಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ

ಅರ್ಜಿದಾರರ ಪರ ವಕೀಲರು:
ಎಂ.ಎ. ಮಣಿ, ವಕೀಲರು,
ಸ್ಥಳ : ಕನಕಪುರ
ದಿನಾಂಕ: 20/02/2026

ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕನಕಪುರ
ಸಿ.ಮಿಸ್.ನಂ. 122/2026

1. ಶ್ರೀ ಚಿನ್ನಗಿರಿಗೌಡ ಬಿನ್ ಲೇಟ್ ಮೂಗೇಗೌಡ @ ತಿಮ್ಮೇಗೌಡ, ವಯಸ್ಸು 75 ವರ್ಷ, ವಾಸ : ಬೋಳಶೆಟ್ಟಿ ದೊಡ್ಡಿ ಗ್ರಾಮ, ಹೊರಳಗಲ್ಲು ಅಂಚೆ. ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ, (ಹಿಂದೆ ರಾಮನಗರ ಜಿಲ್ಲೆ) ಮತ್ತು 03 ಜನ ಇತರರು.

...ಅರ್ಜಿದಾರರು

ವಿರುದ್ಧ

1. ಜನನ ಮತ್ತು ಮರಣ ನೊಂದಣಿ, ಅಧಿಕಾರಿಗಳು, ತಹಶೀಲ್ದಾರ್, ಕನಕಪುರ ತಾಲ್ಲೂಕು, ಕನಕಪುರ. 2. ಗ್ರಾಮ ಲೆಕ್ಕಾಧಿಕಾರಿಗಳು, ಹೊರಳಗಲ್ಲು ವೃತ್ತ, ಬೋಳಶೆಟ್ಟಿ ದೊಡ್ಡಿ ಗ್ರಾಮ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ.

...ಎದುರುದಾರರು

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೇ, 1 ರಿಂದ 4ನೇ ಅರ್ಜಿದಾರರ ತಂದೆಯವರಾದ ಶ್ರೀ ತಿಮ್ಮೇಗೌಡ @ ಮೂಗೇಗೌಡ ಬಿನ್ ಲೇಟ್ ವೆಂಕಟಗಿರಿಗೌಡ ರವರು ದಿನಾಂಕ: 13.01.1998 ರಂದು ಬೆಂಗಳೂರು ದಕ್ಷಿಣ ಜಿಲ್ಲೆ, (ಹಿಂದೆ ರಾಮನಗರ ಜಿಲ್ಲೆ), ಕನಕಪುರ ತಾಲ್ಲೂಕು, ಕಸಬಾ ಹೋಬಳಿ, ಹೊರಳಗಲ್ಲು ಅಂಚೆ, ಬೋಳಶೆಟ್ಟಿ ದೊಡ್ಡಿ (ಬಿ.ಎಸ್ ದೊಡ್ಡಿ) ಗ್ರಾಮದಲ್ಲಿ ಮರಣ ಹೊಂದಿರುತ್ತಾರೆ, ಇವರ ಮರಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, 08.04.2026 ರ ಬೆಳಿಗ್ಗೆ ಸರಿಯಾಗಿ 11:00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದ್ದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಏಕಪಕ್ಷೀಯವಾಗಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥಗೊಳಿಸಲಾಗುವುದು.

ದಿನಾಂಕ 26ನೇ ಫೆಬ್ರವರಿ 2026 ರಂದು ಈ ದಿನ ನನ್ನ ಸ್ವಹಸ್ತಾಕ್ಷರ ಮತ್ತು ನ್ಯಾಯಾಲಯದ ಮೊಹರಿನಿಂದ ನೀಡಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ

ಅರ್ಜಿದಾರರ ಪರ ವಕೀಲರು
ಸಿ.ಎಂ.ಜಗದೀಶ್, ವಕೀಲರು, ಕನಕಪುರ
ಸ್ಥಳ : ಕನಕಪುರ
ದಿನಾಂಕ: 26/02/2026

ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕನಕಪುರ
ಸಿ.ಮಿಸ್.ನಂ. 123/2026

1. ಶ್ರೀ ಚಿನ್ನಗಿರಿಗೌಡ ಬಿನ್ ಲೇಟ್ ಮೂಗೇಗೌಡ @ ತಿಮ್ಮೇಗೌಡ, ವಯಸ್ಸು 75 ವರ್ಷ, ವಾಸ : ಬೋಳಶೆಟ್ಟಿ ದೊಡ್ಡಿ ಗ್ರಾಮ, ಹೊರಳಗಲ್ಲು ಅಂಚೆ. ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ, (ಹಿಂದೆ ರಾಮನಗರ ಜಿಲ್ಲೆ) ಮತ್ತು 03 ಜನ ಇತರರು.

...ಅರ್ಜಿದಾರರು

ವಿರುದ್ಧ

1. ಜನನ ಮತ್ತು ಮರಣ ನೊಂದಣಿ, ಅಧಿಕಾರಿಗಳು, ತಹಶೀಲ್ದಾರ್, ಕನಕಪುರ ತಾಲ್ಲೂಕು, ಕನಕಪುರ. 2. ಗ್ರಾಮ ಲೆಕ್ಕಾಧಿಕಾರಿಗಳು, ಹೊರಳಗಲ್ಲು ವೃತ್ತ, ಬೋಳಶೆಟ್ಟಿ ದೊಡ್ಡಿ ಗ್ರಾಮ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ.

...ಎದುರುದಾರರು

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೇ, 1 ರಿಂದ 4ನೇ ಅರ್ಜಿದಾರರ ತಾಯಿಯವರಾದ ಶ್ರೀಮತಿ ಕೆಂಪಮ್ಮ ಕೋಂ ಲೇಟ್ ತಿಮ್ಮೇಗೌಡ @ ಮೂಗೇಗೌಡ ರವರು ದಿನಾಂಕ: 03.11.2008 ರಂದು ಬೆಂಗಳೂರು ದಕ್ಷಿಣ ಜಿಲ್ಲೆ, (ಹಿಂದೆ ರಾಮನಗರ ಜಿಲ್ಲೆ), ಕನಕಪುರ ತಾಲ್ಲೂಕು, ಕಸಬಾ ಹೋಬಳಿ, ಹೊರಳಗಲ್ಲು ಅಂಚೆ, ಬೋಳಶೆಟ್ಟಿ ದೊಡ್ಡಿ (ಬಿ.ಎಸ್ ದೊಡ್ಡಿ) ಗ್ರಾಮದಲ್ಲಿ ಮರಣ ಹೊಂದಿರುತ್ತಾರೆ, ಇವರ ಮರಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, 08.04.2026 ರ ಬೆಳಿಗ್ಗೆ ಸರಿಯಾಗಿ 11:00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದ್ದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಏಕಪಕ್ಷೀಯವಾಗಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.

ದಿನಾಂಕ 26ನೇ ಫೆಬ್ರವರಿ 2026 ರಂದು ಈ ದಿನ ನನ್ನ ಸ್ವಹಸ್ತಾಕ್ಷರ ಮತ್ತು ನ್ಯಾಯಾಲಯದ ಮೊಹರಿನಿಂದ ನೀಡಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ

ಅರ್ಜಿದಾರರ ಪರ ವಕೀಲರು
ಸಿ.ಎಂ.ಜಗದೀಶ್, ವಕೀಲರು, ಕನಕಪುರ
ಸ್ಥಳ : ಕನಕಪುರ
ದಿನಾಂಕ: 26/02/2026

ಕೆನರಾ ಬ್ಯಾಂಕ್ Canara Bank
ಸಿಂಡಿಕೇಟ್‌ಬ್ಯಾಂಕ್ SyndicateBank
(ಭಾರತ ಸರ್ಕಾರದ ಒಂದು ಉದ್ಯಮ)
ಪ್ರಧಾನ ಕಛೇರಿ: ಬೆಂಗಳೂರು

ಸ್ಥಿರಾಸ್ತಿಗಳ ಇ-ಹರಾಜು ಮಾರಾಟ ದಿನಾಂಕ 20.03.2026
ಇಎಂಡಿ ಸಲ್ಲಿಸಲು ಕೊನೆಯ ದಿನಾಂಕ: 18.03.2026

ಎಆರ್‌ಎಂ–1 ಶಾಖೆ, 2ನೇ ಮಹಡಿ, ನಂ.86, ಸ್ಪೆನ್ಸರ್ ಟವರ್, ಎಂ.ಜಿ. ರಸ್ತೆ, ಬೆಂಗಳೂರು–560001. ದೂ: 08025310066, ಇ–ಮೇಲ್: cb2366@canarabank.com

ಇ–ಹರಾಜು ಮಾರಾಟ ಪ್ರಕಟಣೆ

ಸಾಮಾನ್ಯವಾಗಿ ಸಾರ್ವಜನಿಕರಿಗೆ, ಸಾಲಗಾರರು ಮತ್ತು ಜಾಮೀನುದಾರರಿಗೆ ಈ ಸೂಚನೆ ಮೂಲಕ ತಿಳಿಸುವುದೇನೆಂದರೆ ಭದ್ರತಾ ಸಾಲದಾತರಿಗೆ ಈ ಕೆಳಗೆ ವಿವರಿಸಿದ ಅಡಮಾನಾದ/ವಿಧಿಸಿದ ಸ್ಥಿರಾಸ್ತಿಯನ್ನು ಅಧಿಕೃತ ಅಧಿಕಾರಿ, **ಕೆನರಾ ಬ್ಯಾಂಕ್, ಎಆರ್‌ಎಂ–1 ಶಾಖೆ, ಬೆಂಗಳೂರು** ರವರು **ಸಾಂಕೇತಿಕವಾಗಿ** ಸ್ವಾಧೀನಪಡಿಸಿಕೊಂಡಿರುತ್ತಾರೆ ಮತ್ತು **ದಿನಾಂಕ: 20.03.2026 ರಂದು, ಬೆಳಗ್ಗೆ 10.30 ರಿಂದ 11.30ರವರೆಗೆ),** ಸ್ವತ್ತನ್ನು **"ಎಲ್ಲಿದೆಯೊ ಹಾಗೆ", "ಏನಿದೆಯೊ ಹಾಗೆ", "ಹೇಗಿದೆಯೋ ಹಾಗೆ"** ಆಧಾರದಲ್ಲಿ ಸಾಲ ವಸೂಲಾತಿಗಾಗಿ ಪ್ರೊವಿಜೊ ನಿಯಮ 8(6)ರ ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ ಸೆಕ್ಯೂರಿಟೈಜೇಷನ್ ಆಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸ್ಸೆಟ್ಸ್ ಆಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಆಕ್ಟ್ 2002ರ ಅಡಿಯಲ್ಲಿ ಇ–ಹರಾಜು ಮೂಲಕ ಮಾರಾಟ ಮಾಡಲಾಗುವುದು.

ಇ–ಹರಾಜು ಮತ್ತು ಡಿಜಿಟಲ್ ಸಿಗ್ನೇಚರ್‌ಗೆ ಸಂಬಂಧಪಟ್ಟ ವಿವರಗಳಿಗೆ ಸೇವಾ ಪೂರೈಕೆದಾರರಾದ **M/s PSB Alliance (https://baanknet.com/), E-mail: support.ebkray@psballiance.com, Helpdesk Number : 8291220220, Website: https://baanknet.com/** ಸಂಪರ್ಕಿಸಬಹುದು.

ಅರ್ನೆಸ್ಟ್ ಹಣವನ್ನು **M/s PSB Alliance Private Limited (https://baanknet.com/)** ಪೋರ್ಟಲ್‌ನ ಇ–ವ್ಯಾಲೆಟ್ ಮೂಲಕ ನೇರವಾಗಿ ಅಥವಾ ಚಲನ್ ಅನ್ನು ರಚಿಸುವ ಮುಖಾಂತರ RTGS/NEFT ಮೂಲಕ ಖಾತೆಯ ವಿವರಗಳಲ್ಲಿ ನಮೂದಿಸಿರುವ ಖಾತೆ ವಿವರಗಳ ಪ್ರಕಾರ **ದಿನಾಂಕ: 18.03.2026 ರ ಸಂಜೆ 5.00 ಗಂಟೆಯೊಳಗೆ** ಠೇವಣಿ ಮಾಡಬೇಕು.

(₹. ಲಕ್ಷಗಳಲ್ಲಿ)

ಲಾಟ್ ನಂ.	ಸಾಲಗಾರರು/ ಜಾಮೀನುದಾರರು/ ಅಡಮಾನದಾರರ ಹೆಸರು ಮತ್ತು ವಿಳಾಸ	ಚರ/ಸ್ಥಿರ ಆಸ್ತಿಗಳ ವಿವರ	ಒಟ್ಟು ಬಾಕಿ ಮೊತ್ತ ಸ್ವಾಧೀನ ಪ್ರಕಾರ	ಎ. ಮೀಸಲು ಬೆಲೆ ಬಿ. ಇಎಂಡಿ ಸಿ. ಬಿಡ್ ಹೆಚ್ಚಳ ಮೊತ್ತ	ಆಸ್ತಿ ಪರಿಶೀಲನಾ ದಿನಾಂಕ ಮತ್ತು ಸ್ಥಳ
1.	**(1) ಮೆ॥ ಓಂ ಸರವಣ ಪ್ರಿಂಟ್ಸ್ (ಸಾಲಗಾರರು), ಮಾಲೀಕರು: ಶ್ರೀ ಸರವಣನ್ ಮುನಿಸ್ವಾಮಿ,** ನಂ. 524 15–24–25 13ನೇ ಮೇನ್, 5ನೇ ಕ್ರಾಸ್ ವಿರಾಟ್‌ನಗರ, ಬೊಮ್ಮನಹಳ್ಳಿ, ಬೆಂಗಳೂರು – 560068 **(2) ಶ್ರೀ.ಸರವಣನ್ ಮುನಿಸ್ವಾಮಿ (ಮಾಲೀಕರು),** ಕೇರಾಫ್ ಮುನಿಸ್ವಾಮಿ, ನಂ.57, ನೆಲಮಹಡಿ, 5ನೇ ಮೇನ್, 10ನೇ ಎ ಕ್ರಾಸ್, ರಾಜ್ ಗಾರ್ಮೆಂಟ್ಸ್ ರಸ್ತೆ, ರಾಜ್ ಗಾರ್ಮೆಂಟ್ಸ್ ರಸ್ತೆ ಹತ್ತಿರ, ವಿರಾಟ್ ನಗರ ಬೊಮ್ಮನಹಳ್ಳಿ, ಬೆಂಗಳೂರು ದಕ್ಷಿಣ –560068. **ಜಾಮೀನುದಾರರು : (1) ಶ್ರೀ. ಪಿ. ವಿಜಯಕುಮಾರ್ (ಅಡಮಾನದಾರರು),** ಬಿನ್ ವಿ ಪೆರುಮಾಳ್, # 69, ವಿಭೂತಿಪುರ, ಮಾರತಹಳ್ಳಿ ಅಂಚೆ, ಬೆಂಗಳೂರು–560037.	**ಶೀರ್ಷಿಕೆದಾರರು : ಶ್ರೀ. ಪಿ.ವಿಜಯ್‌ಕುಮಾರ್.** ಸ್ಥಿರಾಸ್ತಿ : ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಸ್ವತ್ತಿನ ಖಾಲಿ ನಿವೇಶನ ನಂ. 179, ಖಾತಾ ನಂ. 3164, ಅಸೆಸ್‌ಮೆಂಟ್ ನಂ. 631, ಈ ಆಸ್ತಿಯು ವಿಭೂತಿಪುರ ಗ್ರಾಮ, ಮಾರಿಯಮ್ಮ ದೇವಸ್ಥಾನದ ಹತ್ತಿರ, ಕೆ.ಆರ್.ಪುರಂ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ಹಿಂದಿನ ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿದ್ದು, ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ಇದರ ವ್ಯಾಪ್ತಿಯಲ್ಲಿದೆ. ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ : 30 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ : 27 ಅಡಿ, ಒಟ್ಟು ವಿಸ್ತೀರ್ಣ 810 ಚದರ ಅಡಿ, ಜೊತೆಗೆ ಎಲ್ಲಾ ನಾಗರೀಕ ಹಕ್ಕು ಬಾಧ್ಯತೆಗಳನ್ನೊಳಗೊಂಡಿರುತ್ತದೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ : ಶ್ರೀ.ಗಗನ್ ರವರ ಆಸ್ತಿ, ಪಶ್ಚಿಮಕ್ಕೆ : ಶ್ರೀ.ಧನರಾಜ್ ರವರ ಆಸ್ತಿ, ಉತ್ತರಕ್ಕೆ : ಶ್ರೀಮತಿ. ಪಚ್ಚಮ್ಮ ರವರ ಆಸ್ತಿ, ದಕ್ಷಿಣಕ್ಕೆ : ರಸ್ತೆ.	ರೂ. 1,31,81,074.26 ಜೊತೆಗೆ ದಿನಾಂಕ: 24.02.2026 ರಿಂದ ಬಡ್ಡಿ ಇತರೆ ಖರ್ಚು ವೆಚ್ಚಗಳು.	ಎ) ₹.36,00,000/- ಬಿ) ₹.3,60,000/- ಸಿ) ₹.1,00,000/-	11.03.2026 ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 2.00 ರವರೆಗೆ ಅಧಿಕೃತ ಅಧಿಕಾರಿಯವರ ಪೂರ್ವ ನಿರ್ಧಾರಿತದಂತೆ
2.	**(1) ಮೆ॥ ಜಾವೀದ್ ಸ್ಟೀಲ್ಸ್ ಮಾಲೀಕರು ಮೊಹಮ್ಮದ್ ಆಕಿಬ್ ಜಾವೀದ್,** ನಂ. 30, ನ್ಯೂ ಬಂಬೂಲ್ ಬಜಾರ್ ಸಿಟಿ ಮಾರ್ಕೆಟ್, ಎನ್ ಆರ್ ರಸ್ತೆ ಬೆಂಗಳೂರು–560002. **(2) ಮೊಹಮ್ಮದ್ ಆಕಿಬ್ ಜಾವೀದ್** ಬಿನ್ ಮೊಹಮ್ಮದ್ ಇರ್ಫಾನ್ ಜಾವೇದ್, **(3) ಶ್ರೀಮತಿ ಫಹ್ಮಿದಾ ಬೇಗಂ ಉರ್ಫ್ ನಿಶಾತ್ ಬೇಗಂ** ಕೋಂ ಮೊಹಮ್ಮದ್ ಇರ್ಫಾನ್ ಜಾವೀದ್, **(4) ಮೊಹಮ್ಮದ್ ಇರ್ಫಾನ್ ಜಾವೀದ್, ಇವರೆಲ್ಲರ ವಿಳಾಸ:** ನಂ.301, ತಿಮ್ಮಯ್ಯ ರಸ್ತೆ, ಸಿವಿಲ್ ಸ್ಟೇಷನ್, ಶಿವಾಜಿ ನಗರ, ಬೆಂಗಳೂರು–560046.	ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಸ್ಥಿರಾಸ್ತಿಯ ಮುನಿಸಿಪಲ್ ನಂ.301 (ಹಳೆಯ ನಂ.21/ಎಫ್) ಇದು ತಿಮ್ಮಯ್ಯ ರಸ್ತೆ, ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ನಂ.79, ಬೆಂಗಳೂರಿನಲ್ಲಿದೆ, ಜೊತೆಗೆ ಎಲ್ಲಾ ನಿರ್ಮಾಣಗಳೊಂದಿಗೆ ವಿಸ್ತೀರ್ಣ ಪೂರ್ವಕ್ಕೆ 103 ಅಡಿ, ಪಶ್ಚಿಮಕ್ಕೆ 99 ಅಡಿ, ಉತ್ತರಕ್ಕೆ 19 ಅಡಿ ಮತ್ತು ದಕ್ಷಿಣಕ್ಕೆ 22 ಅಡಿ ಮತ್ತು 8 ಇಂಚು, ಭೂಮಿಯ ಒಟ್ಟು ವಿಸ್ತೀರ್ಣ 2232 ಚದರ ಅಡಿ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ತಿಮ್ಮಯ್ಯ ರಸ್ತೆಯ ಹಳೆಯ ಸಂಖ್ಯೆ 21/ಇ ಹೊಂದಿರುವ ಆವರಣ, ಪಶ್ಚಿಮಕ್ಕೆ: ತಿಮ್ಮಯ್ಯ ರಸ್ತೆಯ ಹಳೆಯ ಸಂಖ್ಯೆ 21 ಹೊಂದಿರುವ ಆವರಣ, ಉತ್ತರಕ್ಕೆ: ತಿಮ್ಮಯ್ಯ ರಸ್ತೆ, ದಕ್ಷಿಣಕ್ಕೆ: ಕನ್ಸರ್ವೆನ್ಸಿ. **Coordinates of the property Latitude- 12.59240N Longitude- 77.36109E**	ರೂ. 8,11,96,726.14 ಜೊತೆಗೆ ದಿನಾಂಕ: 24.02.2026 ರಿಂದ ಬಡ್ಡಿ ಇತರೆ ಖರ್ಚು ವೆಚ್ಚಗಳ.	ಎ) ₹. 255.00 ಬಿ) ₹. 25.50 ಸಿ) ₹.1.00	11.03.2026 ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 2.00 ರವರೆಗೆ ಅಧಿಕೃತ ಅಧಿಕಾರಿಯವರ ಪೂರ್ವ ನಿರ್ಧಾರಿತದಂತೆ

ಎನ್ಕಂಬರೆನ್ಸ್ ಯಾವುದಾದರೂ ಇದ್ದಲ್ಲಿ : ಬ್ಯಾಂಕಿನ ಗಮನಕ್ಕೆ ಬಂದಿಲ್ಲ.

ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, 'ಇ–ಹರಾಜು'ಲಿಂಕ್ ಪ್ರೊವೈಡೆಡ್ ಕೆನರಾ ಬ್ಯಾಂಕ್‌ರವರ ವೆಬ್‌ಸೈಟ್: **(www.canarabank.com) or https://baanknet.com** ನಲ್ಲಿ ಒದಗಿಸಲಾಗಿದೆ ಅಥವಾ **ಕೆನರಾ ಬ್ಯಾಂಕ್, ಎಆರ್‌ಎಂ–1 ಶಾಖೆ ಬೆಂಗಳೂರು** ದೂರವಾಣಿ ಸಂಖ್ಯೆ: **9039609346 ಮತ್ತು 7022044933** ಯಾವುದೇ ಕೆಲಸದ ದಿನದಂದು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

ದಿನಾಂಕ : 27.02.2026
ಸ್ಥಳ : ಬೆಂಗಳೂರು

ಸಹಿ/–
ಅಧಿಕೃತ ಅಧಿಕಾರಿ, ಕೆನರಾ ಬ್ಯಾಂಕ್

ಕೆನರಾ ಬ್ಯಾಂಕ್ Canara Bank
ಸಿಂಡಿಕೇಟ್‌ಬ್ಯಾಂಕ್ SyndicateBank
(ಭಾರತ ಸರ್ಕಾರದ ಒಂದು ಉದ್ಯಮ)
ಪ್ರಧಾನ ಕಛೇರಿ: ಬೆಂಗಳೂರು

ಎಆರ್‌ಎಂ–1 ಶಾಖೆ
2ನೇ ಮಹಡಿ, ನಂ.86, ಸ್ಪೆನ್ಸರ್ ಟವರ್, ಎಂ.ಜಿ. ರಸ್ತೆ, ಬೆಂಗಳೂರು–560001.
ದೂ: 080–25310066, ಇ–ಮೇಲ್: cb2366@canarabank.com

ಇ–ಹರಾಜು ಮಾರಾಟ ಪ್ರಕಟಣೆ

ಸಾಮಾನ್ಯವಾಗಿ ಸಾರ್ವಜನಿಕರಿಗೆ, ಸಾಲಗಾರರು ಮತ್ತು ಜಾಮೀನುದಾರರಿಗೆ ಈ ಸೂಚನೆ ಮೂಲಕ ತಿಳಿಸುವುದೇನೆಂದರೆ ಭದ್ರತಾ ಸಾಲದಾತರಿಗೆ ಈ ಕೆಳಗೆ ವಿವರಿಸಿದ ಅಡಮಾನಾದ/ವಿಧಿಸಿದ ಸ್ಥಿರಾಸ್ತಿಯನ್ನು ಅಧಿಕೃತ ಅಧಿಕಾರಿ, **ಕೆನರಾ ಬ್ಯಾಂಕ್, ಎಆರ್‌ಎಂ- 1 ಶಾಖೆ, ಬೆಂಗಳೂರು** ರವರು **ಭೌತಿಕವಾಗಿ** ಸ್ವಾಧೀನಪಡಿಸಿಕೊಂಡಿರುತ್ತಾರೆ ಮತ್ತು ಸ್ವತ್ತನ್ನು **"ಎಲ್ಲಿ ಏನಿದೆಯೋ ಹಾಗೆ", "ಹೇಗಿದೆಯೋ ಹಾಗೆ", "ಏನೇ ಇದ್ದರೂ"**, ಆಧಾರದಲ್ಲಿ ಸಾಲ ವಸೂಲಾತಿಗಾಗಿ ಪ್ರೊವಿಜೊ ನಿಯಮ 8(6)ರ ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ ಸೆಕ್ಯೂರಿಟೈಜೇಷನ್ ಆಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸ್ಸೆಟ್ಸ್ ಆಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಆಕ್ಟ್ 2002ರ ಅಡಿಯಲ್ಲಿ ಇ–ಹರಾಜು ಮೂಲಕ ಮಾರಾಟ ಮಾಡಲಾಗುವುದು.

ಇ–ಹರಾಜು ಮತ್ತು ಡಿಜಿಟಲ್ ಸಿಗ್ನೇಚರ್‌ಗೆ ಸಂಬಂಧಪಟ್ಟ ವಿವರಗಳಿಗೆ ಸೇವಾ ಪೂರೈಕೆದಾರರಾದ **M/s PSB Alliance (https://baanknet.com/), E-mail: support.ebkray@psballiance.com, Helpdesk Number : 8291220220, Website: https://baanknet.com/** ಸಂಪರ್ಕಿಸಬಹುದು.

ಅರ್ನೆಸ್ಟ್ ಹಣವನ್ನು **M/s PSB Alliance Private Limited (https://baanknet.com/)** ಪೋರ್ಟಲ್‌ನ ಇ–ವ್ಯಾಲೆಟ್ ಮೂಲಕ ನೇರವಾಗಿ ಅಥವಾ ಚಲನ್ ಅನ್ನು ರಚಿಸುವ ಮುಖಾಂತರ RTGS/NEFT ಮೂಲಕ ಖಾತೆಯ ವಿವರಗಳಲ್ಲಿ ನಮೂದಿಸಿರುವ ಖಾತೆ ವಿವರಗಳ ಪ್ರಕಾರ ಠೇವಣಿ ಮಾಡಬೇಕು.

(ರೂ. ಲಕ್ಷಗಳಲ್ಲಿ)

ಲಾಟ್ ನಂ.	ಸಾಲಗಾರರು / ಜಾಮೀನುದಾರರು / ಅಡಮಾನದಾರರ ಹೆಸರು ಮತ್ತು ವಿಳಾಸ	ಸ್ಥಿರಾಸ್ತಿಗಳ ವಿವರಣೆ	(1) ಒಟ್ಟು ಬಾಕಿ ಮೊತ್ತ (2) ಹರಾಜಿನ ದಿನಾಂಕ & ಸಮಯ	ಎ. ಮೀಸಲು ಬೆಲೆ ಬಿ. ಇಎಂಡಿ ಸಿ. ಬಿಡ್ ಹೆಚ್ಚಳ ಮೊತ್ತ	ಎ.ಆಸ್ತಿ ಪರಿಶೀಲನಾ ದಿನಾಂಕ ಮತ್ತು ಸ್ಥಳ ಬಿ.ಇಎಂಡಿ ಠೇವಣಿ ದಿನಾಂಕ
1	**(1) ಮೆ॥ ಪಾಲಿಬಾಂಡ್ ಆರ್ಗಾನಿಕ್ಸ್ ಪ್ರೈವೇಟ್ ಲಿಮಿಟೆಡ್** "ನಾರಂಗ್ ಛೇಂಬರ್ಸ್" ಯೂನಿಟ್ ನಂ.4 & 5, 4ನೇ ಮಹಡಿ, ಕಾರ್ಪೊರೇಷನ್ ನಂ.2/15 & 16 ನರಸಿಂಹರಾಜ ರಸ್ತೆ, ಬೆಂಗಳೂರು–560002. **(2) ಶ್ರೀ ದಿನೇಶ್ ವಿ ಬಲಿಗಾ,** ನಂ.1268, 2ನೇ ಹಂತ, ಬಿಟಿಎಂ ಲೇಔಟ್, ಬೆಂಗಳೂರು–560076. **(3) ಶ್ರೀ ಬಾಲಕೃಷ್ಣ ವಿ ಬಲಿಗಾ,** ನಂ.35, ಸ್ನೇಹ, 4ನೇ ಕ್ರಾಸ್, ವೆಂಕಟಾದ್ರಿ ಲೇಔಟ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು–560076. **(4) ಶ್ರೀ ಹರೀಶ್ ವಿ ಬಲಿಗಾ,** ನಂ.1267, ಗುರುರಾಜ್, 1ನೇ ಮುಖ್ಯರಸ್ತೆ, ಬಿಟಿಎಂ ಲೇಔಟ್ 2ನೇ ಹಂತ, ಬೆಂಗಳೂರು–560076. **(5) ಶ್ರೀ ಜಗದೀಶ್ ವಿ ಬಲಿಗಾ,** ನಂ.35, ಸ್ನೇಹ, 4ನೇ ಕ್ರಾಸ್, ವೆಂಕಟಾದ್ರಿ ಲೇಔಟ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು–560076. **(6) ಶ್ರೀಮತಿ ದಿವ್ಯಾ ಬಲಿಗಾ,** ನಂ.35, ಸ್ನೇಹ, 4ನೇ ಕ್ರಾಸ್, ವೆಂಕಟಾದ್ರಿ ಲೇಔಟ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು–560076. **(7) ಶ್ರೀ ಎನ್ ವಿ ಪವನ್ ರಾಮ್,** ನಂ.35, ಸ್ನೇಹ, 4ನೇ ಕ್ರಾಸ್, ವೆಂಕಟಾದ್ರಿ ಲೇಔಟ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು–560076.	ವಾಣಿಜ್ಯ ಅಪಾರ್ಟ್‌ಮೆಂಟ್ ಒಳಗೊಂಡಿರುವ ಯೂನಿಟ್ ನಂ.4, 4ನೇ ಮಹಡಿ ಸಬ್ ನಂ.2/15, "ನಾರಂಗ್ ಛೇಂಬರ್ಸ್" ಎಂದು ಕರೆಯಲ್ಪಡುವ ಈ ಕಟ್ಟಡದ ಪಿಐಡಿ ನಂ.45–47–2/15, ಜೊತೆಗೆ ಆಸ್ತಿ ನಂ.2/3 ರಲ್ಲಿದೆ. ವಾರ್ಡ್ ನಂ.47, ನರಸಿಂಹರಾಜ ರಸ್ತೆ, ಬೆಂಗಳೂರು–560002, ವಿಸ್ತೀರ್ಣ 415 ಚದರ ಅಡಿಗಳ ಸೂಪರ್ ಬಿಲ್ಟ್‌ಅಪ್ ಪ್ರದೇಶವನ್ನು ಜೊತೆಗೆ 89.52 ಚದರ ಅಡಿ ಅವಿಭಜಿತ ಪಾಲು ಹೊಂದಿದ್ದು ಮತ್ತು ಫ್ಲಾಟ್‌ನ ಚಕ್ಕುಬಂದಿ: ಉತ್ತರಕ್ಕೆ : ನರಸಿಂಹರಾಜ ರಸ್ತೆ, ದಕ್ಷಿಣಕ್ಕೆ: ಸಾಮಾನ್ಯ ಮಾರ್ಗ, ಪೂರ್ವಕ್ಕೆ: ಯೂನಿಟ್‌ನ ಸಬ್ ನಂ.2/16 ಮತ್ತು ಪಶ್ಚಿಮಕ್ಕೆ : ಯೂನಿಟ್‌ನ ಸಬ್ ನಂ.2/14 ಮತ್ತು ನಿವೇಶನ, ಚಕ್ಕುಬಂದಿ: ಉತ್ತರಕ್ಕೆ : ನರಸಿಂಹರಾಜ ರಸ್ತೆ, ದಕ್ಷಿಣಕ್ಕೆ : ಕನ್ಸರ್ವೆನ್ಸಿ ಲೇನ್, ಪೂರ್ವಕ್ಕೆ: ಖಾಸಗಿ ಆಸ್ತಿ ಮತ್ತು ಪಶ್ಚಿಮಕ್ಕೆ : ಕುಂಬಾರಗುಂಡಿ ಆಸ್ತಿ. **Coordinates of the property Latitude - 12.9635787, Longitude - 77.5843143**	ರೂ. 1,08,65,81,033.19 ಜೊತೆಗೆ ದಿನಾಂಕ: 24.02.2026 ರಿಂದ ಬಡ್ಡಿ ಮತ್ತು ಇತರೆ ಖರ್ಚು ವೆಚ್ಚಗಳು 18.03.2026 ಬೆಳಿಗ್ಗೆ 10.30 ರಿಂದ 11.30 ರವರೆಗೆ	ಎ) ರೂ. 25.00 ಬಿ) ರೂ. 2.50 ಸಿ) ರೂ. 1.00	ಎ) 11.03.2026 ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 2.00 ರವರೆಗೆ ಬಿ) 17.03.2026 ಸಂಜೆ 5.00 ಗಂಟೆ
		ವಾಣಿಜ್ಯ ಅಪಾರ್ಟ್‌ಮೆಂಟ್ ಒಳಗೊಂಡಿರುವ ಯೂನಿಟ್ ನಂ.5, 4ನೇ ಮಹಡಿ ಸಬ್ ನಂ.2/16, "ನಾರಂಗ್ ಛೇಂಬರ್ಸ್" ಎಂದು ಕರೆಯಲ್ಪಡುವ ಈ ಕಟ್ಟಡದ ಆಸ್ತಿ ನಂ.2/3, ವಾರ್ಡ್ ನಂ.47, ನರಸಿಂಹರಾಜ ರಸ್ತೆ, ಬೆಂಗಳೂರು–560002, ವಿಸ್ತೀರ್ಣ 965 ಚದರ ಅಡಿಗಳ ಸೂಪರ್ ಬಿಲ್ಟ್‌ಅಪ್ ಪ್ರದೇಶವನ್ನು ಜೊತೆಗೆ 203.78 ಚದರ ಅಡಿ ಅವಿಭಜಿತ ಪಾಲು ಹೊಂದಿದ್ದು ಮತ್ತು ಫ್ಲಾಟ್‌ನ ಚಕ್ಕುಬಂದಿ: ಉತ್ತರಕ್ಕೆ : ನರಸಿಂಹರಾಜ ರಸ್ತೆ, ದಕ್ಷಿಣಕ್ಕೆ: ಯೂನಿಟ್‌ನ ಸಬ್ ನಂ.2/17, ಪೂರ್ವಕ್ಕೆ: ಖಾಸಗಿ ಆಸ್ತಿ, ಮತ್ತು ಪಶ್ಚಿಮಕ್ಕೆ : ಯೂನಿಟ್‌ನ ಸಬ್ ನಂ.2/15 ಮತ್ತು ನಿವೇಶನ, ಚಕ್ಕುಬಂದಿ: ಉತ್ತರಕ್ಕೆ : ನರಸಿಂಹರಾಜ ರಸ್ತೆ, ದಕ್ಷಿಣಕ್ಕೆ : ಕನ್ಸರ್ವೆನ್ಸಿ ಲೇನ್, ಪೂರ್ವಕ್ಕೆ: ಖಾಸಗಿ ಆಸ್ತಿ ಮತ್ತು ಪಶ್ಚಿಮಕ್ಕೆ : ಕುಂಬಾರಗುಂಡಿ ಆಸ್ತಿ. **Coordinates of the property Latitude - 12.9635787, Longitude - 77.5843143**		ಎ) ರೂ. 60.00 ಬಿ) ರೂ. 6.00 ಸಿ) ರೂ. 1.00	
2	**(1) ಮೆ॥ ಸುದರ್ಶನ್ ಎಂಟರ್‌ಪ್ರೈಸಸ್ ಇದನ್ನು ಪ್ರತಿನಿಧಿಸುವ ಪಾಲುದಾರು ಶ್ರೀಮತಿ ರೋಹಿಣಿ ಬೊಪ್ಪಣ ಮತ್ತು ಬಾಬು ಆರ್ ಚೇತನ್ ರೆಡ್ಡಿ,** 2321, 17ನೇ ಕ್ರಾಸ್ 27ನೇ ಮೇನ್, ಸೆಕ್ಟರ್ ಹೆಚ್‌ಎಸ್‌ಆರ್ ಲೇಔಟ್, ಬೆಂಗಳೂರು–560098. **(2) ಶ್ರೀ ಬಾಬು ಆರ್ ಚೇತನ್ ರೆಡ್ಡಿ** ಬಿನ್ ಬಿ ಎನ್ ರವಿ ಚಂದ್ರ ರೆಡ್ಡಿ, ಶ್ರೀ ರಾಶಿ ನಂ.1172, 5ನೇ ಮೇನ್, 7ನೇ ಸೆಕ್ಟರ್ ಹೆಚ್‌ಎಸ್‌ಆರ್ ಲೇಔಟ್, ಬೆಂಗಳೂರು– 560102. **(3) ಶ್ರೀಮತಿ ರೋಹಿಣಿ ಬೊಪ್ಪಣ** ಕೋಂ ಬಾಬು ಆರ್ ಚೇತನ್ ರೆಡ್ಡಿ, ಶ್ರೀ ರಾಶಿ ನಂ.1172, 5ನೇ ಮೇನ್, 7ನೇ ಸೆಕ್ಟರ್ ಹೆಚ್‌ಎಸ್‌ಆರ್ ಲೇಔಟ್, ಬೆಂಗಳೂರು–560102. **(4) ಶ್ರೀ ಬಿ ಎನ್ ರವಿ ಚಂದ್ರ ರೆಡ್ಡಿ** ಬಿನ್ ಲೇಟ್ ಬಿ ಎನ್ ಎನ್ ರೆಡ್ಡಿ, ಶ್ರೀ ರಾಶಿ ನಂ.1172, 5ನೇ ಮೇನ್, 7ನೇ ಸೆಕ್ಟರ್ ಹೆಚ್‌ಎಸ್‌ಆರ್ ಲೇಔಟ್, ಬೆಂಗಳೂರು–560102. **(5) ಶ್ರೀಮತಿ ಸಂತೋಷಿ ರೆಡ್ಡಿ** ಕೋಂ ಬಿ ಎನ್ ರವಿ ಚಂದ್ರ ರೆಡ್ಡಿ, ಶ್ರೀ ರಾಶಿ ನಂ.1172, 5ನೇ ಮೇನ್, 7ನೇ ಸೆಕ್ಟರ್ ಹೆಚ್‌ಎಸ್‌ಆರ್ ಲೇಔಟ್, ಬೆಂಗಳೂರು– 560102.	ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ವಾಸಯೋಗ್ಯ ಅಪಾರ್ಟ್‌ಮೆಂಟ್ ಫ್ಲಾಟ್ ನಂ.308, 2ನೇ ಮಹಡಿ, "MAGNUM PRIDE" ಅಪಾರ್ಟ್‌ಮೆಂಟ್, ಬ್ಲಾಕ್ ಬಿ, 27ನೇ ಕ್ರಾಸ್, 19ನೇ ಮೇನ್, ಸೆಕ್ಟರ್ 2, ಹೆಚ್‌ಎಸ್‌ಆರ್ ಲೇಔಟ್, ಬೆಂಗಳೂರು–560034ರಲ್ಲಿದೆ. ಜೊತೆಗೆ 1098 ಚದರ ಅಡಿ ಸೂಪರ್ ಬಿಲ್ಟ್‌ಅಪ್ ಪ್ರದೇಶ, 330 ಚದರ ಅಡಿ ಅವಿಭಾಜಿತ ಭಾಗವನ್ನೊಳಗೊಂಡಿದೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಶ್ರೀ ರಮೇಶ್‌ರವರ ಸರ್ವೆ ನಂ.55/7ರ ಭೂಮಿ, ಪಶ್ಚಿಮಕ್ಕೆ: ಫ್ಲಾಟ್ ನಂ.307, ಉತ್ತರಕ್ಕೆ: ಫ್ಲಾಟ್ ನಂ.306, ದಕ್ಷಿಣಕ್ಕೆ: ಫ್ಲಾಟ್ ನಂ.310. **Coordinates of the property Latitude- 12.90399150 Longitude- 77.6473214**	ರೂ. 2,04,35,039.48 ಜೊತೆಗೆ ದಿನಾಂಕ: 24.02.2026 ರಿಂದ ಬಡ್ಡಿ ಮತ್ತು ಇತರೆ ಖರ್ಚು ವೆಚ್ಚಗಳು 18.03.2026 ಬೆಳಿಗ್ಗೆ 10.30 ರಿಂದ 11.00 ರವರೆಗೆ	ಎ) ₹. 77.70 ಬಿ) ₹. 7.77 ಸಿ) ₹. 1.00	ಎ) 11.03.2026 ಬೆಳಿಗ್ಗೆ 10.00 ರಿಂದ ಸಂಜೆ 2.00 ರವರೆಗೆ ಬಿ) 17.03.2026 ಸಂಜೆ 5.00 ಗಂಟೆ
3	**(1) ಮೆ॥ ಜ್ಯೋತ್ಸ್ನಾರೆಡ್ಡಿ ಹಾಸ್ಪಿಟಲ್ ಪ್ರೈವೇಟ್ ಲಿಮಿಟೆಡ್,** ಮಾರುತಿ ಪಟಾಲಪ್ಪ ಕಾಂಪ್ಲೆಕ್ಸ್ ಸಂಖ್ಯೆ 9, ಅಕ್ಷಯನಗರ ಟಿಸಿ ಪಾಳ್ಯ ಮುಖ್ಯರಸ್ತೆ, ಕೋವೇದೇನಹಳ್ಳಿ, ಬೆಂಗಳೂರು–560016. **(2) ಶ್ರೀ ಡಾ. ವೈ ರಾಘವೇಂದ್ರ ರೆಡ್ಡಿ** ಕೋಂ ವೈ ನಾರಪ ರೆಡ್ಡಿ, ನಂ. 308, ಹೆಚ್‌ಆರ್‌ಬಿಆರ್ ಲೇಔಟ್, 1ನೇ ಬ್ಲಾಕ್, 8ನೇ ಇ ಮುಖ್ಯರಸ್ತೆ, ಕಲ್ಯಾಣ್ ನಗರ, ಬೆಂಗಳೂರು–560043. **(3) ಶ್ರೀಮತಿ. ಕೆ ಪ್ರಮೋದಾ** ಕೋಂ ಕೆ ರಾಮಚಂದ್ರ ರೆಡ್ಡಿ, ನಂ. 12–3–790, ಜೀಸಸ್ ನಗರ, ಜಯಮನ್ನಮ್ಮ ಕಲ್ಯಾಣಮಂಟಪಂ ಹತ್ತಿರ, ಅನಂತಪುರ, ಆಂಧ್ರಪ್ರದೇಶ–515001 **(4) ಶ್ರೀಮತಿ. ಯರ್ರಗುಂಟ ಹೇಮಾವತಿ,** ಡಿ. ನಂ. 12–2–416, 3ನೇ ಕ್ರಾಸ್, ಹರಿಹರ ನಗರ ಪಶ್ಚಿಮ, ಅನಂತಪುರ, ಆಂಧ್ರಪ್ರದೇಶ–515001 **(5) ಶ್ರೀಮತಿ. ಕೆ ಚೆನ್ನಕೇಶವಮ್ಮ** ಕೋಂ ಕೆ ರಾಮಚಂದ್ರ ರೆಡ್ಡಿ, ನಂ. 12–3–790, ಜೀಸಸ್ ನಗರ, ಜಯಮನ್ನಮ್ಮ ಕಲ್ಯಾಣಮಂಟಪಂ ಹತ್ತಿರ, ಅನಂತಪುರ, ಆಂಧ್ರಪ್ರದೇಶ–515001. **(6) ಶ್ರೀ. ಕೆ ರಾಮಚಂದ್ರ ರೆಡ್ಡಿ** ಬಿನ್ ಕೆ ಓಬಿ ರೆಡ್ಡಿ, ನಂ. 12–3–790, ಜೀಸಸ್ ನಗರ, ಜಯಮನ್ನಮ್ಮ ಹತ್ತಿರ, ಕಲ್ಯಾಣಮಂಟಪಂ, ಅನಂತಪುರ, ಆಂಧ್ರಪ್ರದೇಶ–515001.	**ಐಟಂ ನಂ.1: ನೋಂದಾಯಿತ ಮಾರಾಟ ಪತ್ರ ಸಂಖ್ಯೆ.211/2005 ರ ಪ್ರಕಾರ.** ವಾಸಯೋಗ್ಯ ಬಿಲ್ಡಿಂಗ್ ಹೊಂದಿರುವ ಆಸ್ತಿಯು ಅನಂತಪುರ ಮುನಿಸಿಪಲ್ ಕಾರ್ಪೋರೇಷನ್ ಪ್ರದೇಶ ಜೊತೆಗೆ ಎಸ್‌ಆರ್ ಡಿ ಮತ್ತು ಆರ್‌ಡಿ ಅನಂತಪುರ, ವಾರ್ಡ್ ನಂ. 12, ಸರ್ವೆ ನಂ. 284/2, ಪ್ಲಾಟ್ ನಂ.7, ಎಲ್‌ಪಿ ನಂ. 26/63, ಜೀಸಸ್ ನಗರ, ಅನಂತಪುರ ಮುನಿಸಿಪಲ್ ಕಾರ್ಪೋರೇಷನ್, ಅನಂತಪುರಂ ಜಿಲ್ಲೆ, ಆಂಧ್ರಪ್ರದೇಶ, ಚಕ್ಕುಬಂದಿ : ಪೂರ್ವಕ್ಕೆ: ಪ್ಲಾಟ್ ನಂ.12, ದಕ್ಷಿಣಕ್ಕೆ: ಕೆ.ರಾಮಚಂದ್ರ ರೆಡ್ಡಿ ರವರ ಪ್ಲಾಟ್ ನಂ.7ರ ಉಳಿಕೆ ಭಾಗ, ಪಶ್ಚಿಮಕ್ಕೆ: 40 ಅಡಿ ರಸ್ತೆ, ಉತ್ತರಕ್ಕೆ: ಪ್ಲಾಟ್ ನಂ.6. ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ : 72 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ : 24 ಅಡಿ, ಒಟ್ಟು ವಿಸ್ತೀರ್ಣ 1728 ಚದರ ಅಡಿ ಅಥವಾ 193.6 ಚದರ ಯಾರ್ಡ್ಸ್. **ಐಟಂ ನಂ.2: ನೋಂದಾಯಿತ ಮಾರಾಟ ಪತ್ರ ಸಂಖ್ಯೆ.212/2005 ರ ಪ್ರಕಾರ.** ವಾಸಯೋಗ್ಯ ಕಟ್ಟಡ ಜೊತೆಗೆ ಅನಂತಪುರ ಮುನಿಸಿಪಲ್ ಕಾರ್ಪೋರೇಷನ್ ಪ್ರದೇಶ ಜೊತೆಗೆ ಎಸ್‌ಆರ್‌ಡಿ ಮತ್ತು ಆರ್‌ಡಿ, ಅನಂತಪುರ, ವಾರ್ಡ್ ನಂ. 12, ಸರ್ವೆ ನಂ. 284/2, ಪ್ಲಾಟ್ ನಂ. 7, ಎಲ್‌ಪಿ ನಂ. 26/63, ಜೀಸಸ್ ನಗರ, ಅನಂತಪುರ ಮುನಿಸಿಪಲ್ ಕಾರ್ಪೋರೇಷನ್, ಅನಂತಪುರ ಜಿಲ್ಲೆ, ಆಂಧ್ರಪ್ರದೇಶ. ಚಕ್ಕುಬಂದಿ : ಪೂರ್ವಕ್ಕೆ: ಪ್ಲಾಟ್ ನಂ. 12, ದಕ್ಷಿಣಕ್ಕೆ: ವಿ.ವೆಂಕಟರಾಮಿ ರೆಡ್ಡಿ ರವರ ಮನೆ, ಪಶ್ಚಿಮಕ್ಕೆ: 40 ಅಡಿ ರಸ್ತೆ, ಉತ್ತರಕ್ಕೆ: ಚನ್ನಕೇಶವಮ್ಮ ರವರ ಪ್ಲಾಟ್ ನಂ. 7 ರವರ ಉಳಿಕೆ ಭಾಗ. ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ : 72 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ : 36 ಅಡಿ, ಒಟ್ಟು ವಿಸ್ತೀರ್ಣ 2592 ಚದರ ಅಡಿ ಅಥವಾ 290.04 ಚದರ ಯಾರ್ಡ್ಸ್. known encumbrances – "ಷೆಡ್ಯೂಲ್ ಆಸ್ತಿಯ ಮಾರಾಟವು DRB-2/CHITS/59/2023-24 ರಲ್ಲಿ ಚಿಟ್ ಫಂಡ್ಸ್ ಕಾಯ್ದೆ, 1982ರ ಅಡಿಯಲ್ಲಿ ಲಗತ್ತು ಆದೇಶಕ್ಕೆ ಒಳಪಟ್ಟಿರುತ್ತದೆ." ಮೇಲಿನ ಅಂಶಗಳ ಸಂಖ್ಯೆ ಎ ಮತ್ತು ಬಿ ಪಕ್ಕದ ಪ್ಲಾಟ್‌ಗಳಾಗಿವೆ. ಶ್ರೀಮತಿ. ಕೆ ಚೆನ್ನಕೇಶವಮ್ಮ ಮತ್ತು ಶ್ರೀ. ಕೆ ರಾಮಚಂದ್ರ ರೆಡ್ಡಿ ರವರು ಡೋರ್ ನಂ. 12–3–790 ಅಸೆಸ್‌ಮೆಂಟ್ ನಂ. 1001046170 ರ ಮನೆಯನ್ನು ನಿರ್ಮಿಸಿದ್ದಾರೆ.	ರೂ. 15,24,08,998.11 ಜೊತೆಗೆ ದಿನಾಂಕ: 17.02.2026 ರಿಂದ ಬಡ್ಡಿ ಮತ್ತು ಇತರೆ ಖರ್ಚು ವೆಚ್ಚಗಳು 17.03.2026 ಬೆಳಿಗ್ಗೆ 10.00 ರಿಂದ 11.00 ರವರೆಗೆ	ಎ) ರೂ. 2,08,04,000 ಬಿ) ರೂ. 20,81,000 ಸಿ) ರೂ. 5,00,000	ಎ) 27.02.2026 ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 4.00 ರವರೆಗೆ ಬಿ) 16.03.2026 ಸಂಜೆ 5.00 ಗಂಟೆ
		ಆಸ್ತಿ 2: ಕಮರ್ಷಿಯಲ್ ಕಟ್ಟಡವು ಅನಂತಪುರಂ ಮುನಿಸಿಪಲ್ ಕಾರ್ಪೋರೇಷನ್ ಪ್ರದೇಶದಲ್ಲಿದ್ದು, ಎಸ್‌ಆರ್‌ಡಿ ಮತ್ತು ಆರ್‌ಡಿ ಅನಂತಪುರಂ ವಾರ್ಡ್ ನಂ.13, ಟಿ.ಎಸ್. ನಂ.2074–1, ಬ್ಲಾಕ್–ಎ, ಪ್ಲಾಟ್ ನಂ.3 ಜೊತೆಗೆ ಶೆಡ್ ಡೋರ್ ನಂ.13–3–367, 13–3–368, ಅಸೆಸ್‌ಮೆಂಟ್ ನಂ.1001049967. ಪೂರ್ವಕ್ಕೆ: ಪಿ ಹಬೀಬ್ ಖಾನ್‌ರವರ ಪ್ಲಾಟ್ ನಂ.3 ಮತ್ತು ಅಖಿಲಾ ಬೇಗಂ ಮತ್ತು ಇತರರ ತೆರೆದ ನಿವೇಶನ, ದಕ್ಷಿಣಕ್ಕೆ: ಪ್ಲಾಟ್ ನಂ.4, ಡಿ ಫಕ್ರುದ್ದೀನ್ ರವರ ಬ್ಲಾಕ್ ಬಿ ಯಲ್ಲಿರುವ ಟಿ ಪಿ ನಂ.79/77, ಪಶ್ಚಿಮಕ್ಕೆ: ಆರ್‌ಟಿಸಿ ಕಾಂಪೌಂಡ್ ಗೋಡೆ, ಉತ್ತರಕ್ಕೆ: 20 ಅಡಿ ರಸ್ತೆ. known encumbrances – "ಷೆಡ್ಯೂಲ್ ಆಸ್ತಿಯ ಮಾರಾಟವು DRB-2/CHITS/59/2023-24 ರಲ್ಲಿ ಚಿಟ್ ಫಂಡ್ಸ್ ಕಾಯ್ದೆ, 1982ರ ಅಡಿಯಲ್ಲಿ ಲಗತ್ತು ಆದೇಶಕ್ಕೆ ಒಳಪಟ್ಟಿರುತ್ತದೆ."		ಎ) ರೂ. 5,50,00,000 ಬಿ) ರೂ. 55,00,000 ಸಿ) ರೂ. 5,00,000	

ಎನ್ಕಂಬರೆನ್ಸ್ ಯಾವುದಾದರೂ ಇದ್ದಲ್ಲಿ : ಬ್ಯಾಂಕಿನ ಗಮನಕ್ಕೆ ಬಂದಿಲ್ಲ.

ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, 'ಇ–ಹರಾಜು'ಲಿಂಕ್ ಪ್ರೊವೈಡೆಡ್ ಕೆನರಾ ಬ್ಯಾಂಕ್‌ರವರ ವೆಬ್‌ಸೈಟ್: (www.canarabank.com) ಅಥವಾ M/s PSB Alliance (https://baanknet.com/), ಅಥವಾ ಮುಖ್ಯ ಪ್ರಬಂಧಕರು, ಕೆನರಾ ಬ್ಯಾಂಕ್, ಎಆರ್‌ಎಂ–1 ಶಾಖೆ, ಬೆಂಗಳೂರು ದೂರವಾಣಿ ಸಂಖ್ಯೆ: 08025310066, 8598009010, 6301683293 ಮತ್ತು 9483544116 ಯಾವುದೇ ಕೆಲಸದ ದಿನದಂದು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

ದಿನಾಂಕ : 27.02.2026
ಸ್ಥಳ : ಬೆಂಗಳೂರು

ಸಹಿ/– ಅಧಿಕೃತ ಅಧಿಕಾರಿ,
ಕೆನರಾ ಬ್ಯಾಂಕ್

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ:

ಇಂಡಿಯಾ ಎಸ್‌ಎಂಇ ಅಸೆಟ್ ರೀಕನ್ಸ್ಟ್ರಕ್ಷನ್ ಕಂಪನಿ ಲಿಮಿಟೆಡ್ (ಐಎಸ್‌ಎಆರ್‌ಸಿ) ನ ಕೆಳಗೆ ಸಹಿ ಮಾಡಲಾದ ಅಧಿಕೃತ ಅಧಿಕಾರಿ **(CIN:U67190MH2008PLC181062)**, ಆಸ್ತಿ ಪುನರ್ನಿರ್ಮಾಣ ಕಂಪನಿಯಾಗಿದ್ದು, ಇದು ಹಣಕಾಸು ಆಸ್ತಿಗಳ ಸೆಕ್ಯುರಿಟೈಸೇಶನ್ ಮತ್ತು ಪುನರ್ನಿರ್ಮಾಣ ಮತ್ತು ಭದ್ರತಾ ಹಿತಾಸಕ್ತಿ ಕಾಯ್ದೆ, 2002 (ಸರ್ಫೇಸಿ ಕಾಯ್ದೆ) ದ ಸೆಕ್ಷನ್ 3 ರ ಅಡಿಯಲ್ಲಿ ನೋಂದಾಯಿಸಲ್ಪಟ್ಟಿದೆ, ಇದು **ಐಎಸ್‌ಎಆರ್‌ಸಿ- 2025-2026-5** ಟ್ರಸ್ಟ್‌ಸ ಟ್ರಸ್ಟಿಯಾಗಿ ಕಾರ್ಯನಿರ್ವಹಿಸುತ್ತದೆ ಮತ್ತು ಸೆಕ್ಯುರಿಟಿ ಹಿತಾಸಕ್ತಿ (ಜಾರಿ) ನಿಯಮಗಳು, 2002 (ನಿಯಮಗಳು) ನ ಸಂಬಂಧಿತ ನಿಯಮಗಳೊಂದಿಗೆ ಓದಲಾದ ಸೆಕ್ಷನ್ 13 (12) ರ ಅಡಿಯಲ್ಲಿ ನೀಡಲಾದ ಅಧಿಕಾರಗಳನ್ನು ಚಲಾಯಿಸುತ್ತದೆ. ಈ ಕೆಳಗಿನ ಸೂಚನೆಯನ್ನು ನೀಡಲಾಗಿದೆ:

ಸಮ್ಮಾನ್ ಫಿನ್‌ಸರ್ವ್ ಲಿಮಿಟೆಡ್ (CIN:U65923DL2006PLC150632) (ಈಗಿನ ಹೆಸರು: **ಇಂಡಿಯಾಬುಲ್ಸ್ ಕಮರ್ಷಿಯಲ್ ಕ್ರೆಡಿಟ್ ಲಿಮಿಟೆಡ್)** ನ ಅಧಿಕೃತ ಅಧಿಕಾರಿಯು, ಸರ್ಫೇಸಿ ಕಾಯ್ದೆಯ ಸೆಕ್ಷನ್ 13 (12) ಮತ್ತು ನಿಯಮಗಳ 3 ನೇ ನಿಯಮದ ಅಡಿಯಲ್ಲಿ ನೀಡಲಾದ ಅಧಿಕಾರವನ್ನು ಚಲಾಯಿಸಿ, ದಿನಾಂಕ **14.10.2025** ರಂದು ಡಿಮ್ಯಾಂಡ್ ನೋಟಿಸ್ ಅನ್ನು ಹೊರಡಿಸಿ, ಸಾಲಗಾರರು (ಗಳು) **ಮೊಂಡೋ ಬಿಲ್ಡರ್ಸ್ ಪ್ರೈವೇಟ್ ಲಿಮಿಟೆಡ್, ಆಯೇಷಾ ಸುಲ್ತಾನ, ಮೊಹಮ್ಮದ್ ಖಾದರ್ಖಾನ್ ದುರಾನಿ, ಎನ್ ಡಿ ಡೆವಲಪರ್ಸ್ ಪ್ರೈವೇಟ್ ಲಿಮಿಟೆಡ್, ಮಹಾಬೀರ್ ಪ್ರಸಾದ್ ಅಗರವಾಲ್ (ಗ್ಯಾರಂಟರ್) ಮತ್ತು ಮುಕುಲ್ ಅಗರವಾಲ್ (ಗ್ಯಾರಂಟರ್)** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ **ರೂ. 5,45,75,417.12 (ಐದು ಕೋಟಿ ನಲವತ್ತೈದು ಲಕ್ಷ ಎಪ್ಪತ್ತೈದು ಸಾವಿರದ ನಾಲ್ಕುನೂರ ಹದಿನೇಳು ರೂಪಾಯಿಗಳು ಮತ್ತು ಹನ್ನೆರಡು ಪೈಸೆ ಮಾತ್ರ)** ಸಾಲ ಖಾತೆ ನಂ. **HLLABNE00502291** ಈ ಲೋನ್ ಅಕೌಂಟ್‌ಗೆ ಸಂಬಂಧಿಸಿದಂತ, ಹೇಳಲಾಗಿರುವ ನೋಟಿಸ್ ನಿಮ್ಮನ್ನು ತಲುಪಿ 60 ದಿನಗಳಾಗುವುದರೊಳಗೆ **13.10.2025** ರ ವರೆಗಿನ ಮೊತ್ತ ಮತ್ತು ಅದರ ಮೇಲಿನ ಬಡ್ಡಿ.

ಸಮ್ಮಾನ್ ಫಿನ್‌ಸರ್ವ್ ಲಿಮಿಟೆಡ್, ಸರ್ಫೇಸಿ ಕಾಯ್ದೆಯ ನಿಬಂಧನೆಗಳ ಅಡಿಯಲ್ಲಿ, ಮೇಲೆ ತಿಳಿಸಿದ ಸಾಲಗಾರರ ಸಾಲವನ್ನು **ಇಂಡಿಯಾ ಎಸ್‌ಎಂಇ ಅಸೆಟ್ ರೀಕನ್ಸ್ಟ್ರಕ್ಷನ್ ಕಂಪನಿ ಲಿಮಿಟೆಡ್** ಗೆ ವಹಿಸಿದೆ, **ಐಎಸ್‌ಎಆರ್‌ಸಿ - 2025-2026 - 5 ಟ್ರಸ್ಟ್‌ನ** ಟ್ರಸ್ಟಿಯಾಗಿ ಕಾರ್ಯನಿರ್ವಹಿಸುತ್ತಿದೆ, ದಿನಾಂಕ **26.12.2025** ರ ನಿಯೋಜನೆ ಒಪ್ಪಂದದ ಪ್ರಕಾರ **(ಐಎಸ್‌ಎಆರ್‌ಸಿ)** ಮೇಲಿನ ಸಾಲ ಖಾತೆಗೆ ಸಂಬಂಧಿಸಿದಂತೆ ಸುರಕ್ಷಿತ ಸಾಲಗಾರನಾಗಿ ಹೆಜ್ಜೆ ಹಾಕಿದೆ (ಖಾತೆ ಸಂಖ್ಯೆ ಹಂಚಿಕೆಯಾಗಿಲ್ಲ)

ಮೇಲೆ ತಿಳಿಸಿದಂತೆ ಮೊತ್ತವನ್ನು ಮರುಪಾವತಿಸಲು ಸಾಲಗಾರ (ರು) / ಜಾಮೀನುದಾರ(ರು) / ಅಡಮಾನದಾರರು ವಿಫಲರಾಗಿದ್ದು, ಕೆಳಗೆ ಸಹಿ ಮಾಡಿದವರು 2002 ರ ಭದ್ರತಾ ಹಿತಾಸಕ್ತಿ (ಜಾಮೀನು) ನಿಯಮಗಳ ನಿಯಮ 8 ರೊಂದಿಗೆ ಓದಲಾದ ಕಾಯ್ದೆಯ ಸೆಕ್ಷನ್ 13 ರ ಉಪ-ವಿಭಾಗ (4) ರ ಅಡಿಯಲ್ಲಿ ಅವರಿಗೆ ನೀಡಲಾದ ಅಧಿಕಾರವನ್ನು ಚಲಾಯಿಸಿ ಕೆಳಗೆ ವಿವರಿಸಿದ ಆಸ್ತಿಯನ್ನು **ಸಾಂಕೇತಿಕವಾಗಿ ಸ್ವಾಧೀನ** ಪಡಿಸಿಕೊಂಡಿದ್ದಾರೆ ಎಂದು ಸಾಲಗಾರ (ರು) / ಜಾಮೀನುದಾರ (ರು) / ಅಡಮಾನದಾರರು ಮತ್ತು ಸಾರ್ವಜನಿಕರಿಗೆ **23.02.2026** ರಂದು ಸೂಚನೆ ನೀಡಲಾಗಿದೆ.

ಸಾಲಗಾರರು/ಜಾಮೀನುದಾರರು/ಅಡಮಾನದಾರರು ವಿಶೇಷವಾಗಿ ಮತ್ತು ಸಾರ್ವಜನಿಕರು ಆಸ್ತಿಯೊಂದಿಗೆ ವ್ಯವಹರಿಸದಂತೆ ಇಲ್ಲಿ ಎಚ್ಚರಿಕೆ ನೀಡಲಾಗಿದೆ ಮತ್ತು ಆಸ್ತಿಯೊಂದಿಗಿನ ಯಾವುದೇ ವ್ಯವಹಾರವು ದಿನಾಂಕ **13.10.2025** ರಂತೆ **ರೂ. 5,45,75,417.12 (ಐದು ಕೋಟಿ ನಲವತ್ತೈದು ಲಕ್ಷ ಎಪ್ಪತ್ತೈದು ಸಾವಿರದ ನಾಲ್ಕುನೂರ ಹದಿನೇಳು ರೂಪಾಯಿಗಳು ಮತ್ತು ಹನ್ನೆರಡು ಪೈಸೆ ಮಾತ್ರ)** ಮೊತ್ತದ **(ಐಎಸ್‌ಎಆರ್‌ಸಿ)** ಶುಲ್ಕಕ್ಕೆ ಒಳಪಟ್ಟಿರುತ್ತದೆ ಮತ್ತು ಅದರ ಮೇಲಿನ ಬಡ್ಡಿ ಮತ್ತು ಇತರ ಶುಲ್ಕಗಳೊಂದಿಗೆ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ಧವಿರುವ ಸಮಯದ ಬಗ್ಗೆ ಸಾಲಗಾರರ

ಸ್ಥಿರಾಸ್ತಿಯ ವರ್ಣನೆ

ಭೂ/ಆಸ್ತಿಗಳ ಎಲ್ಲಾ ಪಾರ್ಸೆಲ್ಗಳು, ಅವುಗಳ ಜೊತೆಗೆ ಪ್ರಸ್ತುತ ಮತ್ತು / ಅಥವಾ ಭವಿಷ್ಯದ ಎಲ್ಲಾ ರಚನೆಗಳು, ಕಟ್ಟಡಗಳು, ಪೀಠೋಪಕರಣಗಳು, ಫಿಕ್ಚರ್‌ಗಳು, ಫಿಟ್ಟಿಂಗ್‌ಗಳು, ಸ್ಟ್ಯಾಂಡಿಂಗ್ ಮತ್ತು / ಅಥವಾ ಪ್ಲಾಂಟ್ ಮತ್ತು ಮೆಷಿನರಿಗಳನ್ನು ಸ್ಥಾಪಿಸಲಾಗಿದೆ / ಸ್ಥಾಪಿಸಲಾಗುವುದು ಮತ್ತು/ಅಥವಾ ನಿರ್ಮಿಸಲಾಗುವುದು / ನಿರ್ಮಿಸಲಾಗುವುದು ಮತ್ತು ಅದರಲ್ಲಿರುವ ಎನ್ಡಿ ಡೆವಲಪರ್ಸ್ ಪ್ರೈವೇಟ್ ಲಿಮಿಟೆಡ್ನ ಎಲ್ಲಾ ಪ್ರಸ್ತುತ ಮತ್ತು/ಅಥವಾ ಭವಿಷ್ಯದ ಹಕ್ಕುಗಳು, ಶೀರ್ಷಿಕೆ ಮತ್ತು / ಅಥವಾ ಆಸಕ್ತಿ:

ಹಂತ 1 ಮತ್ತು ಹಂತ 2 ರಲ್ಲಿ ಮಾರಾಟವಾಗದ ವಿಲ್ಲಾ ಸಂಖ್ಯೆ 5 ರಲ್ಲಿರುವ ಎಲ್ಲಾ ಆಸ್ತಿಯ ತುಣುಕು ಮತ್ತು ಪಾರ್ಸೆಲ್, ಕೆಳಗೆ ಉಲ್ಲೇಖಿಸಿದಂತೆ ಕ್ರಮ ಸಂಖ್ಯೆ 1 ರಿಂದ 38 ರವರೆಗೆ:

ಮೊದಲ ಹಂತ

ಕ್ರಮ ಸಂಖ್ಯೆ	ವಿಲ್ಲಾ ಸಂಖ್ಯೆ	ಚದರ ಅಡಿಗಳಲ್ಲಿ ಭೂಪ್ರದೇಶ.	ಚದರ ಅಡಿಗಳಲ್ಲಿ ಬಾವು.	ಚದರ ಅಡಿಗಳಲ್ಲಿ ಎಸ್‌ಬಿಎ.
1.	A1	2475	2890	3030
2.	A2	2230	2890	3030
3.	B93	2820	3260	3420
4.	B7	2725	3260	3420
5.	B91	2475	3260	3420

ಮೊದಲ ಹಂತ

ಎರಡನೇ ಹಂತ (ಎಲ್ಲಾ ಘಟಕಗಳು ನಮ್ಮ ಬಳಿ ಇವೆ, ಯಾವುದೇ ತಾತ್ಕಾಲಿಕ NOC ನೀಡಲಾಗಿಲ್ಲ)

ಕ್ರಮ ಸಂಖ್ಯೆ	ವಿಲ್ಲಾ ಸಂಖ್ಯೆ	ಚದರ ಅಡಿಗಳಲ್ಲಿ ಭೂಪ್ರದೇಶ.	ಚದರ ಅಡಿಗಳಲ್ಲಿ ಬಾವು.	ಚದರ ಅಡಿಗಳಲ್ಲಿ ಎಸ್‌ಬಿಎ.
1.	A29	2535	2840	2980
2.	A32	2260	2840	2980
3.	A33	2250	2840	2980
4.	A34	2250	2840	2980
5.	A38	2475	2840	2980
6.	A39	2475	2840	2980
7.	B18	2475	3260	3420
8.	B19	2475	3260	3420
9.	B28	2725	3260	3420
10.	B31	2475	3260	3420
11.	B32	2725	3260	3420
12.	B38	2725	3260	3420
13.	B39	2475	3260	3420
14.	B40	2475	3260	3420
15.	B14	2475	3265	3430
16.	B16	2725	3260	3430
17.	B24	2475	3265	3430
18.	B25	2475	3265	3430
19.	B33	2725	3265	3430
20.	B34	2475	3265	3430
21.	B49	2725	3265	3430
22.	B64	2475	3265	3430
23.	C12	4220	4695	4920
24.	C16	4220	4695	4920
25.	C19	4220	4695	4920
26.	B56	2725	3751	3420
27.	B58	2475	3501	3420
28.	B52	2475	3504	3430
29.	B53	2475	3504	3430
30.	B54	2475	3504	3430
31.	B55	2725	3754	3430
32.	B65	2475	3504	3430
33.	B66	2475	3504	3430
34.	B67	2475	3504	3430
35.	B68	2475	3504	3430
36.	B69	2725	3754	3430
37.	59	2475	3501	3420
38.	60	2475	3501	3420

ಮೇಲೆ ಉಲ್ಲೇಖಿಸಲಾದ ವಿಲ್ಲಾಗಳನ್ನು ಐಟಂ ಸಂಖ್ಯೆ 1 ರಿಂದ **V** ರವರೆಗೆ ಉಲ್ಲೇಖಿಸಲಾದ ಪರಿವರ್ತಿತ ಆಸ್ತಿಯ ಮೇಲೆ ನಿರ್ಮಿಸಲಾಗಿದೆ.

ಐಟಂ ಸಂಖ್ಯೆ. I

ಬೆಂಗಳೂರು ಜಿಲ್ಲೆಯ ವರ್ತೂರು ಹೋಬಳಿಯ ಗುಂಜೂರು ಗ್ರಾಮದಲ್ಲಿ ನೆಲೆಗೊಂಡಿರುವ, 5 ಎಕರೆ 38 ಗುಂಟ ಅಳತೆಯ, ಸರ್ವೆ ಸಂಖ್ಯೆ 63/1 ರ ಸ್ಥಿರ ಆಸ್ತಿಯ ಎಲ್ಲಾ ತುಣುಕು ಮತ್ತು ಪಾರ್ಸೆಲ್, ಮತ್ತು ಇವುಗಳಿಗೆ ಸಂಬಂಧಿಸಿದೆ:

ಪೂರ್ವ : ಜಿ ವಿ ತಿಪ್ಪಣ್ಣನ ಜಮೀನು,
ಪಶ್ಚಿಮದಲ್ಲಿ : ಸಾರಕಾರಿ ಕಾಲುವೆ,
ಉತ್ತರದಲ್ಲಿ : ತಳವಾರ ಇನಾಮಿನ ಜಮೀನು
ದಕ್ಷಿಣದಲ್ಲಿ : ಪೂಜಾರಿ ಯಲ್ಲಪ್ಪ ಅವರ ಜಮೀನು.

ಐಟಂ ಸಂಖ್ಯೆ. II

ಬೆಂಗಳೂರು ಜಿಲ್ಲೆಯ ವರ್ತೂರು ಹೋಬಳಿಯ ಗುಂಜೂರು ಗ್ರಾಮದಲ್ಲಿ ನೆಲೆಗೊಂಡಿರುವ, 2 ಎಕರೆ 13 ಗುಂಟ ಅಳತೆಯ, ಸರ್ವೆ ಸಂಖ್ಯೆ 64 ರ ಸ್ಥಿರ ಆಸ್ತಿಯ ಎಲ್ಲಾ ತುಣುಕು ಮತ್ತು ಪಾರ್ಸೆಲ್, ಮತ್ತು ಇವುಗಳಿಗೆ ಸಂಬಂಧಿಸಿದೆ:

ಪೂರ್ವ : ಸರ್ಕಾರ ಕಾಲುವೆ,
ಪಶ್ಚಿಮದಲ್ಲಿ : ಅದೇ ಪ್ರದೇಶದಲ್ಲಿ ಉಳಿದ ಭೂಮಿ,
ಉತ್ತರದಲ್ಲಿ : ಜಿ.ವಿ. ನಾಗರಾಜ ರೆಡ್ಡಿ ಅವರ ಆಸ್ತಿ,
ದಕ್ಷಿಣದಲ್ಲಿ : ಜಿ.ವಿ. ನಾಗರಾಜ ರೆಡ್ಡಿ ಅವರ ಆಸ್ತಿ.

ಐಟಂ ಸಂಖ್ಯೆ. III

ಬೆಂಗಳೂರು ಜಿಲ್ಲೆಯ ವರ್ತೂರು ಹೋಬಳಿಯ ಗುಂಜೂರು ಗ್ರಾಮದಲ್ಲಿ ನೆಲೆಗೊಂಡಿರುವ, 3 ಎಕರೆ 10 ಗುಂಟ ಅಳತೆಯ, ಸರ್ವೆ ಸಂಖ್ಯೆ 65/1 ರ ಸ್ಥಿರ ಆಸ್ತಿಯ ಎಲ್ಲಾ ತುಣುಕು ಮತ್ತು ಪಾರ್ಸೆಲ್, ಮತ್ತು ಇವುಗಳಿಗೆ ಸಂಬಂಧಿಸಿದೆ:

ಪೂರ್ವ : ಮರಿಯಪ್ಪ ಶೆಟ್ಟಿಯವರ ಜಮೀನು,
ಪಶ್ಚಿಮದಲ್ಲಿ : ಸಾರಕಾರಿ ದೊಡ್ಡಹಳ್ಳಿ,
ಉತ್ತರದಲ್ಲಿ : ಜಿ ನಂಜಪ್ಪ ರೆಡ್ಡಿಯವರ ಜಮೀನು,
ದಕ್ಷಿಣದಲ್ಲಿ : ವಿ ರಾಮಯ್ಯ ರೆಡ್ಡಿ ಅವರ ಜಮೀನು.

ಐಟಂ ಸಂಖ್ಯೆ. IV

ಬೆಂಗಳೂರು ಜಿಲ್ಲೆಯ ವರ್ತೂರು ಹೋಬಳಿಯ ಗುಂಜೂರು ಗ್ರಾಮದಲ್ಲಿ ನೆಲೆಗೊಂಡಿರುವ, 6 ಎಕರೆ 22 ಗುಂಟ ಅಳತೆಯ, ಸರ್ವೆ ಸಂಖ್ಯೆ 65/2 ರ ಸ್ಥಿರ ಆಸ್ತಿಯ ಎಲ್ಲಾ ತುಣುಕು ಮತ್ತು ಪಾರ್ಸೆಲ್, ಮತ್ತು ಇವುಗಳಿಗೆ ಸಂಬಂಧಿಸಿದೆ:

ಪೂರ್ವ : ಕಾಲುವೆ,
ಪಶ್ಚಿಮದಲ್ಲಿ : ದೊಡ್ಡಹಳ್ಳಿ,
ಉತ್ತರದಲ್ಲಿ : ಜಿ ಟಿ ಮರಿಸ್ವಾಮಿ ರೆಡ್ಡಿ ಹೆಸರಿನಲ್ಲಿರುವ ಭೂಮಿ,
ದಕ್ಷಿಣದಲ್ಲಿ : ತಲ್ವಾರ್ ಇನಾಂ ಭೂಮಿ.

ಐಟಂ ಸಂಖ್ಯೆ. V

ಬೆಂಗಳೂರು ಜಿಲ್ಲೆಯ ವರ್ತೂರು ಹೋಬಳಿಯ ಗುಂಜೂರು ಗ್ರಾಮದಲ್ಲಿ ನೆಲೆಗೊಂಡಿರುವ, 09.60 ಎಕರೆ ಗುಂಟ ಅಳತೆಯ, ಸರ್ವೆ ಸಂಖ್ಯೆ 65/5 ರ ಸ್ಥಿರ ಆಸ್ತಿಯ ಎಲ್ಲಾ ತುಣುಕು ಮತ್ತು ಪಾರ್ಸೆಲ್, ಮತ್ತು ಇವುಗಳಿಗೆ ಸಂಬಂಧಿಸಿದೆ:

ಪೂರ್ವ : ಸರ್ಕಾರ/ಚಾನೆಲ್,
ಪಶ್ಚಿಮದಲ್ಲಿ : ಅದೇ ಆಸ್ತಿಯ ಉಳಿದ ಭಾಗ,
ಉತ್ತರದಲ್ಲಿ : ಸರ್ಕಾರಿ ರಸ್ತೆ,
ದಕ್ಷಿಣದಲ್ಲಿ : ಭೂ ಸಂಖ್ಯೆ 65/1 ರಲ್ಲಿನ ಭೂಮಿ ಎರಡನೇ ವ್ಯಕ್ತಿಗೆ ಸೇರಿದೆ.

ಅಧಿಕಾರವಿರುವ ಅಧಿಕಾರಿ
ಇಂಡಿಯಾ ಎಸ್‌ಎಂಇ ಅಸೆಟ್ ರೀಕನ್ಸ್ಟ್ರಕ್ಷನ್ ಕಂಪನಿ ಲಿಮಿಟೆಡ್
ಐಎಸ್‌ಎಆರ್‌ಸಿ -2025-2026-5 ಟ್ರಸ್ಟ್‌ನ ಟ್ರಸ್ಟಿಯಾಗಿ ಕಾರ್ಯನಿರ್ವಹಿಸುತ್ತಿದೆ.

ದಿನಾಂಕ: 23.02.2026
ಸ್ಥಳ : ಬೆಂಗಳೂರು

ಸಮಾಚಾರ ಸಣ್ಣದಲ್ಲ

ಈಶ್ವರ್‌ಗೆ ಪಿಎಚ್.ಡಿ ಪ್ರದಾನ

ಬೆಂಗಳೂರು: ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ತಾಲೂಕಿನ ಸಿರಿಗೇರಿ ಗ್ರಾಮದ ಈಶ್ವರ್ ಅವರಿಗೆ ಬೆಂಗಳೂರು ವಿಶ್ವವಿದ್ಯಾಲಯ ಪಿಎಚ್.ಡಿ ಪದವಿ ಪ್ರದಾನ ಮಾಡಿದೆ. ಸಂವಹನ ವಿಭಾಗದ ಹಿರಿಯ ಪ್ರಾಧ್ಯಾಪಕರು ಹಾಗೂ ಬೆಂಗಳೂರು ಉತ್ತರ ವಿವಿ ಕುಲಪತಿ ಪ್ರೊ.ಬಿ.ಕೆ.ರವಿ ಅವರ ಮಾರ್ಗದರ್ಶನದಲ್ಲಿ ಮಂಡಿಸಿದ 'ಕನ್ನಡ ಚಿತ್ರರಂಗಕ್ಕೆ ಹಂಸಲೇಖ ರವರ ಕೊಡುಗೆ: ಒಂದು ಅಧ್ಯಯನ' ಎಂಬ ಸಂಶೋಧನಾ ಮಹಾಪ್ರಬಂಧಕ್ಕೆ ಡಾಕ್ಟರೇಟ್ ಪದವಿ ಪ್ರದಾನ ಮಾಡಲಾಗಿದೆ.

27.62 ಲಕ್ಷ ರು.ಆಸ್ತಿ ತೆರಿಗೆ ಪಾವತಿ

ಬೆಂಗಳೂರು: ಬೊಮ್ಮನಹಳ್ಳಿ ವಲಯದಲ್ಲಿ ಹರಾಜು ಪ್ರಕ್ರಿಯೆ ಆರಂಭಕ್ಕೂ ಮುನ್ನವೇ 14 ಸುಸ್ತಿದಾರರು ಒಟ್ಟು 27.62 ಲಕ್ಷ ರು. ಆಸ್ತಿ ತೆರಿಗೆ ಬಾಕಿ ಪಾವತಿಸಿರುವುದಾಗಿ ಆಯುಕ್ತ ಕೆ.ಎನ್.ರಮೇಶ್ ತಿಳಿಸಿದರು. ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಗೆ ಒಳಪಡುವ ದಕ್ಷಿಣ ನಗರ ಪಾಲಿಕೆಯ ವಲಯ-2ರಲ್ಲಿ ಅತೀ ಹೆಚ್ಚು ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿರುವ 50 ವಸತಿ ಹಾಗೂ ವಸತಿಯೇತರ ಆಸ್ತಿಗಳನ್ನು ಗುರುತಿಸಿ, ಫೆ.27 ರ ಬೆ. 11ರಿಂದ ಮಧ್ಯಾಹ್ನ 1.30ರವರೆಗೆ ಹರಾಜು ಪ್ರಕ್ರಿಯೆ ನಡೆಸುವುದಾಗಿ ಮುಂಚಿತವಾಗಿ ಪ್ರಕಟಿಸಲಾಗಿತ್ತು. ಈ 50 ಆಸ್ತಿಗಳ ಒಟ್ಟು ಬಾಕಿ ಮೊತ್ತ 1.08 ಕೋಟಿ ರು. ಆಗಿದ್ದು, ಎಲ್ಲ ಆಸ್ತಿಗಳಿಗೆ ಈಗಾಗಲೇ ಪ್ರೋಕ್ಲಮೇಷನ್ ಆದೇಶ ಜಾರಿಗೊಳಿಸಲಾಗಿತ್ತು. ಹರಾಜು ಪ್ರಕ್ರಿಯೆ ಆರಂಭಕ್ಕೂ ಮುನ್ನ 14 ಸುಸ್ತಿದಾರರು ಚಲನ್ ಹಾಗೂ ಆನ್‌ಲೈನ್ ಮೂಲಕ ಬಾಕಿ ತೆರಿಗೆ ಪಾವತಿಸಲಾಗಿದೆ.

ನಾಯಿಗಳಿಗೆ 90 ಅಧಿಕೃತ ಫೀಡಿಂಗ್ ಸ್ಥಳ

ಬೆಂಗಳೂರು: ಬೆಂಗಳೂರು ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಬೀದಿನಾಯಿಗಳ ಕಲ್ಯಾಣ, ಸಾರ್ವಜನಿಕ ಆರೋಗ್ಯ ರಕ್ಷಣೆ ಮತ್ತು ಪರಿಸರ ಸ್ವಚ್ಛತೆ ಕಾಪಾಡುವ ಉದ್ದೇಶದಿಂದ 90 ಸ್ಥಳಗಳನ್ನು ಅಧಿಕೃತ ಫೀಡಿಂಗ್ ಸ್ಪಾಟ್‌ಗಳಾಗಿ ಗುರುತಿಸಲಾಗಿದೆ ಎಂದು ಅಭಿವೃದ್ಧಿ ಅಪರ ಆಯುಕ್ತ ದಲ್ಜಿತ್ ಕುಮಾರ್ ತಿಳಿಸಿದ್ದಾರೆ. ಈ ಕುರಿತು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿರುವ ಅವರು, ಪಶು ಸಂಗೋಪನೆ ವಿಭಾಗದ ಸಹಕಾರದೊಂದಿಗೆ, ಸರ್ವೋಚ್ಚ ನ್ಯಾಯಾಲಯ ಹಾಗೂ ಭಾರತೀಯ ಪ್ರಾಣಿ ಕಲ್ಯಾಣ ಮಂಡಳಿಯ ಮಾರ್ಗಸೂಚಿಗಳನ್ವಯ ಜನಸಂದಣಿ ಪ್ರದೇಶಗಳಿಂದ ದೂರವಿರುವ ಸ್ಥಳಗಳಲ್ಲಿ ಈ ಫೀಡಿಂಗ್ ಪಾಯಿಂಟ್‌ಗಳನ್ನು ಗುರುತಿಸಲಾಗಿದೆ.

ನೀರು ಅನಧಿಕೃತ ಪೋಲು ಹಾಗೂ ಬಾಕಿ ಬಿಲ್ ಉಳಿಸಿಕೊಂಡ ಕಟ್ಟಡಗಳ ವಿರುದ್ಧ ಕ್ರಮ | ರಚನೆಯಾದ ಕೆಲವೇ ತಿಂಗಳಲ್ಲಿ ಬ್ಲೂ ಫೋರ್ಸ್‌ನಿಂದ ಸರಣಿ ದಾಳಿ, ಸಂಪರ್ಕ ಕಡಿತ

6 ಸಾವಿರಕ್ಕೂ ಹೆಚ್ಚು ನೀರಿನ ಅಕ್ರಮ ಸಂಪರ್ಕ ಕಡಿತ

ಅಪರ್ಣಾ.ಎ.ಎಸ್ ಬೆಂಗಳೂರು

ರಾಜಧಾನಿ ಬೆಂಗಳೂರಿನಲ್ಲಿ ಅಕ್ರಮ ನೀರಿನ ಸಂಪರ್ಕ ತಡೆಯಲು ಹಾಗೂ ಬಾಕಿ ಬಿಲ್ ವಸೂಲಿ ಮಾಡುವ ಉದ್ದೇಶದಿಂದ ಜಲಮಂಡಳಿ ಆರಂಭಿಸಿದ ಬ್ಲೂಫೋರ್ಸ್ ಆರಂಭಗೊಂಡ ಕೆಲವೇ ತಿಂಗಳಲ್ಲಿ ಸಾವಿರಾರು ಅಕ್ರಮ, ಅನಧಿಕೃತ ಸಂಪರ್ಕಗಳನ್ನು ಸ್ಥಗಿತಗೊಳಿಸುವ ಜತೆಗೆ ಬಾಕಿ ಬಿಲ್ ಉಳಿಸಿಕೊಂಡ ಸಂಪರ್ಕ ಸ್ಥಗಿತಗೊಳಿಸಿದೆ.

ಜಲಮಂಡಳಿಯು ನಗರಾದ್ಯಂತ ನೀರಿನ ಪೋಲು ತಡೆಗಟ್ಟಲು ಸಮರೋಪಾದಿಯಲ್ಲಿ ಕಾರ್ಯಾಚರಣೆಯನ್ನು ಕೈಗೊಳ್ಳುತ್ತಿದೆ. ನಗರಾದ್ಯಂತ ಬ್ಲೂಫೋರ್ಸ್ ಮೂಲಕ ಅನಧಿಕೃತ ನೀರಿನ ಸಂಪರ್ಕ ಹಾಗೂ ಒಳಚರಂಡಿ ಸಂಪರ್ಕಗಳನ್ನು ಪತ್ತೆ ಹೆಚ್ಚುತ್ತಿದ್ದು, ಈ ಮೂಲಕ ಅನಗತ್ಯ ಪೋಲನ್ನು ತಡೆಗೆ ಅಗತ್ಯ ಕ್ರಮಕ್ಕೆ ಮುಂದಾಗಿದೆ.

ಅನವಶ್ಯಕವಾಗಿ ನೀರು ಪೋಲು ಮಾಡುವವರ ವಿರುದ್ಧ ಜಲಮಂಡಳಿ ಕಠಿಣ ಕ್ರಮ ಕೈಗೊಳ್ಳುತ್ತಿದ್ದು, ಜಲ ಸುಸ್ಥಿರ ಬೆಂಗಳೂರು ನಿರ್ಮಾಣಕ್ಕಾಗಿ ಅತ್ಯಂತ ಮುತುವರ್ಜಿಯಿಂದ ಕಾರ್ಯನಿರ್ವಹಿಸಲಾಗುತ್ತಿದೆ. ನಿರಂತರ ಮೇಲ್ವಿಚಾರಣೆ ಹಾಗೂ ಕಾರ್ಯಾಚರಣೆಯೊಂದಿಗೆ, ನೀರಿನ ಮಿತಬಳಕೆಯ ಬಗ್ಗೆ ಜನತೆಯಲ್ಲಿ ಅರಿವು ಮೂಡಿಸಲು ಹಾಗೂ ಅನಾವಶ್ಯಕವಾಗಿ ನೀರು ಪೋಲು ಮಾಡುವವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲು ಜಲಮಂಡಳಿ ಮುಂದಾಗಿದೆ. ಈ ನಿಟ್ಟಿನಲ್ಲಿ ಜಲಮಂಡಳಿಯ ಬ್ಲೂಫೋರ್ಸ್ ತಂಡವು ಕಾರ್ಯಾಚರಣೆ ನಡೆಸುತ್ತಿದ್ದು, ನಗರಾದ್ಯಂತ 5961 ಅನಧಿಕೃತ ನೀರಿನ ಸಂಪರ್ಕವನ್ನು ಪತ್ತೆ ಹಚ್ಚಿ ಸಂಪರ್ಕವನ್ನು ಕಡಿತಗೊಳಿಸಿದೆ.



ವಲಯವಾರು ಅಂಕಿ ಅಂಶ

ವಲಯ	ಭೇಟಿ ನೀಡಿದ ಕಟ್ಟಡಗಳು	ನೀರಿನ ಸಂಪರ್ಕ ಕಡಿತ	ಒಳಚರಂಡಿ ಸಂಪರ್ಕ ಕಡಿತ	ಒಟ್ಟು ಸಂಪರ್ಕ ಕಡಿತ
ಉತ್ತರ	5924	1001	258	1259
ಪೂರ್ವ	5114	1145	242	1387
ಪಶ್ಚಿಮ	6926	1341	264	1605
ದಕ್ಷಿಣ	6284	1414	293	1710
ಒಟ್ಟು	24248	4904	1057	5961

ಜಲಮಂಡಳಿಯಿಂದ ಬೃಹತ್ ಅಭಿಯಾನ: ಫೆ.21ರವರೆಗಿನ ಅಂಕಿ ಅಂಶಗಳ ಪ್ರಕಾರ, ನಗರಾದ್ಯಂತ ಒಟ್ಟು 5,961 ಕುಡಿಯುವ ನೀರು ಮತ್ತು ಒಳಚರಂಡಿ ಸಂಪರ್ಕಗಳನ್ನು ಕಡಿತಗೊಳಿಸುವ ಮೂಲಕ ಅಧಿಕಾರಿಗಳು ನಿಯಮಬಾಹಿರ ಕೃತ್ಯಗಳಿಗೆ ಬಿಸಿ ಮುಟ್ಟಿಸಿದ್ದಾರೆ. ಕಳೆದ ಕೆಲವು ವಾರಗಳಿಂದ ಜಲಮಂಡಳಿಯ ಅಧಿಕಾರಿಗಳ ತಂಡವು ನಗರದ ನಾಲ್ಕು ಪ್ರಮುಖ ವಲಯಗಳಲ್ಲಿ ತೀವ್ರ ನಿಗಾ ವಹಿಸಿದ್ದು, ಅಭಿಯಾನದ ಭಾಗವಾಗಿ ಅಧಿಕಾರಿಗಳು ಒಟ್ಟು 24,248 ಕಟ್ಟಡಗಳಿಗೆ ಖುದ್ದಾಗಿ ಭೇಟಿ ನೀಡಿ ತಪಾಸಣೆ ನಡೆಸಿದ್ದಾರೆ. ಈ ಬೃಹತ್ ಕಾರ್ಯಾಚರಣೆಯು ಅನಧಿಕೃತವಾಗಿ ನೀರು ಬಳಕೆ ಮಾಡುತ್ತಿರುವವರು ಮತ್ತು ದೀರ್ಘಕಾಲದವರೆಗೆ ಬಿಲ್ ಬಾಕಿ ಉಳಿಸಿಕೊಂಡಿರುವ ಗ್ರಾಹಕರಲ್ಲಿ ಆತಂಕ ಮೂಡಿಸಿದೆ.

ಜಲಮಂಡಳಿ ನೀಡಿರುವ ಅಂಕಿ-ಅಂಶದ ಪ್ರಕಾರ, ಈವರೆಗೆ ರಾಜಧಾನಿಯಾದ್ಯಂತ ಒಟ್ಟು ಕಡಿತಗೊಂಡ 5,961 ಸಂಪರ್ಕಗಳಲ್ಲಿ 4,904 ಕುಡಿಯುವ ನೀರಿನ ಸಂಪರ್ಕಗಳಾಗಿವೆ. ಇನ್ನುಳಿದ 1,057 ಸಂಪರ್ಕಗಳು ಒಳಚರಂಡಿ ವ್ಯವಸ್ಥೆಗೆ ಸಂಬಂಧಿಸಿದ್ದಾಗಿವೆ. ನೀರಿನ ಸಂಪರ್ಕ ಕಡಿತದ ಪ್ರಮಾಣವು ಒಳಚರಂಡಿ ಸಂಪರ್ಕಕ್ಕೆ ಹೋಲಿಸಿದರೆ ನಾಲ್ಕು ಪಟ್ಟು ಹೆಚ್ಚಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಸೋರಿಕೆ ತಡೆಗೆ ತೀವ್ರ ತಪಾಸಣೆ

ಈ ಬಗ್ಗೆ ಅಧಿಕಾರಿಗಳು ಮಾತನಾಡಿದ್ದು, ನಗರದಲ್ಲಿ ನೀರಿನ ಅಭಾವ ಎದುರಾಗದಂತೆ ನೋಡಿಕೊಳ್ಳಲು ಮತ್ತು ಪ್ರಾಮಾಣಿಕವಾಗಿ ಬಿಲ್ ಪಾವತಿಸುವ ಗ್ರಾಹಕರಿಗೆ ಅನ್ಯಾಯವಾಗದಂತೆ ಈ ಕ್ರಮ ಅನಿವಾರ್ಯವಾಗಿದ್ದು, ಅನಧಿಕೃತ ಸಂಪರ್ಕಗಳು ಮಂಡಳಿಗೆ ದೊಡ್ಡ ಮಟ್ಟದ ಆದಾಯ ಸೋರಿಕೆ ಮಾಡುತ್ತಿವೆ. ಇದನ್ನು ತಡೆಗಟ್ಟಲು ನಮ್ಮ ತಂಡಗಳು ಹಗಲಿರುಳು ಶ್ರಮಿಸುತ್ತಿವೆ. ಮುಂದಿನ ದಿನಗಳಲ್ಲಿ ಈ ತಪಾಸಣೆ ಮತ್ತಷ್ಟು ತೀವ್ರಗೊಳ್ಳಲಿದೆ. ಸಾರ್ವಜನಿಕರು ತಕ್ಷಣವೇ ತಮ್ಮ ಬಾಕಿ ಬಿಲ್‌ಗಳನ್ನು ಪಾವತಿಸಿ, ಅನಧಿಕೃತ ಸಂಪರ್ಕಗಳನ್ನು ಸಕ್ರಮಗೊಳಿಸಿಕೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ಕಾನೂನು ಕ್ರಮದೊಂದಿಗೆ ಭಾರಿ ದಂಡವನ್ನೂ ತೆರಬೇಕಾಗಬಹುದು ಎಂದು ಅಧಿಕಾರಿಗಳು ಎಚ್ಚರಿಸಿದ್ದಾರೆ.

ದಕ್ಷಿಣ ವಲಯದಲ್ಲೇ ಹೆಚ್ಚು ಪ್ರಕರಣ

ನಾಲ್ಕು ವಲಯದ ಪೈಕಿ ದಕ್ಷಿಣ ವಲಯದಲ್ಲಿಯೇ ಅತಿಹೆಚ್ಚು ಅನಧಿಕೃತ ನೀರಿನ ಸಂಪರ್ಕ, ಬಾಕಿ ಉಳಿಸಿಕೊಂಡಿರುವ ಪ್ರಕರಣಗಳಿವೆ. ದಕ್ಷಿಣ ವಲಯದಲ್ಲಿ ಅಧಿಕಾರಿಗಳು ಒಟ್ಟು 6,284 ಕಟ್ಟಡಗಳ ತಪಾಸಣೆ ನಡೆಸಿದ್ದು, ಇದರಲ್ಲಿ 1,710 ಕಟ್ಟಡಗಳ ಸಂಪರ್ಕವನ್ನು ಕಡಿತಗೊಳಿಸಲಾಗಿದೆ. ಇದರಲ್ಲಿ 1417 ಕುಡಿಯುವ ನೀರಿನ ಸಂಪರ್ಕ ಹಾಗೂ 293 ಒಳಚರಂಡಿ ಸಂಪರ್ಕವನ್ನು ಸ್ಥಗಿತಗೊಳಿಸಲಾಗಿದೆ. ಅದರಲ್ಲಿಯೂ ದಕ್ಷಿಣ-2 ವಿಭಾಗದಲ್ಲಿ ಅತಿಹೆಚ್ಚು ಅಂದರೆ 661 ಸಂಪರ್ಕಗಳನ್ನು ರದ್ದುಗೊಳಿಸಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಇನ್ನುಳಿದಂತೆ ಪಶ್ಚಿಮ ವಲಯದಲ್ಲಿ 1,605 ಸಂಪರ್ಕಗಳನ್ನು ಕಡಿತಗೊಳಿಸಲಾಗಿದ್ದು, ಪೂರ್ವ ವಲಯದಲ್ಲಿ 1,387, ಉತ್ತರ ವಲಯದಲ್ಲಿ 1,259 ಸಂಪರ್ಕಗಳನ್ನು ಕಡಿತಗೊಳಿಸಲಾಗಿದೆ.

ಏ.1 ಮಧ್ಯರಾತ್ರಿ ಕರಗ ಶಕ್ತ್ಯೋತ್ಸವ | ಕರಗ ಹೊರಲಿರುವ ಜ್ಞಾನೇಂದ್ರ ಸ್ವಾಮಿ

ಬೆಂಗಳೂರು ಕರಗಕ್ಕೆ ಸಿದ್ಧತೆ ಆರಂಭ

ಬೆಂಗಳೂರು: ಉದ್ಯಾನನಗರಿಯ ಅತ್ಯಂತ ಪ್ರಾಚೀನ ಹಾಗೂ ಜನಪ್ರಿಯ ಹಬ್ಬವಾದ ಬೆಂಗಳೂರು ಕರಗ ಶಕ್ತ್ಯೋತ್ಸವ ದಿನಾಂಕ ನಿಗದಿಯಾಗಿದೆ. ತಿಗಳರಪೇಟೆಯ ಪ್ರಸಿದ್ಧ ಶ್ರೀ ಧರ್ಮರಾಯ ಸ್ವಾಮಿ ದೇವಸ್ಥಾನದಲ್ಲಿ ಪ್ರತಿವರ್ಷದಂತೆ ಈ ಬಾರಿಯೂ ಅದ್ದೂರಿ ಆಚರಣೆಗಳು ಜರುಗಲಿವೆ. ಈ ಬಾರಿ ಒಟ್ಟು 11 ದಿನಗಳ ಕಾಲ ವಿವಿಧ ಧಾರ್ಮಿಕ ವಿಧಿವಿಧಾನಗಳೊಂದಿಗೆ ಈ ಸಂಭ್ರಮ ನಡೆಯಲಿದೆ.

ಮಹೋತ್ಸವದ ಕೇಂದ್ರಬಿಂದುವಾಗಿರುವ ಧರ್ಮರಾಯ ಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆಗಳು ಮತ್ತು ವಿಧಿವಿಧಾನಗಳು ನೆರವೇರುತ್ತವೆ. ತಿಗಳ ಸಮುದಾಯದವರು ಈ ಹಬ್ಬದ ಮುಖ್ಯ ಆಯೋಜಕರಾಗಿದ್ದು, ಶತಮಾನಗಳಿಂದ ಬಂದಿರುವ ಆಚರಣೆ ಶ್ರದ್ಧೆಯಿಂದ ಮುಂದುವರಿಸಿಕೊಂಡು ಬರುತ್ತಿದ್ದಾರೆ. ಸಮುದಾಯಗಳ ಏಕತೆ, ಶಕ್ತಿಯ ಆರಾಧನೆ ಮತ್ತು ನಗರ ಸಾಂಸ್ಕೃತಿಕ ಗುರುತಿನ ಪ್ರತೀಕವಾಗಿದೆ. ವಿವಿಧ ಧರ್ಮಗಳ ಜನರು ಭಾಗವಹಿಸುವ ಈ ಉತ್ಸವವು ಸಹಬಾಳ್ವೆ ಮತ್ತು ಸೌಹಾರ್ದತೆಯ ಸಂದೇಶ ಸಾರುತ್ತದೆ.

ಸತತ 16ನೇ ಬಾರಿ ಕರಗ ಹೊರಲಿರುವ ಜ್ಞಾನೇಂದ್ರ ಸ್ವಾಮಿ: ಈ ಬಾರಿಯ ಉತ್ಸವದ ವಿಶೇಷವೆಂದರೆ, ಅನುಭವೀ ಅರ್ಚಕರಾದ ಜ್ಞಾನೇಂದ್ರ ಸ್ವಾಮಿ ಅವರು ಸತತ 16ನೇ ಬಾರಿಗೆ ಬೆಂಗಳೂರು ಕರಗವನ್ನು ಹೊರಲಿದ್ದಾರೆ. ಅವರ ಅಚಲ ಭಕ್ತಿ ಮತ್ತು ದಶಕಗಳ ಅನುಭವವು ಈ ಸಾಂಪ್ರದಾಯಿಕ ಉತ್ಸವಕ್ಕೆ ಮತ್ತಷ್ಟು ಮೆರುಗು ನೀಡಲಿದೆ. ಮಲ್ಲಿಗೆ ಹೂವಿನಿಂದ ಅಲಂಕೃತವಾದ ಭಾರೀ ಕರಗವನ್ನು ಹೊತ್ತು, ಸಮತೋಲನ ತಪ್ಪದಂತೆ ನಗರದಾದ್ಯಂತ ಸಂಚರಿಸುವ ಅವರ ಕಲೆ ಕರಗದ ಪ್ರಮುಖ ಆಕರ್ಷಣೆಯಾಗಿದೆ.

ತವಕಲ್ ಮಸ್ತಾನ್ ದರ್ಗಾ ಭೇಟಿ: ಸಂಪ್ರದಾಯದಂತೆ ಕರಗ ಹೊತ್ತ ಅರ್ಚಕರು ನಗರದ ತವಕಲ್ ಮಸ್ತಾನ್ ದರ್ಗಾಕ್ಕೆ ಭೇಟಿ ನೀಡಿ ಪ್ರಾರ್ಥನೆ ಸಲ್ಲಿಸಲಿದ್ದಾರೆ.

ಜಿಬಿಎ, ಪೊಲೀಸ್ ಸನ್ನದ್ಧ

ಲಕ್ಷಾಂತರ ಭಕ್ತರು ದೇಶ-ವಿದೇಶಗಳಿಂದ ಈ ಉತ್ಸವ ನೋಡಲು ಬರುವ ಹಿನ್ನೆಲೆಯಲ್ಲಿ, ಜಿಬಿಎ ಮತ್ತು ಬೆಂಗಳೂರು ಪೊಲೀಸ್ ಇಲಾಖೆ ಈಗಿನಿಂದಲೇ ಸಿದ್ಧತೆ ಕೈಗೊಂಡಿವೆ. ಈ ಕುರಿತಂತೆ ಮೆರವಣಿಗೆ ಸಾಗುವ ಪೇಟೆ ಬೀದಿಗಳ ರಸ್ತೆ ದುರಸ್ತಿ ಕಾರ್ಯಕ್ಕೆ ಚಾಲನೆ ನೀಡಲಾಗಿದೆ. ಸಿಸಿಟಿವಿ ಕ್ಯಾಮೆರಾಗಳ ಅಳವಡಿಕೆ ಮತ್ತು ಹೆಚ್ಚುವರಿ ಪೊಲೀಸ್ ಸಿಬ್ಬಂದಿ ನಿಯೋಜನೆಗೆ ಯೋಜನೆ ರೂಪಿಸಲಾಗಿದ್ದು, ಹೆಚ್ಚು ಭದ್ರತೆ ವಹಿಸಲಾಗಿದೆ. ಕರಗ ವೀಕ್ಷಣೆಗೆ ಸಾವಿರಾರು ಭಕ್ತರು ಜಮಾಯಿಸಲಿದ್ದು, ಕರಗ ಸಾಗುವ ರಸ್ತೆಗಳಲ್ಲಿ ಬೀದಿ ದೀಪಗಳ ವ್ಯವಸ್ಥೆ ಮಾಡಿದೆ.

ಕರಗ ಮಹೋತ್ಸವದ ದಿನಾಂಕಗಳು

- **ಧ್ವಜಾರೋಹಣ (ಮಾರ್ಚ್ 24): ಧರ್ಮರಾಯ ಸ್ವಾಮಿ ದೇವಸ್ಥಾನದಲ್ಲಿ ಧ್ವಜಾರೋಹಣ ನೆರವೇರಿಸುವ ಮೂಲಕ 11 ದಿನಗಳ ಉತ್ಸವಕ್ಕೆ ಅಧಿಕೃತ ಚಾಲನೆ.**
- **ಹಸಿಕರಗ (ಮಾರ್ಚ್ 30): ರಾತ್ರಿಯ ವೇಳೆಯಲ್ಲಿ ಅತ್ಯಂತ ಭಕ್ತಿಪೂರ್ವಕವಾಗಿ ಹಸಿಕರಗ ಮಹೋತ್ಸವ ಜರುಗಲಿದೆ. ಇದು ಮುಖ್ಯ ಕರಗಕ್ಕೆ ಪೂರ್ವಭಾವಿಯಾಗಿ ನಡೆಯುವ ಪವಿತ್ರ ಆಚರಣೆ.**
- **ವಿಶ್ವವಿಖ್ಯಾತ ಹೂವಿನ ಕರಗ (ಏಪ್ರಿಲ್ 1): ಚೈತ್ರ ಪೌರ್ಣಮಿಯ ಶುಭ ದಿನದಂದು ಮಧ್ಯರಾತ್ರಿ ವಿಶ್ವವಿಖ್ಯಾತ ಹೂವಿನ ಕರಗ ಮೆರವಣಿಗೆ ಆರಂಭ.**

ಶಿಷ್ಯ ಬಳಗವೇ ನಮ್ಮ ನಿಜವಾದ ಸಂಪತ್ತು

ಹೊಸನಗರ: ಶಿಷ್ಯರೇ ನಮ್ಮ ನಿಜವಾದ ಸಂಪತ್ತು. ಅವರ ಭಕ್ತಿ ಮತ್ತು ನಿಷ್ಠೆಯೇ ಮಠದ ಬಲ ಎಂದು ರಾಮಚಂದ್ರಾಪುರ ಮಠದ ಶಂಕರಾಚಾರ್ಯ ಶ್ರೀ ರಾಘವೇಶ್ವರ ಭಾರತೀ ಮಹಾಸ್ವಾಮಿಗಳು ತಿಳಿಸಿದರು.

ಶರಾವತಿ ನದಿ ತೀರದಲ್ಲಿ ಪ್ರಧಾನ ಮಠದ ಪುನರ್ ನಿರ್ಮಾಣಕ್ಕಾಗಿ ಶುಕ್ರವಾರ ಆಯೋಜಿಸಿದ್ದ ನವ ನಿರ್ಮಾಣದ ಶಿಲಾನ್ಯಾಸ ಸಮಾರಂಭದಲ್ಲಿ ಮಾತನಾಡಿದ ಅವರು, ರಾಮಚಂದ್ರಾಪುರ ಮಠದ ಕುರಿತು ಹೊರ ಜಗತ್ತಿನಲ್ಲಿ ಹಲವು ಕಲ್ಪನೆಗಳಿವೆ.

ಮಠದಲ್ಲಿ ಅಪಾರ ಸಂಪತ್ತು ಇದೆ ಎಂಬ ಭಾವನೆ ಇದ್ದರೂ, ವಾಸ್ತವದಲ್ಲಿ ನಮ್ಮಲ್ಲಿ ಹಣದ ಕೊಪ್ಪರಿಗೆಯಿಲ್ಲ. ಎಲ್ಲಾ ಯೋಜನೆಗಳು ಶೂನ್ಯದಿಂದಲೇ ಆರಂಭವಾಗುತ್ತವೆ. ಆದರೆ ಶಿಷ್ಯರ ಪ್ರೀತಿ, ನಿಷ್ಠೆ ಮತ್ತು ಗುರುಭಕ್ತಿಯೇ ನಮ್ಮ ದೊಡ್ಡ ಸಂಪತ್ತು. ಸಂಕಷ್ಟದಲ್ಲಿಯೂ, ಸಂಭ್ರಮದಲ್ಲಿಯೂ ಶಿಷ್ಯರು ಮಠದೊಂದಿಗೆ ಭಾವನಾತ್ಮಕವಾಗಿ ನಿಂತಿದ್ದಾರೆ ಎಂದರು.

ರಾಮನ ಬಾಣದಿಂದ ಉದ್ಭವಿಸಿದ ಪವಿತ್ರ ಶರಾವತಿ ನದಿ ತೀರದಲ್ಲಿ ಪ್ರಧಾನ ಮಠ ನೆಲೆಗೊಂಡಿರುವುದು ವಿಶೇಷ ಮಹತ್ವದ್ದಾಗಿದೆ. ಶಿಲಾನ್ಯಾಸ ಸಂದರ್ಭದಲ್ಲಿ ಅಯೋಧ್ಯೆಯ ಪುಣ್ಯ ಮಣ್ಣನ್ನು ನಿಕ್ಷೇಪ ಮಾಡಲಾಗಿದೆ. ಪ್ರಧಾನ ಮಠದ ಪುನರ್ನಿರ್ಮಾಣ 1008 ದಿನಗಳಲ್ಲಿ ಪೂರ್ಣಗೊಳಿಸುವ ಗುರಿ ನಿಗದಿಪಡಿಸಲಾಗಿದ್ದು, ನಂತರ 8 ದಿನಗಳ ವೈಭವದ ಕಾರ್ಯಕ್ರಮದ ಮೂಲಕ ಲೋಕಾರ್ಪಣೆ ನೆರವೇರಲಿದೆ. ಇದು ಹಿಂದಿನ ರಾಮಾಯಣ ಮಹಾಸತ್ರ ಮತ್ತು ವಿಶ್ವ ಗೋಸಮ್ಮೇಳನದ ವೈಭವ ನೆನಪಿಸುವಂತಿರಲಿದೆ ಎಂದರು.

ಈ ವೇಳೆ ಮಾಜಿ ಗೃಹ ಸಚಿವ ಆರಗ ಜ್ಞಾನೇಂದ್ರ, ಮಾತನಾಡಿ, ನಮ್ಮ ಜೀವನದಲ್ಲಿ ನಿಜವಾದ ಪವಾಡಗಳನ್ನು ನೋಡುವಂತೆ ಮಾಡಿದ ಸ್ಥಳ ರಾಮಚಂದ್ರಾಪುರ ಮಠ ಹಾಗೂ ಇಲ್ಲಿನ ಗುರುಗಳು ಎಂದರು. ಕಾರ್ಯಕ್ರಮದಲ್ಲಿ ಶಾಸಕ ಬೇಳೂರು ಗೋಪಾಲಕೃಷ್ಣ, ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ಅಧ್ಯಕ್ಷ ಆರ್.ಎಂ. ಮಂಜುನಾಥ್ ಗೌಡ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಶರಾವತಿ ನದಿ ತೀರದಲ್ಲಿ ಪ್ರಧಾನ ಮಠದ ಪುನರ್ ನಿರ್ಮಾಣಕ್ಕಾಗಿ ರಾಮಚಂದ್ರಾಪುರ ಮಠದ ಶಂಕರಾಚಾರ್ಯ ರಾಘವೇಶ್ವರ ಭಾರತೀ ಮಹಾಸ್ವಾಮಿಗಳು ನವ ನಿರ್ಮಾಣದ ಶಿಲಾನ್ಯಾಸ ಮಾಡಿದರು. ಈ ವೇಳೆ ಮಾಜಿ ಗೃಹ ಸಚಿವ ಆರಗ ಜ್ಞಾನೇಂದ್ರ, ಶಾಸಕ ಬೇಳೂರು ಗೋಪಾಲಕೃಷ್ಣ, ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ಅಧ್ಯಕ್ಷ ಆರ್.ಎಂ.ಮಂಜುನಾಥ್ ಗೌಡ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ನಿವಾಸಕ್ಕೆ ತೆರಳಿದ ಭಗತ್‌ಸಿಂಗ್ ಚಾರಿಟೇಬಲ್ ಟ್ರಸ್ಟ್‌ನ ಅಧ್ಯಕ್ಷ ಹಾಗೂ ಚಿಕ್ಕಬಳ್ಳಾಪುರ ಬಿಜೆಪಿ ಮುಖಂಡ ಸಂದೀಪ ಬಿ.ರೆಡ್ಡಿ ಅವರು ಬಿಎಸ್‌ವೈಗೆ ಜನ್ಮದಿನದ ಶುಭಾಶಯ ಕೋರಿದರು.

ಅಸೆಟ್ಸ್ ಕೇರ್ ಅಂಡ್ ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸಸ್ ಲಿಮಿಟೆಡ್ (ಎಸಿಆರ್‌ಇ)
CIN: U65993DL2002PLC115769
ನೋಂದಾಯಿತ ಕಚೇರಿ: 14 ನೇ ಮಹಡಿ, ಎರೋಸ್ ಕಾರ್ಪೊರೇಟ್ ಟವರ್, ನೆಹರು ಪ್ಲೇಸ್, ನವದೆಹಲಿ-110019
ಇ-ಮೇಲ್: acre.arc@acreindia.in, ಜಾಲತಾಣ: www.acreindia.in
ಕಾರ್ಪೊರೇಟ್ ಕಚೇರಿ: ಘಟಕ ಸಂಖ್ಯೆ. 502, ಸಿ ವಿಂಗ್, ಒಂದು ಬಿಕೆಸಿ, ಪ್ಲಾಟ್ ನಂ. ಸಿ-66, ಜಿ-ಬ್ಲಾಕ್ ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್, ಮುಂಬೈ - 400051 ದೂರವಾಣಿ: 022 68643101

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ:

ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್ (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್) (ಐಹೆಚ್‌ಎಫ್‌ಎಲ್)**)ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್ ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟಿಸ್ (ಎನ್‌ಫೋರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **15.02.2019** ರಂದು ಕರೆದು ಸಾಲಗಾರ **ಸಲೀಮ್ ಫಕ್ರುದ್ದೀನ್ ಮೊಗ್ರಾಲ್ ಅಲಿಯಾಸ್ ಸಲೀಮ್ ಫಕ್ರುದ್ದೀನ್ ಮೊಗ್ರಾಲ್ ಮತ್ತು ಆಯಿಶಾ ಸಲೀಮ್ ಮೊಗ್ರಾಲ್** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ **ರೂ. 32,30,481/- (ಮೂವತ್ತೆರಡು ಲಕ್ಷ ಮೂವತ್ತು ಸಾವಿರದ ನಾಲ್ಕುನೂರ ಎಂಬತ್ತೊಂದು ರೂಪಾಯಿಗಳು ಮಾತ್ರ)** ಜೊತೆಗೆ **16.02.2019** ರಂದು ಸಾಲದ ಅಕೌಂಟ್ ನಂ. **S005OXVIII** ರ (ಮುಂಚಿನ ಲೋನ್ ಅಕೌಂಟ್ ನಂ. **ಐಎಚ್‌ಎಫ್‌ಎಲ್**-ನ **HHLDUB00182977**) ಮತ್ತು ಸದರಿ ನೋಟೀಸನ್ನು ಪಡೆದ ದಿನಾಂಕದಿಂದ 60 ದಿನಗಳೊಳಗಿನ ಬಡ್ಡಿ.

ಅಲ್ಲದೆಯೆ, ಈ ಹಿಂದೆ **ಐಎಚ್‌ಎಫ್‌ಎಲ್** ಮೇಲಿನ ಸಾಲ ಖಾತೆಯ ಎಲ್ಲಾ ಹಕ್ಕುಗಳು, ಶೀರ್ಷಿಕೆ ಮತ್ತು ಬಡ್ಡಿಯನ್ನು **ಇಂಡಿಯಾಬುಲ್ಸ್ ಅಸೆಟ್ ರೀಕನ್ಸ್ಟ್ರಕ್ಷನ್ ಕಂಪನಿ ಲಿಮಿಟೆಡ್**‌ಗೆ ವಹಿಸಿಕೊಟ್ಟಿತ್ತು. ಶೀರ್ಷಿಕೆ ಮತ್ತು ಬಡ್ಡಿಯನ್ನು **ಇಂಡಿಯಾಬುಲ್ಸ್ ಎಆರ್‌ಸಿ –XVIII** ಟ್ರಸ್ಟ್‌ಗೆ **31.03.2021** ದಿನಾಂಕದ ನಿಯೋಜನೆ ಒಪ್ಪಂದದ ಮೂಲಕ ನೀಡಿದೆ. ಇದಲ್ಲದೆ, **ಇಂಡಿಯಾಬುಲ್ಸ್ ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ ಲಿ., ಇಂಡಿಯಾಬುಲ್ಸ್ ಎಆರ್‌ಸಿ – XVIII** ಟ್ರಸ್ಟಿಯಾಗಿ, ಟ್ರಸ್ಟ್ ಮೇಲಿನ ಸಾಲ ಖಾತೆಯ ಎಲ್ಲಾ ಹಕ್ಕುಗಳು, ಶೀರ್ಷಿಕೆ ಮತ್ತು ಬಡ್ಡಿಯನ್ನು **30.11.2021** ದಿನಾಂಕದ ನಿಯೋಜನೆ ಒಪ್ಪಂದದ ಮೂಲಕ ಕೇರ್ **ಅಸೆಟ್ಸ್ ಕೇರ್ ಅಂಡ್ ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸಸ್ ಲಿ.-ನ ("ಎಸಿಆರ್‌ಇ")** ಗೆ ಮತ್ತು ಎ ಸಿ ಆರ್ ಇ ಪುಸ್ತಕಗಳಲ್ಲಿ **30.11.2021** ದಿನಾಂಕದ ತಿದ್ದುಪಡಿ ಒಪ್ಪಂದದೊಂದಿಗೆ **ಎಸಿಆರ್‌ಇ** ಪುಸ್ತಕಗಳಲ್ಲಿ ಸಾಲ ಖಾತೆ ಸಂಖ್ಯೆ **S005OXVIII** ಎಂದು ಓದಲಾಗಿದೆ. ಎಂದು ಮರುಸಂಖ್ಯೆ ಮಾಡಲಾದ ಸಾಲ ಖಾತೆಗೆ ನಿಯೋಜಿಸಿದೆ. **ಎಸಿಆರ್‌ಇ 102 ಟ್ರಸ್ಟ್ ನ ಟ್ರಸ್ಟಿಯಾಗಿ ಕಾರ್ಯನಿರ್ವಹಿಸುತ್ತಿರುವ ಅಸೆಟ್ಸ್ ಕೇರ್ ಮತ್ತು ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸಸ್ ಲಿ. ("ಎಸಿಆರ್‌ಇ")** ತನ್ನ ಎಲ್ಲಾ ಹಕ್ಕುಗಳು, ಶೀರ್ಷಿಕೆ ಮತ್ತು ಮೇಲಿನ ಸಾಲ ಖಾತೆಯ ಬಡ್ಡಿಯನ್ನು **ಎಸಿಆರ್‌ಇ 180 ಟ್ರಸ್ಟ್ ನ ಟ್ರಸ್ಟಿಯಾಗಿ ಕಾರ್ಯನಿರ್ವಹಿಸುತ್ತಿರುವ ಅಸೆಟ್ಸ್ ಕೇರ್ ಮತ್ತು ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸಸ್ ಲಿ. ("ಎಸಿಆರ್‌ಇ")** ಗೆ ದಿನಾಂಕ **23.06.2025** ರ ನಿಯೋಜನೆ ಒಪ್ಪಂದದ ಮೂಲಕ ನಿಯೋಜಿಸಿದೆ.

ಸಾಲಗಾರ (ರು) ಮೊತ್ತವನ್ನು ಮರುಪಾವತಿಸಲು ವಿಫಲರಾದ ಕಾರಣ, ಕೆಳಗೆ ಸಹಿ ಮಾಡಿದವರು ಉಪ-ಅಧಿಕಾರದ ಅಡಿಯಲ್ಲಿ ತನಗೆ ನೀಡಿರುವ ಅಧಿಕಾರವನ್ನು ಚಲಾಯಿಸುವ ಮೂಲಕ ಕೆಳಗೆ ವಿವರಿಸಿದ ಆಸ್ತಿಯ **ಸ್ವಾಧೀನ** ವನ್ನು ತೆಗೆದುಕೊಂಡಿದ್ದಾರೆ ಎಂದು ಈ ಮೂಲಕ ಸಾಲಗಾರರಿಗೆ (ರು) ಮತ್ತು ಸಾರ್ವಜನಿಕರಿಗೆ ಸೂಚನೆಯನ್ನು ನೀಡಲಾಗಿದೆ. ಕಾಯಿದೆಯ ಸೆಕ್ಷನ್ 13 ರ ವಿಭಾಗ (4) ಅನ್ನು **24.02.2026** ರಂದು ಭದ್ರತಾ ಆಸಕ್ತಿ (ಎನ್ಫೋರ್ಸ್ಮೆಂಟ್) ನಿಯಮಗಳು, 2002 ರ ನಿಯಮ 8 ರೊಂದಿಗೆ ಓದಲಾಗಿದೆ.

ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಅಸ್ತಿ ವ್ಯವಹಾರವು ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು **ಅಸೆಟ್ಸ್ ಕೇರ್ ಅಂಡ್ ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸಸ್ ಲಿ. ನ ಬಾಕಿ ಇರುವ ಮೊತ್ತ ರೂ. 32,30,481/- (ಮೂವತ್ತೆರಡು ಲಕ್ಷ ಮೂವತ್ತು ಸಾವಿರದ ನಾಲ್ಕುನೂರ ಎಂಬತ್ತೊಂದು ರೂಪಾಯಿಗಳು ಮಾತ್ರ) 16.02.2019** ವರೆಗಿನ ಮೊತ್ತ ಮತ್ತು ಜೊತೆಗೆ ಅದರ ಮೇಲಿನ ಬಡ್ಡಿಗೆ ಒಳಪಟ್ಟಿದೆ ಅಲ್ಲಿಂದ ಸಂಗ್ರಹಗೊಂಡ ಬಡ್ಡಿ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ಧವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8) ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

ಸ್ಥಿರಾಸ್ತಿಯ ವರ್ಣನೆ

ಫ್ಲಾಟ್ ಸಂಖ್ಯೆ - 402 ಹೊಂದಿರುವ ಆವರಣವು ಸೂಪರ್ ಬಿಲ್ಟ್ ಅಪ್ ವಿಸ್ತೀರ್ಣ 923 ಚದರ ಅಡಿಗಳನ್ನು ಹೊಂದಿದೆ. ಬ್ಲಾಕ್-ಬಿ 3 ರ 4 ನೇ ಮಹಡಿಯಲ್ಲಿ ಒಂದು ಮುಚ್ಚಿದ ಕಾರು ಪಾರ್ಕಿಂಗ್ ಜೊತೆಗೆ 249.73 ಚದರ ಅಡಿಗಳನ್ನು ಹೊಂದಿರುವ "ರಾಮ್ಕಿ ಒನ್ ನಾರ್ತ್" ಎಂದು ಹೆಸರಿಸಲಾದ ಯೋಜನೆಯಲ್ಲಿ, ಇದು ಭೂ ಬೇರಿಂಗ್‌ನಲ್ಲಿ 0.2707 ಅನುಪಾತದ ಅವಿಭಜಿತ ಪಾಲು. ಸಂಖ್ಯೆ. 48/2ಅ, 49/2ಅ, 49/2ಬಿ ಮತ್ತು 49/1 ಗ್ರಾಮ - ಅವಲಹಳ್ಳಿ, ಹೋಬಳಿ-ಯಲಹಂಕ, ಬೆಂಗಳೂರು -560064, ಕರ್ನಾಟಕದಲ್ಲಿ ನೆಲೆಗೊಂಡಿದೆ.

ಅಧಿಕಾರವಿರುವ ಅಧಿಕಾರಿ
ದಿನಾಂಕ: 24.02.2026 **ಅಸೆಟ್ಸ್ ಕೇರ್ ಅಂಡ್ ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸಸ್ ಲಿ.**
ಸ್ಥಳ : ಬೆಂಗಳೂರು (180 ಟ್ರಸ್ಟ್)

ಯಾವುದೇ ಕುಂದುಕೊರತೆಗಾಗಿ ನೀವು ಶ್ರೀ ಮೊಹದ್ ಶಾರಿಕ್ ಮಲಿಕ್, ಕುಂದುಕೊರತೆ ನಿವಾರಣಾ ಅಧಿಕಾರಿ, ದೂರವಾಣಿ ಸಂಖ್ಯೆ. 011-66115609, ಇಮೇಲ್: complaint@acreindia.in. ಅನ್ನು ಸಂಪರ್ಕಿಸಬಹುದು. ಸಂಸ್ಥೆಯೊಳಗಿನ ಕುಂದುಕೊರತೆ ಪರಿಹಾರ ಕಾರ್ಯವಿಧಾನದ ವಿವರವಾದ ನೀತಿಯನ್ನು https://www.acreindia.in/compliance ನಲ್ಲಿ ಪ್ರವೇಶಿಸಬಹುದು.

ಪಂಡಿತ್ ಶ್ರೀ ಶಂಕರ್ ಗುರೂಜಿ ಭಾರತದ ಪ್ರಖ್ಯಾತ ಜ್ಯೋತಿಷ್ಯರು
ಓಂ ಶ್ರೀ ವೀರ ಹನುಮಾನ್ ಜ್ಯೋತಿಷ್ಯರು ಭಾರತದ ಪ್ರಖ್ಯಾತ ಜ್ಯೋತಿಷ್ಯರು ಪಂಡಿತ್: ಶ್ರೀ ಶಂಕರ್ ಆಚಾರ್ಯರು ಇವರು ನಿಮ್ಮ ಜನ್ಮ ಜಾತಕ ಹಾಗೂ ಜನ್ಮ ದಿನಾಂಕ ಆಧಾರದ ಮೇಲೆ ಸಂಪೂರ್ಣ ಭವಿಷ್ಯವನ್ನು ನಿಖರವಾಗಿ ನುಡಿಯುತ್ತಾರೆ ಹಾಗೂ ನಿಮ್ಮ ಜನ್ಮ ಯೋಗಗಳಲ್ಲಿನ ಸಮಸ್ಯೆಗಳನ್ನು ಅರಿತು ಮೂಲ ಪರಿಹಾರ ಮಾರ್ಗಗಳನ್ನು ತಿಳಿಸುತ್ತಾರೆ ನಿಮ್ಮ ಜಾತಕಗಳ ಸಮಸ್ಯೆಗಳಾದ ವಿದ್ಯೆ ಉದ್ಯೋಗ ಆರೋಗ್ಯ ಮತ್ತು ಬ್ಯುಸಿನೆಸ್ ವಿದೇಶ ಪ್ರಯಾಣ ಹಾಗೂ ಮದುವೆ ವಿಳಂಬ ಸರ್ಪದೋಷಗಳು ಕುಲದೈವದ ಅರಿವು ಹಾಗೂ ಇನ್ನೂ ಹಲವಾರು ನಿಮ್ಮ ಜನ್ಮ ಜಾತಕ ಗಳಲ್ಲಿನ ಸಮಸ್ಯೆಗಳಿಗೆ ಶಾಶ್ ಶಾಶ್ವತ ಪರಿಹಾರಗಳನ್ನು ತಿಳಿಸುತ್ತಾರೆ ಹಾಗೂ ಮನೆಗಳ ವಾಸ್ತು ವಾಸ್ತು ಶಾಸ್ತ್ರ ದೋಷಗಳನ್ನು ಕೂಡ ಪರಿಹಾರ ಮಾಡಿಕೊಡುತ್ತಾರೆ ವಿಶೇಷ ಸೂಚನೆ ನೀವು 10 ಹಲವು ಜ್ಯೋತಿಷ್ಯರನ್ನ ಭೇಟಿ ಮಾಡಿ ಮೂಲ ಮಾರ್ಗದರ್ಶನ ಸಿಗದೇ ನೊಂದಿದ್ದರೆ ಖಂಡಿತವಾಗಿಯೂ ಇವರನ್ನು ಒಮ್ಮೆ ಭೇಟಿ ಮಾಡಿ..
ಮೊಬೈಲ್ : 9900257896 / 9559552321..

URGENTLY REQUIRED
India's most trusted Company Bengaluru.
Our company is hiring Financial Solutioners, Retires, VRS, Retired Central & State Government employees.
Meet us on 04.03.2026 @10:30am.
Minimum Education: 10th and above.
Phone: 7899513674 / 97314 05128

CHANGE OF NAME
I, BHIMAVVA SANGAPPA SANNAKKI (Old Name) have changed my name as BHOOMIKA MANJUNATH CHULAKI (New Name) Resident of R4455, Golden Woods Apt, Basavanagara, Bangalore 560037, State: Karnataka, India, for all purposes, vide affidavit dated: 27/02/2026 before notary Esthar Rani.

ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ
ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ (ಕೆಸ್ಟೆಪ್ಸ್)

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

1000 ದಿನಗಳ ಸಾಧನೆ
ವಿಜ್ಞಾನದ ಅಭಿವೃದ್ಧಿಯಿಂದ ಕರುನಾಡು ಸಮೃದ್ಧಿ

ಶ್ರೀ ಡಿ.ಕೆ. ಶಿವಕುಮಾರ್
ಸನ್ಮಾನ್ಯ ಉಪ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಭಾರತರತ್ನ
ಸರ್ ಸಿ.ವಿ. ರಾಮನ್

ರಾಷ್ಟ್ರೀಯ ವಿಜ್ಞಾನ ದಿನಾಚರಣೆ

ಇಂದಿನ ಈ ಆಧುನಿಕ ಯುಗದಲ್ಲಿ ವಿಜ್ಞಾನವೇ ಜಗವನ್ನಾಳುತ್ತಿದೆ. ತಂತ್ರಜ್ಞಾನ ಮನುಷ್ಯನ ಬದುಕಿನ ಅವಿಭಾಜ್ಯ ಅಂಗವಾಗಿದೆ. ಉಳುಮೆಯಿಂದ ಉಪಗ್ರಹಗಳ ಉಡಾವಣೆಯವರೆಗೆ ಪ್ರತಿ ಕ್ಷೇತ್ರದಲ್ಲೂ ಹೊಸ ಹೊಸ ಆವಿಷ್ಕಾರಗಳು ಸಂಭವಿಸುತ್ತಿವೆ. ಈ ಅತ್ಯಾಧುನಿಕ ಯುಗದ ಸವಾಲುಗಳನ್ನು ಪರಿಹರಿಸಿ, ಜನಜೀವನವನ್ನು ಸುಧಾರಿಸುವ ನಿಟ್ಟಿನಲ್ಲಿ ಸನ್ಮಾನ್ಯ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ರವರು, ಉಪ ಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ ಶಿವಕುಮಾರ್ ರವರು ಹಾಗೂ ಮಾನ್ಯ ಸಚಿವರಾದ ಶ್ರೀ ಎನ್.ಎಸ್ ಬೋಸರಾಜು ರವರ ನೇತೃತ್ವ ಹಾಗೂ ಮಾರ್ಗದರ್ಶನದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಹಗಲಿರುಳು ಶ್ರಮಿಸುತ್ತಿದೆ.

ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ ರವರು ಹಾಗೂ ಮಾನ್ಯ ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಶ್ರೀ ಎನ್.ಎಸ್. ಬೋಸರಾಜು ಅವರು ಕ್ವಾಂಟಮ್ ರೋಡ್ ಮ್ಯಾಪ್ ಅನಾವರಣಗೊಳಿಸುತ್ತಿರುವುದು.

ವಿಜ್ಞಾನ ಕೇಂದ್ರ & ತಾರಾಲಯಗಳು
ಕಳೆದ 1000 ದಿನಗಳಲ್ಲಿ ದಾವಣಗೆರೆ, ಕೊಪ್ಪಳ ಮುಂತಾದ 4 ಜಿಲ್ಲೆಗಳಲ್ಲಿ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರಗಳು, ಗದಗ ಜಿಲ್ಲೆಯಲ್ಲಿ ಸುಸಜ್ಜಿತ ತಾರಾಲಯ ಸಿದ್ಧಗೊಂಡಿದೆ. ರಾಜ್ಯದ 8 ಜಿಲ್ಲೆಗಳಲ್ಲಿ ಹೊಸ ವಿಜ್ಞಾನ ಕೇಂದ್ರಗಳು ಹಾಗೂ 4 ಜಿಲ್ಲೆಗಳಲ್ಲಿ ತಾರಾಲಯಗಳ ಸ್ಥಾಪನೆಗೆ ಅಗತ್ಯ ಕ್ರಮ ಕೈಗೊಳ್ಳಲಾಗಿದ್ದು, ರಾಯಚೂರು ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರವನ್ನು ಮೇಲ್ದರ್ಜೆಗೇರಿಸುವ ಕಾರ್ಯವೂ ಪ್ರಗತಿಯಲ್ಲಿದೆ.

ವಿಜ್ಞಾನ ನಗರ/ ಸೈನ್ಸ್ ಸಿಟಿ
ಬೆಂಗಳೂರಿನ ಸಮೀಪ 25 ಎಕರೆ ಪ್ರದೇಶದಲ್ಲಿ ಅಂದಾಜು 300 ಕೋಟಿ ರೂಪಾಯಿಗಳ ಅನುದಾನದಲ್ಲಿ ಅತ್ಯಾಧುನಿಕ ಸೈನ್ಸ್ ಸಿಟಿ ಸ್ಥಾಪನೆಗೆ ಕ್ರಮ ವಹಿಸಲಾಗುತ್ತಿದೆ.

ಡಾ. ಎಚ್. ನರಸಿಂಹಯ್ಯ ಅಭಿವೃದ್ಧಿ ಪ್ರಾಧಿಕಾರ
ಡಾ. ಎಚ್. ನರಸಿಂಹಯ್ಯ ಅಭಿವೃದ್ಧಿ ಪ್ರಾಧಿಕಾರ ಸ್ಥಾಪನೆ ಮಾಡಲಾಗಿದ್ದು, ವಿಜ್ಞಾನ, ಶೈಕ್ಷಣಿಕ, ಸಾಂಸ್ಕೃತಿಕ & ಪ್ರವಾಸೋದ್ಯಮ ಸ್ಮಾರಕ ತಾಣಗಳ ಅಭಿವೃದ್ಧಿ ಮತ್ತು ನಿರ್ವಹಣೆಗೆ ಕ್ರಮ ವಹಿಸಲಾಗಿದೆ.

ಸಂಚಾರಿ ಡಿಜಿಟಲ್ ತಾರಾಲಯ
ಶಾಲಾ ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವವನ್ನು ಹೆಚ್ಚಿಸುವ ಸಲುವಾಗಿ ರಾಜ್ಯದ ಸರ್ಕಾರಿ ಮತ್ತು ಅನುದಾನಿತ ಹಿರಿಯ ಪ್ರಾಥಮಿಕ ಶಾಲೆಗಳಿಗೆ ತೆರಳಿ, ಖಗೋಳ ಪ್ರದರ್ಶನಗಳನ್ನು ಏರ್ಪಡಿಸಲಾಗಿದೆ.

ದೂರದರ್ಶಕಗಳ ವಿತರಣೆ
ವಿದ್ಯಾರ್ಥಿಗಳಲ್ಲಿ ಖಗೋಳ ವಿಜ್ಞಾನದ ಆಸಕ್ತಿ ಬೆಳೆಸಲು 3 ಕೋಟಿ ರೂ. ವೆಚ್ಚದಲ್ಲಿ 833 ವಸತಿ ಶಾಲೆಗಳು ಹಾಗೂ ಪದವಿ ಪೂರ್ವ ಕಾಲೇಜುಗಳಿಗೆ ತಲಾ ಒಂದರಂತೆ ದೂರದರ್ಶಕಗಳನ್ನು ಒದಗಿಸಲಾಗಿದೆ.

ನೆಹರು ಸ್ಟೀಮ್ ಲ್ಯಾಬ್
ಕೆಕೆಆರ್‌ಡಿಬಿ ಸಹಯೋಗದೊಂದಿಗೆ ಕರ್ನಾಟಕ ಪಬ್ಲಿಕ್ ಶಾಲೆಗಳಲ್ಲಿ ನೆಹರು ಸ್ಟೀಮ್ ಲ್ಯಾಬ್ ಗಳನ್ನು ಸ್ಥಾಪಿಸಲು ಕ್ರಮ ವಹಿಸಲಾಗುತ್ತಿದೆ.

PHD- DST Scholarship
ಪ್ರತಿ ವರ್ಷ 60 ಮಂದಿ ಅರ್ಹ ಪಿ.ಎಚ್.ಡಿ ಸಂಶೋಧನಾ ವಿದ್ಯಾರ್ಥಿಗಳಿಗೆ ಇಲಾಖೆ ವತಿಯಿಂದ ಆಯ್ಕೆ ಮಾಡಿ ತಲಾ 20 ಸಾವಿರ ರೂ. ಗಳ ಮಾಸಿಕ ಶಿಷ್ಯವೇತನವನ್ನು ನೀಡಲಾಗುತ್ತಿದೆ.

VGST Grants
ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದ ಸಂಶೋಧನೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹದ ಶಿಫಾರಸುಗಳ ಆಧಾರದ ಮೇಲೆ ಈ ವರೆಗೂ 204 ಪ್ರಸ್ತಾವನೆಗಳನ್ನು ಆಯ್ಕೆ ಮಾಡಿ, ಒಟ್ಟು 32.90 ಕೋಟಿ ರೂ. ಗಳ ಅನುದಾನವನ್ನು ಒದಗಿಸಲಾಗಿದೆ.

ಕ್ವಾಂಟಮ್ ಸಮ್ಮೇಳನ
2025ರ ಜುಲೈನಲ್ಲಿ ನಡೆದ 'ಕ್ವಾಂಟಮ್ ಇಂಡಿಯಾ ಬೆಂಗಳೂರು' ಶೃಂಗಸಭೆ ಯಶಸ್ವಿಯಾಗಿ ನಡೆದಿದ್ದು, 2035ರ ಕರ್ನಾಟಕ ಕ್ವಾಂಟಮ್ ಮಿಷನ್ ಘೋಷಿಸಲಾಯಿತು; ಸಚಿವ ಎನ್.ಎಸ್. ಬೋಸರಾಜು ನೇತೃತ್ವದ ನಿಯೋಗವು ಸ್ವಿಟ್ಜರ್ಲ್ಯಾಂಡ್ ಶೃಂಗಸಭೆಯಲ್ಲಿ ಭಾಗವಹಿಸಿ ಅಂತಾರಾಷ್ಟ್ರೀಯ ಒಡಂಬಡಿಕೆಗಳಿಗೆ ಮುನ್ನುಡಿ ಬರೆದಿತು.

ಸರ್ವರಿಗೂ ವಿಜ್ಞಾನ, ಸುಲಭ ವಿಜ್ಞಾನ ಹಾಗು ಸುಸ್ಥಿರ ಅಭಿವೃದ್ಧಿಗಾಗಿ ವಿಜ್ಞಾನ ಎಂಬ ಆಶಯದೊಂದಿಗೆ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ವಿಜ್ಞಾನ & ತಂತ್ರಜ್ಞಾನದ ಸವಲತ್ತುಗಳನ್ನು ಲಭ್ಯವಾಗಿಸುವ ಮೂಲಕ ಸುಸ್ಥಿರ ಹಾಗು ಸುಂದರ ನಾಳೆಗಳನ್ನು ಸೃಷ್ಟಿಸುವ ನಿಟ್ಟಿನಲ್ಲಿ ಇಲಾಖೆಯು ಮುನ್ನಡೆಯುತ್ತಿದೆ.

ಸಂವಿಧಾನದ 51 A (h) ವಿಧಿಯ ಅನ್ವಯ **"ವೈಜ್ಞಾನಿಕ ಮನೋಭಾವನೆ, ಮಾನವೀಯತೆ, ಜಿಜ್ಞಾಸೆಯ ಮತ್ತು ಸುಧಾರಣೆಯ ಪ್ರವೃತ್ತಿಗಳನ್ನು ಬೆಳೆಸಿಕೊಳ್ಳುವುದು"** - ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

ಡಾ. ಮಂಜುಳಾ ಎನ್., ಭಾ. ಆ. ಸೇ
ಸರ್ಕಾರದ ಕಾರ್ಯದರ್ಶಿಗಳು ,
ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ

ಸದಾಶಿವ ಪ್ರಭು ಬಿ., ಭಾ. ಆ. ಸೇ
ನಿರ್ದೇಶಕರು, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ
ಮತ್ತು ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ (ಕೆಸ್ಟೆಪ್ಸ್), ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು

ಟೆಂಡರ್ ಅಹ್ವಾನ ಪ್ರಕಟಣೆ

ಟೆಂಡರ್ ಮುಂದೂಡಿಕೆ ಪ್ರಕಟಣೆ ಸಂಖ್ಯೆ:10/2025–26 ದಿನಾಂಕ:25.02.2026 ಉಲ್ಲೇಖ:–1.ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 30/2025–26 ದಿನಾಂಕ:31.01.2026 ಉಲ್ಲೇಖ:–2.ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 31/2025–26 ದಿನಾಂಕ:07.02.2026 ಉಲ್ಲೇಖ:–3.ಟೆಂಡರ್ ಮುಂದೂಡಿಕೆ ಪ್ರಕಟಣೆ ಸಂಖ್ಯೆ:08/2025–26 ದಿನಾಂಕ:12.02.2026

ಮೇಲ್ಕಂಡ ಉಲ್ಲೇಖಿತ ಟೆಂಡರ್ ಪ್ರಕಟಣೆಯಲ್ಲಿ ಚಿಕ್ಕಮಗಳೂರು ವಿಭಾಗಕ್ಕೆ ಚಿಕ್ಕಮಗಳೂರು ಉಪವಿಭಾಗಕ್ಕೆ ಒಳಪಡುವ 4059–80–051–0–60–132 ಮುಖ್ಯಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಕ್ರಮ ಇತರೆ ಬಂಡವಾಳ ವೆಚ್ಚಗಳು ಲೆಕ್ಕಶೀರ್ಷಿಕೆ ಅಡಿ ಕರೆಯಲಾಗಿರುವ ಉಲ್ಲೇಖ (1)ರ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:30ರಲ್ಲಿ ಕ್ರಮ ಸಂಖ್ಯೆ : 4 (ಇಂಡೆಂಟ್ ಸಂಖ್ಯೆ:32545) & 9 (ಇಂಡೆಂಟ್ ಸಂಖ್ಯೆ:29376) ರ (ಸಾಮಾನ್ಯ ವರ್ಗ) ಕಾಮಗಾರಿಗಳಿಗೆ & ಉಲ್ಲೇಖ (2)ರನ್ವಯ ಕ್ರಮ ಸಂಖ್ಯೆ :4 (ಇಂಡೆಂಟ್ ಸಂಖ್ಯೆ:29383) ರ (ಸಾಮಾನ್ಯ ವರ್ಗ) ಕಾಮಗಾರಿಗೆ ಕೆಪಿಪಿ ಪೋರ್ಟಲ್ ಮೂಲಕ ಅರ್ಹ ಗುತ್ತಿಗೆದಾರರಿಂದ ಉಲ್ಲೇಖ (3) ರಲ್ಲಿ ಟೆಂಡರ್ ಆಹ್ವಾನಿಸಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕವಾಗಿ 25.02.2026 ಎಂದು ನಿಗಧಿಪಡಿಸಲಾಗಿತ್ತು. ತಾಂತ್ರಿಕ ಕಾರಣಗಳಿಂದ ಟೆಂಡರ್ ಸಲ್ಲಿಸುವ ದಿನಾಂಕವನ್ನು ಮುಂದೂಡಲಾಗಿದ್ದು, ದಿನಾಂಕ:05.03.2026 ಎಂದು ಮರು ನಿಗಧಿಪಡಿಸಲಾಗಿದೆ. ಉಳಿದಂತೆ ಯಾವುದೇ ಬದಲಾವಣೆಗಳು ಇರುವುದಿಲ್ಲ.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು.

ವಾ.ಸಾ.ಸಂ.ಇ/ಕೆಎಸ್ಎಂಸಿಎ/ಚಿ/25–26/175/1909

ಯೋಗೇಶ್ ಗೌಡ ಹತ್ಯೆ ಪ್ರಕರಣ | ಸುಪ್ರೀಂ ಕೋರ್ಟ್ ಷರತ್ತುಬದ್ಧ ಜಾಮೀನು

ವಿನಯ್ ಕುಲಕರ್ಣಿಗೆ ರಿಲೀಫ್

ಬೆಂಗಳೂರು: ಯೋಗೇಶ್ ಗೌಡ ಹತ್ಯೆ ಪ್ರಕರಣದಲ್ಲಿ ಜೈಲುವಾಸ ಅನುಭವಿಸುತ್ತಿದ್ದ ಧಾರವಾಡ ಕ್ಷೇತ್ರದ ಕಾಂಗ್ರೆಸ್ ಶಾಸಕ ವಿನಯ್ ಕುಲಕರ್ಣಿ ಅವ ರಿಗೆ ಸುಪ್ರೀಂಕೋರ್ಟ್ ಷರತ್ತು ಬದ್ಧ ಜಾಮೀನು ಮಂಜೂರು ಮಾಡಿದೆ. ಈ ಮೂಲಕ ಹಲವು ತಿಂಗಳಿಂದ ಜೈಲಿನಲ್ಲಿದ್ದ ಶಾಸಕರಿಗೆ ತಾತ್ಕಾಲಿಕವಾಗಿ ದೊಡ್ಡ ಸಮಾಧಾನ ಸಿಕ್ಕಂತಾಗಿದೆ.

ಪ್ರಕರಣದ ವಿಚಾರಣೆಯನ್ನು ಮುಂದಿನ ಎರಡು ತಿಂಗಳೊಳಗೆ ಸಂಪೂರ್ಣವಾಗಿ ಮುಕ್ತಾಯಗೊಳಿಸುವಂತೆ ಸುಪ್ರೀಂಕೋರ್ಟ್ ವಿಚಾರಣಾ ನ್ಯಾಯಾಲಯಕ್ಕೆ ಕಟ್ಟುನಿಟ್ಟಿನ ಸೂಚನೆ ನೀಡಿದೆ. ವಿನಯ್ ಕುಲಕರ್ಣಿ ಪರ ವಕೀಲ ಶರಣಗೌಡ ಪಾಟೀಲ್ ಅವರ ತಂಡ ಸತತ ಕಾನೂನು ಹೋರಾಟ ನಡೆಸಿ ಜಾಮೀನು ಕೊಡಿಸುವಲ್ಲಿ ಯಶಸ್ವಿಯಾಗಿದೆ. ಈ ಹಿಂದೆ ಇದೇ ಪ್ರಕರಣದಲ್ಲಿ ಜಾಮೀನು ಪಡೆದು ಹೊರಬಂದಿದ್ದ ವಿನಯ್ ಕುಲಕರ್ಣಿ ಅವರು ಸಾಕ್ಷಿದಾರರನ್ನು ಬೆದರಿಸುವ ಹಾಗೂ ಹಣದ ಆಮಿಷ ವೊಡ್ಡಿ ಸಾಕ್ಷ್ಯ ನಾಶಕ್ಕೆ ಯತ್ನಿಸಿದ್ದಾರೆ ಎಂಬ ಗಂಭೀರ ಆರೋಪ ಕೇಳಿಬಂದಿತ್ತು. ಈ ಕುರಿತು ತನಿಖೆ ನಡೆಸಿದ್ದ ಸಿಬಿಐ ಅಧಿಕಾರಿಗಳು, ಶಾಸಕರು ಜಾಮೀನು ಷರತ್ತುಗಳನ್ನು ಉಲ್ಲಂಘಿಸಿರುವ ಬಗ್ಗೆ ನಿಖರ ದಾಖಲೆಗಳನ್ನು ಕಲೆಹಾಕಿ ಸುಪ್ರೀಂ ಕೋರ್ಟ್‌ಗೆ ವರದಿ ಸಲ್ಲಿಸಿದ್ದರು. ಈ ದಾಖಲೆಗಳನ್ನು ಗಂಭೀರವಾಗಿ ಪರಿಗಣಿಸಿದ್ದ ಸುಪ್ರೀಂಕೋರ್ಟ್, ವಿನಯ್ ಕುಲಕರ್ಣಿ ಅವರ ಜಾಮೀನನ್ನು ರದ್ದುಪಡಿಸಿ ಆದೇಶ ಹೊರಡಿಸಿತ್ತು. ಜಾಮೀನು ರದ್ದಾದ ಬೆನ್ನಲ್ಲೇ ಅವರನ್ನು ಬಂಧಿಸಿ ವಿಜಯಪುರ ಕೇಂದ್ರ ಕಾರಾಗೃಹದಲ್ಲಿ ಇರಿಸಲಾಗಿತ್ತು.

ಏನಿದು ಹತ್ಯೆ ಪ್ರಕರಣ?

2016ರ ಜುಲೈ 15ರಂದು ಧಾರವಾಡ ತಾಲೂಕಿನ ಹೆಬ್ಬಳ್ಳಿ ಕ್ಷೇತ್ರದ ಜಿಪಂ ಸದಸ್ಯ, ಬಿಜೆಪಿ ಮುಖಂಡ ಯೋಗೇಶ್ ಗೌಡ ಅವರನ್ನು ಜಿಮ್‌ನಲ್ಲಿ ಹತ್ಯೆ ಮಾಡಲಾಗಿತ್ತು. ಯಡಿಯೂರಪ್ಪ ಸರಕಾರದ ವೇಳೆ ಪ್ರಕರಣವನ್ನು ಸಿಬಿಐಗೆ ವಹಿಸಲಾಗಿತ್ತು. ಹಾಲಿ ಶಾಸಕ ವಿನಯ್ ಕುಲಕರ್ಣಿ ಕೈವಾಡವಿರುವುದು ಬೆಳಕಿಗೆ ಬಂದಿತ್ತು. ಈ ಹಿನ್ನೆಲೆಯಲ್ಲಿ 2020ರ ನವೆಂಬರ್ 5ರಂದು ಅವರನ್ನು ಸಿಬಿಐ ಬಂಧಿಸಿತ್ತು. ಸತತ 9 ತಿಂಗಳ ಜೈಲುವಾಸದ ಬಳಿಕ 2021ರ ಆಗಸ್ಟ್‌ನಲ್ಲಿ ಧಾರವಾಡ ಜಿಲ್ಲೆ ಪ್ರವೇಶಿಸದಂತೆ ಷರತ್ತು ವಿಧಿಸಿ ಸುಪ್ರೀಂ ಜಾಮೀನು ನೀಡಿತ್ತು. ಅಚ್ಚರಿಯೆಂದರೆ, ಕ್ಷೇತ್ರ ಪ್ರವೇಶಕ್ಕೆ ನಿರ್ಬಂಧವಿದ್ದರೂ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ವಿನಯ್ ಕುಲಕರ್ಣಿ ಅವರು ಭರ್ಜರಿ ಜಯ ಸಾಧಿಸುವ ಮೂಲಕ ಗಮನ ಸೆಳೆದಿದ್ದರು.

ಹಿಂದೂ ಸಂಗಮ ಪ್ರಚಾರದ ವೇಳೆ ಹಲ್ಲೆ

ಮಡಿಕೇರಿ: ನಾಪೋಕ್ಲುವಿನಲ್ಲಿ ಶುಕ್ರವಾರ ಸಂಜೆ ಹಿಂದೂ ಸಂಗಮ ಪ್ರಚಾರ ವೇಳೆ ಮಾತಿನ ಚಕಮಕಿ ನಡೆದಿದ್ದು ವ್ಯಕ್ತಿಯೊಬ್ಬರ ಮೇಲೆ ಪೊ ನ್ನಾಡ್ ಸೂಪರ್ ಮಾರ್ಕೆಟ್ ಎದುರು ಮಾರಣಾಂತಿಕ ಹಲ್ಲೆ ನಡೆಸಲಾಗಿದೆ. ಬಲ್ಲಮಾವಟಿ ಗ್ರಾಮದಲ್ಲಿ ಶನಿವಾರ ನಡೆಯಲಿರುವ ಹಿಂದು ಸಮಾವೇಶ ಹಿನ್ನೆಲೆಯಲ್ಲಿ ಈ ಘಟನೆ ಜರುಗಿದೆ. ಹಲ್ಲೆಗೊಳಗಾದ ವ್ಯಕ್ತಿಯನ್ನು ಚಿಕಿತ್ಸೆ ಗಾಗಿ ಜಿಲ್ಲಾಸ್ಪತ್ರೆಗೆ ದಾಖಲು ಮಾಡಲಾಗಿದೆ. ಸಿದ್ಧಿಕ್ ಎಂಬಾತನಿಂದ ಹಲ್ಲೆ ಅಡಿದಿದೆ ಎನ್ನಲಾಗಿದ್ದು, ಆರೋಪಿಯನ್ನು ಬಂಧಿಸುವಂತೆ ಹಿಂದೂ ಸಂಘಟನೆಗಳು ಒತ್ತಾಯಿಸಿದ್ದು ನಾಪೋಕ್ಲುವಿನಲ್ಲಿ ಹಿಂದೂ ಸಂಘಟನೆಗಳಿಂದ ರಸ್ತೆ ತಡೆ ನಡೆಸಲಾಗಿದೆ. ನಾಪೋಕ್ಲುವಿನಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿದೆ. ಸ್ಥಳಕ್ಕೆ ಹಿರಿಯ ಪೋಲಿಸ್ ಅಧಿಕಾರಿಗಳು ಬರುವಂತೆ ಪ್ರತಿಭಟನಾಕಾರರ ಒತ್ತಾಯಿಸಿದ್ದಾರೆ. ಅಲ್ಲೇ ಮಾಡಿದವರ ವಿರುದ್ಧ ಕಾನೂನಿನ ಕ್ರಮ ಕೈಗೊಳ್ಳುವಂತೆ ಕರವಂಡ ಲವ ನಾಣಯ ಪೊಲೀಸ್ ಠಾಣೆಗೆ ದೂರು ಸಲ್ಲಿಸಿದ್ದಾರೆ.

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಕಾರವಾರ

ಸಂ: ಕಾ.ನಿ.ಇಂ./ಲೋ.ಇ.ವಿ,ಕಾ/ಪಿ.ಬಿ–1/ಟೆಂಡರ–32/2025–26/5497 ದಿನಾಂಕ: 26–02–2026

ಗುತ್ತಿಗೆ ಆಹ್ವಾನ ಪ್ರಕಟಣೆ (ಇ–ಪ್ರಕ್ಯೂರಮೆಂಟ್)

ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕೋಷ್ಟಕದಲ್ಲಿ ವಿವರಿಸಿರುವ ಕಾಮಗಾರಿಗಳಿಗಾಗಿ ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಕಾರವಾರ ಇವರಿಂದ ಗುತ್ತಿಗೆ ಆಹ್ವಾನಿಸಲಾಗಿದೆ. ಗುತ್ತಿಗೆದಾರರು ಕೋಷ್ಟಕದಲ್ಲಿ ಕೊಟ್ಟಿರುವ ಕಾಮಗಾರಿಯ ಗುತ್ತಿಗೆಯನ್ನು ಇ–ಪ್ರೊಕ್ಯೂರಮೆಂಟ್ ಮುಖಾಂತರ ಮಾತ್ರ ಸಲ್ಲಿಸುವದು. ಗುತ್ತಿಗೆಯನ್ನು ವಹಿಸಲು ಅರ್ಹರಾಗಬೇಕಾದಲ್ಲಿ ಗುತ್ತಿಗೆದಾರರು (ಕೆಡಬ್ಲೂ–2 & 3) ರಲ್ಲಿ ನಿಗದಿಪಡಿಸಿರುವ ಷರತ್ತುಗಳನ್ನು ಗಮನಿಸುವದು.

(1) ಗುತ್ತಿಗೆಗೆ ಸಂಬಂಧಿಸಿದ ವಿಚಾರಣೆಗೆ ಕೊನೆಯ ದಿ: **04–03–2026 16.30** ಗಂಟೆವರೆಗೆ (2) ಟೆಂಡರನ್ನು ಸ್ವೀಕರಿಸುವ ಕೊನೆಯ ದಿ: **05–03–2026 16.30** ಗಂಟೆವರೆಗೆ (3) ಟೆಂಡರನ ತಾಂತ್ರಿಕ ಬಿಡ್ ತೆರೆಯುವ ದಿ: **06–03–2026 17.00** ಗಂಟೆವರೆಗೆ (4) ಟೆಂಡರನ ಆರ್ಥಿಕ ಬಿಡ್ ತೆರೆಯುವ ದಿ: **07–03–2026 17.00** ಗಂಟೆವರೆಗೆ

ಕಾಮಗಾರಿಯ ಹೆಸರು: ಲೆಕ್ಕ ಶೀಷಿಕೆ: **Mitigation - 8443-Deposite Contribution During 2025-26** ವರ್ಕ ಇನಡೆಂಟ್ **(1) PWD/2025-26/FP/WORK_INDENT33770 (2) PWD/202526/FP/WORK_INDENT 34081 (3) PWD/2025-26/RD/WORK_INDENT33588**

ಲೆಕ್ಕ ಶೀಷಿಕೆ: **3054-MDR Maintenance During 2025-26** ವರ್ಕ ಇನಡೆಂಟ್: **(1) PWD/2025-26/RD/WORK_INDENT32844**

ಲೆಕ್ಕ ಶೀಷಿಕೆ: **4059-80-051-0-60-132 CMIDP During 2025-26** ವರ್ಕ ಇನಡೆಂಟ್ **(1) PWD/2025-26/RD/WORK_INDENT33903**

(ಕೆಡಬ್ಲೂ–2&3) ರಲ್ಲಿನ ನಿಭಂದನೆಗಳನ್ನು ಮುಂದಿನ ದಿನಗಳಲ್ಲಿ **e-proc** ನಲ್ಲಿ ಸೂಚಿಸಲಾದ ನಿಭಂದನೆಗಳನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಅಂದರೆ **"https://kppp.karnataka.gov.in"** ನೋಡಬಹುದು. ಹೆಚ್ಚಿನ ಮಾಹಿತಿಗಾಗಿ **help desk Bangalore (Phone No. 918025501216 & 918025501227)** ಇವರನ್ನು ಸಂಪರ್ಕಿಸಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ವಿಭಾಗ, ಕಾರವಾರ

DIPR/KWR/KSMCA/1157/25-26 dt. 27.02.2026

ಕರ್ನಾಟಕ ಸರ್ಕಾರ

ಕೃಷಿ ಇಲಾಖೆ

ಉಪ ಕೃಷಿ ನಿರ್ದೇಶಕರ ಕಾರ್ಯಾಲಯ, ರಾಜ್ಯ ಪೀಡೆನಾಶಕ ಪರೀಕ್ಷಣಾ ಪ್ರಯೋಗಾಲಯ, ಕೋಟನೂರು ಡಿ ಕಲಬುರಗಿ–585102

ದೂರವಾಣಿ ಸಂಖ್ಯೆ: 8277931503 ಇ–ಮೇಲ್: ddaiclkg@gmail.com

ಸಂಖ್ಯೆ:ಉಕೃನಿ/ರಾ.ಪೀ.ಪ.ಪ್ರ.ಕೋಕ/ಇ–ಟೆಂಡರ್/2025–26 ದಿನಾಂಕ: 27/02/2026

:: ಇ–ಟೆಂಡರ್ ಪ್ರಕಟಣೆ ::

ರಾಜ್ಯ ಪೀಡೆನಾಶಕ ಪರೀಕ್ಷಣಾ ಪ್ರಯೋಗಾಲಯ, ಕೋಟನೂರ, ಡಿ, ಕಲಬುರಗಿ ಪ್ರಯೋಗಾಲಯಕ್ಕೆ ಅವಶ್ಯವಾಗಿ ಬೇಕಾಗಿರುವ ವೈಜ್ಞಾನಿಕ ಯಂತ್ರೋಪಕರಣಗಳ ಪೂರೈಕೆಗಾಗಿ ಇ–ಪ್ರೋಕ್ಯೂರ್‌ಮೆಂಟ್, ಇ–ಟೆಂಡರ್ ಪ್ರಕಟಣೆ ಕರೆಯಲಾಗಿದ್ದು ವಿವರ ಈ ಕೆಳಗಿನಂತಿದೆ.

1) ಕಾಮಗಾರಿಯ ವಿವರ: ರಾಜ್ಯ ಪೀಡೆನಾಶಕ ಪರೀಕ್ಷಣಾ ಪ್ರಯೋಗಾಲಯ, ಕೋಟನೂರ, ಡಿ, ಕಲಬುರಗಿ ಪ್ರಯೋಗಾಲಯಕ್ಕೆ ಅವಶ್ಯವಾಗಿ ಬೇಕಾಗಿರುವ ವೈಜ್ಞಾನಿಕ ಯಂತ್ರೋಪಕರಣಗಳ ಪೂರೈಕೆ, 2) ಲೆಕ್ಕ ಶೀರ್ಷಿಕೆ: 2401–00–800–1–73, 106 3) ಟೆಂಡರಗಿಟ್ಟ ಮೊತ್ತ: **55,50,000/-**, 4) ಟೆಂಡರ್ ಅರ್ಜಿ ಬೆಲೆ ಮತ್ತು ಇ.ಎಂ.ಡಿ: 111000/–, 5) ಈ ಸಂಗ್ರಹಣೆ ಪೋರ್ಟಲಗೆ ಪ್ರವೇಶಕ್ಕಾಗಿ ಕಾಲಾವಧಿ: **02/03/2026 11:00 AM,** 6) ಟೆಂಡರ್ Queries ಕೊನೆಯ ದಿನಾಂಕ: **09/03/2026 4:00 PM,** 7) ಟೆಂಡರ ಸಲ್ಲಿಸುವ ಅಂತಿಮ ದಿನಾಂಕ: **12/03/2026 5:00 PM,** 8) ತಾಂತ್ರಿಕ ಟೆಂಡರ್ ತೆರೆಯುವ ಅಂತಿಮ ದಿನಾಂಕ: **13/03/2026 11:00 AM**, 9) ಆರ್ಥಿಕ ಟೆಂಡರ ತೆರೆಯುವ ಅಂತಿಮ ದಿನಾಂಕ: ತಾಂತ್ರಿಕ ದಾಖಲಾತಿಗಳ ಪರಿಶೀಲನೆ ನಂತರದಲ್ಲಿ ತಿಳಿಸಲಾಗುವುದು, 10) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ: ಉಪ ಕೃಷಿ ನಿರ್ದೇಶಕರು, ರಾಜ್ಯ ಪೀಡೆನಾಶಕ ಪರೀಕ್ಷಣಾ ಪ್ರಯೋಗಾಲಯ, ಕೋಟನೂರು, ಡಿ, ಕಲಬುರಗಿ–585102, ಫೋನ್ ಸಂ: 8277931503, 11) ಅಂತರಜಾಲ ತಾಣದ ವಿಳಾಸ: www.kppp.karnataka.gov.in

**ಸಹಿ/– ಉಪ ಕೃಷಿ ನಿರ್ದೇಶಕರು
ರಾಜ್ಯ ಪೀಡೆನಾಶಕ ಪರೀಕ್ಷಣಾ ಪ್ರಯೋಗಾಲಯ,
ಕೋಟನೂರು (ಡಿ) ಕಲಬುರಗಿ**

ವಾ.ಸಾ.ಸಂ.ಇ/ಕಲಬುರಗಿ/1130/ಕೆ.ಎಸ್.ಎಂ.ಸಿ.&ಎ/2025–26

ಕೇಜ್ರಿವಾಲ್ ಖುಲಾಸೆ

← ಮೊದಲಪುಟದಿಂದ

ಸಿಎಂ ಸ್ಥಾನಕ್ಕೆ ರಾಜೀನಾಮೆ: ಪ್ರಕರಣ ದಾಖಲಾಗಿದ್ದ ವೇಳೆ ಕೇಜ್ರಿವಾಲ್ ಅವರು ದೆಹಲಿ ಮುಖ್ಯಮಂತ್ರಿಯಾಗಿ ಮತ್ತು ಸಿಸೋಡಿಯಾ ಅವರು ಉಪ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸುತ್ತಿದ್ದರು.

2023ರ ಫೆಬ್ರವರಿ 26ರಂದು ಮನೀಷ್ ಸಿಸೋಡಿಯಾ ಅವರನ್ನು ಸಿಬಿಐ ಮತ್ತು ಜಾರಿ ನಿರ್ದೇಶನಾಲಯ (ಇಡಿ) ಬಂಧಿಸಿದ್ದವು. 17 ತಿಂಗಳು ಜೈಲಿನಲ್ಲಿದ್ದ ಮನೀಶ್ ಸಿಸೋಡಿಯಾ ಅವರಿಗೆ 2024ರ ಆಗಸ್ಟ್ 9ರಂದು ಸುಪ್ರೀಂ ಕೋರ್ಟ್ ಜಾಮೀನು ಮಂಜೂರು ಮಾಡಿತ್ತು. ಇದರ ಬೆನ್ನಲ್ಲೇ ಅವರು ತಿಹಾರ್ ಜೈಲಿನಿಂದ ಬಿಡುಗಡೆಯಾಗಿದ್ದರು. 2024ರ ಮಾರ್ಚ್ 21ರಂದು ಈ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯವು (ಇ.ಡಿ) ಅರವಿಂದ ಕೇಜ್ರಿವಾಲ್ ಅವರನ್ನು ಬಂಧಿಸಿತ್ತು. ಅದೇ ವೇಳೆ ಲೋಕಸಭಾ ಚುನಾವಣೆ ಹತ್ತಿರ ಇದ್ದಿದ್ದರಿಂದ, ಪ್ರಚಾರ ಮಾಡುವುದಕ್ಕಾಗಿ ಸುಪ್ರೀಂಕೋರ್ಟ್ ಮೇ 2024ರಲ್ಲಿ ಕೇಜ್ರಿವಾಲ್‌ಗೆ ಮೂರು ವಾರಗಳ ಕಾಲ ಮಧ್ಯಂತರ ಜಾಮೀನು ನೀಡಿತ್ತು. ಪ್ರಚಾರ ಮುಗಿಸಿ ಜೂನ್ 2 ರಂದು ಮತ್ತೆ ಜೈಲು ಸೇರಿದ್ದರು. ಈ ನಡುವೆ ಇಡಿ ಕೇಸ್‌ನಲ್ಲಿ ವಿಚಾರಣಾ ಕೋರ್ಟ್ ಜಾಮೀನು ಕೊಟ್ಟಿದ್ದರೂ ಹೈಕೋರ್ಟ್ ಅದಕ್ಕೆ ತಡೆ ನೀಡಿತ್ತು. ಹಾಗಾಗಿ ಜೂನ್ 26 ರಂದು ಸಿಬಿಐ ಕೂಡ ಕೇಜ್ರಿವಾಲ್ ಅವರನ್ನು ಜೈಲಿನಲ್ಲೇ ಬಂಧಿಸಿತ್ತು.

ತಿಂಗಳಾನುಗಟ್ಟಲೇ ಜೈಲುವಾಸ ಅನುಭವಿಸಿದ ಕೇಜ್ರಿವಾಲ್‌ಗೆ 2024ರ ಜುಲೈ 12ರಂದು ಇಡಿ ಪ್ರಕರಣದಲ್ಲಿ ಸುಪ್ರೀಂಕೋರ್ಟ್‌ನಿಂದ ಜಾಮೀನು ಸಿಕ್ಕಿತ್ತು. ಬಳಿಕ 2024ರ ಸೆಪ್ಟೆಂಬರ್ 13 ರಂದು ಸಿಬಿಐ ಪ್ರಕರಣದಲ್ಲೂ ಷರತ್ತುಬದ್ಧ ಜಾಮೀನು ಲಭ್ಯವಾಗಿತ್ತು. ಅದೆಲ್ಲ ಮುಗಿದು ಜೈಲಿನಿಂದ ಹೊರಬಂದ ತಕ್ಷಣ, ಸೆಪ್ಟೆಂಬರ್ 17ರಂದು ನಾನು ಭ್ರಷ್ಟನಲ್ಲ ಅಂತ ಜನರ ತೀರ್ಪು ಬರುವವರೆಗೂ ಸಿಎಂ ಕುರ್ಚಿಯಲ್ಲಿ ಕೂರಲ್ಲ ಅಂತ ತಮ್ಮ ಸ್ಥಾನಕ್ಕೆ ದಿಢೀರ್ ರಾಜೀನಾಮೆ ನೀಡಿದ್ದರು.

23 ಆರೋಪಿಗಳ ವಿರುದ್ಧ ಚಾರ್ಜ್‌ಶೀಟ್: 2022ರಲ್ಲಿ ಸಿಬಿಐ ಮೊದಲ ಚಾರ್ಜ್‌ಶೀಟ್ ಸಲ್ಲಿಸಿತ್ತು. ಪ್ರಕರಣದಲ್ಲಿ ಕೇಜ್ರಿವಾಲ್, ಸಿಸೋಡಿಯಾ, ಕೆ.ಕವಿತಾ, ಕುಲದೀಪ್ ಸಿಂಗ್, ನರೇಂದರ್ ಸಿಂಗ್, ವಿಜಯ್ ನಾಯರ್, ಅಭಿಷೇಕ್ ಬೋಯಿನಪಲ್ಲಿ, ಅರುಣ್ ರಾಮಚಂದ್ರ ಪಿಳ್ಳೈ, ಮೂತ ಗೌತಮ್, ಸಮೀರ್ ಮಹೇಂದ್ರು, ಅಮನದೀಪ್ ಸಿಂಗ್ ಧಲ್, ಅರ್ಜುನ್ ಪಾಂಡೆ, ಬುಚ್ಚಿಬಾಬು ಗೋರ್ನತ್ಲಾ, ರಾಜಮೋದೇಶ್ ಪ್ರಸಾದ್ ಶರ್ಮಾ, ರಾಕೇಶ ಪ್ರಸಾದ್ ಜೊನತ್ಲಾ, ರಾಕೇಶ ಪ್ರಸಾದ್ ಜೊನತ್ಲಾ ಸೇರಿದಂತೆ ಒಟ್ಟು 23 ಆರೋಪಿಗಳ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಸಲಾಗಿತ್ತು.

ರಾಯತ್, ಅರವಿಂದ್ ಕುಮಾರ್ ಸಿಂಗ್, ದುರ್ಗೇಶ್ ಪಾಠಕ್, ಅಮಿತ್ ಅರೋರಾ, ವಿನೋದ್ ಚೌಹಾಣ್, ಆಶಿಶ್ ಮಾಥುರ್ ಮತ್ತು ಪಿ.ಶರತ್ ಚಂದ್ರಾ ರೆಡ್ಡಿ ಹೆಸರು ಕೂಡ ತಳುಕು ಹಾಕಿಕೊಂಡಿತ್ತು. ಇದೀಗ ಎಲ್ಲರೂ ದೋಷಮುಕ್ತರಾಗಿದ್ದಾರೆ

ಮಹಾನಗರ ಪಾಲಿಕೆ ಕಾರ್ಯಾಲಯ, ದಾವಣಗೆರೆ.

ನಂ:ದಾಮಪಾ:ಕಾಅ1.ಇ.ಟೆಂಡರ್:53:2025–26 ದಿನಾಂಕ:26–02–2026

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಕೆಪಿಪಿ ಪೋರ್ಟಲ್ ಮುಖಾಂತರ)

2025–26ನೇ ಸಾಲಿನ ಎಸ್.ಎಫ್.ಸಿ ಮುಕ್ತ ನಿಧಿಯ ಎಸ್.ಸಿ.ಎಸ್.ಪಿ ಯೋಜನೆ (ಉಳಿಕೆ)– 01 ಕಾಮಗಾರಿ, 2025–26ನೇ ಸಾಲಿನ ಪಾಲಿಕೆ ಸಾಮಾನ್ಯ ನಿಧಿ– 02 ಕಾಮಗಾರಿ, 2025–26ನೇ ಸಾಲಿನ ಪಾಲಿಕೆ ಸಾಮಾನ್ಯ ನಿಧಿ(3ನೇ ಕರೆ)– 01 ಕಾಮಗಾರಿ, 2025–26ನೇ ಸಾಲಿನ ಮಾನ್ಯ ಮುಖ್ಯಮಂತ್ರಿಗಳ ಮೂಲ ಸೌಕರ್ಯ ಅಭಿವೃದ್ಧಿ (ಸಿ.ಎಂ.ಐ.ಡಿ.ಪಿ) ಅನುದಾನಡಿ(2ನೇ ಕರೆ) – 01 ಕಾಮಗಾರಿ ಒಟ್ಟು 05 ಕಾಮಗಾರಿಗಳಿಗೆ ಕೆಪಿಪಿಪಿ ಪೋರ್ಟಲ್ ಮುಖಾಂತರ ಸಿಂಗಲ್/ಡಬಲ್ ಕವರ್ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದ್ದು, ಅರ್ಹ ಗುತ್ತಿಗೆದಾರರು/ಏಜನ್ಸಿದಾರರು/ ಸರಬರಾಜುದಾರರು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ವೆಬ್ ಸೈಟ್ https://kppp.karnataka.gov.in ನಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು, ಹೆಚ್ಚಿನ ವಿವರಗಳನ್ನು ಮಹಾನಗರ ಪಾಲಿಕೆಯ ಕಛೇರಿಯ ವೆಬ್ ಸೈಟ್ www.davanagerecity.mrc.gov.in ರಲ್ಲಿ ಹಾಗೂ ಕೆಪಿಪಿಪಿ ಸಹಾಯಕ ದೂರವಾಣಿ ಸಂಖ್ಯೆ: +91–8046010000 +91–8068948777 ರಿಂದ ಮಾಹಿತಿ ಪಡೆಯಬಹುದು. ಅಂದಾಜು ಮೊತ್ತ, ಟೆಂಡರ್‌ಗಿಟ್ಟ ಮೊತ್ತ, ಇ.ಎಂ.ಡಿ. ಮೊತ್ತ ಮತ್ತು ಇ–ಹರಾಜಿನಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಇ–ಹರಾಜು ದಾಖಲೆಯಲ್ಲಿ ದಿನಾಂಕಗಳನ್ನು ಕೆಪಿಪಿಪಿ ಪೋರ್ಟಲ್‌ನಲ್ಲಿ ಗಮನಿಸುವುದು ಹಾಗೂ ಯಾವುದೇ ಪತ್ರಿಕಾ ಪ್ರಕಟಣೆಗಳನ್ನು ಹೊರಡಿಸಲಾಗುವುದಿಲ್ಲ.

ಕ್ರಮ ಸಂ. 01, 02, 03, 05 ರ ಕಾಮಗಾರಿಗೆ : ಕೆ.ಪಿ.ಪಿ.ಪಿ.ಯಲ್ಲಿ ಟೆಂಡರ್ ದಾಖಲೆಗಳನ್ನು ಪಡೆಯಬಹುದಾದ ದಿನಾಂಕ : 02–03–2026 ಪ್ರಿ ಬಿಡ್ ದಿನಾಂಕ & ವೇಳೆ (ರೂ. 100 ಲಕ್ಷ ಮೇಲ್ಪಟ್ಟ ಕಾಮಗಾರಿಗಳಿಗೆ) : 10–03–2026 ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ & ವೇಳೆ : 16–03–2026 ಸಮಯ : 16.00 ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ : 16–03–2026 ಸಮಯ : 17.00 ಟೆಂಡರ್/ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ವೇಳೆ : 18–03–2026 ಸಮಯ : 11.00

ಕ್ರಮು ಸಂ. 4ರ ಕಾಮುಗಾರಿಗೆ: ಕೆ.ಪಿ.ಪಿ.ಪಿ.ಯುಲ್ಲಿ ಟೆಂಡರ್ ದಾಖಲೆಗಳನ್ನು ಪಡೆಯಬಹುದಾದ ದಿನಾಂಕ : 27–02–2026 ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ & ವೇಳೆ : 07–03–2026 ಸಮಯ : 16.00 ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ : 07–03–2026 ಸಮಯ : 17.00 ಟೆಂಡರ್/ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 09–03–2026 ಸಮಯ : 11.00

ವಾಸಾಇ/ದಾವಣಗೆರೆ/783/ಕೆಎಸ್ಎಂಸಿಎ/2025–26

ಸಹಿ/–ಕಾರ್ಯಪಾಲಕ ಅಭಿಯಂತರರು, ಮಹಾನಗರ ಪಾಲಿಕೆ, ದಾವಣಗೆರೆ

ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ

#1, ಸಿದ್ದಯ್ಯ ಪುರಾಣಿಕ್ ರಸ್ತೆ, ಕೆ.ಹೆಚ್.ಬಿ ಕಾಲೋನಿ, ಮಾಗಡಿ ರಸ್ತೆ ಬೆಂಗಳೂರು 560079
ದೂರವಾಣಿ ಸಂಖ್ಯೆ: +91–80–29619801 ಮಿಂಚ್ ಅಂಚೆ: md.ksmscl@gmail.com

No: KSMSCL/EQPT/HFW/PM-ABHIM/MH/CCB/TND/43/2025-26 Date: 26.02.2026

ಟೆಂಡರ್ ಪ್ರಕಟಣೆ

ಉಲ್ಲೇಖ : ಈ ಕಛೇರಿಯ ಟೆಂಡರ್ ಅಧಿಸೂಚನೆ ಸಂಖ್ಯೆ:

1. KSMSCL/EQPT/HFW/PM-ABHIM/MH/CCB/TND/43/2025-26(IND-0367) Date: 20.02.2026
2. KSMSCL/EQPT/HFW/SBC/ICDT/RETND/44/2025-26(IND-0368) Date: 21.02.2026
3. KSMSCL/EQPT/HFW/KSAPS/BSE/RETND/45/2025-26(IND-0369) Date: 21.02.2026
4. KSMSCL/EQPT/HFW/KSAPS/BSE/TND/46/2025-26(IND-0372) Date: 26.02.2026
5. KSMSCL/DRUGS/TND/25-26 AI/PACKAGE-8/6 DRUGS/33/2025-26/Call-2, Dt: 26.02.2026 (IND-0280 Call-2).
6. KSMSCL/DRUGS/RETND/2025-26 AI/PACKAGE-22/7 DRUGS/87/2025-26, Dt: 26.02.2026 (IND-0370).
7. KSMSCL/DRUGS/RETND/PRGM/15th FC/MATERNAL HEALTH/GLUCOSE POWDER/88/2025-26, Dt: 26.02.2026 (IND-0371).

e-ಟೆಂಡರಿಂಗ್ ವ್ಯವಸ್ಥೆಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000 ರಂತೆ ಈ ಕೆಳಕಂಡ ರಾಷ್ಟ್ರ ವ್ಯಾಪ್ತಿ ಇ–ಟೆಂಡರ್ ಕರೆಯಲಾಗಿದೆ.

(1) PM ABHIM ಕಾರ್ಯಕ್ರಮದ ಅಡಿಯಲ್ಲಿ ಉಪಕರಣಗಳ ಪೂರೈಕೆಗೆ ಸಂಬಂಧಿಸಿದ ಟೆಂಡರ್ – IND 0367 **(2)** ರಾಜ್ಯ ರಕ್ತಕೋಷ ಕಾರ್ಯಕ್ರಮದ ಅಡಿಯಲ್ಲಿ ಉಪಕರಣಗಳ ಪೂರೈಕೆಗೆ ಸಂಬಂಧಿಸಿದ ಟೆಂಡರ್ – IND 0368 **(3)** KSAPS ಕಾರ್ಯಕ್ರಮದ ಅಡಿಯಲ್ಲಿ ಉಪಕರಣಗಳ ಪೂರೈಕೆಗೆ ಸಂಬಂಧಿಸಿದ ಟೆಂಡರ್ – IND 0368 **(4)** KSAPS ಕಾರ್ಯಕ್ರಮದ ಅಡಿಯಲ್ಲಿ ಉಪಕರಣಗಳ ಪೂರೈಕೆಗೆ ಸಂಬಂಧಿಸಿದ ಟೆಂಡರ್ – IND 0372 (5) 2025–26 ನೇ ಸಾಲಿನ ವಾರ್ಷಿಕ ಬೇಡಿಕೆ ಪಟ್ಟಿಯಲ್ಲಿನ Ophthalmological Preparations ವರ್ಗದ 6 ಔಷಧಗಳನ್ನು ಖರೀದಿಸಿ ಪೂರೈಸಲು ಮರುಟೆಂಡರ್ ಆಹ್ವಾನಿಸುವ ಕುರಿತು. (IND-0280 Call-2). **(6)** 2025–26 ನೇ ಸಾಲಿನ ವಾರ್ಷಿಕ ಬೇಡಿಕೆ ಪಟ್ಟಿಯಲ್ಲಿನ Dental Restorative Materials and Medicines ವರ್ಗದ 7 ಪರಿಕರಗಳನ್ನು ಖರೀದಿಸಿ ಪೂರೈಸಲು ಮರುಟೆಂಡರ್ ಆಹ್ವಾನಿಸುವ ಕುರಿತು. (IND-0370). **(7)** ತಾಯಿ ಅರೋಗ್ಯ ಕಾರ್ಯಕ್ರಮಕ್ಕೆ ಅವಶ್ಯವಿರುವ Glucose Powder 75 gm ಗಳನ್ನು 2025–26ನೇ ಸಾಲಿನ FR.3.2 15ನೇ ಹಣಕಾಸು ಆಯೋಗದ ಅನುದಾನದಡಿಯಲ್ಲಿ ಖರೀದಿಸಿ ಪೂರೈಸಲು ಮರುಟೆಂಡರ್ ಆಹ್ವಾನಿಸುವ ಕುರಿತು. (IND-0371). ತಾಂತ್ರಿಕ ವಿವರಣೆ, ಇ.ಎಮ್.ಡಿ, ಟೆಂಡರ್ ನಿಯಮಾವಳಿ ಹಾಗೂ ಇತರೆ ಮಾಹಿತಿಯನ್ನು ಈ–ಟೆಂಡರ್ ವ್ಯವಸ್ಥೆಯಡಿಯಲ್ಲಿ ವೆಬ್ ಸೈಟ್ ಮುಖಾಂತರ: **https://kppp.karnataka.gov.in** ನಲ್ಲಿ ಟೆಂಡರ್‌ಗಳ ದಾಸ್ತಾವೇಜುಗಳನ್ನು ಡೌನ್ ಲೋಡ್ ಮಾಡಬಹುದಾಗಿದ್ದು, ಹೆಚ್ಚಿನ ವಿವರಣೆಯನ್ನು ಈ ಕಛೇರಿಯಿಂದ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿದೆ.

**ಸಹಿ/–
ವ್ಯವಸ್ಥಾಪಕ ನಿರ್ದೇಶಕರು
ಕೆ.ಎಸ್.ಎಂ.ಎಸ್.ಸಿ.ಎಲ್, ಬೆಂಗಳೂರು**

ವಾಸಾಸಂಇ/ವಾ.ಪ್ರ/5903/ಶಿರಡಿಸಾಯಿ/2025–26

ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ (ಒಂದು ಷೆಡ್ಯೂಲ್ ವಾಣಿಜ್ಯ ಬ್ಯಾಂಕ್)

ಪ್ರಧಾನ ಕಛೇರಿ: ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ದ ಫೇರ್‌ವೇ, ನೆಲ ಮತ್ತು ಮೊದಲ ಮಹಡಿ, ಸರ್ವೆ ನಂ. 10/1, 11/2 & 12/2ಬಿ ಆಫ್ ದೊಮ್ಮಲೂರು, ಕೋರಮಂಗಲ ಒಳ ವರ್ತುಲ ರಸ್ತೆ, ಇಜಿಎಲ್ ಬ್ಯುಸಿನೆಸ್ ಪಾರ್ಕ್ ಹತ್ತಿರ, ಚಳ್ಳಘಟ್ಟ, ಬೆಂಗಳೂರು–560071

ಚಿನ್ನಾಭರಣಗಳ ಹರಾಜಿಗಾಗಿ ಸಾರ್ವಜನಿಕ ಸೂಚನೆ

ಈ ಕೆಳಗೆ ಹೆಸರಿಸಿರುವ ಸಾಲಗಾರರು ಹಲವಾರು ವಿನಂತಿಯ ನಂತರವೂ ಸಾಲ ಮರು ಪಾವತಿಸಲು ವಿಫಲರಾಗಿ, ಚಿನ್ನಾಭರಣ ಪಡೆದುಕೊಳ್ಳಲು ಸಾಧ್ಯವಾಗಿರುವುದಿಲ್ಲ. ಈ ಕೆಳಗೆ ಹೆಸರಿಸಿರುವ ಖಾತೆಗಳ ಸಾಲಗಾರರ ಚಿನ್ನಾಭರಣಗಳನ್ನು ಸಾರ್ವಜನಿಕ/ಆನ್‌ಲೈನ್/ಖಾಸಗಿ ಹರಾಜು ಮೂಲಕ ನಮ್ಮ ಶಾಖೆಯಲ್ಲಿ ಆನ್‌ಲೈನ್ ಆಕ್ಷನ್ ಟೈಗರ್ ಮೂಲಕ **25.03.2026 ರಂದು ಬೆಳಿಗ್ಗೆ 10.30ಕ್ಕೆ** ಮಾರಾಟ ಮಾಡಲಾಗುವುದು. ಭಾಗವಹಿಸಲು ಆಸಕ್ತರಾಗಿರುವವರು ಶಾಖೆಯನ್ನು ಸಂಪರ್ಕಿಸಬಹುದಾಗಿದೆ. ಯಾವುದೇ ಕಾರಣ ನೀಡದೆ, ಯಾವುದೇ ಅಥವಾ ಎಲ್ಲಾ ಬಿಡ್‌ಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿದೆ. ದಯವಿಟ್ಟು ಗಮನಿಸಬೇಕಾದುದೇನೆಂದರೆ, ಹರಾಜಿನ ದಿನದಂದು ಹರಾಜು ಪೂರ್ಣಗೊಂಡಿಲ್ಲವಾದರೆ, ಅದನ್ನು ಮರುದಿನ ಅದೇ ನಿಯಮ ನಿಬಂಧನೆಗಳಿಗನುಸಾರವಾಗಿ ನಡೆಸಲಾಗುವುದು. ಒಂದು ವೇಳೆ ಗ್ರಾಹಕ ಮೃತನಾಗಿದ್ದರೆ, ಅದೇ ನಿಯಮ ಮತ್ತು ನಿಬಂಧನೆ ಅವರ ಉತ್ತರಾಧಿಕಾರಿ/ ನಾಮನಿರ್ದೇಶಿತನಿಗೆ ಅನ್ವಯವಾಗುವುದು. ಸಾಲಗಾರರಿಗೆ ಈ ಮೂಲಕ ಸೂಚಿಸುವುದೇನೆಂದರೆ, ಹರಾಜಿನ ಮೊದಲು ಎಲ್ಲ ಬಾಕಿ, ಬಡ್ಡಿ ಹಾಗೂ ಇತರೆ ವೆಚ್ಚಗಳನ್ನು ಪಾವತಿಸಬೇಕು. ತಪ್ಪಿದಲ್ಲಿ ಅಡಮಾನ ಮಾಡಿರುವ ಚಿನ್ನಾಭರಣಗಳನ್ನು ಮಾರಾಟ ಮಾಡಿ ಬ್ಯಾಂಕಿಗೆ ಬರಬೇಕಾಗಿರುವ ಬಾಕಿ ಹಣವನ್ನು ಬಡ್ಡಿ ಹಾಗೂ ಇತರೆ ವೆಚ್ಚಗಳನ್ನು ವಸೂಲು ಮಾಡಲಾಗುವುದು. ಯಾವುದೇ ವಿಚಾರಣೆ ಮತ್ತು ನಿಯಮ ಮತ್ತು ನಿಬಂಧನೆಗಳಿಗೆ ಶಾಖೆಯನ್ನು ಸಂಪರ್ಕಿಸಿ. ಶಾಖೆ ವಿಳಾಸಕ್ಕಾಗಿ **www.janabank.com** ಗೆ ಭೇಟಿ ನೀಡಿ.

ಕ್ರ. ಸಂ.	ಸಾಲದ ಖಾತಾ ಸಂ.	ಸಾಲಗಾರರ / ಸಹ–ಸಾಲಗಾರರ ಹೆಸರು	ಅಡಮಾನ ಮಾಡಿದ ಆಭರಣಗಳ ಒಟ್ಟು ತೂಕ
1	31838740000500	ಜಬೀನಾ	22.8
2	31838730058672	ಶೋಭಾ	10.6
3	31838730058669	ನಾಗರತ್ನ ವಿ	5.2
4	31838730058567	ಉಷಾ ಡಿ ದಾಮೋದರನ್	26.2
5	31838730058554	ಬಸವರಾಜು ಎಂ	3.2
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಒಂದನೇ ಮಹಡಿ, ದೇನಾ ಬ್ಯಾಂಕ್ ಬ್ಯಾಂಕ್ ಮೇಲ್ಭಾಗ, ಸೈಟ್ ನಂ. 22 ಖಾತಾ ನಂ.25, ಶಾರದಾ ನಗರ, ವಸಂತಪುರ ಮುಖ್ಯರಸ್ತೆ, ಉತ್ತರಹಳ್ಳಿ ಹೋಬಳಿ, ಬೆಂಗಳೂರು–560061.	
6	32568730029053	ವಿದ್ಯಾ ಎನ್	28.2
7	32568730028916	ಎಸ್ ನಿಖಿಲ್	11
8	32568730028903	ಪಾರ್ವತಮ್ಮ	3.7
9	32568730028830	ಧನುಷ್ ಕುಮಾರ್ ಎನ್	3
10	32568730028712	ಎಂ ಮಧುಸೂದನ್	5.9
11	32568160005892	ಮದನ್ ವೈ	46.1
12	32568160005811	ಕೇಶವ ಮೂರ್ತಿ ಎಸ್	47.3
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಒಂದನೇ ಮಹಡಿ, ಖಾತಾ ನಂ.68/63, ಹಳೆ ನಂ.1534 ಸಿಕೆಆರ್ ಕಾಂಪ್ಲೆಕ್ಸ್, ಆನೇಕಲ್ ಬಸ್ ನಿಲ್ದಾಣ ಎದುರು, ಬೆಂಗಳೂರು–562106, ಭಾರತ	
13	46448730040471	ಮಹೇಶ್ ಎಂಹೆಚ್ ಎನ್	5.1
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಒಂದನೇ ಮಹಡಿ, ನಂ. 1809/1809 ಮತ್ತು 1810/1810 ರಾಮಸಮುದ್ರ ಪಟ್ಟಣ, ಎಫ್ ವಿಭಾಗ, ಬಿ ಆರ್ ಹಿಲ್ಸ್, ಚಾಮರಾಜನಗರ–571313.	
14	31878730046952	ಸುಮ ವೀರಣ್ಣ	3.2
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಒಂದನೇ ಮಹಡಿ, ನಂ. 273–ಬಿ, ಕೊ–ಅಪರೇಟಿವ್ ಹೌಸ್ ಕಟ್ಟಡ ಸೊಸೈಟಿ ಚೌಡೇಶ್ವರಿ ಬಸ್ ನಿಲ್ದಾಣದ ಎದುರು, ಮತ್ತಿಕೆರೆ, ಬೆಂಗಳೂರು–560078.	
15	31138730065704	ಸೊಹಿಲ್ ಇನಾಮ್‌ದಾರ್	12.7
16	31138730065670	ರಾಹುಲ್ ಹಿರು ಜಾಧವ್	3
17	31138730065348	ಶಫೀಕ್ ಕಲದಗಿ	10.7
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಸಿಟಿಎಸ್ ನಂ.1334/ಎ, 2ನೇ ಮಹಡಿ, ಜಯಲಕ್ಷ್ಮಿ ಟ್ರಾನ್ಸ್‌ಪೋರ್ಟ್ ಕಂ. ಮೇಲ್ಭಾಗ, ಶಹಾಪೇಟೆ, ಬಿಜಾಪುರ–586101	
18	31128730039292	ಮೇಘನ ಎನ್ ಎಂ	3.2
19	31128730039289	ನಾಗರಾಜ ಆರ್	21.2
20	31128730039250	ಆದಿತ್ಯ ಶರ್ಮ	21.8
21	31128730039224	ಮಲ್ಲಮ್ಮ ಎಸ್	33.8
22	31128160005828	ಯುವರಾಜ್ ಹೆಚ್	79.4
23	31128160005676	ಸತ್ಯರಾಜ್ ಬಿ	56.7
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., #880, 2ನೇ ಮಹಡಿ, ಎಸ್ ಎಸ್ ಕಾಂಪ್ಲೆಕ್ಸ್, ಬಿ ಹೆಚ್ ರಸ್ತೆ, ಶಿವಮೊಗ್ಗ–577202.	
24	46458740000060	ತುಳಸಿ ಬಿ	14.5
25	46458730010501	ರತ್ನ ವೈ	7.45
26	46458160002481	ಲೋಕೇಶ್ ಎಸ್	51.3
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, ಡೋರ್ ನಂ. 02, ಖಾನೇಶುಮಾರಿ ನಂ. 2434/2, ಎಸ್ ಎ ಕಾಂಪ್ಲೆಕ್ಸ್, ರಾಮಕೃಷ್ಣ ರಸ್ತೆ, ಎಂ ವಿ ಎಕ್ಸ್‌ಟೆನ್ಶನ್, ಹೊಸಕೋಟೆ–562114, ಭಾರತ	
27	31988730035567	ರಾಜೇಶ್ವರಿ ರಾಜೇಶ್ವರಿ	14.1
28	31988730035531	ಚಿಗದ್ದಿ ಬಸವರಾಜ	6.4
29	31988730035350	ರೇಷ್ಮ ಬೇಗಂ	9.8
30	31988730035340	ರೇಷ್ಮ ಬೇಗಂ	56.8
31	31988730035057	ಎಸ್ ಮೇಘ	3.8
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, ಅಕ್ಷಯ ಸ್ಕ್ವೇರ್, ಗಾಂಧಿ ನಗರ ಮುಖ್ಯ ರಸ್ತೆ, ಸರ್ಕಾರಿ ಆಸ್ಪತ್ರೆ ಎದುರು, ಬಳ್ಳಾರಿ–583103	
32	33818730035554	ಮಾನಸ ಎಂ ಕುರ್ಡೇಕರ್	12.9
33	33818730035528	ಮಾನಸ ಎಂ ಕುರ್ಡೇಕರ್	14.5
34	33818730035363	ಜಗನ್ ಬಿ	9.9
35	33818730035337	ಹನುಮಂತಪ್ಪ ಡಿ	4
36	33818730035274	ಅಮ್ಜದ್ ವಜೀದ್ ಸಾಬ್	14.1
37	33818730035060	ಭೀಮಪ್ಪ ಶಿವಕುಮಾರ	14
38	33818160005621	ಎಂ ಎಂ ಚಂದ್ರಶೇಖರ್	60.5
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, ಡೋರ್ ನಂ.604/ಬಿ, ಖಾತಾ ನಂ.23/19 ಸಿದ್ದಲಿಂಗೇಶ್ವರ ಕಾಂಪ್ಲೆಕ್ಸ್, ಎಕ್ಸಿಸ್ ಬ್ಯಾಂಕ್ ಹತ್ತಿರ, ಹಾಡಾಡಿ ರಸ್ತೆ, ದಾವಣಗೆರೆ–577004	
39	34018730027039	ರೇಷ್ಮ ತಬ್ಬಸುಮ್ ಎಂ	12
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ # 362, ಪಿಐಡಿ ನಂ.007–ಡಬ್ಲ್ಯು0377–73–1 ತಲಕಾವೇರಿ ಲೇಔಟ್, ಅಮೃತಹಳ್ಳಿ ಮುಖ್ಯರಸ್ತೆ ಬ್ಯಾಟರಾಯನಪುರ, ಬೆಂಗಳೂರು–560092	
40	33878730046252	ಪಾರ್ವತಿ ಸುಬ್ರಮಣ್ಯಮ್	12.8
41	33878730046213	ಟಿ ಸಂಜಯ್ ಕುಮಾರ್	16.2
42	33878730046189	ಹೆಚ್ ದಿನೇಶ್ ಕುಮಾರ್	4.7
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, ನಂ. 33/34, ಖಾತಾ ನಂ.159, ಪಿಐಡಿ ನಂ.14–23–33/34, 1ನೆ ಕ್ರಾಸ್, ಮುನೇಶ್ವರ ಬ್ಲಾಕ್, ಬೆಂಗಳೂರು–560086.	
43	32508730047868	ರಾಜೇಶ್ ಮುಂಗ್ಲಾನಿ	11.7
44	32508730047855	ಡಿಂಪಲ್ ವಿ ಮಲಿ ವಿ	82.8
45	32508730047792	ಡಿಂಪಲ್ ವಿ ಮಲಿ ವಿ	5.3
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನಂ.543/4, ನೆಲಮಹಡಿ, ಜಾಕಿ ಶೋರೂಂ ಹತ್ತಿರ, ಜ್ವಾಲಮಾಲ ಕೈಗಾರಿಕಾ ಎಸ್ಟೇಟ್, ದೇವರಚಿಕ್ಕನಹಳ್ಳಿ ಮುಖ್ಯ ರಸ್ತೆ, ಬೊಮ್ಮನಹಳ್ಳಿ, ಬೆಂಗಳೂರು, ಕರ್ನಾಟಕ, ಪಿನ್–560068	
46	33648740000102	ಪುಜಾರಿ ಅನುರಾಧ	24
47	33648740000078	ಇಂದಿರಮ್ಮ ಜಿ	16.1
48	33648740000042	ಅಕ್ಷಯ್ ಕುಮಾರ್ ಡಿ	11
49	33648740000013	ಸರೋಜ ನಾಗರಾಜು	15.6
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., 1ನೇ ಮಹಡಿ, ನಂ. 12, ರಿಂಗ್ ರಸ್ತೆ, ಇಂಡಿಯನ್ ಓವರ್‌ಸೀಸ್ ಬ್ಯಾಂಕ್ ಮೇಲ್ಭಾಗ, ನಾಗರಬಾವಿ 2ನೇ ಹಂತ, 11ನೇ ಬ್ಲಾಕ್, ಪಾಪರೆಡ್ಡಿಪಾಳ್ಯ, ಬೆಂಗಳೂರು–560072, ಭಾರತ	
50	33458730028110	ಮಹದೇವಸ್ವಾಮಿ ಎಂ	6.3
51	33458730028073	ದಾಕ್ಷಾಯಿಣಿ ಎಸ್	12.3
52	33458730028060	ನಂದನ್ ಕುಮಾರ್ ಎಂ	2.3
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., 1ನೇ ಮಹಡಿ, ನಂ. 730, ಹಿಣಕಲ್ ಹುಣಸೂರು ಮುಖ್ಯರಸ್ತೆ ಮೈಸೂರು–570017.	
53	32018730008991	ಮಂಜುನಾಥ್ ದೇವೇಂದ್ರಪ್ಪ ಕಂಬಾರ್	12.55
54	32018730008965	ರವಿ ಪಟ್ಟದಕಲ್ ಪಟ್ಟದಕಲ್	38.9
55	32018730008952	ರೆಹಮಾನ್ ಕಮಟಗಿ	14.2
56	32018730008850	ಈರಣ್ಣ ತಿಮ್ಮಾಪುರ್	15.35
57	32018730008824	ಲಕ್ಷ್ಮಣ್ ಮಾದಾರ್	3.15
58	32018730008790	ಶಂಕರಪ್ಪ ಛಲವಾದಿ	3.2
59	32018160001711	ನಾಗೇಶ್ ಕಜೂರ್	147
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., 1ನೇ ಮಹಡಿ, ನಂ. 239/2ಎ+ಬಿ/1ಡಿ, ಪ್ಲಾಟ್ ನಂ. 5, ನಂದಗೌಡ ರಸ್ತೆ, ನೂರ್ ಕೆರೂಡಿ ಆಸ್ಪತ್ರೆ, ವಿನಾಯಕ ನಗರ, ಬಾಗಲಕೋಟೆ–587101, ದೂ: 08354–225452	
60	30488730033662	ಮುಜಾಫರ್ ಎಸ್ ಖಲಸಿ	15.15
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಕಟ್ಟಡ ಸಂ. 14089/ಎ/3, ಕಲಘಟಗಿ ಮುಖ್ಯರಸ್ತೆ ಸರಸ್ವತ್‌ಪುರ, ಧಾರವಾಡ–580002	
61	45348730001879	ರಮೇಶ್ ಗೌರಿದಾಸ್	21.2
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ, 1ನೇ ಮತ್ತು 2ನೇ ಮಹಡಿ, 'ನಂದಿನಿ' ನಂ. 300/ಎ–70 10ನೇ ಮೈನ್, 36ನೇ ಕ್ರಾಸ್, 5ನೇ ಬ್ಲಾಕ್, ಜಯನಗರ, ಬೆಂಗಳೂರು–560041, ಭಾರತ	
62	49588740000010	ಸುಮ ಎಂ	13.4
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, ಸೈಟ್ 287/ಬಿ,12ನೇ ಅಡ್ಡ ರಸ್ತೆ, ಐಡಿಯಲ್ ಹೋಮ್ ಟೌನ್‌ಶಿಪ್, ಕೆಂಚನಹಳ್ಳಿ ಕೆಂಗೇರಿ ಹೋಬಳಿ, ರಾಜರಾಜೇಶ್ವರಿ ನಗರ, ಬೆಂಗಳೂರು–560098.	
63	46988730038168	ಗೋವಿಂದರಾಜು	8.9
64	46988160007436	ಬಿ ಸಿ ಗೋಪಾಲಕೃಷ್ಣ	35.4
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ ಮತ್ತು ಮೊದಲನೇ ಮಹಡಿ, ಡೋರ್ ನಂ. #66, ಖಾತಾ ನಂ. 865/66, ರೋಜಿಪುರ, ಡಿ ಕ್ರಾಸ್, ನಂದಿ ಆಸ್ಪತ್ರೆ ಹತ್ತಿರ, ದೊಡ್ಡಬಳ್ಳಾಪುರ, ಬೆಂಗಳೂರು–561203, ಕರ್ನಾಟಕ.	
65	49278740000012	ಮುಚಿಂತಲ ರೆಡ್ಡಿ ಅನಿಲ್ ನಾಯ್ಡು	16.2
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, #94, ಎಸ್ ವಿ ಕಾರ್ನರ್, ಹೊಸ ಖಾತಾ ನಂ 284, ಚಿನ್ನಪ್ಪನಹಳ್ಳಿ, ಮಾರತ್ತಹಳ್ಳಿ, ಬೆಂಗಳೂರು – 560037	
66	47460670000031	ಮೆಹಮೂದ ಇಬ್ರಾಹಿಂ ಪಾಶಾ	130.4
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, 7ಎಂ–414, ಹೆಚ್‌ಆರ್‌ಬಿಆರ್ 1ನೇ ಬ್ಲಾಕ್ ಎಕ್ಸ್‌ಟೆನ್ಶನ್, ಬೆಂಗಳೂರು–560043, ಭಾರತ	
67	31768730021201	ವಿನೋದ್ ಎ	23.3
68	31768730021020	ಸುನಿಲ್ ಆರ್	24.9
69	31768730020616	ದವೀದ್ ಆರ್	3
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, ಲಕ್ಷ್ಮಿ ಇಂಟರ್‌ನ್ಯಾಷನಲ್ ಹೋಟೆಲ್ ಕೆಳಭಾಗ, ಶಿವನಗರ, ಬೀದರ್–585401 ಭಾರತ.	
70	45488730020701	ವೆಂಕಟ್ರಾಮ್ ರೆಡ್ಡಿ	5
71	45488730020598	ಎಂ ಡಿ ಖಾಜಾ ಪಾಶಾ	28.3
72	45488730020460	ರವಿ ಎಸ್	5.7
73	45488730020332	ಅನಿಲ್ ಕುಮಾರ್	11.3
74	45488730020329	ಗೀತಾ ಉಮಾಪತಿ	32.4
75	45488730020141	ಮೊಹಮ್ಮದ್ ನವೀದ್ ಅಲಿ	34.1
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲಮಹಡಿ, ಡೋರ್ ನಂ.1–4–380, ಹೆಚ್ ಕೆ ದುಂಬಾ ನರ್ಸಿಂಗ್ ಹೋಂ, ಆರ್ಥೋಪೆಡಿಕ್ ಸೆಂಟರ್, ಐ ಬಿ ರಸ್ತೆ, ರೈಲ್ವೆ ನಿಲ್ದಾಣ ಸಮೀಪ, ರಾಯಚೂರು–584101, ಭಾರತ	
76	45458730029083	ಹಸನ್ ಪಟೇಲ್	14.5
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, ನಂ.2–907/23/2, ಡಾ. ಸವಿತ ವಾಣಿಜ್ಯ ಸಂಕೀರ್ಣ ಬಸವೇಶ್ವರ ಆಸ್ಪತ್ರೆ ಎದುರು, ಸೇಡಂ ರಸ್ತೆ, ಗುಲಬರ್ಗ– 590003,	
77	45398730009291	ದಸ್ತಗೀರ್ ಸಾಬ್ ಸದಾರುದ್ದೀನ್ ಮುಜಾವರ್	7.5
78	45398730009262	ದುರ್ಗಮ್ಮ ದಳವಾಯಿ	2.2
79	45398730009252	ದುರ್ಗಮ್ಮ ಮದಳವಾಯಿ	2
80	45398730009032	ಅಶೋಕ್ ಕೆಂಚಮ್ಮ	9.5
81	45398730009022	ಅಶೋಕ್ ಕೆಂಚಮ್ಮ	19.36
82	45398730009006	ಮಾರುತಿ ಕಟಬಾಲಿ	14.5
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, ಯುನಿಕ್ ಟವರ್ ಬಿಗ್ ಬಜಾರ್ ಹತ್ತಿರ, ಎಕ್ಸಿಸ್ ಬ್ಯಾಂಕ್ ಎದುರು, ಖಾನಾಪುರ ರಸ್ತೆ, ಅಂಗೋಳ್ ಎಕ್ಸ್‌ಟೆನ್ಶನ್ ಬೆಳಗಾವಿ, ಕರ್ನಾಟಕ–590003	
83	45448730008192	ಮೈಲಾರಿ ಮಾರುತಿ ಹನಮಸಾಗರ್	29.6
84	45448730008048	ಕುಮಾರ್ ಪಡುವಲ್ಲಿ	10
85	45448160003056	ದಾದಾಪೀರ್ ಹಾವೇರಿ	31.95
86	45448160003004	ಜಗದೀಶ್ ಆರ್ ಮುತ್ತಗಿ	56.75
87	45448160002997	ಜಗದೀಶ್ ಆರ್ ಮುತ್ತಗಿ	74.7
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ, ಮೆಜನೈನ್ ಮತ್ತು 1ನೇ ಮಹಡಿ, ಡೋರ್ ನಂ. #00 ಉಣಕಲ್ ಗ್ರಾಮ, ವಿದ್ಯಾನಗರ, ಹುಬ್ಬಳ್ಳಿ ತಾಲೂಕು, ಧಾರವಾಡ ಜಿಲ್ಲೆ–580021, ಭಾರತ	
88	30198730041460	ಕೋಕಿಲ ಎಸ್ ಶಿವರಾಮ್	24.2
89	30198730041394	ರೇಣುಕ ಕೆಂಚಪ್ಪ	5.7
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನಂ. 39/2, ನೆಲಮಹಡಿ, 2ನೇ ಮೈನ್, 2ನೇ ಮಹಡಿ ಸಿ ಕೆ ಸಿ ಗಾರ್ಡನ್, ಮಿಷನ್ ರಸ್ತೆ ಕ್ರಾಸ್, ಬೆಂಗಳೂರು–560027, ಭಾರತ	
90	46658730026477	ಆರ್ ವಿ ರಾಧ	49.5
91	46658730026464	ಆರ್ ವಿ ರಾಧ	76.1
92	46658730026273	ಹರೀಶ್ ವಿ	18.4
93	46658160004438	ಹರೀಶ ವಿ	56.2
94	46658160004310	ಗೌತಮ್ ಕುಮಾರ್ ಸಿ	49.9
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲಮಹಡಿ, ನಂ. 5, ಹೊಸ ಖಾತಾ ನಂ. 839/3735/3735/5, ಹಳೆ ಖಾತಾ ನಂ. 3735/3735/5, ಎಸ್ ನರಸಿಂಹಯ್ಯ ಲೇಔಟ್, ವಾರ್ಡ್ ನಂ. 22 ಬೂದಿಗೆರೆ ರಸ್ತೆ ಎಡಭಾಗ, 4ನೇ ವಿಭಾಗ, ದೇವನಹಳ್ಳಿ ಪಟ್ಟಣ, ಬೆಂಗಳೂರು–562110.	
95	40558740000012	ರಾಹುಲ್ ಕುಮಾರ್	12.45
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಸರ್ವೆ ನಂ. 10/1, 11/2 & 12/2ಬಿ ಆಫ್ ದೊಮ್ಮಲೂರು, ಕೋರಮಂಗಲ ಒಳ ವರ್ತುಲ ರಸ್ತೆ, ಎಂಬೆಸಿ ಗಾಲ್ಫ್ ಲಿಂಕ್ ಹತ್ತಿರ ಬ್ಯುಸಿನೆಸ್ ಪಾರ್ಕ್ ಚಳ್ಳಘಟ್ಟ	

ಸ್ಥಳ: ಕರ್ನಾಟಕ
ದಿನಾಂಕ: 28.02.2026

**ಸಹಿ/–ಅಧಿಕೃತ ಅಧಿಕಾರಿ
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್**

ಮಕ್ಕಳೇ ಆಲ್ ದಿ ಬೆಸ್ಟ್!

← ಮೊದಲಪುಟದಿಂದ

ದ್ವಿತೀಯ ಪಿಯುಸಿ ಪರೀಕ್ಷಾ ವೇಳಾಪಟ್ಟಿ

ದಿನಾಂಕ	ವಿಷಯ
ಫೆಬ್ರವರಿ 28	ಕನ್ನಡ, ಅರೇಬಿಕ್
ಮಾರ್ಚ್ 2	ಭೂಗೋಳ ಶಾಸ್ತ್ರ, ಸಂಖ್ಯಾಶಾಸ್ತ್ರ, ಮನಃಶಾಸ್ತ್ರ
ಮಾರ್ಚ್ 3	ಇಂಗ್ಲೀಷ್
ಮಾರ್ಚ್ 4	ತಮಿಳು, ತೆಲುಗು, ಮಲಯಾಳಂ, ಮರಾಠಿ, ಉರ್ದು, ಸಂಸ್ಕೃತ, ಫ್ರೆಂಚ್
ಮಾರ್ಚ್ 5	ಇತಿಹಾಸ
ಮಾರ್ಚ್ 6	ಭೌತಶಾಸ್ತ್ರ
ಮಾರ್ಚ್ 7	ಐಚ್ಛಿಕ ಕನ್ನಡ, ವ್ಯವಹಾರ ಅಧ್ಯಯನ, ಭೂಗರ್ಭ ಶಾಸ್ತ್ರ
ಮಾರ್ಚ್ 9	ರಸಾಯನಶಾಸ್ತ್ರ, ಶಿಕ್ಷಣಶಾಸ್ತ್ರ, ಮೂಲ ಗಣಿತ
ಮಾರ್ಚ್ 10	ಅರ್ಥಶಾಸ್ತ್ರ
ಮಾರ್ಚ್ 11	ತರ್ಕಶಾಸ್ತ್ರ, ವಿದ್ಯುನ್ಮಾನಶಾಸ್ತ್ರ, ಗೃಹ ವಿಜ್ಞಾನ
ಮಾರ್ಚ್ 12	ಹಿಂದಿ
ಮಾರ್ಚ್ 13	ರಾಜ್ಯಶಾಸ್ತ್ರ
ಮಾರ್ಚ್ 14	ಲೆಕ್ಕಶಾಸ್ತ್ರ, ಗಣಿತ
ಮಾರ್ಚ್ 16	ಸಮಾಜಶಾಸ್ತ್ರ, ಜೀವಶಾಸ್ತ್ರ, ಗಣಕ ವಿಜ್ಞಾನ
ಮಾರ್ಚ್ 17	ಹಿಂದುಸ್ತಾನಿ, ಸಂಗೀತ, ರೀಟೇಲ್ ಆಟೋಮೊಬೈಲ್, ಆರೋಗ್ಯ ರಕ್ಷಣೆ

ಪೊಲೀಸ್ ಅಧೀಕ್ಷಕರು, ವೈರ್‌ಲೆಸ್‌ರವರ ಕಛೇರಿ

ನಂ.1, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.
ದೂರವಾಣಿ : +91–80–22942324, ಇ–ಮೇಲ್: spwireless@ksp.gov.in

ಟೆಂಡರ್ ಸಂಖ್ಯೆ: KSP/2025-26/IND0552/Call-2 ದಿನಾಂಕ: 27.02.2026

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಪೊಲೀಸ್ ಅಧೀಕ್ಷಕರು, ವೈರ್‌ಲೆಸ್ ಬೆಂಗಳೂರುರವರಿಂದ, **National Cyber Crime Helpline-1930** ಸಹಾಯವಾಣಿಗೆ ಅವಶ್ಯವಿರುವ ಡೆಸ್ಕ್‌ಟಾಪ್ ಕಂಪ್ಯೂಟರ್, 75" LED TV & Video Conference System, Wired Headphone ಉಪಕರಣಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಖರೀದಿಸುವ ಸಂಬಂಧ ಆನ್‌ಲೈನ್ ನಲ್ಲಿ ಮರು ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್‌ನ ಅಂದಾಜು ಮೌಲ್ಯ ರೂ. 18.10 ಲಕ್ಷಗಳು, Pre-bid Queries ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **03/03/2026** ಸಮಯ **11.30 ಗಂಟೆ** ಹಾಗೂ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **06/03/2026, ಸಂಜೆ 5.00** ಗಂಟೆಗಳು. ಇತರೆ ಮಾಹಿತಿಯನ್ನು **https://eproc.karnataka.gov.in** ರಲ್ಲಿ ಪಡೆಯಬಹುದು ಹಾಗೂ ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

**ಸಹಿ/– ಪೊಲೀಸ್ ಅಧೀಕ್ಷಕರು,
ವೈರ್‌ಲೆಸ್, ಬೆಂಗಳೂರು**

ವಾಸಾಸಂಇ/ವಾ.ಪ್ರ./5920/ಎಸ್‌ಎಸ್‌ಸಿ/2025–26

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಮಂಡ್ಯ

ವಿ. ಸಿ. ಫಾರಂ, ಮಂಡ್ಯ 571 405 ಕರ್ನಾಟಕ, ಭಾರತ
ಎಸ್. ವಿನಯ್ ಕುಮಾರ್, ಆಸ್ತಿ ಅಧಿಕಾರಿಗಳು, ಮೊ.ನಂ: 9448196321
ಮಿಂಚಂಚೆ : eouasmandya@gmail.com
ಸಂಖ್ಯೆ:ಕೃವಿವಿಮ/ಆ.ಅ/ಟೆಂಡರ್//2025–26 ದಿ:25.02.2026

ಟೆಂಡರ್ ಪ್ರಕಟಣೆ
(ಸಂಖ್ಯೆ:NO.EO/TN/MT/04/2025-26 Dt:25.02.2026)

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಮಂಡ್ಯದಲ್ಲಿ ಸಿವಿಲ್ ದುರಸ್ತಿ ಹಾಗೂ ವಿದ್ಯುತ್ ಕೆಲಸಗಳಿಗೆ ಅನುಭವ ಗುತ್ತಿಗೆದಾರರು/ಏಜೆನ್ಸಿರವರಿಂದ ಟೆಂಡರ್ ಆಹ್ವಾನಿಸಲಾಗಿದೆ ಹಾಗೂ ಟೆಂಡರ್‌ನ ವಿವರಗಳು uasmandya.co.in ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ.

ಟೆಂಡರ್ ಶೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿವೆ:– ಟೆಂಡರ್ ಫಾರಂ ಪಡೆಯಲು ಕೊನೆಯ ದಿನಾಂಕ ಮತ್ತು ಸಮಯ : 06.03.2026 ಸಂಜೆ 4.00 ಗಂಟೆಗೆ. ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ : 09.03.2026 ಬೆಳಿಗ್ಗೆ 10.30 ಗಂಟೆಗೆ. ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ : 33.03.2026 ಬೆಳಿಗ್ಗೆ 03.30 ಗಂಟೆಗೆ.

ವಿವರಗಳನ್ನು ಕೆಳಸಹಿದಾರರ ಕಛೇರಿಯಿಂದ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು. ಕೆಲಸದ ಎಲ್ಲಾ ದಿವಸಗಳಲ್ಲೂ ಮತ್ತು ಆಸ್ತಿ ಅಧಿಕಾರಿಗಳು, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಮಂಡ್ಯ, ವಿ.ಸಿ.ಫಾರಂ, ಮಂಡ್ಯ–571405 ಇವರನ್ನು ಸಂಪರ್ಕಿಸಬಹುದು ದೂರವಾಣಿ ಸಂಖ್ಯೆ: 9448196321.

ಸಹಿ/–ಆಸ್ತಿ ಅಧಿಕಾರಿಗಳು, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಮಂಡ್ಯ, ವಿ.ಸಿ.ಫಾರಂ, ಮಂಡ್ಯ–571405

ವಾಸಾಸಂಇ/ಹಿಸನಿ–ಮಂ/ಕೆಎಸ್ಎಂಸಿ&ಎ/837/2025–26

ಸಮಾಚಾರ ಸಣ್ಣದಲ್ಲ

ಮಾ.1ರಂದು ಉಚಿತ ನರರೋಗ ತಪಾಸಣೆ

ಜಮಖಂಡಿ: ನಗರದ ಧನ್ನೂರ ಪಾಲಿ ಕ್ಲಿನಿಕ್‌ನಲ್ಲಿ ಕನ್ನಡ ಪತ್ರಿಕೋದ್ಯಮದ ಹೊಸತನದ ಹರಿಕಾರ ವಿಶ್ವೇಶ್ವರ ಭಟ್ ಅವರ ಅಭಿಮಾನಿ ಬಳಗ ಜಮಖಂಡಿ ಇವರ ಸಂಯುಕ್ತ ಆಶ್ರಯದಲ್ಲಿ ಉಚಿತ ನರರೋಗ ತಪಾಸಣಾ ಶಿಬಿರವನ್ನು ಮಾ.1ರಂದು ಹಮ್ಮಿಕೊಳ್ಳಲಾಗಿದೆ. ಸರಕಾರಿ ಆಸ್ಪತ್ರೆ ಎದುರಿಗೆ ಸಾನಿಯಾ ಮೆಡಿಕಲ್ ಹತ್ತಿರ ಧನ್ನೂರ ಪಾಲಿಕ್ಲಿನಿಕ್‌ದಲ್ಲಿ ಉಚಿತ ನರರೋಗ ತಪಾಸಣಾ ಶಿಬಿರ ನಡೆಯಲಿದೆ. ಡಾ.ವಿರುಪಾಕ್ಷಪ್ಪ ಎಸ್ .ಬಿರಾದಾರ (ಮೆದುಳು ಮತ್ತು ನರರೋಗ ತಜ್ಞರು) ಪಾರ್ಶ್ವ ವಾಯು, ಬೆನ್ನುಹುರಿ , ಮೂರ್ಛೆ ರೋಗ, ತಲೆ ನೋವು, ಕೈ ನಡುಗುವುದು, ಕಾಲು ಉರಿಯುವುದು ಸೇರಿ ನರ ಸಂಬಂಧಿತ ಖಾಯಿಲೆ ಗಳಿಗೆ ಉಚಿತ ಚಿಕಿತ್ಸೆ ನೀಡಲಾಗುವುದು. ಹೆಚ್ಚಿನ ಸಂಖ್ಯೆಯಲ್ಲಿ ರೋಗಿಗಳು ಪಾಲ್ಗೊಂಡು ಆರೋಗ್ಯ ಶಿಬಿರ ಯಶಸ್ವಿಗೊಳಿಸಲು ಕೋರಲಾಗಿದೆ.

ಸಂಪುಟ ಬದಲಾವಣೆ ಸಿಎಂ ವಿವೇಚನೆಗೆ

ಕಲಬುರಗಿ: ಸಚಿವ ಸಂಪುಟ ಪುನಾರಚನೆ ಅಥವಾ ಬದಲಾವಣೆ ಎಂಬುದು ಮುಖ್ಯಮಂತ್ರಿಗಳ ವಿವೇಚನೆಗೆ ಬಿಟ್ಟ ವಿಚಾರ. ಈ ಬಗ್ಗೆ ಸಚಿವರಾಗಲಿ ಅಥವಾ ಶಾಸಕರಾಗಲಿ ಮಾತನಾಡುವುದು ಸರಿಯಲ್ಲ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ್ ಪಾಟೀಲ್ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇದು ನಮ್ಮ ವ್ಯಾಪ್ತಿಗೆ ಬರುವ ವಿಷಯವಲ್ಲ ಪಕ್ಷದ ಹೈಕಮಾಂಡ್ ಮತ್ತು ಮುಖ್ಯಮಂತ್ರಿಗಳು ಈ ಬಗ್ಗೆ ಸೂಕ್ತ ತೀರ್ಮಾನ ತೆಗೆದುಕೊಳ್ಳುತ್ತಾರೆ. ನನಗೆ ವಹಿಸಿರುವ ಕೆಲಸವನ್ನು ನಾನು ಪ್ರಾಮಾಣಿಕವಾಗಿ ಮಾಡುತ್ತಿದ್ದೇನೆ ಎಂದರು. ಡಿಸಿಎಂ ಡಿ.ಕೆ. ಶಿವಕುಮಾರ್ ಅವರ ದೆಹಲಿ ಭೇಟಿ ಹಾಗೂ ಸಿಎಂ ಬದಲಾವಣೆ ಕುರಿತ ಪ್ರಶ್ನೆಗಳಿಗೆ ಉತ್ತರಿಸಿದ ಅವರು, ನಾನು ಪಕ್ಷದ ಅಧ್ಯಕ್ಷನೂ ಅಲ್ಲ, ಹೈಕಮಾಂಡ್ ಕೂಡ ಅಲ್ಲ. ದೆಹಲಿ ಭೇಟಿಯ ಬಗ್ಗೆ ನನಗೇನು ತಿಳಿದಿಲ್ಲ ಎಂದು ಮಾರ್ಮಿಕವಾಗಿ ನುಡಿದರು. ರಾಜ್ಯದ ವೈದ್ಯಕೀಯ ಶಿಕ್ಷಣ ಇಲಾಖೆಯ ವ್ಯಾಪ್ತಿಯ ಆಸ್ಪತ್ರೆಗಳಲ್ಲಿ ಯಾವುದೇ ರೀತಿಯ ಔಷಧಿಗಳ ಕೊರತೆಯಿಲ್ಲ. ರೋಗಿಗಳಿಗೆ ಹೊರಗಡೆಯಿಂದ ಔಷಧಿ ತರಲು ಚೀಟಿ ಬರೆದುಕೊಡದಂತೆ ಈಗಾಗಲೇ ಕಟ್ಟುನಿಟ್ಟಿನ ಸುತ್ತೋಲೆ ಹೊರಡಿಸಲಾಗಿದೆ. ಆಸ್ಪತ್ರೆಗಳಲ್ಲಿ ಔಷಧಿ ಲಭ್ಯವಿದ್ದರೂ ಖಾಸಗಿಯಾಗಿ ಖರೀದಿಸಲು ಸೂಚಿಸುವ ವೈದ್ಯರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ನಾಡ ಸಮಸ್ಯೆಗೆ ಸಿಎಂ ಪರಿಹಾರ



- ವೈಟ್‌ಫೀಲ್ಡ್ ವಾರ್ಡ್ 84, ಬೆಂಗಳೂರು

ಸಮಸ್ಯೆಯೇನು..?

- ರಸ್ತೆಗೆ ಬಿದ್ದಿರುವ ಗುಂಡಿಗಳನ್ನು ಮುಚ್ಚುವ ಕುರಿತು.
- **ಪರಿಹಾರ:** ಮಹದೇವಪುರ ವಲಯ ವೈಟ್ ಫೀಲ್ಡ್‌ನ ವಾರ್ಡ್ 84ರ ವ್ಯಾಪ್ತಿಯ ನಲ್ಲೂರಹಳ್ಳಿ ಅಡ್ಡರಸ್ತೆ 4, ಡ್ರೈಫ್ರೂಟ್ಸ್ ಅಂಗಡಿ ಎದುರು ಬಿದ್ದಿರುವ ರಸ್ತೆಗುಂಡಿಗಳನ್ನು ಮುಚ್ಚಲು ಸಾರ್ವಜನಿಕರೊಬ್ಬರು ಮನವಿ ಮಾಡಿದ್ದರು. ಈ ಸಂಬಂಧ ಜಿಬಿಎ ಎಂಜಿನಿಯರ್‌ಗಳು ಸ್ಥಳ ಪರಿಶೀಲನೆ ನಡೆಸಿ ಗುಂಡಿಗಳನ್ನು ಮುಚ್ಚಿಸಿದ್ದಾರೆ.

ದಿನ ವಿಶೇಷ

28 ಫೆಬ್ರವರಿ 2026 ಶನಿವಾರ

» ಸೂರ್ಯೋದಯ	: 06-39
» ಸೂರ್ಯಾಸ್ತ	: 06-29
» ತಿಥಿ	: ದ್ವಾದಶಿ
» ನಕ್ಷತ್ರ	: ಪುನರ್ವಸು
» ಸಂವತ್ಸರ	: ವಿಶ್ವಾವಸು
» ಆಯನ	: ಉತ್ತರಾಯಣ
» ಋತು	: ಶಿಶಿರ
» ಮಾಸ	: ಫಾಲ್ಗುಣ
» ಪಕ್ಷ	: ಶುಕ್ಲ ಪಕ್ಷ

ನನ್ನ ಪರವಾಗಿ ಯಾರೂ ದೆಹಲಿಗೆ ಹೋಗುವುದು ಬೇಡ

ನಾವು ಹಳಬರು, ಹೊಸಬರಿಗೆ ಮಂತ್ರಿ ಆಸೆ ಇದೆ

ಶಕ್ತಿ ಪ್ರದರ್ಶನ ಇಲ್ಲ

ಬೆಂಗಳೂರು: ನನ್ನ ಪರವಾಗಿ ಯಾರೂ ದೆಹಲಿಗೆ ಹೋಗುವುದು ಬೇಡ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಗುರುವಾರದಂದು ಸಭೆ ಸೇರಿದ್ದ ಸಚಿವರು, ಶಾಸಕರು ದೆಹಲಿಗೆ ಹೋಗಿ ನಿಮ್ಮ ಪರವಾಗಿ ಮನವಿ ಮಾಡುತ್ತಾರಂತೆ ಎಂದು ಕೇಳಿದಾಗ, ದಯವಿಟ್ಟು ಬೇಡ ಎಂದು ಮನವಿ ಮಾಡುತ್ತೇನೆ. ನಿಮ್ಮ ಸಮಸ್ಯೆಗಳು ಇದ್ದರೆ, ಮಂತ್ರಿ ಸ್ಥಾನದ ಆಕಾಂಕ್ಷಿಯಾಗಿದ್ದರೆ, ಅಧಿಕಾರ, ಹುದ್ದೆ ಬೇಕು ಎಂದರೆ ಹೋಗಿ ಮನವಿ ಮಾಡಿಕೊಳ್ಳಿ. ನನ್ನ ವಿಚಾರಕ್ಕೆ ಹೋಗುವುದು ಬೇಡ ಎಂದು ತಿಳಿಸಿದರು.

ಬಾಲಕೃಷ್ಣ ಅವರ ಜನ್ಮದಿನದ ಹೆಸರಿನಲ್ಲಿ 40ಕ್ಕೂ ಹೆಚ್ಚು ಶಾಸಕರು ಸೇರಿದ್ದು, ಶಕ್ತಿ ಪ್ರದರ್ಶನ ಮಾಡಲಾಗುತ್ತಿದೆ ಎಂಬುದಕ್ಕೆ ಪ್ರತಿಕ್ರಿಯಿಸಿ, ಯಾವ ಶಕ್ತಿ ಪ್ರದರ್ಶನವೂ ಇಲ್ಲ. ಕೆಲವರು ವಿಶ್ರಾಂತಿ, ಅಧ್ಯಯನಕ್ಕೆ ವಿದೇಶಕ್ಕೆ ಹೋಗುತ್ತಾರೆ. ಕೆಲವರು ದೆಹಲಿಗೆ ಹೋದರೆ, ಮತ್ತೆ ಕೆಲವರು ಭೋಜನ ಕೂಟ ಸೇರುತ್ತಾರೆ. ಅವರ ವೈಯಕ್ತಿಕ ವಿಚಾರಕ್ಕೂ ಪಕ್ಷಕ್ಕೂ ಸಂಬಂಧವಿಲ್ಲ ಎಂದರು.

ನಾವು ಹಳಬರಾಗಿದ್ದೇವೆ, ಹೊಸಬರು ಮಂತ್ರಿಯಾಗುವ ಆಸೆ ಹೊಂದಿದ್ದಾರೆ. ನೀವು ಸಿಎಂ ಆಗಬೇಕು ಎಂದು ಕೆಲಸ ಶಾಸಕರು ಹೇಳಿಕೆ ಸಂಬಂಧ , ಈ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಜತೆ ಅವರು ಯಾರು ಮಾತನಾಡಿಲ್ಲ, ಕೆಲವರು ಆಸೆ ಇಟ್ಟುಕೊಂಡಿದ್ದಾರೆ. ಹೊಸಬರಿಗೆ ಮಂತ್ರಿ ಆಗುವ ಆಸೆ ಇರುತ್ತದೆ. ನಾನು, ಪರಮೇಶ್ವರ್, ಎಚ್.ಕೆ. ಪಾಟೀಲ್, ಮಹದೇವಪ್ಪ, ಸಿದ್ದರಾಮಯ್ಯ ಸೇರಿದಂತೆ ನಾವು ಈಗ ಹಳಬರಾದೆವು. ಚಿಕ್ಕ ವಯಸ್ಸಿನಲ್ಲೇ ಮಂತ್ರಿಯಾದವರು. ಈಗ ಹೊಸಬರು ಮಂತ್ರಿ ಆಗಬೇಕು ಎಂಬ ಆಸೆ ವ್ಯಕ್ತಪಡಿಸುತ್ತಿದ್ದಾರೆ. ನೋಡೋಣ, ನಾನು ಈ ವಿಚಾರವನ್ನು ದೆಹಲಿ ಅವರ ಗಮನಕ್ಕೆ ತರುತ್ತೇನೆ ಎಂದರು.

ಖಾಲಿ ಹುದ್ದೆ ಭರ್ತಿಗೆ ಕ್ರಮ

ನಾವು ಹೊಸ ಮೀಸಲಾತಿ ಮಾಡಿದ್ದರೂ 2022ರ ನ್ಯಾಯಾಲಯ ಆದೇಶ ಅನುಸಾರ ಹಳೆ ಮೀಸಲಾತಿ ಮೇಲೆ ಮೊದಲ ಹಂತದಲ್ಲಿ 56 ಸಾವಿರ ನೇಮಕಾತಿ ಮಾಡಲು ತೀರ್ಮಾನ ಮಾಡಲಾಗಿದೆ. ಉದ್ಯೋಗ ನೇಮಕಾತಿ ಮಾಡುವುದಾಗಿ ನಾವು ಯುವಕರಿಗೆ ಮಾತು ನೀಡಿದ್ದು, ನಾವು ಅದರಂತೆ ನೇಮಕಾತಿ ಮಾಡುತ್ತೇವೆ. 1 ಲಕ್ಷಕ್ಕೂ ಹೆಚ್ಚು ಹುದ್ದೆಗಳಿಗೆ ನೇಮಕಾತಿ ಮಾಡಬೇಕು. ಎಲ್ಲವನ್ನು ಏಕ ಕಾಲಕ್ಕೆ ಮಾಡಿದರೆ ಕೆಲವರಿಗೆ ಅವಕಾಶ ಸಿಗುವುದಿಲ್ಲ ಎಂದು ಹಂತ ಹಂತವಾಗಿ ಮಾಡಲಾಗುವುದು. ನ್ಯಾಯಾಲಯಕ್ಕೆ ತಲೆಬಾಗಿ ಕಾನೂನಿನಲ್ಲಿ ಇರುವ ಅವಕಾಶವನ್ನು ಬಳಸಿಕೊಂಡು ನೇಮಕಾತಿ ಮಾಡುತ್ತೇವೆ. 2.84 ಲಕ್ಷ ಖಾಲಿ ಹುದ್ದೆಗಳನ್ನು ಹಂತ ಹಂತವಾಗಿ ತುಂಬಲಾಗುವುದು ಎಂದು ಡಿಸಿಎಂ ಡಿಕೆಶಿ ತಿಳಿಸಿದರು.

ಡಿಕೆಶಿ ಸಿಎಂ ಆಗಲಿ ಎನ್ನುವುದು ನನ್ನ ಆಸೆ

ಮಂಡ್ಯ: 2028 ಕ್ಕೂ ಕಾಂಗ್ರೆಸ್ ಅಧಿಕಾರಕ್ಕೆ ಬರಬೇಕು, ಹಾಗಾಗಿ ಹೈಕಮಾಂಡ್ ಮಧ್ಯ ಪ್ರವೇಶಿಸಿ ಕುರ್ಚಿ ಗೊಂದಲ ಬಗೆಹರಿಸಬೇಕು ಎಂದು ಕಾಂಗ್ರೆಸ್ ಶಾಸಕ ಗಣಿಗ ರವಿಕುಮಾರ್ ಒತ್ತಾಯಿಸಿದ್ದಾರೆ. ಡಿಕೆ ಬೆಂಬಲಿಗ ಶಾಸಕರ ಡಿನ್ನರ್ ಮೀಟಿಂಗ್ ವಿಚಾರಕ್ಕೆ ಸಂಬಂಧಿಸಿದಂತೆ ಮಂಡ್ಯದ ಕೆರಗೋಡು ಗ್ರಾಮದಲ್ಲಿ ಶಾಸಕರು ಪ್ರತಿಕ್ರಿಯೆ ನೀಡಿದ್ದಾರೆ. ಬಾಲಕೃಷ್ಣ ಬರ್ತ್‌ಡೇ ಪ್ರಯುಕ್ತ ಊಟಕ್ಕೆ ಸೇರಿದ್ದೆವು. ಮಟನ್ ಬಿರಿಯಾನಿ, ನಾಟಿ ಸ್ಟೈಲ್ ಅಡುಗೆ ಮಾಡಿಸಿದ್ದರು. ಊಟ ಮಾಡಿ ಬಂದಿದ್ದೇವೆ. ಅಷ್ಟಕ್ಕೆಲ್ಲಾ ಏನೇನೋ ಊಹಾಪೋಹ ಸೃಷ್ಟಿಸಿದ್ದಾರೆ. ನಮಗೆ ಸಿಎಂ, ಡಿಸಿಎಂ ಎಲ್ಲಾ ಒಂದೇ. ನಾನು ಸಿಎಂ ಪರಾನೂ ಇದ್ದೀನಿ, ಡಿಸಿಎಂ ಪರಾನೂ ಇದ್ದೇನೆ ಎಂದು ಗಣಿಗ ರವಿ ಹೇಳಿದರು.

ಜನ್ಮದಿನದ ಕಾರ್ಯಕ್ರಮದಲ್ಲಿ ಮಾಜಿ ಸಿಎಂ ಯಡಿಯೂರಪ್ಪ ವಿಶ್ವಾಸ

ಮತ್ತೆ ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ: ಬಿಎಸ್‌ವೈ

ಶಿವಮೊಗ್ಗ: 84ನೇ ವರ್ಷಕ್ಕೆ ಪದಾರ್ಪಣೆ ಮಾಡಿದ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರಿಗೆ ಶುಭಹಾರೈಕೆ ಮಹಾಪೂರವೇ ಹರಿದು ಬಂದಿತು. ಅವರ ಅಭಿಮಾನಿಗಳು, ಪಕ್ಷದ ಕಾರ್ಯಕರ್ತರು ದಿನವಿಡೀ ಶಿಕಾರಿಪುರಕ್ಕೆ ಧಾವಿಸಿ ಶುಭಕೋರಿದರು.

ಶಿಕಾರಿಪುರದ ಕುಮದ್ವತಿ ಕಾಲೇಜು ಆವರಣದಲ್ಲಿ ಹಮ್ಮಿಕೊಂಡಿದ್ದ ಜನ್ಮದಿನ ಹಾಗೂ ಗೌರವ ಸಮರ್ಪಣೆ ಸಮಾರಂಭದಲ್ಲಿ ಬಿ.ಎಸ್.ಯಡಿಯೂರಪ್ಪ ಶುಭಾಶಯ ಸ್ವೀಕರಿಸಿದ ಮಾತನಾಡಿದರು. ಮುಂಬರುವ ದಿನಗಳಲ್ಲಿ ರಾಜ್ಯ ಪ್ರವಾಸ ಕೈಗೊಂಡು, ಬಿಜೆಪಿಯನ್ನು ಅಧಿಕಾರಕ್ಕೆ ತರುವುದೇ ನನ್ನ ಗುರಿ. ರಾಜ್ಯದಲ್ಲಿರುವ ಭ್ರಷ್ಟ ವ್ಯವಸ್ಥೆಯನ್ನು ಕಿತ್ತೊಗೆಯಬೇಕು ಎಂದು ನುಡಿದರು.

ಕೇಂದ್ರ ಗ್ರಾಹಕ ವ್ಯವಹಾರಗಳು, ಆಹಾರ ಮತ್ತು ಸಾರ್ವಜನಿಕ ವಿತರಣೆಯ ಸಚಿವ ಪ್ರಲ್ಹಾದ್ ಜೋಶಿ ಅಭಿನಂದನಾ ಭಾಷಣ ಮಾಡಿ, ಯಡಿಯೂರಪ್ಪ ಅವರ ಕಳಕಳಿ, ಹೋರಾಟದ ಪರಿಣಾಮವಾಗಿ ರಾಜ್ಯದಲ್ಲಿ ಬಿಜೆಪಿ ಪ್ರಬಲ ಪ್ರತಿಪಕ್ಷವಾಗಿದೆ. ಮುಂದಿನ ದಿನಗಳಲ್ಲಿ ರಾಜ್ಯದಲ್ಲಿ ಮತ್ತೊಮ್ಮೆ ಬಿಜೆಪಿ ಅಧಿಕಾರಕ್ಕೆ ಬರುತ್ತದೆ. ನರೇಂದ್ರ ಮೋದಿಯವರ ಮಾರ್ಗದರ್ಶನದ ಆಡಳಿತ ಇಲ್ಲಿ ಇರುತ್ತದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಶೀಘ್ರ ಕೋಪಿಯಾದ ಅವರು ಶೀಘ್ರ ದ್ವೇಷಿ ಯಾವತ್ತೂ ಅಲ್ಲ. 2014ರಲ್ಲಿ ನಾನು ರಾಜ್ಯದ ಬಿಜೆಪಿ ಅಧ್ಯಕ್ಷನಾಗಿದ್ದೆ. ಆಗ ಲೋಕಸಭಾ ಟಿಕೆಟ್ ನೀಡುವ ಕುರಿತು ಯಡಿಯೂರಪ್ಪ ಅವರೊಂದಿಗೆ ಎರಡು ಮೂರು ಕ್ಷೇತ್ರದಲ್ಲಿ ಸ್ವಲ್ಪ ಭಿನ್ನಮತವಿತ್ತು. ಆಗ ರಾಜನಾಥ್ ಅವರು ತೀರ್ಮಾನ ಮಾಡಿದ್ದರು. ನನ್ನ ಕ್ಷೇತ್ರಕ್ಕೆ ಬಂದು ಪ್ರಚಾರ ಮಾಡುತ್ತಾರೋ ಇಲ್ವೋ ಎಂದುಕೊಂಡಿದ್ದೆ. ಆಗ ನನಗೆ ಕರೆ ಮಾಡಿ ನೀನು ಗೆಲ್ಲುವುದು ಅಷ್ಟೇ ಮಹತ್ವದ್ದು ನನಗೆ ಎಂದು ಹೇಳಿ ಕ್ಷೇತ್ರಕ್ಕೆ ಬಂದು ಪ್ರಚಾರ ಮಾಡಿ ಹೋದರು ಎಂದು ಆ ದಿನಗಳನ್ನು ಜೋಶಿ ಅವರು ನೆನೆದರು.

ಬೆಕ್ಕಿನಕಲ್ಮಠದ ಮಲ್ಲಿಕಾರ್ಜುನ ಮುರುಗ ರಾಜೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ವಿವಿಧ ಮಠದ ಶ್ರೀಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಸಂಸದ ಬಿ.ವೈ. ರಾಘವೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಎಂಎಲ್‌ಸಿ ಸಿ.ಟಿ. ರವಿ, ಡಾ. ಧನಂಜಯ್ ಸರ್ಜಿ, ಸಂಸದ ಗೋವಿಂದ ಕಾರಜೋಳ, ಪಿ.ಸಿ. ಮೋಹನ್, ಶಾಸಕ ಚನ್ನಬಸಪ್ಪ, ಮಾಜಿ ಸಚಿವ ಬಿ. ಶ್ರೀರಾಮುಲು, ಪ್ರಭು ಚೌವ್ಹಾಣ್, ರೂಪಾಲಿ ನಾಯ್ಕ್, ಬಿ.ಸಿ. ಪಾಟೀಲ್ ಮತ್ತಿತರರಿದ್ದರು.

ತಮ್ಮ ಜನ್ಮದಿನದ ಹಿನ್ನೆಲೆ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರು ಪುಂಗಾನೂರು ತಳಿ ಹಸುಗಳಿಗೆ ಪೂಜೆ ಸಲ್ಲಿಸಿದರು.

ಕರ್ನಾಟಕದಲ್ಲಿ ಮತ್ತೊಮ್ಮೆ ಬಿಜೆಪಿಯನ್ನು ಅಧಿಕಾರಕ್ಕೆ ತರಬೇಕು. ಇದಕ್ಕೆ ನಿಮ್ಮೆಲ್ಲರ ಸಹಕಾರ ಬೇಕು. ನನ್ನ ಗುರಿ ಬಿಜೆಪಿಯನ್ನು ಅಧಿಕಾರಕ್ಕೆ ತರುವುದು. ಅದಕ್ಕಾಗಿ ಪ್ರಮಾಣಿಕ ಪ್ರಯತ್ನ ಮಾಡುತ್ತೇನೆ.

-ಬಿ.ಎಸ್.ಯಡಿಯೂರಪ್ಪ, ಮಾಜಿ ಸಿಎಂ

ಬಾಗೇಪಲ್ಲಿ ಶಾಸಕ ಸುಬ್ಬಾರೆಡ್ಡಿ ಸ್ಥಾನ ಅಸಿಂಧು ಆದೇಶಕ್ಕೆ ತಡೆ

ಬೆಂಗಳೂರು: ಬಾಗೇಪಲ್ಲಿಯ ಎಸ್. ಎಸ್ ಸುಬ್ಬಾರೆಡ್ಡಿ ಶಾಸಕ ಸ್ಥಾನ ಅಸಿಂಧು ಗೊಳಿಸಿ ಹೈಕೋರ್ಟ್ ನೀಡಿದ್ದ ಆದೇಶಕ್ಕೆ ಸುಪ್ರೀಂ ಕೋರ್ಟ್ ಮಧ್ಯಂತರ ತಡೆ ನೀಡಿದೆ. ಎದುರಾಳಿ, ಚುನಾವಣಾ ಆಯೋಗ ಮತ್ತು ಸಂಬಂಧಪಟ್ಟ ವ್ಯಕ್ತಿಗಳಿಗೆ ಅಫಿಡವಿಟ್, ಕೌಂಟರ್ ಅಫಿಡವಿಟ್ ಸಲ್ಲಿಸಲು ಸುಪ್ರೀಂ ಕೋರ್ಟ್ 6 ವಾರಗಳ ಕಾಲಾವಕಾಶ ನೀಡಿದೆ. ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ (ಭಾಗ್ಯನಗರ) ವಿಧಾನಸಭಾ ಕ್ಷೇತ್ರದ ಶಾಸಕ ಸ್ಥಾನದಿಂದ ಅನರ್ಹಗೊಳಿಸಿದ ಹೈಕೋರ್ಟ್ ಆದೇಶ ಪ್ರಶ್ನಿಸಿ ಕಾಂಗ್ರೆಸ್‌ನ ಎಸ್.ಎನ್. ಸುಬ್ಬಾರೆಡ್ಡಿ ಅವರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು. ಸುಬ್ಬಾರೆಡ್ಡಿ ಮೇಲ್ಮನವಿಯ ವಿಚಾರಣೆಯನ್ನು ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಹಾಗೂ ನ್ಯಾ. ಜಾಯ್‌ಮಲ್ಯ ಬಾಗ್ಚಿ ಪೀಠವು ನಡೆಸಿತು. ನಾಮಪತ್ರ ಸಲ್ಲಿಕೆ ವೇಳೆ ಸಂಪೂರ್ಣ ಆಸ್ತಿ ಘೋಷಣೆ ಮಾಡಿಲ್ಲ, ಕ್ರಿಮಿನಲ್ ಕೇಸ್‌ಗಳ ಮಾಹಿತಿಯನ್ನು ಮರೆಮಾಚಿದ್ದಾರೆ ಎಂದು ಬಿಜೆಪಿ ಪರಾಜಿತ ಅಭ್ಯರ್ಥಿ ಮುನಿರಾಜು ಅವರು 2023 ಜೂನ್ 24ರಂದು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ವಿಚಾರಣೆ ವೇಳೆ ಆಸ್ತಿ ಮಾಹಿತಿಯನ್ನು ಉಲ್ಲಂಘನೆ ಮಾಡಿದ್ದು ದೃಢಪಟ್ಟ ಹಿನ್ನೆಲೆಯಲ್ಲಿ ಸುಬ್ಬಾರೆಡ್ಡಿ ಶಾಸಕ ಸ್ಥಾನವನ್ನು ಹೈಕೋರ್ಟ್ ಅಸಿಂಧು ಗೊಳಿಸಿತ್ತು. ಈ ಆದೇಶವನ್ನು ಪ್ರಶ್ನಿಸಿ ಸುಬ್ಬಾರೆಡ್ಡಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು.

ರಾಯಚೂರಿನಲ್ಲಿ ಖನಿಜ ನಿಕ್ಷೇಪ ಪತ್ತೆಗೆ ಶೋಧನೆ

ರಾಯಚೂರು: ನಗರದ ಮಲಿಯಾಬಾದ ಅರಣ್ಯ ಪ್ರದೇಶ ವ್ಯಾಪ್ತಿಯಲ್ಲಿ ಜಿಯೊಲಾಜಿಕಲ್ ಸರ್ವೆ ಆಫ್ ಇಂಡಿಯಾ ವತಿಯಿಂದ ಕಬ್ಬಿಣ, ಯುರೇನಿಯಂ ಮತ್ತು ಚಿನ್ನ ಸೇರಿದಂತೆ ಖನಿಜ ನಿಕ್ಷೇಪ ಪತ್ತೆ ಹಚ್ಚಲು ಹೆಲಿಕಾಪ್ಟರ್ ಮೂಲಕ ಹೆಲಿಬೋರ್ನ್ ಸಮೀಕ್ಷೆ ಶುಕ್ರವಾರ ಪ್ರಾರಂಭಗೊಂಡಿದೆ.

ಹೆಲಿಕಾಪ್ಟರ್ ಮೂಲಕ ಕಾಲಮಿತಿಯೊಳಗಿನ ಹೆಲಿಬೋರ್ನ್ ಭೂಭೌತಿಕ ಸಮೀಕ್ಷೆಗಳನ್ನು ಸುಗಮವಾಗಿ ನಡೆಸಲು ಸಹಕಾರ ಕೋರಿ ಜ.15 ರಂದು ಜಿಎಸ್‌ಐ ನಿರ್ದೇಶಕ ಡಾ.ರಾಜೇಶ್ ಕುಮಾರ ಜಿಲ್ಲಾಧಿಕಾರಿಗೆ ಪತ್ರ ಬರೆದು ಮನವಿ ಮಾಡಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ಜ.19 ರಂದು ಜಿಲ್ಲಾಧಿಕಾರಿಗಳ ಕಾರ್ಯಾಲಯದಿಂದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ, ಅಗ್ನಿಶಾಮಕ ಅಧಿಕಾರಿಗಳು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಹಾಗೂ ವಿದ್ಯುತ್ ಪರಿವೀಕ್ಷಕರಿಗೆ ಪತ್ರ ಬರೆದು ಅಗತ್ಯ ಸೌಲಭ್ಯಗಳು, ಭದ್ರತೆ ನೀಡುವಂತೆ ತಿಳಿಸಿದ ನಂತರ ಸಮೀಕ್ಷೆ ಪ್ರಾರಂಭ ಮಾಡಲಾಗಿದೆ. 200 ರಿಂದ 1000 ಅಡಿ ಎತ್ತರದಲ್ಲಿ ಹೆಲಿಕಾಪ್ಟರ್ ಹಾರಾಡಲಿದೆ.



ಚಿನ್ನಸ್ವಾಮಿ ಕ್ರೀಡಾಂಗಣ ಸುರಕ್ಷತೆಗೆ ಸಮಿತಿ ರಚನೆ

ಬೆಂಗಳೂರು: ಐಪಿಎಲ್ ಪಂದ್ಯಗಳ ಆತಿಥ್ಯಕ್ಕೆ ಅನುಮತಿ ಪಡೆದ ಬಳಿಕ ಎಂ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಅನುಸರಣೆಯಾಗುತ್ತಿರುವ ಭದ್ರತಾ ಕ್ರಮಗಳ ಕುರಿತು ಪರಿಶೀಲನೆಗಾಗಿ ತಜ್ಞರ ಉಪ ಸಮಿತಿ ರಚಿಸಲಾಗಿದೆ.

ಪೊಲೀಸ್, ಅಗ್ನಿಶಾಮಕದಳ, ಗ್ರೇಟರ್ ಬೆಂಗಳೂರು ಪ್ರಾಧಿಕಾರ, ಲೋಕೋಪಯೋಗಿ ಇಲಾಖೆಗಳ ಅಧಿಕಾರಿಗಳ ನ್ನೊಳಗೊಂಡ ಉಪಸಮಿತಿಯು ಪ್ರತಿ ವಾರ ಕ್ರೀಡಾಂಗಣಕ್ಕೆ ಭೇಟಿ ನೀಡಲಿದೆ. ಹಾಗೂ ಪ್ರೇಕ್ಷಕರ ಸುರಕ್ಷತೆಯ ದೃಷ್ಟಿಯಿಂದ ಕ್ರೀಡಾಂಗಣದಲ್ಲಿ ಅನುಸರಣೆಯಾಗುತ್ತಿರುವ ಕ್ರಮಗಳ ಕುರಿತು ಪರಿಶೀಲನೆ ನಡೆಸಿ ಸರಕಾರಕ್ಕೆ ವರದಿ ಸಲ್ಲಿಸಲಿದೆ.

ಸಮಿತಿಯಲ್ಲಿ ಯಾರೆಲ್ಲ?: ಸಮಿತಿಯಲ್ಲಿ ಕಬ್ಬನ್ ಪಾರ್ಕ್ ಉಪವಿಭಾಗದ ಎಸಿಪಿ ಡಾ.ಪ್ರಿಯದರ್ಶಿನಿ ಈಶ್ವರ್ ಸಾಣಿಕೊಪ್ಪ, ಜಿಬಿಎದ ಎಇಇ ಯೋಗೇಶ್, ಅಗ್ನಿಶಾಮಕ ಮತ್ತು ತುರ್ತುಸೇವಾ ಇಲಾಖೆಗಳ ಡಿಎಫ್‌ಒ ಸುನಿಲ್ ಕುಮಾರ್, ಲೋಕೋಪಯೋಗಿ ಇಲಾಖೆಯ ಎಇಇ ಶಂಭು ಕುಮಾರ್, ಕಬ್ಬನ್ ಪಾರ್ಕ್ ಠಾಣೆಯ ಇನ್ಸ್‌ಪೆಕ್ಟರ್ ದೇವೇಂದ್ರಪ್ಪ ಹಾಗೂ ಲೋಕೋಪಯೋಗಿ ಇಲಾಖೆಯ ಕಿರಿಯ ಎಂಜಿನಿಯರ್ ಆನಂದ್ ಕುಮಾರ್ ಇರಲಿದ್ದಾರೆ. ಈ ಸಮಿತಿಯು ಪ್ರತಿ ಸೋಮವಾರ ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ಭೇಟಿ ನೀಡಲಿದೆ. ಹಾಗೂ ಕ್ರೀಡಾಂಗಣದಲ್ಲಿನ ಸುರಕ್ಷತಾ ಅನುಸರಣೆಗಳ ಕುರಿತು ಸದಸ್ಯ ಕಾರ್ಯದರ್ಶಿಯವರಿಗೆ ವರದಿ ಸಲ್ಲಿಸಲಿದೆ.

ಹಟ್ಟಿಗಣಿ ದ್ವಾರದ ಬಳಿ ಸ್ಫೋಟಕ ಪತ್ತೆ

ರಾಯಚೂರು: ಜಿಲ್ಲೆ ಲಿಂಗಸುಗೂರು ತಾಲೂಕಿನ ಹಟ್ಟಿ ಚಿನ್ನದ ಗಣಿಯ ಮುಖ್ಯದ್ವಾರದ ಬಳಿ ಸುಮಾರು 15ಕ್ಕೂ ಹೆಚ್ಚು ಸಜೀವ ಸ್ಫೋಟಕಗಳು ಪತ್ತೆಯಾಗಿದ್ದು, ಸ್ಥಳೀಯರಲ್ಲಿ ತೀವ್ರ ಆತಂಕ ಸೃಷ್ಟಿಸಿದೆ.

ಶುಕ್ರವಾರ ಬೆಳಗ್ಗೆ ಗಣಿಯ ಕಂಪನಿ ಗೇಟ್ ಬಳಿ ಸ್ಫೋಟಕ್ಕೆ ಬಳಸುವ ಮದ್ದುಗಳು ಬಿದ್ದಿರುವುದನ್ನು ಗಮನಿಸಿದ ಕಾರ್ಮಿಕರು ಮತ್ತು ಸಾರ್ವಜನಿಕರು ತಕ್ಷಣ ಭದ್ರತಾ ಸಿಬ್ಬಂದಿಗೆ ಮಾಹಿತಿ ನೀಡಿದರು. ಸ್ಥಳಕ್ಕೆ ಆಗಮಿಸಿದ ಹಟ್ಟಿ ಠಾಣೆಯ ಪೊಲೀಸರು ಹಾಗೂ ಗಣಿಯ ಭದ್ರತಾ ಅಧಿಕಾರಿಗಳು ಪರಿಶೀಲನೆ ನಡೆಸಿದರು. ಪಲ್ಸರ್ ಬೈಕ್‌ನಲ್ಲಿ ಬಂದಿದ್ದ ಇಬ್ಬರು ವ್ಯಕ್ತಿಗಳು ಈ ಸ್ಫೋಟಕದ ಕ್ಯಾಟ್ರಿಜ್‌ಗಳನ್ನು ಬೀಳಿಸಿಕೊಂಡು ಪರಾರಿಯಾಗಿದ್ದಾರೆ ಎಂದು ಪ್ರತ್ಯಕ್ಷದರ್ಶಿಗಳ ಮಾತು. ಯಾವುದೇ ಸುರಕ್ಷತಾ ಕ್ರಮಗಳಿಲ್ಲದೆ ಇಷ್ಟು ಅಪಾಯಕಾರಿ ಸ್ಫೋಟಕಗಳನ್ನು ಬೈಕ್‌ನಲ್ಲಿ ಸಾಗಿಸುತ್ತಿದ್ದು, ಈಗ ಹಲವು ಅನುಮಾನಗಳಿಗೆ ಎಡೆ ಮಾಡಿಕೊಟ್ಟಿದೆ. ಹಟ್ಟಿ ಚಿನ್ನದ ಗಣಿ ಪ್ರದೇಶದಲ್ಲಿ ಹೈ ಅಲರ್ಟ್ ಘೋಷಿಸಲಾಗಿದ್ದು, ಭದ್ರತೆ ಬಿಗಿಗೊಳಿಸಲಾಗಿದೆ. ಈ ಸ್ಫೋಟಕಗಳು ಎಲ್ಲಿಂದ ಬಂದವು, ಯಾರು ಇದನ್ನು ಸಾಗಿಸುತ್ತಿದ್ದರು. ಉದ್ದೇಶವೇನು ಎಂಬ ಬಗ್ಗೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಗಣಿ ಸುತ್ತಮುತ್ತಲಿನ ಸಿಸಿಟಿವಿ ದೃಶ್ಯಾವಳಿಗಳನ್ನು ಪೊಲೀಸರು ಪರಿಶೀಲಿಸುತ್ತಿದ್ದಾರೆ.

ಉದ್ಯೋಗ ಭರ್ತಿ: ನಮ್ಮ ಹೋರಾಟದ ಫಲ

ಮೈಸೂರು: ನಮ್ಮ ಹೋರಾಟದ ಕಾರಣದಿಂದಾಗಿಯೇ ಯುವ ಜನರಿಗೆ ಉದ್ಯೋಗ ಸಿಗುವಂತಾಗಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಹೇಳಿದರು.

ಇಲ್ಲಿ ಶುಕ್ರವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ಧಾರವಾಡದಲ್ಲಿ ವಿದ್ಯಾರ್ಥಿಗಳ ಹೋರಾಟಕ್ಕೆ ಪೊಲೀಸರು ಆರು ತಿಂಗಳಿಂದಲೂ ಅನುಮತಿ ಕೊಟ್ಟಿರಲಿಲ್ಲ. ಪಕ್ಷದ ಲೆಟರ್‌ಹೆಡ್‌ನಲ್ಲೇ ಅನುಮತಿ ಕೇಳಿದ್ದೆವು. ಪೊಲೀಸರು ಬಿಜೆಪಿಯ ಹೋರಾಟವೆಂಬ ಕಾರಣದಿಂದಲೇ ಸಮ್ಮತಿ ಕೊಟ್ಟಿದ್ದಾರೆ ಎಂದು ಸಮರ್ಥಿಸಿಕೊಂಡರು.

ಧಾರವಾಡದಲ್ಲಿ ನಡೆದ ವಿದ್ಯಾರ್ಥಿಗಳ ಹೋರಾಟ ಹಾಗೂ ನಮ್ಮ ಬೆಂಬಲದಿಂದಾಗಿ ಸರಕಾರ ಕ್ರಮ ಕೈಗೊಂಡಿದೆ. ಹೋರಾಟದಲ್ಲಿ ನಮ್ಮವರು ಕಡಿಮೆ ಇದ್ದರು, ವಿದ್ಯಾರ್ಥಿಗಳೇ ಜಾಸ್ತಿ ಇದ್ದರು. ಆ ಹೋರಾಟದಿಂದಾಗಿಯೇ ಸರಕಾರ 56 ಸಾವಿರ ಉದ್ಯೋಗ ಭರ್ತಿ ಮಾಡುತ್ತೇವೆ ಎಂದು ಹೇಳಿದೆ ಎಂದರು. ನಾವು ಹೋರಾಟ ಮಾಡಿದ್ದು 2.84 ಲಕ್ಷ ಹುದ್ದೆಗಳ ಭರ್ತಿಗಾಗಿಯೇ ಹೊರತು ಕೇವಲ 57ಸಾವಿರಕ್ಕಲ್ಲ. ಸರಕಾರ ಕೇವಲ ಹೇಳಿಕೆ ನೀಡಿ ಸುಮ್ಮನೆ ಕೂರುವುದಲ್ಲ. ಎಲ್ಲ ಹುದ್ದೆಗಳಿಗೂ ಯಾವಾಗ ನೇಮಕ ಮಾಡಲಾಗುತ್ತದೆ. ಯಾವಾಗ ಅಧಿಸೂಚನೆ ಹೊರಡಿಸಲಾಗುತ್ತದೆ ಎಂಬುದನ್ನು ಸ್ಪಷ್ಟವಾಗಿ ತಿಳಿಸಬೇಕು ಎಂದು ಒತ್ತಾಯಿಸಿದರು. ಭರ್ತಿ ಬಗ್ಗೆ ಮುಂಬರುವ ಬಜೆಟ್‌ನಲ್ಲಿ ಪ್ರಸ್ತಾಪಿಸದಿದ್ದಲ್ಲಿ ದೊಡ್ಡ ಚಳವಳಿ ನಡೆಸುತ್ತೇವೆ. ಹುಬ್ಬಳ್ಳಿಯಿಂದ ಬೆಂಗಳೂರಿನವರೆಗೆ ಪಾದಯಾತ್ರೆ ಮಾಡಬೇಕಾಗುತ್ತದೆ ಎಂದರು.

ಕೂಸು ಹುಟ್ಟುವ ಮೊದಲೇ ಕುಲಾವಿ ಬೇಡ

ಮುಂದಿನ ಮುಖ್ಯಮಂತ್ರಿ ಯಾರು ಎಂಬ ಬಗ್ಗೆ ನಮ್ಮಲ್ಲಿ ಯಾವ ತೀರ್ಮಾನವೂ ಆಗಿಲ್ಲ. ಕೂಸು ಹುಟ್ಟುವ ಮುಂಚೆಯೇ ಕುಲಾವಿ ಹೊಲಿಸುವುದು ಸರಿಯಲ್ಲ. ಮೊದಲು ಒಟ್ಟಾಗಿ ಸೇರಿ ಚುನಾವಣೆ ಗೆಲ್ಲಬೇಕು ಎಂದು ಆರ್. ಅಶೋಕ ಇಲ್ಲಿ ಹೇಳಿದರು. ಎಚ್.ಡಿ. ಕುಮಾರಸ್ವಾಮಿ ಮುಂದಿನ ಮುಖ್ಯಮಂತ್ರಿ ಎಂಬ ನಿಖಿಲ್ ಕುಮಾರಸ್ವಾಮಿ ಸೇರಿದಂತೆ ಜೆಡಿಎಸ್ ನಾಯಕರ ಹೇಳಿಕೆಗೆ ಮೇಲಿನಂತೆ ಪ್ರತಿಕ್ರಿಯಿಸಿದ ಅವರು, ಅವರವರ ಪಕ್ಷದ ವಿಚಾರವನ್ನು ಅವರವರು ಮಾತನಾಡುತ್ತಾರೆ. ಎನ್‌ಡಿಎ ವಿಚಾರದಲ್ಲಿ, ಮುಖ್ಯಮಂತ್ರಿ ವಿಚಾರವನ್ನು ಪ್ರಧಾನಿ ಮೋದಿ, ಪಕ್ಷದ ಅಧ್ಯಕ್ಷರು ಒಳಗೊಂಡ ಹೈಕಮಾಂಡ್ ತೀರ್ಮಾನಿಸುತ್ತದೆ ಎಂದರು.

ಕಿತ್ತೂರು ಕರ್ನಾಟಕ ಜೆಡಿಎಸ್ ಸಮಾವೇಶಲ್ಲಿ ಕುಮಾರಸ್ವಾಮಿ ಕಿಡಿ | ಸಂಪೂರ್ಣ ಅಧಿಕಾರ ಕೊಡಿ

ರಾಜ್ಯ ಸರಕಾರಕ್ಕೆ ಗ್ಯಾರಂಟಿ ಯೋಜನೆಗಳ ಭಾರ

ವಿಜಯಪುರ: ಲಕ್ಷಾಂತರ ಸರಕಾರಿ ಹುದ್ದೆಗಳು ಖಾಲಿ ಇವೆ. ಸಾವಿರಾರು ಶಿಕ್ಷಕರ ಹುದ್ದೆ ಖಾಲಿ ಇವೆ. ಕಲ್ಯಾಣ ಕರ್ನಾಟಕ, ಕಿತ್ತೂರ ಕರ್ನಾಟಕ ಎಂಬ ಹೆಸರು ಇರಿಸಿದ ಮಾತ್ರಕ್ಕೆ ಇಲ್ಲಿ ಅಭಿವೃದ್ಧಿ ಪರ್ವ ನಡೆದಿದೆಯೇ ಎಂದು ಬೃಹತ್ ಉಕ್ಕು ಮತ್ತು ಕೈಗಾರಿಕೆ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಕಿಡಿಕಾರಿದರು.

ವಿಜಯಪುರದಲ್ಲಿ ಆಯೋಜನೆ ಮಾಡಲಾಗಿದ್ದ ಕಿತ್ತೂರ ಕರ್ನಾಟಕ ಭಾಗದ ಜಿಲ್ಲೆಗಳ ಜೆಡಿಎಸ್ ಸಂಘಟನಾ ಸಮಾವೇಶದಲ್ಲಿ ಮಾತನಾಡಿದ ಅವರು, ರಾಜ್ಯ ಸರಕಾರದ ವಿರುದ್ಧ ಕಿಡಿಕಾರಿದರು. ಗ್ಯಾರಂಟಿ ಯೋಜನೆಗಳು ಸರಕಾರಕ್ಕೆ ಭಾರವಾಗಿದೆ. 2 ಸಾವಿರ ರು.ನೀಡಲು ಹಲವಾರು ರೀತಿಯ ತೆರಿಗೆ ಹೊರೆ ಹೊರೆಸಿದ ರಾಜ್ಯ ಕಾಂಗ್ರೆಸ್ ಸರಕಾರ ಬಡವರ ಬದುಕನ್ನು ಬೀದಿಗೆ ತಂದಿದೆ. ಬಡವರ ಬದುಕು ಬೇಡುವ ಬದುಕಾಗಬಾರದು, ದುಡಿಯುವ ಶಕ್ತಿ ಅವರಿಗೆ ಇರಬೇಕು ಎಂದರು.

ರಾಜ್ಯದ ದುಡ್ಡು ಎಲ್ಲಿಗೆ ಹೋಗುತ್ತಿದೆ. ಪ್ರೊ.ಗೋವಿಂದರಾವ್ ವರದಿ ಸಹ ಉ.ಕ. ಜಿಲ್ಲೆಗಳು ತೀರಾ ಹಿಂದುಳಿದಿವೆ ಎಂಬ ವರದಿ ನೀಡಿದೆ, ಹಾಗಾದರೆ ಆಳ್ವಿಕೆ ಮಾಡಿರುವ ಸರಕಾರ ಇಲ್ಲಿಯವರೆಗೆ ಮಾಡಿದ್ದೇನು? ಸುವರ್ಣಸೌಧದ ರೂವಾರಿ ನಾನು, ಆದರೆ ಅಡಿಗಲ್ಲಿನಲ್ಲಿ ನನ್ನ ಹೆಸರು ಇರಿಸದಂತೆ ಷಡ್ಯಂತ್ರ ಮಾಡಿದರು. ನನಗೆ ಯಾವ ಅಡಿಗಲ್ಲಿನಲ್ಲಿಯೂ ಹೆಸರು ಬೇಕಾಗಿಲ್ಲ, ನಿಮ್ಮ ಹೃದಯದಲ್ಲಿ ಹೆಸರು ಬೇಕಿದೆ ಎಂದರು.

ಬಿಜೆಪಿ-ಜೆಡಿಎಸ್ ಮೈತ್ರಿ ಪೂರ್ಣಾವಧಿ ಕೊಡಿ: ನನಗೆ ಬೇಕಾಗಿರುವುದು ಕನ್ನಡಿಗರ ಸಮೃದ್ಧ ಬದುಕು, ರೈತರ ಕಲ್ಯಾಣ, ಅಲ್ಪಸಂಖ್ಯಾತ, ಲಿಂಗಾಯತ, ದಲಿತ, ಹಿಂದುಳಿದ ವರ್ಗದ ಸಮುದಾಯ ಎಲ್ಲರೂ ಸೇರಿ ಮುಂದೆ ಬಿಜೆಪಿ-ಜೆಡಿಎಸ್ ಮೈತ್ರಿ ಸರಕಾರಕ್ಕೆ ಪೂರ್ಣಾವಧಿ ಅಧಿಕಾರ ಮಾಡುವ ನಿಟ್ಟಿನಲ್ಲಿ ಬಹುಮತದ ಆಶೀರ್ವಾದ ನೀಡಿ ಎಂದು ಕೋರಿ ಕೊಳ್ಳಲು ಇಲ್ಲಿಗೆ ಬಂದಿರುವೆ ಎಂದು ಕೋರಿದರು.

ಖರ್ಗೆ ಅವರು ಏಕೆ ಅಭಿವೃದ್ಧಿ ಮಾಡಲಿಲ್ಲ?: ಯಾದಗಿರಿಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾಜುನ ಖರ್ಗೆ ಅವರು ಮೈಸೂರು, ಕನಕಪುರದಂತೆ ಈ ಭಾಗವನ್ನು ಅಭಿವೃದ್ಧಿಪಡಿಸಿ ಎಂದು ಹೇಳಿದ್ದಾರೆ. ಆದರೆ ಖರ್ಗೆ ಅವರು ಈಗ ಅವರ ಮಗ ಅಧಿಕಾರದಲ್ಲಿಯೇ ಇದ್ದಾರೆ. ಉತ್ತರ ಕರ್ನಾಟಕದ ಪ್ರಗತಿಗೆ ಏಕೆ ಆದ್ಯತೆ ನೀಡಲಿಲ್ಲ. ಈ ರೀತಿಯ ಹೇಳಿಕೆ ಮೂಲಕ ಉತ್ತರ ಕರ್ನಾಟಕ-ದಕ್ಷಿಣ ಕರ್ನಾಟಕ ಎಂದು ಒಡಲು ಸೃಜಿಸಬೇಡಿ. ಬೇರೆ ರಾಜ್ಯದ ಕೂಗು ಮೊಳಗಿಸುತ್ತಿರುವವರು ಕರ್ನಾಟಕದ ಶತ್ರುಗಳು ಎಂದು ಗುಡುಗಿದರು.

ವಿಜಯಪುರದಲ್ಲಿ ನಡೆದ ಕಿತ್ತೂರು ಕರ್ನಾಟಕ ಭಾಗದ ಜೆಡಿಎಸ್ ಸಮಾವೇಶವನ್ನು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಉದ್ಘಾಟಿಸಿದರು.

ಯುಕೆಪಿ ವಿಚಾರದಲ್ಲಿ ಕಾಂಗ್ರೆಸ್ ಮಾತು ತಪ್ಪಿದೆ

ಚುನಾವಣೆ ಬಂದಾಗ ಮಾತ್ರ ಕಾಂಗ್ರೆಸ್‌ನವರಿಗೆ ಕೃಷ್ಣೆ ನೆನಪಾಗುತ್ತಾಳೆ. ಕಾಂಗ್ರೆಸ್ ನಡಿಗೆ-ಕೃಷ್ಣೆಯ ಕಡೆಗೆ ಎಂದು ಪಾದಯಾತ್ರೆ ಸಹ ಮಾಡಿದರು, ಲಕ್ಷ ಕೋಟಿ ರು. ಅನುದಾನ ನೀಡುವ ವಾಗ್ದಾನ ಸಹ ನೀಡಿದ್ದರು, ಈ ವಾಗ್ದಾನದ ಬಲದಿಂದ ಅಧಿಕಾರಕ್ಕೆ ಬಂದ ಕಾಂಗ್ರೆಸ್ ತಾನು ನೀಡಿದ ಮಾತು ಈಡೇರಿಸಲಿಲ್ಲ. ಅಂದೇ ಯುಕೆಪಿ ಯೋಜನೆಗೆ ಆದ್ಯತೆ ನೀಡಿದ್ದರೆ ಯೋಜನಾ ವೆಚ್ಚ ಏರಿಕೆಯಾಗುತ್ತಿರಲಿಲ್ಲ. ಆದರೆ ಕಾಂಗ್ರೆಸ್ ಪಾಪದ ಫಲವಾಗಿ ಈ ಯೋಜನಾ ವೆಚ್ಚ 87 ಸಾವಿರ ಕೋಟಿ ರು.ಗೆ ಏರಿಕೆಯಾಗಿದೆ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಆಕ್ರೋಶ ವ್ಯಕ್ತಪಡಿಸಿದರು.

ನಾನು 2 ಬಾರಿ ಮುಖ್ಯಮಂತ್ರಿ ಯಾಗಿರುವೆ, ನನ್ನ ಅವಧಿಯಲ್ಲಿ ಯಾವೊಬ್ಬ ಗುತ್ತಿಗೆದಾರರು ಕುಮಾರಸ್ವಾಮಿ ಅವರಿಗೆ ಕಮಿಷನ್ ಕೊಟ್ಟಿದ್ದೇವೆ ಎಂದು ಹೇಳುವುದಿಲ್ಲ. ಪಾರದರ್ಶಕವಾಗಿ ಗುತ್ತಿಗೆದಾರರಿಗೆ ಬಿಲ್ ನೀಡುವ ವ್ಯವಸ್ಥೆ ನನ್ನ ಅವಧಿಯಲ್ಲಿತ್ತು. ಈಗ ಕಮಿಷನ್ ದಂಧೆಯಿಂದ ರಾಜ್ಯದ ಜನತೆಯನ್ನು ಕಾಂಗ್ರೆಸ್ ಸರಕಾರ ಲೂಟಿ ಮಾಡುತ್ತಿದೆ.

-ಎಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

ಜಿಮ್ ತರಬೇತುದಾರನಿಗೆ ಯುವತಿ ಚಾಕು ಇರಿತ



ರಾಮನಗರ: ಪ್ರೇಮ ವೈಫಲ್ಯದಿಂದ ಬೇಸತ್ತ ಯುವತಿಯೊಬ್ಬಳು ತನ್ನಿಂದ ಅಂತರ ಕಾಯ್ದುಕೊಂಡಿದ್ದ ಜಿಮ್ ತರಬೇತುದಾರ ಪ್ರೇಮಿಗೆ ಚಾಕುವಿನಿಂದ ಇರಿದು ಕೊಲೆಗೆ ಯತ್ನಿಸಿರುವ ಘಟನೆ ಪಟ್ಟಣದ ಸಿಲ್ಕ್ ಫಾರ್ಮ್ ಕ್ವಾಟ್ರಸ್ ಬಳಿ ಗುರುವಾರ ರಾತ್ರಿ ನಡೆದಿದೆ. ವೇಣುಗೋಪಾಲ್ (27) ಚಾಕುವಿಂದ ಹಲ್ಲೆಗೊಳಗಾಗಿ ಗಾಯಗೊಂಡಿದ್ದು, ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಕೃತ್ಯ ಎಸಗಿರುವ 30 ವರ್ಷದ ಸುಧಾ ಘಟನೆ ಬಳಿಕ ಬಿಡದಿ ಪೊಲೀಸ್ ಠಾಣೆಗೆ ಶರಣಾಗಿದ್ದಾಳೆ. ಪಟ್ಟಣದ ಜಿಮ್‌ನಲ್ಲಿ ಟ್ರೈನರ್ ಆಗಿರುವ ವೇಣುಗೋಪಾಲ್ ಮತ್ತು ಸುಧಾ ಎರಡು ವರ್ಷದಿಂದ ಪ್ರೀತಿಸುತ್ತಿದ್ದರು. ಕೆಲ ದಿನಗಳಿಂದ ಸುಧಾ ಜತೆ ವೇಣುಗೋಪಾಲ್ ಅಂತರ ಕಾಯ್ದುಕೊಂಡಿದ್ದರು. ಮೊಬೈಲ್ ಕರೆ ಸಹ ಸ್ವೀಕರಿಸುತ್ತಿರಲಿಲ್ಲ ಎಂದು ಪೊಲೀಸರು ತಿಳಿಸಿದರು. ಇದರಿಂದ ಬೇಸತ್ತ ಸುಧಾ, ತನಗೆ ಮೋಸ ಮಾಡುತ್ತಿರುವ ಯುವಕನ ವಿರುದ್ಧ ಸೇಡು ತೀರಿಸಿಕೊಳ್ಳಲು ನಿರ್ಧರಿಸಿದ್ದಾಳೆ. ಮಾತನಾಡಬೇಕಿದೆ ಎಂದು ಗುರುವಾರ ರಾತ್ರಿ ಯುವಕನನ್ನು ತನ್ನ ಮನೆ ಬಳಿಗೆ ಕರೆಯಿಸಿಕೊಂಡು ಚಾಕುವಿನಿಂದ ಚುಚ್ಚಿದ್ದಾಳೆ.

ಸಂಪಾದಕೀಯ

ಸುಸ್ಥಿರ ಬುನಾದಿಗೊಂದು ಇಟ್ಟಿಗೆ

ಕೆಲ ದಿನಗಳ ಹಿಂದಷ್ಟೇ ಐರೋಪ್ಯ ಒಕ್ಕೂಟದ ದೇಶಗಳೊಂದಿಗೆ, ತರುವಾಯದಲ್ಲಿ 'ದೊಡ್ಡಣ್ಣ' ಅಮೆರಿಕದೊಂದಿಗೆ ಭಾರತವು ವ್ಯಾಪಾರ ಒಪ್ಪಂದಗಳನ್ನು ಮಾಡಿಕೊಂಡಿದ್ದು ಗೊತ್ತಿರುವ ಸಂಗತಿಯೇ. ಗೊತ್ತಿದ್ದೋ ಗೊತ್ತಿಲ್ಲದೆಯೋ ತಲೆದೋರಿದ್ದ ಆರ್ಥಿಕ ಅನಿಶ್ಚಿತತೆಗಳನ್ನು ತಹಬಂದಿಗೆ ತರುವ ನಿಟ್ಟಿನಲ್ಲಿ ಈ ಎರಡು ಒಪ್ಪಂದಗಳು ಮಹತ್ವದ ಪಾತ್ರವನ್ನು ವಹಿಸಲಿವೆ ಎಂದು ವ್ಯಾಖ್ಯಾನಿಸಲಾಗಿತ್ತು. ಇದರ ಮುಂದುವರಿದ ಭಾಗವೆಂಬಂತೆ ಭಾರತವು ಈಗ ಇಸ್ರೇಲ್‌ನ ಜತೆಗೂ ಮುಕ್ತ ವ್ಯಾಪಾರ ಒಪ್ಪಂದಕ್ಕೆ ಅಡಿಯಿಟ್ಟಿದೆ. ಇದು ನಿಜಕ್ಕೂ ಶ್ಲಾಘನೀಯ ಬೆಳವಣಿಗೆಯೇ ಸರಿ. ಏಕೆಂದರೆ, ಕ್ಷಿಪಣಿ ನಿರೋಧಕ ತಂತ್ರಜ್ಞಾನ ಸೇರಿದಂತೆ ರಕ್ಷಣಾ ವಲಯಕ್ಕೆ ಸಂಬಂಧಿಸಿದ ಹಲವು ಹೆಜ್ಜೆಗಳು ಇದರಲ್ಲಿ ಅಂತರ್ಗತವಾಗಿವೆ. ಇಸ್ರೇಲ್ ಜತೆಗಿನ ವ್ಯಾಪಾರ ವರ್ಧನೆ, ಭಯೋತ್ಪಾದನಾ ನಿಗ್ರಹದ ಆಶಯಕ್ಕೆ ಪರಸ್ಪರ ಕೈಜೋಡಿಸುವಿಕೆ ಮುಂತಾದ ಆಶಯಗಳೂ ಇಲ್ಲಿ ಹೊಮ್ಮಿವೆ. ಅಂತಾರಾಷ್ಟ್ರೀಯ ಬಾಂಧವ್ಯ ಎಂಬುದು ಯಾವುದೇ ರಾಷ್ಟ್ರದ ಪಾಲಿಗೆ ಮಹತ್ತರ ಅಂಶವೇ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಈ ಅಂಶಕ್ಕೆ ಸಾಕಷ್ಟು ಮಹತ್ವವನ್ನು ಕೊಡುತ್ತಲೇ ಬರಲಾಗಿದೆ. ಆದರೆ ಕಳೆದೊಂದು ದಶಕದಲ್ಲಿ ಈ ಬಾಂಧವ್ಯಕ್ಕೆ ವಿಭಿನ್ನ ಆಯಾಮ ದೊರೆತಿರುವುದಲ್ಲದೆ, ಭಾರತವನ್ನು 'ಹಾವಾಡಿಗರ ದೇಶ' ಎಂದೇ ಕರೆಯುತ್ತಿದ್ದ ವಿಶ್ವದ ಕೆಲ ದೇಶಗಳೂ ತಮ್ಮ ಆ ಗ್ರಹಿಕೆಯನ್ನು ಕೈಬಿಟ್ಟು ಭಾರತದ ಸ್ನೇಹಕ್ಕೆ ಹಾತೊರೆಯುವಂಥ ವಾತಾವರಣವನ್ನು ಈ ಕಾಲಘಟ್ಟವು ಹುಟ್ಟುಹಾಕಿದೆ ಎಂದರೆ ಅತಿಶಯೋಕ್ತಿ ಆಗಲಾರದು. ಭಾರತವು 'ವಿಶ್ವಗುರು' ಎನಿಸಿಕೊಳ್ಳಲು ಏನೆಲ್ಲಾ ಹೆಜ್ಜೆಗಳನ್ನು ಇಡಬೇಕಿದೆಯೋ, ಯಾವೆಲ್ಲಾ ಸತ್ವಪರೀಕ್ಷೆಗಳಿಗೆ ಒಡ್ಡಿಕೊಳ್ಳಬೇಕಿದೆಯೋ, ಅವೆಲ್ಲವೂ ಯಥೋಚಿತವಾಗಿ ಕೈಗೂಡುತ್ತಿವೆ ಎಂಬುದು ಸಮಾಧಾನಕರ ಸಂಗತಿ. ಅದು ಸಾರ್ಥಕ ರಾಷ್ಟ್ರನಾಯಕತ್ವದ ದ್ಯೋತಕವೂ ಹೌದು...

ಸೊಂಪಾದಕೀಯ

'ಬೇಟಿ'ಗಿಂತ 'ರೋಟಿ' ಮುಖ್ಯ

ಸಾವಿರ ಸುಳ್ಳು ಹೇಳಿ ಒಂದು ಮದುವೆ ಮಾಡು ಅಂತಾರೆ. ಅದರ ಜತೆಗೆ, ಒಂದು ಮದುವೆ ಆಗೋದು ಎಷ್ಟು ಕಷ್ಟ ಅಂತನೂ ಇಂದಿನ ನಮ್ಮ ಹುಡುಗರಿಗೆ ಗೊತ್ತು. ಹುಡುಗಿ ಸಿಗ್ತಾ ಇಲ್ಲ ಅಂತ ವಯಸ್ಸು ಮೀರಿ ಹೋದರೂ ಅನೇಕ ಹುಡುಗರು ಪಾಪ ಸಿಂಗಲ್ ಆಗಿಯೇ ಕಾಲ ತಳ್ಳುತ್ತಿದ್ದಾರೆ. ಜೀವನದಲ್ಲಿ ರೋಟಿ, ಕಪಡಾ, ಮಕಾನ್ ಎಲ್ಲ ಮಾಡಿಕೊಂಡು ಸ್ಥಿತಿವಂತರಾಗಿದ್ದರೂ, ರೈತರ ಮಕ್ಕಳು ಅನ್ನೋ ಕಾರಣಕ್ಕೆ ಕೆಲವರಿಗೆ ಹೆಣ್ಣು ಸಿಗುತ್ತಿಲ್ಲ. ಆದರೆ ವರ ಮಹಾಶಯ ನಿರಾಯಾಸವಾಗಿ ಪಾಲಿಗೆ ಬಂದ ಪಂಚಾಮೃತವನ್ನು ಕಾಲಿನಿಂದ ಒದ್ದ ಸುದ್ದಿ ಒಂದು ವರ್ಷದ ಹಿಂದೆ ವರದಿಯಾಗಿತ್ತು. ಅದೇನೋ ಹೇಳ್ತಾರಲ್ಲ 'ಹಲ್ಲಿದ್ದವರಿಗೆ ಕಡಲೆ ಇಲ್ಲ, ಕಡಲೆ ಇದ್ದವರಿಗೆ ಹಲ್ಲಿಲ್ಲ' ಅಂತ, ಹಾಗೆ. ಲಖನೌದಲ್ಲಿ ನಡೆಯುತ್ತಿದ್ದ ಮದುವೆಯೊಂದರಲ್ಲಿ ಈ ವರ ತೆಗೆದ ವರಾತ ಏನು ಅಂತ ಕೇಳಿದರೆ ನೀವು ಬೆರಗಾಗುತ್ತೀರಿ. ಒಂದು ಕಡೆ ವಧು ಸಿಂಗರಿಸಿಕೊಂಡು ಹಸೆಮಣೆ ಏರಲು ಸಿದ್ಧಳಾಗುತ್ತಿದ್ದರೆ, ಅತ್ತ ಅತ್ತೆ ಮನೆಯ ಊಟದ ಮನೆಯಲ್ಲಿ ಬಾಳೆ ಎಲೆ ಮುಂದೆ ವರ ತನ್ನ ವರಸೆ ತೋರಿಸಿದನಂತೆ. ವರ ಮತ್ತು ಅವನ ಕುಟುಂಬ ವಧುವಿನ ಮನೆಯಲ್ಲಿ ಊಟ ಸೇವಿಸುವಾಗ ರೋಟಿ ಬರೋದು ತಡ ಆಯ್ತು ಅಂತ ಯಾರೋ ತೆಗೆದ ಕ್ಯಾತೆಗೆ ವರ ಕೂಡಾ ಸೇರಿಕೊಂಡನಂತೆ. ನಂತರ ಜಗಳ ದೊಡ್ಡದಾಗಿ ಅದನ್ನೇ ನೆಪವಾಗಿಸಿಕೊಂಡು ಮದುವೆ ಮನೆಯನ್ನೇ ಬಿಟ್ಟು ಹೊರಟನಂತೆ. ಹಾಗಾಗಿ ಮದುವೆ ನಿಂತುಹೋಯಿತು. ಆದರೆ ವಧುವಿನ ಕುಟುಂಬಕ್ಕೆ 1.5 ಲಕ್ಷ ರುಪಾಯಿ ವರದಕ್ಷಿಣೆ ಸೇರಿದಂತೆ ಒಟ್ಟು 7 ಲಕ್ಷ ರುಪಾಯಿ ಲಾಸ್ ಎದುರಾಯಿತಂತೆ. ಇದರಿಂದ ರೊಚ್ಚಿಗೆದ್ದ ವಧುವು, ವರ ಮತ್ತು ಅವನ ಕುಟುಂಬದ ವಿರುದ್ಧ ಕೇಸು ದಾಖಲು ಮಾಡಿ ಎಫ್‌ಐಆರ್ ಕೂಡ ಫೈಲ್ ಮಾಡಿಸಿದಳಂತೆ. ಮದುವೆ ಮನೆಯಲ್ಲಿ ಅತ್ತೆ-ಮಾವ ಕೊಡೋ 'ಬೇಟಿ'ಗಿಂತ 'ರೋಟಿ'ಯೇ ಮುಖ್ಯ ಅನ್ನೋ ವರ, ರಾತ್ರೋರಾತ್ರಿ ಇನ್ನೊಬ್ಬಳನ್ನು ಮದುವೆ ಕೂಡ ಆಗಿದ್ದನ್ನು ನೋಡಿ ಮದುವೆಗೆ ಭೇಟಿ ಕೊಟ್ಟ ನೆಂಟರಿಷ್ಟರು ಮಾತ್ರ, 'ಅಯ್ಯೋ ದೇವ್ರೇ, ಹೀಗೂ ಉಂಟೆ' ಅಂತ ಮೂಗಿನ ಮೇಲೆ ಬೆರಳಿಟ್ಟುಕೊಂಡರಂತೆ!

ಸಂಪಾದಕರ ಸದ್ಯಶೋಧನೆ

ಪ್ರೋಟಿಯಾ ಎಂಬ ಹೂವಿನ ಕುರಿತು

ದಕ್ಷಿಣ ಆಫ್ರಿಕಾದ ಹೆಮ್ಮೆಯ ಸಂಕೇತವಾದ 'ಪ್ರೋಟಿಯಾ' (Protea) ಹೂವು ಜಗತ್ತಿನ ಅತ್ಯಂತ ಸುಂದರ ಮತ್ತು ವಿಶಿಷ್ಟ ಪುಷ್ಪಗಳಲ್ಲಿ ಒಂದು. ಇದು ದಕ್ಷಿಣ ಆಫ್ರಿಕಾದ ಸಾಂಸ್ಕೃತಿಕ ಅನನ್ಯತೆ, ನೈಸರ್ಗಿಕ ವೈವಿಧ್ಯ ಮತ್ತು ಅಚಲ ಚೇತನದ ಪ್ರತೀಕ. ಪ್ರೋಟಿಯಾ ಹೂವು 'ಪ್ರೋಟಿಯೇಸಿ' (Proteaceae) ಕುಟುಂಬಕ್ಕೆ ಸೇರಿದೆ. ಈ ಕುಟುಂಬವು ಸುಮಾರು 300 ದಶಲಕ್ಷ ವರ್ಷಗಳಷ್ಟು ಹಳೆಯದಂತೆ. ಅಂದರೆ, ಇದು ಡೈನೋಸಾರ್‌ಗಳ ಕಾಲದಿಂದಲೂ ಭೂಮಿಯ ಮೇಲಿದೆ! ಈ ಹೂವಿಗೆ 'ಪ್ರೋಟಿಯಾ' ಎಂಬ ಹೆಸರು ಬಂದಿದ್ದು ಗ್ರೀಕ್ ಪುರಾಣದ ಸಮುದ್ರ ದೇವನಾದ 'ಪ್ರೋಟಿಯಸ್'ನಿಂದ. ಪ್ರೋಟಿಯಸ್ ದೇವನು ತನ್ನ ರೂಪವನ್ನು ಹೇಗೆ ಬೇಕೋ ಹಾಗೆ ಬದಲಾಯಿಸಿಕೊಳ್ಳುವ ಶಕ್ತಿ ಹೊಂದಿದ್ದ. ಪ್ರೋಟಿಯಾ ಹೂವುಗಳು ಸಹ ನೂರಾರು ವೈವಿಧ್ಯಮಯ ರೂಪ, ಬಣ್ಣ ಮತ್ತು ಗಾತ್ರಗಳಲ್ಲಿ ಕಂಡುಬರುವುದರಿಂದ ಈ ಹೆಸರು ಇದಕ್ಕೆ ಅನ್ವರ್ಥವಾಗಿದೆ. 1976ರಲ್ಲಿ ಕಿಂಗ್ 'ಪ್ರೋಟಿಯಾ'ವನ್ನು ದಕ್ಷಿಣ ಆಫ್ರಿಕಾದ ಅಧಿಕೃತ ರಾಷ್ಟ್ರೀಯ ಹೂವು ಎಂದು ಘೋಷಿಸಲಾಯಿತು. ಇದು ದೇಶದ ನೈಸರ್ಗಿಕ ಸೌಂದರ್ಯವನ್ನು ಪ್ರತಿನಿಧಿಸುವುದಲ್ಲದೇ, ದಕ್ಷಿಣ ಆಫ್ರಿಕಾದ ಕ್ರಿಕೆಟ್ ತಂಡಕ್ಕೆ 'ಪ್ರೋಟಿಯಾಸ್' ಎಂಬ ಹೆಸರನ್ನು ನೀಡುವ ಮೂಲಕ ಕ್ರೀಡಾಲೋಕದಲ್ಲೂ ಪ್ರಸಿದ್ಧವಾಗಿದೆ. ಪ್ರೋಟಿಯಾ ತಳಿಗಳಲ್ಲಿ ಕಿಂಗ್ 'ಪ್ರೋಟಿಯಾ' ಅತ್ಯಂತ ಆಕರ್ಷಕವಾದುದು. ಇದು ಪ್ರೋಟಿಯಾ ಕುಟುಂಬದಲ್ಲೇ ಅತಿ ದೊಡ್ಡ ಹೂವು. ಇದರ ವ್ಯಾಸವು ಸುಮಾರು 12 ಇಂಚುಗಳವರೆಗೆ ಇರಬಹುದು. ಇದು ದೊಡ್ಡ ಕಪ್ ಅಥವಾ ಬೌಲ್ ಆಕಾರದಲ್ಲಿರುತ್ತದೆ. ಇದರ ಸುತ್ತಲೂ ದಳಗಳಂತೆ ಕಾಣುವ 'ಬ್ರಾಕ್ಟ್ಸ್' (Bracts) ಎಂಬ ಎಲೆಗಳಿರುತ್ತವೆ. ಇವು ಗುಲಾಬಿ, ಬಿಳಿ ಅಥವಾ ಕೆಂಪು ಬಣ್ಣದಲ್ಲಿರುತ್ತವೆ. ಕಿಂಗ್ ಪ್ರೋಟಿಯಾ ಗಿಡಗಳು ತುಂಬಾ ಗಟ್ಟಿಮುಟ್ಟು. ಕಠಿಣ ಹವಾಮಾನವನ್ನೂ ತಡೆದುಕೊಳ್ಳಬಲ್ಲವು. ಪ್ರೋಟಿಯಾಗಳು ಮುಖ್ಯವಾಗಿ ದಕ್ಷಿಣ ಆಫ್ರಿಕಾದ 'ಫೈನ್ಬೋಸ್' ಸಸ್ಯವರ್ಗದಲ್ಲಿ ಬೆಳೆಯುತ್ತವೆ. ಇದು ಕೇಪ್ ಪ್ರಾಂತ್ಯದಲ್ಲಿ ಕಂಡುಬರುವ ವಿಶ್ವದ ಅತ್ಯಂತ ಶ್ರೀಮಂತ ಸಸ್ಯವೈವಿಧ್ಯದ ಪ್ರದೇಶವಾಗಿದೆ. ಇವು ಪೋಷಕಾಂಶಗಳಿಲ್ಲದ, ಆಮ್ಲೀಯ ಗುಣ ಹೊಂದಿದ ಮಣ್ಣಿನಲ್ಲಿ ಚೆನ್ನಾಗಿ ಬೆಳೆಯುತ್ತವೆ. ಪ್ರೋಟಿಯಾಗಳ ಜೀವನಚಕ್ರದಲ್ಲಿ ಕಾಡ್ಗಿಚ್ಚು ಪ್ರಮುಖ ಪಾತ್ರ ವಹಿಸುತ್ತದೆ. ಕಾಡ್ಗಿಚ್ಚಿನ ನಂತರ ಬೂದಿಯಾದ ನೆಲದಲ್ಲಿ ಇವುಗಳ ಬೀಜಗಳು ಮೊಳಕೆಯೊಡೆಯುತ್ತವೆ. ಬೆಂಕಿಯು ಹಳೆಯ ಗಿಡಗಳನ್ನು ನಾಶಪಡಿಸಿ, ಹೊಸ ಗಿಡಗಳಿಗೆ ಸೂರ್ಯನ ಬೆಳಕು ಸಿಗುವಂತೆ ಮಾಡುತ್ತದೆ. ಇದು ಪ್ರಕೃತಿಯ ಒಂದು ಅದ್ಭುತ ಮರುಜನ್ಮದ ಪ್ರಕ್ರಿಯೆ. ದಕ್ಷಿಣ ಆಫ್ರಿಕಾದಲ್ಲಿ ಸುಮಾರು 80ಕ್ಕೂ ಹೆಚ್ಚು ಪ್ರೋಟಿಯಾ ಪ್ರಭೇದಗಳಿವೆ. ಅವುಗಳಲ್ಲಿ ಪ್ರಮುಖವಾದದು ಪರಿಮಳಯುಕ್ತ ಪ್ರೋಟಿಯಾ. ಇವು ಮಧುರವಾದ ಸುಗಂಧವನ್ನು ಹರಡುತ್ತವೆ. ಇನ್ನೊಂದು ಶುಗರ್‌ಬಶ್. ಇವುಗಳಲ್ಲಿ ಅತಿಯಾದ ಮಕರಂದವಿರುತ್ತದೆ. ಹಳೆಯ ಕಾಲದಲ್ಲಿ ಜನರು ಈ ಮಕರಂದವನ್ನು ಸಂಗ್ರಹಿಸಿ ಸಕ್ಕರೆಯ ಪರ್ಯಾಯವಾಗಿ ಬಳಸುತ್ತಿದ್ದರು. ಹಾಗೇ ಮತ್ತೊಂದು ಪಿನ್-ಕುಶನ್ ಪ್ರೋಟಿಯಾ. ಇವು ನೋಡಲು ಪಿನ್ ಚುಚ್ಚಿದ ದಿಂಬಿನಂತೆ ಕಾಣುತ್ತವೆ, ಆದ್ದರಿಂದ ಈ ಹೆಸರು. ಪ್ರೋಟಿಯಾ ಹೂವುಗಳು ಪರಿಸರದ ಸರಪಳಿಯಲ್ಲಿ ಮಹತ್ವದ ಸ್ಥಾನ ಹೊಂದಿವೆ. ಇವುಗಳಲ್ಲಿನ ಹೇರಳವಾದ ಮಕರಂದವು ಪಕ್ಷಿಗಳಿಗೆ (ವಿಶೇಷವಾಗಿ ಸಕ್ಕರೆ ಹಕ್ಕಿ ಅಥವಾ Sugarbirds) ಮತ್ತು ಕೀಟಗಳಿಗೆ ಪ್ರಮುಖ ಆಹಾರವಾಗಿದೆ. ಪಕ್ಷಿಗಳು ಮಕರಂದ ಕುಡಿಯುವಾಗ ಪರಾಗಸ್ಪರ್ಶಕ್ಕೆ ಸಹಾಯ ಮಾಡುತ್ತವೆ. ದಕ್ಷಿಣ ಆಫ್ರಿಕಾದ 'ಕರ್ಸ್ಟನ್ ಬಾಷ್' ಸಸ್ಯೋದ್ಯಾನದಲ್ಲಿ ಪ್ರೋಟಿಯಾಗಳನ್ನು ನೋಡಲು ಜಗತ್ತಿನಾದ್ಯಂತ ಪ್ರವಾಸಿಗರು ಬರುತ್ತಾರೆ. ದೀರ್ಘಕಾಲದವರೆಗೆ ಬಾಡುವುದಿಲ್ಲವಾದ್ದರಿಂದ, ಇವುಗಳಿಗೆ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಭಾರಿ ಬೇಡಿಕೆ. ಮದುವೆ ಸಮಾರಂಭಗಳಲ್ಲಿ ಮತ್ತು ಪುಷ್ಪಗುಚ್ಛಗಳಲ್ಲಿ ಇವುಗಳನ್ನು ಹೆಚ್ಚಾಗಿ ಬಳಸಲಾಗುತ್ತದೆ. ಈ ಹೂವು ಬದಲಾವಣೆ ಮತ್ತು ಧೈರ್ಯದ ಸಂಕೇತ. ಯಾವುದೇ ಕಠಿಣ ಪರಿಸ್ಥಿತಿಯಲ್ಲೂ (ಬೆಂಕಿಯಲ್ಲೂ) ಬದುಕುಳಿಯುವ ಇದರ ಗುಣ ಮಾನವನ ಚೇತರಿಸಿಕೊಳ್ಳುವ ಶಕ್ತಿಗೆ ಉದಾಹರಣೆಯಾಗಿದೆ. ಇಂದು ಹವಾಮಾನ ವೈಪರೀತ್ಯ ಮತ್ತು ನಗರೀಕರಣದಿಂದಾಗಿ ಕೆಲವು ಪ್ರೋಟಿಯಾ ಪ್ರಭೇದಗಳು ಅಳಿವಿನ ಅಂಚಿನಲ್ಲಿವೆ. ದಕ್ಷಿಣ ಆಫ್ರಿಕಾ ಸರಕಾರ ಇವುಗಳನ್ನು ಉಳಿಸಲು ಅನೇಕ ಸಂರಕ್ಷಿತ ಪ್ರದೇಶಗಳನ್ನು ಘೋಷಿಸಿದೆ. ಪ್ರೋಟಿಯಾ ಹೂವು ಕೇವಲ ದಕ್ಷಿಣ ಆಫ್ರಿಕಾದ ನಿಸರ್ಗದತ್ತ ಕೊಡುಗೆಯಲ್ಲ, ಅದು ಆ ದೇಶದ ಇತಿಹಾಸ ಮತ್ತು ಬದುಕಿನ ಅವಿಭಾಜ್ಯ ಅಂಗ. ಬೆಂಕಿಯಲ್ಲೂ ಸುಟ್ಟು ಹೋಗದೇ ಪುನಃ ಚಿಗುರುವ ಇದರ ಗುಣವು ನಮಗೆ ಸದಾ ಆಶಾವಾದಿಯಾಗಿರಲು ಪ್ರೇರೇಪಿಸುತ್ತದೆ.

ಸಮಸ್ಯೆಗಳ ಸೂತ್ರಧಾರ ನೆಹರು

ಮೋಹನ್ ವಿಶ್ವ
ವೀಕೆಂಡ್ ವಿತ್ ಮೋಹನ್
vveditoped@gmail.com

ಅಧಿಕಾರ ಮತ್ತು ಸ್ವಾರ್ಥಕ್ಕಾಗಿ ಏನನ್ನಾದರೂ ಮಾಡಲು ಸಿದ್ಧವಿದ್ದ ನೆಹರುರವರ ಕೈಗೆ ಸ್ವತಂತ್ರ ಭಾರತದ ಮೊದಲ ಆಡಳಿತ ಸಿಕ್ಕಿತು. ಅಧಿಕಾರಕ್ಕಾಗಿ ಬಾಬಾಸಾಹೇಬ್ ಅಂಬೇಡ್ಕರ್ ಅವರನ್ನು ಅವರ ಶಿಷ್ಯನಿಂದಲೇ ಚುನಾವಣೆಯಲ್ಲಿ ಸೋಲುವಂತೆ ಮಾಡಿದ್ದು ನೆಹರು. 1955ರಲ್ಲಿ ನೆಹರು ಪ್ರಧಾನಮಂತ್ರಿಯಾಗಿದ್ದಾಗ ಭಾರತಕ್ಕೆ ಅಮೆರಿಕವು ಸುವರ್ಣಾವಕಾಶವೊಂದನ್ನು ನೀಡಿತ್ತು. ಚೀನಾವನ್ನು ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಿಂದ ಹೊರಗಿಟ್ಟು ಭಾರತವನ್ನು 'ಶಾಶ್ವತ ಸದಸ್ಯ'ನಾಗುವಂತೆ ಹೇಳಿತ್ತು. ಆ ಅವಕಾಶವನ್ನು ಬಳಸಿಕೊಳ್ಳದ ನೆಹರು ಅಮೆರಿಕದ ಸೂಚನೆಯನ್ನು ತಿರಸ್ಕರಿಸಿದರು. ದೇಶದ ಎಲ್ಲಾ ರಾಜ್ಯದ ಮುಖ್ಯಮಂತ್ರಿಗಳಿಗೆ ಬರೆದ ಪತ್ರದಲ್ಲಿ ನೆಹರು ಹೇಳಿದ್ದು ಹೀಗಿತ್ತು: 'ನಾವು ಚೀನಾವನ್ನು ಭದ್ರತಾ ಮಂಡಳಿಯಿಂದ ದೂರವಿಡುವುದು ಅನ್ಯಾಯದ ಕೆಲಸ. ಆದ್ದರಿಂದ ಅಮೆರಿಕದ ಸಲಹೆಯನ್ನು ನಾವು ತಿರಸ್ಕರಿಸಬೇಕು. ಭಾರತದ ಈಗಿನ ಪರಿಸ್ಥಿತಿಯಲ್ಲಿ ಭದ್ರತಾ ಮಂಡಳಿಯ ಸದಸ್ಯರಾಗುವುದು ಸರಿಯಲ್ಲ. ಮೊದಲು ಚೀನಾ ದೇಶಕ್ಕೆ ದಕ್ಕಬೇಕಿರುವ ಅಧಿಕಾರವನ್ನು ನೀಡಿದ ಮೇಲಷ್ಟೇ ಅಮೆರಿಕವು ಭಾರತವನ್ನು ಪರಿಗಣಿಸಲಿ'. ನೆಹರು ಬರೆದ ಈ ಪತ್ರ, ಭಾರತದ ಬಗೆಗಿನ ಅವರ ದೂರದೃಷ್ಟಿಯ ಕೊರತೆಯನ್ನು ಎತ್ತಿ ತೋರಿಸುತ್ತದೆ.

ಅಂದಿನ ಕಾಲದಲ್ಲಿ ಅಮೆರಿಕ ಎರಡನೇ ಮಹಾಯುದ್ಧದಲ್ಲಿ ವಿಜಯಶಾಲಿಯಾಗಿ ಜಗತ್ತಿನ ದೊಡ್ಡಣ್ಣನಾಗಿ ಹೊರಹೊಮ್ಮಿತ್ತು. ಜಗತ್ತಿನಲ್ಲಿ ಚೀನಾದ ಗುರುತೇ ಇಲ್ಲದ ಸಮಯದಲ್ಲಿ, ಅಮೆರಿಕದ ಮಾತನ್ನು ನೆಹರು ಕೇಳಲಿಲ್ಲ. ಅಂದು ಚೀನಾ ದೇಶದ ಪರವಾಗಿ ನಿಂತ ಭಾರತಕ್ಕೆ ಸಿಕ್ಕ ಉಡುಗೊರೆ ಏನು? 1962ರಲ್ಲಿ ಕಾಲು ಕೆದರಿಕೊಂಡು ಚೀನಾ ಯುದ್ಧಕ್ಕೆ ಬಂತು. ಇಂದಿಗೂ ಡೋಕ್ಲಾಂ ವಿಚಾರದಲ್ಲಿ ಜಗಳ ಮಾಡುತ್ತಲೇ ಇದೆ. ಅಂದು ಚೀನಾದ ಪರವಾಗಿ ನೆಹರು ನಿಂತರು. ಇಂದು ಚೀನಾ ದೇಶವು, ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿನ ಭಾರತದ ಶಾಶ್ವತ ಸದಸ್ಯತ್ವಕ್ಕೆ ಅಡ್ಡಗಾಲು ಹಾಕುತ್ತಿದೆ. ಪ್ರತಿಯೊಂದು ಬಾರಿಯೂ ಜಗತ್ತಿನ ಇತರ ದೇಶಗಳು ಭಾರತದ ಪರವಾಗಿ ನಿಂತರೂ ಚೀನಾ ಮಾತ್ರ ಭಾರತದ ಪರವಾಗಿ ನಿಲ್ಲುತ್ತಿಲ್ಲ. ನೆಹರು ಮಾಡಿದ್ದ ಪ್ರಮಾದವನ್ನು ಅವರದ್ದೇ ಪಕ್ಷದ ನಾಯಕ ಶಶಿ ತರೂರ್ ಒಪ್ಪಿಕೊಂಡಿದ್ದರು. ಪ್ರಧಾನಿಯಾದವರು ತಮ್ಮ ದೇಶವನ್ನು ಮುಂದುವರಿಸಲು ಬಯಸುತ್ತಾರೋ ಅಥವಾ ಬೇರೆಯವರಿಗೆ ಸಹಾಯಮಾಡಿ ತಾವು ಹಿಂದೆ ಹೋಗಲು ಬಯಸುತ್ತಾರೋ? ಆ ಮಟ್ಟದ ತಿಳುವಳಿಕೆ ಇಲ್ಲದ ವ್ಯಕ್ತಿಯನ್ನು ದೇಶದ ಮೊದಲ ಪ್ರಧಾನಿಯನ್ನಾಗಿ ಪಡೆದದ್ದು ನಮ್ಮ ದೌರ್ಭಾಗ್ಯ.

1962ರ ಭಾರತ-ಚೀನಾ ಯುದ್ಧದಲ್ಲಿ ಜಮ್ಮು ಮತ್ತು ಕಾಶ್ಮೀರದ ಪೂರ್ವ ಭಾಗದ 'ಅಕ್ಸೈ ಚಿನ್' ಪ್ರಾಂತ್ಯವನ್ನು ಚೀನಾ ದೇಶ ವಶಪಡಿಸಿಕೊಂಡಿತು. ಈ ಭಾಗ ಸುಮಾರು 2150 ಕಿ.ಮೀ. ಗಡಿಯನ್ನು ಹೊಂದಿದೆ. ನೆಹರುರ ಪ್ರಮಾದದಿಂದಾಗಿ ಅಂದು ಆ ದೊಡ್ಡ ಭೂಭಾಗವನ್ನು ಭಾರತ ಕಳೆದುಕೊಳ್ಳಬೇಕಾಯಿತು. ಇಂಥ ಭೂಭಾಗವನ್ನು ಕಳೆದುಕೊಂಡ ಮೇಲೆ, 'ಈ ಭಾಗದಲ್ಲಿ ಒಂದು ಹುಲ್ಲುಕಡ್ಡಿಯೂ ಬೆಳೆಯುವುದಿಲ್ಲ, ಆದ್ದರಿಂದ ನಮಗೆ ಯಾವ ನಷ್ಟವೂ ಇಲ್ಲ' ಎಂಬ ಉಡಾಫೆ ಮಾತನ್ನು ನೆಹರು ಹೇಳಿದ್ದರು. ಆಪರೇಷನ್ ಸಿಂದೂರ ಕಾರ್ಯಾಚರಣೆಯ ಬಗ್ಗೆ ಹಗುರವಾಗಿ ಮಾತನಾಡುವ ರಾಹುಲ್ ಗಾಂಧಿ ಮತ್ತು ಅವರ ಪಟಾಲಂ, ನೆಹರು ಹೇಳಿದ್ದ ಈ ಮಾತಿಗೆ ಉತ್ತರ ಕೊಡಲು ಸಾಧ್ಯವೇ? ಭಾರತದ ದೊಡ್ಡದೊಂದು ಭೂಭಾಗವನ್ನು ಕಳೆದುಕೊಂಡ ನಂತರ ಸ್ವತಃ ಭಾರತದ ಪ್ರಧಾನಿಯೇ ಹೀಗೆ ಹೇಳಿದಾಗ, ಚೀನಾಕ್ಕೆ ಭಯ ಎಲ್ಲಿಂದ ಬರಬೇಕು? ನೆಹರು ಭಾರತೀಯ ಸೈನ್ಯವನ್ನು 'ನಿಶ್ಶಕ್ತೀಕರಣ' ಮಾಡಿದ ಪರಿಣಾಮ ಭಾರತದ ಇತಿಹಾಸದಲ್ಲಿ ದೊಡ್ಡದೊಂದು ಪ್ರಮಾದ ನಡೆದುಹೋಗಿತ್ತು.

ಚೀನಾ ಹಾಗು ಪಾಕಿಸ್ತಾನದ ನಡುವೆ ದೊಡ್ಡದೊಂದು ಆರ್ಥಿಕ ಕಾರಿಡಾರ್ ನಿರ್ಮಿಸುತ್ತಿರುವ ಚೀನಾ, ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ಸುಮಾರು 12 ಬಿಲಿಯನ್ ಡಾಲರ್‌ನಷ್ಟು, ಅಂದರೆ ಸುಮಾರು 1,00,000 ಕೋಟಿ ರುಪಾಯಿಯಷ್ಟು ಹಣವನ್ನು ಖರ್ಚು ಮಾಡಿದೆ. ಚೀನಾ ನಿರ್ಮಿಸುತ್ತಿರುವ ಈ ಕಾರಿಡಾರ್, ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ಹಾದುಹೋಗುತ್ತದೆ. 1948ರಲ್ಲಿ ನೆಹರು ಮಾಡಿದ ಪ್ರಮಾದದಿಂದಾಗಿ, ಭಾರತಕ್ಕೆ ಸೇರಿದ ಭೂಭಾಗದೊಳಗೆ ಚೀನಾ ತನ್ನ ಆರ್ಥಿಕ ಕಾರಿಡಾರ್ ನಿರ್ಮಾಣ ಮಾಡುವಂತಾಗಿದೆ. ಆಪರೇಷನ್ ಸಿಂದೂರ ಬಳಿಕ, ಪಾಕ್ ಆಕ್ರಮಿತ ಕಾಶ್ಮೀರವನ್ನು ಹಿಂಪಡೆಯುವ ಬಗ್ಗೆ ಮಾತನಾಡುವ ಕಾಂಗ್ರೆಸ್ಸಿಗರು, ತಮ್ಮ ಅವಧಿಯಲ್ಲಾದ ಪ್ರಮಾದದ ಬಗ್ಗೆ ಮಾತನಾಡುವುದಿಲ್ಲ. 1962ರ ಭಾರತದ



ವಿರುದ್ಧದ ಯುದ್ಧದ ನಂತರ, 1963ರಲ್ಲಿ ಪಾಕಿಸ್ತಾನವು, ಪಾಕ್ ಆಕ್ರಮಿತ ಕಾಶ್ಮೀರ (ಗಿಲ್ಗಿಟ್ ಬಾಲ್ಟಿಸ್ತಾನ್)ದಲ್ಲಿರುವ 'ಶಕ್ಸ್‌ಗಮ್ ಕಣಿವೆ'ಯನ್ನು ಚೀನಾ ದೇಶಕ್ಕೆ ನೀಡಿತು. ಆಗಲೂ ನೆಹರು ಪ್ರತಿಭಟಿಸಲಿಲ್ಲ. ಆಪರೇಷನ್ ಸಿಂದೂರದ ಬಗ್ಗೆ ಹಗುರವಾಗಿ ಮಾತನಾಡುವ ಕಾಂಗ್ರೆಸ್ಸಿನ ಬಾಲಂಗೋಚಿಗಳು, ನೆಹರು ಮಾಡಿದ ಈ ಪ್ರಮಾದದ ಬಗ್ಗೆಯೂ ಮಾತನಾಡಬೇಕು.

ಡೋಕ್ಲಾಂ ಭಾರತಕ್ಕೆ ಅತ್ಯಂತ ಮಹತ್ವಪೂರ್ಣವಾದ ಭೂಭಾಗ. ಇದು ಭಾರತ, ಚೀನಾ ಹಾಗೂ ಭೂತಾನ್ ಗಡಿಗಳು ಸೇರುವ 'ತ್ರಿಕೋನ ಸಂಧಿಸ್ಥಾನ'ದಂಥ ಜಾಗದಲ್ಲಿದೆ. ಚೀನಾ ಈ ಜಾಗದಲ್ಲಿ ರಸ್ತೆ ಮತ್ತು ಸೇತುವೆಗಳನ್ನು ನಿರ್ಮಿಸಿದರೆ ತನ್ನ ಶಸ್ತ್ರಾಸ್ತ್ರಗಳನ್ನು ಭಾರತದ ಗಡಿಯತ್ತ ಸಾಗಿಸಲು ಸುಲಭವಾಗುತ್ತದೆ ಎಂಬ ಭ್ರಮೆಯಲ್ಲಿತ್ತು. ಇದನ್ನರಿತ ನರೇಂದ್ರ ಮೋದಿಯವರು ಚೀನಾದ ಕಾಮಗಾರಿಯನ್ನು ತಡೆದರು. ಜತೆಗೆ ಭೂತಾನ್ ದೇಶಕ್ಕೆ ದೊಡ್ಡಮಟ್ಟದ ಹಣದ ಸಹಾಯ ಮಾಡಿ ಉತ್ತಮ ಬಾಂಧವ್ಯವನ್ನು ರೂಪಿಸಿದರು. ಮಾತುಮಾತಿಗೂ, 'ಮೋದಿಯವರು ಹೊರದೇಶಕ್ಕೆ ಪ್ರಯಾಣ ಮಾಡುತ್ತಾರೆ' ಎಂದು ಚೀರಾಡುವ ಕಾಂಗ್ರೆಸ್ಸಿಗರಿಗೆ ಈ ವಿಷಯದ ಜ್ಞಾನವಿಲ್ಲ. ಈಶಾನ್ಯ ಭಾರತದ ಏಳು ರಾಜ್ಯಗಳನ್ನು ತಲುಪಲು ಅತಿ ಮುಖ್ಯವಾದ ಜಾಗ ಸಿಲಿಗುರಿ ಕಾರಿಡಾರ್. ಇದೊಂದು ಸಣ್ಣ ಭೂಭಾಗ. ಈ ಭೂಭಾಗವನ್ನು 'ಚಿಕನ್ ನೆಕ್' ಎಂದು ಕರೆಯುತ್ತಾರೆ. ಕೇವಲ 200 ಕಿ.ಮೀ. ಉದ್ದ ಹಾಗೂ 60 ಕಿ.ಮೀ. ಅಗಲವಿರುವ ಭೂಭಾಗವಿದು. ಈ ಕಾರಿಡಾರ್‌ನ ಅತ್ಯಂತ ಸಣ್ಣ ಭಾಗ ಕೇವಲ 17 ಕಿ.ಮೀ.ಇದೆ. ಈ ಕಿರಿದಾದ ಭೂಭಾಗದಿಂದ ಮಾತ್ರ ಈಶಾನ್ಯ ಭಾರತದ ರಾಜ್ಯಗಳಿಗೆ ಸಂಪರ್ಕ ಸಾಧ್ಯ. ಗೂಗಲ್ ಮ್ಯಾಪ್ ಓಪನ್ ಮಾಡಿ ಈಶಾನ್ಯ ಭಾರತದೆಡೆಗೆ ಗಮನ ಹರಿಸಿದರೆ 'ಚಿಕನ್ ನೆಕ್' ಕಾಣಿಸುತ್ತದೆ. 1971ರ ಯುದ್ಧದ ನಂತರ ಇಂದಿರಾ ಗಾಂಧಿಯವರು ಬಾಂಗ್ಲಾದೇಶದ ಜತೆ ಮಾತುಕತೆ ನಡೆಸಿ ಈ ಭೂಭಾಗವನ್ನು ಮತ್ತಷ್ಟು ವಿಸ್ತರಿಸಬೇಕಿತ್ತು. ಅವರಿಗೂ ಭಾರತದ ಭದ್ರತೆಯ ದೂರದೃಷ್ಟಿಯಿರಲಿಲ್ಲ.

ನೆಹರು ಕುಟುಂಬಸ್ಥರು ಮಾಡಿದ ಅನೇಕ ಪ್ರಮಾದಗಳಿಂದಾಗಿ, ಭಾರತವು ಜಗತ್ತಿನಲ್ಲಿ ತನ್ನ ಸ್ಥಾನವನ್ನು ಮೇಲೇರಿಸಿಕೊಳ್ಳಲು ಹಲವು ದಶಕಗಳೇ ಬೇಕಾದವು. ನರೇಂದ್ರ ಮೋದಿಯವರು ಅಮೆರಿಕದೊಂದಿಗೆ ಉತ್ತಮ ಬಾಂಧವ್ಯ ಬೆಳೆಸಿಕೊಂಡಿದ್ದಕ್ಕೇ, ಪಾಕಿಸ್ತಾನದ ಭಯೋತ್ಪಾದಕರ ನೆಲೆಗಳ ಮೇಲೆ ಬಾಂಬ್ ಹಾಕಿದಾಗ, ಪಕ್ಕದ ಚೀನಾ ತುಟಿ ಬಿಚ್ಚಲಿಲ್ಲ. ಅದೇ ಜಾಗದಲ್ಲಿ ನೆಹರು ಇದ್ದಿದ್ದರೆ ಏನಾಗುತ್ತಿತ್ತು ಯೋಚಿಸಿ ನೋಡಿ? 2008ರಲ್ಲಿ ಮುಂಬೈನ ಬೀದಿಗಳಲ್ಲಿ ನಾಗರಿಕರ ಮೇಲೆ ಭಯೋತ್ಪಾದಕರು ದಾಳಿ ಮಾಡಿದಾಗ, ಕಾಂಗ್ರೆಸ್ಸಿನ ಪ್ರಧಾನಿ ಮನಮೋಹನ್ ಸಿಂಗ್ ಅವರು ಚೀನಾಕ್ಕೆ ಹೆದರಿ ಪಾಕಿಸ್ತಾನಕ್ಕೆ ಸಣ್ಣ ವಾರ್ನಿಂಗ್ ಸಹ ನೀಡಲಿಲ್ಲ. 2011ರಲ್ಲಿ ಅಮೆರಿಕ ತನ್ನ ಅಣು ವಿದ್ಯುತ್‌ಸ್ಥಾವರದ ತ್ಯಾಜ್ಯವನ್ನು ತಂದು ಭಾರತದಲ್ಲಿ ಸುರಿಯಲು ಮುಂದಾದಾಗ, ಮನಮೋಹನ್ ಸಿಂಗ್ ಒಪ್ಪಿಗೆ ಕೊಡಲು ತಯಾರಾಗಿದ್ದರು. ಇಂದು ಭಾರತ ಬದಲಾಗಿದೆ. ಕರೋನ ನಿಯಂತ್ರಿಸಲು ಅಮೆರಿಕಕ್ಕೆ ಬೇಕಾಗಿದ್ದ ಹೈಡ್ರೋಕ್ಲೋರೋಕ್ವಿನ್ ಮಾತ್ರೆಗಳನ್ನು ಟನ್‌ಗಟ್ಟಲೆ ನೀಡಿದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಮಾತುಮಾತಿಗೂ 'ನನ್ನ ಮಿತ್ರ ಮೋದಿ' ಎಂದು ಇಡೀ ಜಗತ್ತಿನ ಮುಂದೆ ಹೇಳುತ್ತಾರೆ. ಒಂದು ಸಲವಾದರೂ ಜಗತ್ತಿನ ಮುಂದುವರಿದ ರಾಷ್ಟ್ರಗಳು ಕಾಂಗ್ರೆಸ್ ಆಡಳಿತಾವಧಿಯಲ್ಲಿ, ಭಾರತದ ಪ್ರಧಾನಿಯ ಬಗ್ಗೆ ಈ ಮಟ್ಟಿಗೆ ಮಾತನಾಡಿರಲಿಲ್ಲ.

ಕಾಂಗ್ರೆಸ್ಸಿನ ಆಡಳಿತ ಯಾವ ರೀತಿ ಇತ್ತೆಂದರೆ, ಭಾರತದ ಆಂತರಿಕ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ವಿಶ್ವನಾಯಕರ ಅನುಮತಿ ಬೇಕಿತ್ತು. ಪಾಕಿಸ್ತಾನಕ್ಕೆ ಹೆದರಿ ಕಾಶ್ಮೀರದ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲಿಲ್ಲ, ಪಾಕಿಸ್ತಾನಕ್ಕೆ ಚೀನಾ ಮತ್ತು ಅಮೆರಿಕದ ನೆರವಿದೆ ಎಂಬ ಭ್ರಮೆಯಲ್ಲಿ ಕಾಂಗ್ರೆಸ್ ಆಡಳಿತ ನಡೆಸುತ್ತಿತ್ತು. ಕಾಶ್ಮೀರದ ಸಮಸ್ಯೆಯನ್ನು ಬಗೆಹರಿಸಿದರೆ, ವಿಶ್ವದ ಎರಡು ಬಲಿಷ್ಠ ರಾಷ್ಟ್ರಗಳು ನಮ್ಮ ನೆರವಿಗೆ ಬರುವುದಿಲ್ಲವೆಂಬ ಭಯವಿತ್ತು. ಮನಮೋಹನ್ ಸಿಂಗ್ ಅತ್ಯುತ್ತಮ ಪ್ರಧಾನಿಯೆಂದು ಬಾಯಿ ಬಡಿದುಕೊಳ್ಳುವ ಕಾಂಗ್ರೆಸ್ಸಿಗರಿಗೆ, ಯಾಕೆ ನಮ್ಮ ದೇಶದ ಆಂತರಿಕ ಸಮಸ್ಯೆಗಳನ್ನು ಬಗೆಹರಿಸುವುದರಲ್ಲಿ ಅವರು ವಿಫಲರಾದರೆಂದು ಕೇಳಿದರೆ, ಉತ್ತರ ಸಿಗುವುದಿಲ್ಲ. 2019ರಲ್ಲಿ, 7 ದಶಕಗಳ ಕಾಶ್ಮೀರ ಸಮಸ್ಯೆಯನ್ನು, ಮೋದಿಯವರು ಎರಡನೇ ಬಾರಿ ಅಧಿಕಾರಕ್ಕೆ ಬಂದ 6 ತಿಂಗಳೊಳಗೆ ಬಗೆಹರಿಸಿದರು. ಚೀನಾ ಕೂಡ ತುಟಿ ಬಿಚ್ಚಲಿಲ್ಲ. ಅಮೆರಿಕಾ ಕಡ್ಡಿ ಎರಡು ತುಂಡಾದ ಹಾಗೆ 'ಇದು ಭಾರತದ ಆಂತರಿಕ ಸಮಸ್ಯೆ' ಎಂದು ಹೇಳಿತು. ಇದು ನರೇಂದ್ರ ಮೋದಿಯವರ ವಿಶ್ವಪರ್ಯಟನೆಯ ಪ್ರಭಾವ.

ತಾವು ಸೃಷ್ಟಿಸಿದ ಪ್ರಮಾದಗಳನ್ನು ಸರಿಪಡಿಸುವ ಅನೇಕ ಅವಕಾಶಗಳು ಸ್ವತಃ ನೆಹರುರಿಗೆ ಸಿಕ್ಕರೂ ಅವರು ಸರಿಪಡಿಸಲಿಲ್ಲ. ನಂತರ ಇಂದಿರಾ ಗಾಂಧಿಯವರು ತಮಗಿದ್ದ ಚಿನ್ನದಂಥ ಅವಕಾಶವನ್ನು 1971ರಲ್ಲಿ ಬಳಸಿಕೊಳ್ಳಲಿಲ್ಲ. ಕಾಂಗ್ರೆಸ್ಸಿನ ಅವಧಿಯಲ್ಲಿ ಅಖಂಡ ಭಾರತದ ಸಾವಿರಾರು ಕಿ.ಮೀ. ಭೂಭಾಗವನ್ನು ಪಾಕಿಸ್ತಾನ ಮತ್ತು ಚೀನಾಕ್ಕೆ ಬಿಟ್ಟುಕೊಡಲಾಗಿದೆ. ಭಾರತವನ್ನು ಏಳು ದಶಕಗಳ ಕಾಲ ಆಳಿದ ಕಾಂಗ್ರೆಸ್ ಪಕ್ಷವು ಪಾಕಿಸ್ತಾನ ಮತ್ತು ಚೀನಾದ ವಿರುದ್ಧ ತೋರಿದ ಮೃದುಧೋರಣೆ ಇಷ್ಟಕ್ಕೆಲ್ಲ ಕಾರಣ. ಭಾರತದ ನೆಲ-ಜಲದ ಬಗ್ಗೆ ಕಾಳಜಿ ಇಲ್ಲದವರ ಬಾಯಲ್ಲಿ ದೇಶದ ಭದ್ರತೆಯ ಮಾತುಗಳನ್ನು ಕೇಳಿದಾಗ ನಗು ಬರುತ್ತದೆ. 1993, 1996, 2008ರಲ್ಲಿ ಚೀನಾದೊಂದಿಗೆ ಗಡಿ ಒಪ್ಪಂದವನ್ನು ಮಾಡಿಕೊಂಡಾಗ ಅಧಿಕಾರದಲ್ಲಿದ್ದದ್ದು ಕಾಂಗ್ರೆಸ್ ಸರಕಾರ. ಭಾರತದ ಇತಿಹಾಸದಲ್ಲಿ ನಡೆದ ಅನೇಕ ಸಮಸ್ಯೆಗಳ ಸೂತ್ರಧಾರ ಮತ್ತು ಪ್ರತಿ ಬಾರಿಯೂ ದೇಶದ ಹಿತಾಸಕ್ತಿಯೊಂದಿಗೆ ರಾಜಿ ಮಾಡಿಕೊಂಡ ವ್ಯಕ್ತಿ ಜವಾಹರಲಾಲ್ ನೆಹರು.

ಓದುಗರ ಒಣಿ
ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಕಡಿವಾಣ ಯಾವಾಗ?

ಇತ್ತೀಚಿನ ದಿನಗಳಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ, ಪ್ರಧಾನಿ ನರೇಂದ್ರ ಮೋದಿಯವರ ವಿರುದ್ಧ ನಿರಂತರ ಅಪಪ್ರಚಾರ ಮಾಡುವ, ಪರಿಶೀಲಿಸದ ಸುಳ್ಳು ಸುದ್ದಿಗಳನ್ನು ಹಬ್ಬಿಸುವ ಮತ್ತು ಅವರನ್ನು ನಿಂದಿಸುವ ಪ್ರವೃತ್ತಿ ಹೆಚ್ಚಾಗಿದೆ. ಅಭಿಪ್ರಾಯವನ್ನು ವ್ಯಕ್ತಪಡಿಸುವುದು ಪ್ರಜಾಸತ್ತಾತ್ಮಕ ಹಕ್ಕಾಗಿದ್ದರೂ, ಇಂಥ ದುರುದ್ದೇಶಪೂರ್ವಕ ವರ್ತನೆಗಳು ಜನರನ್ನು ದಾರಿತಪ್ಪಿಸುವುದಲ್ಲದೆ, ದೇಶದ ಅಭಿವೃದ್ಧಿಗೂ, ಸಮಾಜದ ಸಾಮರಸ್ಯಕ್ಕೂ ಹಾನಿಯುಂಟುಮಾಡುತ್ತವೆ ಎಂಬುದನ್ನು ಮರೆಯಲಾಗದು.

ಸುಳ್ಳು ಸುದ್ದಿಯನ್ನು ಹಬ್ಬಿಸುವುದು ಕಾನೂನುಬದ್ಧವಾಗಿ ದಂಡನೀಯ ಅಪರಾಧವಾಗಿದ್ದರೂ, ಸಂಬಂಧಪಟ್ಟ ಅಧಿಕಾರಿಗಳು ಸ್ವಯಂಪ್ರೇರಿತವಾಗಿ ಕ್ರಮವನ್ನು ಕೈಗೊಳ್ಳದಿರುವುದು ವಿಷಾದನೀಯ. ಜವಾಬ್ದಾರಿಯುತ ಮಾಹಿತಿ ಹಂಚಿಕೆಯು ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಬೇಕು, ಅಲ್ಲವೇ?

- ಜಿ.ನಾಗೇಂದ್ರ, ಕಾಪೂರು, ಸಂಡೂರು

ಉಪಯುಕ್ತ ಮಾಹಿತಿ

ಕೇಶವಪ್ರಸಾದ್ ಅವರು 'ಲಕ್ಷಾಂತರ ಯುವಜನರು ಸರಕಾರಿ ನೌಕರಿಗೆ ಯತ್ನಿಸುತ್ತಿರುವುದೇಕೆ' ಶೀರ್ಷಿಕೆಯ ತಮ್ಮ ಅಂಕಣಬರಹದಲ್ಲಿ ಉಪಯುಕ್ತ ವಿಚಾರವನ್ನು ತಿಳಿಸಿದ್ದಾರೆ. ಯುವಜನರು ಸರಕಾರಿ ಉದ್ಯೋಗದ ಕಡೆಗೇ ಹೀಗೊಂದು ದೃಷ್ಟಿ ನೆಟ್ಟಿರುವುದು ನಿಜ. ಉದ್ಯೋಗಾವಕಾಶ ಸಂಬಂಧಿತ ಪರೀಕ್ಷೆಗಳಿಗೆ ಶುಲ್ಕದ ರೂಪದಲ್ಲಿ ಯುವಜನರು ಪಾವತಿಸುವ ಹಣವು ಕೋಟ್ಯಂತರ ರುಪಾಯಿ ಪ್ರಮಾಣದಲ್ಲಿದ್ದು ಅದು ಬೊಕ್ಕಸಕ್ಕೆ ಜಮೆಯಾಗುತ್ತದೆ. ನಿರುದ್ಯೋಗ ಪರ್ವದಿಂದಾಗಿ ಮೊದಲೇ ಹಣಕ್ಕಾಗಿ ಪರದಾಡುತ್ತಿರುತ್ತಾರೆ ಯುವಜನರು. ಒಂದು ವೇಳೆ ಪ್ರವೇಶ ಪರೀಕ್ಷೆಯಲ್ಲಿ ನಪಾಸಾದರೆ, ಆ ಪರೀಕ್ಷಾ ಶುಲ್ಕದಲ್ಲಿ ಒಂದಿಷ್ಟು ಪ್ರಮಾಣವನ್ನಾದರೂ ವಾಪಸ್ ಮಾಡುವ ವ್ಯವಸ್ಥೆ ಇರಬೇಕು. ಇದರಿಂದಾಗಿ ಎಷ್ಟೋ ಮಂದಿಗೆ ಸ್ವಲ್ಪ ಅನುಕೂಲವಾಗುತ್ತದೆ.

- ಕೃಷ್ಣಕುಮಾರ್. ಬೆಂಗಳೂರು

ದೋಸೆಯ ರುಚಿ ಬಲ್ಲಿರಾ?

ಜೋಹಾನ್ಸ್‌ಬರ್ಗ್ ಕುರಿತಾದ 'ಸಂಪಾದಕರ ಸದ್ಯಶೋಧನೆ'ಯನ್ನು (ಫೆ.26) ಓದಿದೊಡನೆ ನನ್ನದೊಂದು ಅನುಭವವನ್ನು ಹಂಚಿಕೊಳ್ಳುವ ಮನಸ್ಸಾಯಿತು. ವರ್ಷಕ್ಕೊಮ್ಮೆ ವಿದೇಶ ಪ್ರವಾಸಕ್ಕೆ ಹೊರಡುವ ನಮ್ಮನ್ನು, 2020ರ ಇಸವಿಯಲ್ಲಿ ಶುರುವಾದ ಕೋವಿಡ್ ಎಲ್ಲಿಯೂ ಹೋಗದಂತೆ ತಡೆದಿತ್ತು. ಹೀಗಾಗಿ, 2022ರಲ್ಲಿ ಥಾಮಸ್ ಕುಕ್ ವತಿಯಿಂದ ಪ್ರವಾಸಕ್ಕೆ ಆಯೋಜನೆಯಾದಾಗ, ದಕ್ಷಿಣ ಆಫ್ರಿಕಾ ಮತ್ತು ಕೀನ್ಯಾ ಪ್ರವಾಸಕ್ಕೆ ಪತಿಯೊಂದಿಗೆ ನಾನು ಹೊರಟೆ. ಜೋಹಾನ್ಸ್‌ಬರ್ಗ್‌ನಲ್ಲಿ ನಗರವನ್ನೆಲ್ಲಾ ಸುತ್ತಾಡಿಸಿ ಊಟದ ಸಮಯಕ್ಕೆ Tava Restuarant ಎಂಬ ಭಾರತೀಯ ಹೋಟೆಲ್‌ಗೆ ನಮ್ಮೆಲ್ಲರನ್ನೂ ಕರೆದೊಯ್ದರು. ಮೊದಲಿಗೆ ಎಲ್ಲರಿಗೂ ದೋಸೆ ಆರ್ಡರ್ ಮಾಡಿದಾಗ, ಮನಸ್ಸಿನಲ್ಲೊಂದು ಸಣ್ಣ ಅನುಮಾನ ಮೂಡಿತ್ತು. ಆದರೆ ದೋಸೆ ಬಂದಾಗ ಆಗಿದ್ದೇ ಬೇರೆ. ನೋಡಲೂ ಸುಂದರ ವಾಗಿತ್ತು, ರುಚಿಯೂ ಅದ್ಭುತವಾಗಿತ್ತು. ಆ ಪ್ರವಾಸದಲ್ಲಿ ನೋಡಿದ ಜಾಗಗಳಲ್ಲಿ ಎಷ್ಟೋ ಮರೆತುಹೋಗಿದ್ದರೂ, ಆ ಹೋಟೆಲಿನ ದೋಸೆಯ ರುಚಿ ಮಾತ್ರ ಮನದಲ್ಲಿನ್ನೂ ಹಸಿರಾಗಿದೆ.

- ಶೈಲಜಾ ವಾಸುಕಿ, ಬೆಂಗಳೂರು

ಓದುಗರ ಒಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಮೋದಿಯವರನ್ನು ವಿರೋಧಿಸಲು ಹೋಗಿ ಬೆತ್ತಲಾದವರು

ಕೃತಕ ಬುದ್ಧಿಮತ್ತೆ ಕ್ಷೇತ್ರದಲ್ಲಿ ಭಾರತವು ಸಾಧಿಸಿರುವ ಪ್ರಗತಿಯನ್ನು ವಿಶ್ವ ಸಮುದಾಯದ ಮುಂದೆ ಅನಾವರಣ ಮಾಡಲು ಮಹತ್ತರ ವೇದಿಕೆಯಾಗಿದ್ದ ಸಮ್ಮೇಳನದ ಆವರಣಕ್ಕೆ ಯುವ ಕಾಂಗ್ರೆಸ್ಸಿಗರು ಪ್ರವೇಶಿಸಿ ಪ್ರತಿಭಟನೆ ಮಾಡುವ ಔಚಿತ್ಯವೇನಿತ್ತು? ಇದರ ಹಿಂದಿದ್ದುದು ಸರಕಾರಕ್ಕೆ ಕೆಟ್ಟ ಹೆಸರು ತರುವ ದುರುದ್ದೇಶ ಮಾತ್ರವಷ್ಟೇ!

ಪ್ರಕಾಶಪಥ
ಪ್ರಕಾಶ್ ಶೇಷರಾಘವಾಚಾರ್
vveditoped@gmail.com

ಎಐ ಇಂಪ್ಯಾಕ್ಟ್ ಶೃಂಗಸಭೆ ನಡೆಯುತ್ತಿದ್ದ 'ಭಾರತ ಮಂಟಪಂ'ಗೆ ಯುವ ಕಾಂಗ್ರೆಸ್‌ನ ಹತ್ತು ಮಂದಿ ಕಾರ್ಯಕರ್ತರು ನುಗ್ಗಿ ತಮ್ಮ ಶರ್ಟ್ ಮತ್ತು ಬನಿಯನ್ ತೆಗೆದು ಅರೆಬೆತ್ತಲೆಯಾಗಿ, ಪ್ರಧಾನಿ ಮೋದಿಯವರ ವಿರುದ್ಧ ಪ್ರತಿಭಟನೆ ಮಾಡಿದರು. 'ಇಂಡೋ-ಯುಎಸ್ ವ್ಯಾಪಾರ ಒಪ್ಪಂದದ ವಿಷಯದಲ್ಲಿ ಮೋದಿಯವರು ರಾಜಿಯಾಗಿದ್ದಾರೆ' ಎಂದು ಕೂಗುತ್ತಾ ಆವರಣದಲ್ಲಿ ಗೊಂದಲ ಸೃಷ್ಟಿಸಿದರು.

ಈ ಹತ್ತು ಜನ ಯುವ ಕಾಂಗ್ರೆಸ್ ಪದಾಧಿಕಾರಿಗಳಲ್ಲಿ ಯುವ ಕಾಂಗ್ರೆಸ್‌ನ ರಾಷ್ಟ್ರೀಯ ಕಾರ್ಯದರ್ಶಿಗಳು, ರಾಷ್ಟ್ರೀಯ ಸಂಯೋಜಕರು ಹಾಗೂ ಬಿಹಾರ ಮತ್ತು ಯುಪಿ ರಾಜ್ಯಗಳ ಪದಾಧಿಕಾರಿಗಳು ಸೇರಿದ್ದರು. ಎಐ ಇಂಪ್ಯಾಕ್ಟ್ ಶೃಂಗಸಭೆಗೂ ಇವರು ಕೈಗೊಂಡ ಪ್ರತಿಭಟನೆಯ ವಿಷಯಕ್ಕೂ ಸಂಬಂಧವೇ ಇರಲಿಲ್ಲ. ದೇಶದ ಸ್ವಾತಂತ್ರ್ಯ ಹೋರಾಟದ ನೇತೃತ್ವ ವಹಿಸಿದ್ದ ಗಾಂಧಿ-ನೆಹರು ಅವರ ಕಾಂಗ್ರೆಸ್ ಪಾರ್ಟಿಯು ಮೋದಿಯವರನ್ನು ವಿರೋಧಿಸುವ ಆತುರದಲ್ಲಿ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಬಟ್ಟೆ ಬಿಚ್ಚುವ ಕೀಳು ಮಟ್ಟಕ್ಕೆ ತಲುಪಿದ್ದು ದುರದೃಷ್ಟಕರ ಸಂಗತಿ. ಈ ಯುವಕರು ದೇಶ-ವಿದೇಶಗಳಿಂದ ಬಂದಿದ್ದ ಪ್ರತಿನಿಧಿಗಳ ಮುಂದೆ ತಮ್ಮ ಬಟ್ಟೆ ಬಿಚ್ಚಿ ದೇಶದ ಗೌರವಕ್ಕೆ ಮಸಿ ಬಳಿದರು.

ಈ ಸಮ್ಮೇಳನವು ಬಿಜೆಪಿಯ ಪಕ್ಷದ್ದಾಗಿರಲಿಲ್ಲ, ಬದಲಿಗೆ ದೇಶದ ಯುವಜನತೆಯ ಭವಿಷ್ಯ ರೂಪಿಸುವ ಮತ್ತು ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನ ಕ್ಷೇತ್ರದಲ್ಲಿ ಭಾರತವು ಮಹತ್ತರ ಹೆಜ್ಜೆ ಇಡುವ ಸಲುವಾಗಿ ಇದನ್ನು ಆಯೋಜಿಸಲಾಗಿತ್ತು. ಈಗಾಗಲೇ ಈ ಕ್ಷೇತ್ರದಲ್ಲಿ ನಾವು ಹಿಂದೆ ಬಿದ್ದಿದ್ದೇವೆ. ಅಮೆರಿಕ ಮತ್ತು ಚೀನಾದೊಂದಿಗೆ ಸೆಣಸಬೇಕಾಗಿದೆ. ಆದ್ದರಿಂದ ನಮ್ಮ ಸಾಮರ್ಥ್ಯ ತೋರಿಸಲು ಸಮ್ಮೇಳನವು ಯಶಸ್ವಿಯಾಗಬೇಕಿತ್ತು.

ವಿಶ್ವದಲ್ಲೇ ಇದೊಂದು ಬೃಹತ್ ಸಮ್ಮೇಳನವಾಗಿತ್ತು. 2023ರಲ್ಲಿ ನಡೆದ 'ಯುಕೆ ಎಐ ಸೇಫ್ಟಿ ಸಮಿಟ್' ಅಥವಾ 2024ರಲ್ಲಿ ನಡೆದ 'ಎಐ ಸಿಯೋಲ್ ಸಮಿಟ್'ಗಳಂಥ ಹಿಂದಿನ ಜಾಗತಿಕ ಕಾರ್ಯಕ್ರಮಗಳನ್ನು ಮೀರಿಸಿ ಹೊಸ ದಾಖಲೆಗಳನ್ನು ಬರೆಯಿತು. 118 ದೇಶಗಳ ನಿಯೋಗಗಳು, 20ಕ್ಕೂ ಹೆಚ್ಚು ದೇಶಗಳ ಮುಖ್ಯಸ್ಥರು, ಉದ್ಯಮದ ಮುಖಂಡರು, 100ಕ್ಕೂ ಹೆಚ್ಚು ಜಾಗತಿಕ ಸಿಇಒ, ಸಿಎಫ್‌ಒಗಳು ಮತ್ತು 500ಕ್ಕೂ ಹೆಚ್ಚು ಎಐ ತಜ್ಞರು, ಸ್ಟಾರ್ಟ್‌ಅಪ್‌ಗಳು, 600ಕ್ಕೂ ಹೆಚ್ಚು ಉನ್ನತ ಸ್ಟಾರ್ಟ್‌ಅಪ್‌ಗಳು ತಮ್ಮ ಎಐ ಪರಿಹಾರಗಳನ್ನು ಪ್ರದರ್ಶಿಸಿದವು. 2.5 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಚರ್ಚೆಗಳಲ್ಲಿ ಭಾಗವಹಿಸಿದ್ದರು.

ಗೂಗಲ್‌ನ ಸುಂದರ್ ಪಿಚ್ಚೈ, 'ಓಪನ್ ಎಐ'ನ ಸ್ಯಾಮ್ ಆಲ್ಟ್‌ಮನ್, ಎನ್ವಿಡಿಯಾದ ಜೆನ್ಸನ್ ಹುವಾಂಗ್‌ರಂಥ ಪ್ರಮುಖರು ಭಾಗವಹಿಸಿದ್ದರು. ಈ ಸಮ್ಮೇಳನವು ಮೂಲಸೌಕರ್ಯಕ್ಕೆ ಸಂಬಂಧಿಸಿದಂತೆ 250 ಬಿಲಿಯನ್ ಡಾಲರ್ ಹೂಡಿಕೆಯ ಭರವಸೆ ಮತ್ತು ಡೀಪ್-ಟೆಕ್ ವೆಂಚರ್ ಕ್ಯಾಪಿಟಲ್‌ಗಾಗಿ 20 ಬಿಲಿಯನ್ ಡಾಲರ್ ಹೂಡಿಕೆಗೆ ಸಾಕ್ಷಿಯಾಯಿತು. 'ಡೆಲ್ಲಿ ಡಿಕ್ಲರೇಷನ್' ಮೂಲಕ 'ಜವಾಬ್ದಾರಿಯುತ ಎಐ' ಕುರಿತು 89 ದೇಶಗಳು ಸಹಿ ಹಾಕಿ ಐತಿಹಾಸಿಕ ಒಮ್ಮತಕ್ಕೆ ಬಂದವು.

ಭಾರತದ ಎಐ ಕ್ರಾಂತಿಗೆ ಮುನ್ನುಡಿ ಬರೆಯಲು ಮತ್ತು ಭಾರತವು ಸಾಧಿಸಿರುವ ಪ್ರಗತಿಯನ್ನು ವಿಶ್ವ ಸಮುದಾಯದ ಮುಂದೆ ಅನಾವರಣ ಮಾಡಲು ಇದೊಂದು ಮಹತ್ತರ ವೇದಿಕೆಯಾಗಿತ್ತು. ಇಂಥ ಸಮ್ಮೇಳನದೊಳಗೆ ಯುವ ಕಾಂಗ್ರೆಸ್ಸಿಗರು ಪ್ರವೇಶಿಸಿ ಪ್ರತಿಭಟನೆ ಮಾಡುವ ಔಚಿತ್ಯವೇನಿತ್ತು? ಇದರ ಹಿಂದಿದ್ದುದು ಸರಕಾರಕ್ಕೆ ಕೆಟ್ಟ ಹೆಸರು ತರುವ ದುರುದ್ದೇಶ ಮಾತ್ರವಷ್ಟೇ! ಪ್ರತಿಭಟನೆ ಮಾಡುವುದು ಪ್ರಜಾಪ್ರಭುತ್ವದ ಅವಿಭಾಜ್ಯ ಅಂಗ ಹಾಗೂ ರಾಜಕೀಯ ಪಕ್ಷಗಳ ಹಕ್ಕು ಸಹ. ಆದರೆ ಪ್ರತಿಭಟನೆ ಮಾಡುವ ಮುನ್ನ ಪೊಲೀಸರ ಅನುಮತಿ ಪಡೆದು ಮಾಡುವುದು, ಅವರು ನಿಗದಿ ಪಡಿಸಿದ ಸ್ಥಳದಲ್ಲಿ ಕೈಗೊಳ್ಳುವುದು ಕಾನೂನಾತ್ಮಕ ನಡೆಯಾಗುತ್ತದೆ. ಆದರೆ ಇವರು ಯಾವ ಅನುಮತಿಯನ್ನೂ ಪಡೆಯದೆ ಸಮ್ಮೇಳನಕ್ಕೆ ನುಗ್ಗಿ

ಗೊಂದಲ, ಅರಾಜಕತೆ ಸೃಷ್ಟಿಸಲು ಯತ್ನಿಸಿದರು. ಸಮ್ಮೇಳನದಲ್ಲಿ ಅವಿವೇಕದಿಂದ ಪ್ರತಿಭಟಿಸಿದಾಗ ಅಲ್ಲಿದ್ದ ನಾಗರಿಕರೇ ಯುವಕಾಂಗ್ರೆಸ್ ಪದಾಧಿಕಾರಿಗಳಿಗೆ ಹಿಗ್ಗಾಮುಗ್ಗಾ ಥಳಿಸಿದರು; ಹೌಸ್ ಕೀಪಿಂಗ್ ನೌಕರನಿಂದ ಬೂಟು ಕಾಲಿನಲ್ಲಿ ಒದೆತ ತಿಂದು ಯುವಕಾಂಗ್ರೆಸ್ಸಿಗರು ತಮ್ಮ ಮಾನವನ್ನು ಕಳೆದುಕೊಂಡರು.

ಇವರ ಪ್ರತಿಭಟನೆಗೆ ಕಾಂಗ್ರೆಸ್ ನಾಯಕಿ ಮಾರ್ಗರೇಟ್ ಆಳ್ವ 'ಅಂತಾರಾಷ್ಟ್ರೀಯ ಕಾರ್ಯಕ್ರಮಗಳಲ್ಲಿ ಘನತೆ ಇರಬೇಕು, ಶಿಸ್ತು ಇರಬೇಕು ಮತ್ತು ಜವಾಬ್ದಾರಿಯ ಪ್ರಜ್ಞೆ ಇರಬೇಕು ಎಂದು ನಾನು ಭಾವಿಸುತ್ತೇನೆ' ಎಂದು ಅಸಮ್ಮತಿ ಸೂಚಿಸಿದ್ದಾರೆ. 'ಇಂಡಿ' ಮೈತ್ರಿಕೂಟದ ಸಮಾಜವಾದಿ ಪಾರ್ಟಿ, ಉದ್ಧವ್ ಸೇನಾ, ಟಿಎಂಸಿ, ಬಿಆರ್‌ಎಸ್, ಮಾಯಾವತಿ ಎಲ್ಲರೂ 'ಅಂತಾರಾಷ್ಟ್ರೀಯ ಸಮ್ಮೇಳನ ನಡೆಯುವಾಗ ವಿದೇಶಿ ಅತಿಥಿಗಳ ಮುಂದೆ ನಡೆದಿರುವ ಈ ಪ್ರತಿಭಟನೆ ಸರಿಯಲ್ಲ' ಎಂದು ಟೀಕಿಸಿದರು.

ರಾಹುಲ್ ಗಾಂಧಿಯವರು ಜನಾಕ್ರೋಶವನ್ನು ನಿರ್ಲಕ್ಷಿಸಿ ಯಥಾಪ್ರಕಾರ ತಮ್ಮ ಆಕ್ರಮಣಕಾರಿ ವರ್ತನೆಯನ್ನು ತೋರಿ ಯುವ ಕಾಂಗ್ರೆಸ್ ಕಾರ್ಯಕರ್ತರು ಕೈಗೊಂಡ ಬೇಜವಾಬ್ದಾರಿ ಪ್ರತಿಭಟನೆಯನ್ನು ಬಲವಾಗಿ ಸಮರ್ಥಿಸಿಕೊಂಡರು, ಗೂಂಡಾ ವರ್ತನೆ ಮಾಡಿ ದೇಶದ ಮಾನ ಕಳೆದವರನ್ನು 'ಬಬ್ಬರ್ ಶೇರ್' (ಸಿಂಹಗಳು) ಎಂದು ಕರೆದರು

2010ರಲ್ಲಿ ದೆಹಲಿಯಲ್ಲಿ ನಡೆದ ಕಾಮನ್ ವೆಲ್ತ್ ಕ್ರೀಡಾಕೂಟದಲ್ಲಿ 70 ಸಾವಿರ ಕೋಟಿ ರುಪಾಯಿ ಭ್ರಷ್ಟಾಚಾರವಾಗಿದೆ ಎಂದು ಕ್ರೀಡಾಕೂಟ ಆರಂಭಕ್ಕೆ ಮುನ್ನವೇ ಬಯಲಾಗುತ್ತದೆ. ಅಂದಿನ ಪ್ರಮುಖ ವಿರೋಧ ಪಕ್ಷವಾಗಿದ್ದ ಬಿಜೆಪಿ ಇದನ್ನು ಮುಂದಿಟ್ಟುಕೊಂಡು ದೇಶದ ಗೌರವಕ್ಕೆ ಕುಂದು ಬಾರದ ಹಾಗೆ ಪ್ರತಿಭಟನೆ ಮಾಡಿತು. ಅಂದಿನ ರಾಷ್ಟ್ರೀಯ ಅಧ್ಯಕ್ಷರಾಗಿದ್ದ ನಿತಿನ್ ಗಡ್ಕರಿಯವರು ಈ ಹಗರಣದ ಬಗ್ಗೆ, ಕ್ರೀಡಾಕೂಟ ಮುಗಿದು ಕ್ರೀಡಾಪಟುಗಳು ತಮ್ಮ ದೇಶಕ್ಕೆ ವಾಪಸ್ ಆದ ನಂತರ ಪತ್ರಿಕಾಗೋಷ್ಠಿ ಮಾಡಿ ಸರಕಾರವನ್ನು ತರಾಟೆಗೆ ತೆಗೆದುಕೊಂಡರು. ಸ್ವಾರ್ಥ ರಾಜಕೀಯ ಲಾಭಕ್ಕಾಗಿ ದೇಶದ ಗೌರವಕ್ಕೆ ಮಸಿ ಬಳಿಯುವ ವರ್ತನೆಯನ್ನು ಅಂದು ಬಿಜೆಪಿ ಮಾಡಲಿಲ್ಲ.

ಗಲ್ ಗೋತಿಯಾಸ್ ವಿಶ್ವವಿದ್ಯಾಲಯದವರು, ಚೀನಾ ಅಭಿವೃದ್ಧಿಪಡಿಸಿದ್ದ ರೋಬೊ ನಾಯಿಯನ್ನು ತಾವು ಅಭಿವೃದ್ಧಿಪಡಿಸಿದ್ದು ಎಂದು ಹೇಳಿಕೊಂಡು ಬಹುದೊಡ್ಡ ವಿವಾದವನ್ನು ಹುಟ್ಟುಹಾಕಿದರು. ಯಥಾಪ್ರಕಾರ ಕಾಂಗ್ರೆಸ್ ಮತ್ತು ಅದರ Eco cycle * 'ಮೋದಿ ಸರಕಾರ ಇದಕ್ಕೆ ಹೊಣೆ, ಸಮ್ಮೇಳನವು ವಿಶ್ವಾಸಾರ್ಹತೆಯನ್ನು ಕಳೆದುಕೊಂಡಿತು' ಎಂಬಿತ್ಯಾದಿ ಅತಿರೇಕದ ಟೀಕೆಯನ್ನು ಮಾಡಿದವು. ಗಲ್ ಗೋತಿಯಾಸ್ ವಿಶ್ವವಿದ್ಯಾಲಯದವರಿಗೆ ಶೃಂಗಸಭೆ ಬಿಟ್ಟು ಹೊರಡಲು ಆದೇಶಿಸಿ ಅವರನ್ನು ಹೊರಹಾಕಲಾಯಿತು.

ಸಮ್ಮೇಳನಕ್ಕೆ ಐದು ಲಕ್ಷ ಸಂದರ್ಶಕರು ಭೇಟಿ ನೀಡಿದ್ದರು. ಮೊದಲನೆಯ ದಿನ ಹಲವಾರು ಗೊಂದಲ ಮತ್ತು ಸಂಚಾರ ದಟ್ಟಣೆಯಿಂದ ತೊಂದರೆಯಾಯಿತು. ಐಟಿ-ಬಿಟಿ ಸಚಿವ ಅಶ್ವಿನಿ ವೈಷ್ಣವ್ ರವರು ಇದಕ್ಕಾಗಿ ಕ್ಷಮೆಯಾಚಿಸಿದರು. ಪ್ರಿಯಾಂಕ್ ಖರ್ಗೆಯವರು ಸಮ್ಮೇಳನದ ಭವ್ಯತೆಯ ಬಗೆಗಿನ ತಮ್ಮ ಮನಸ್ಸಿನ ಕಹಿ, ಅಸೂಯೆ ಎಲ್ಲವನ್ನೂ ಒಮ್ಮೆಗೇ ಕಕ್ಕಿದರು. 'ಸಮ್ಮೇಳನವು ಅವ್ಯವಸ್ಥೆಯ ಆಗರವಾಗಿತ್ತು' ಎಂದು ಪ್ರತಿಕ್ರಿಯೆ ನೀಡಿ ಅಭಿವೃದ್ಧಿಯ ವಿಚಾರದಲ್ಲೂ ರಾಜಕೀಯವೇ ಇವರಿಗೆ ಮೊದಲ ಆದ್ಯತೆ ಎಂದು ತೋರಿಸಿಕೊಂಡರು. ನಿರೀಕ್ಷೆ ಮೀರಿ ಜನ ಬಂದಾಗ ವ್ಯವಸ್ಥೆ ಕುಸಿಯುವುದು ಸಹಜ; ಆದರೆ ಸಮ್ಮೇಳನದಲ್ಲಿನ ಅನೇಕ ಸಕಾರಾತ್ಮಕ ವಿಷಯಗಳನ್ನು ಮರೆಮಾಚಿ ಕೇವಲ ಸಣ್ಣಪುಟ್ಟ ಗೊಂದಲವನ್ನೇ ವಿರೋಧಿಗಳು ತಮ್ಮ ಟೀಕೆಗೆ ಆಹಾರವಾಗಿಸಿಕೊಂಡರು. 'ಸಮ್ಮೇಳನ ವಿಫಲ' ಎಂದು ಬಿಂಬಿಸುವ ಮೋದಿ-ವಿರೋಧಿಗಳ ಆತುರ ಬಯಲಾಯಿತು.

ಬೆಂಗಳೂರಿನಲ್ಲಿ ಅನೇಕ ವರ್ಷಗಳಿಂದ ನಡೆಯುವ ಏರೋ ಇಂಡಿಯಾ ಶೋ ಸಂದರ್ಭದಲ್ಲಿ ಉಂಟಾಗುವ ವಾಹನ ದಟ್ಟಣೆಯ ವರದಿಯು ಪತ್ರಿಕೆಗಳಲ್ಲಿ ಪುಟಗಟ್ಟಲೆ ತುಂಬಿರುತ್ತದೆ. ಕಳೆದ ಬಾರಿ ಜರ್ಮನ್ ಪೈಲಟ್‌ಗಳು ವಾಹನ ದಟ್ಟಣೆಯಲ್ಲಿ ಸಿಲುಕಿ ತಾವು ನಡೆಸಿ ಕೊಡಬೇಕಿದ್ದ ವೈಮಾನಿಕ ಪ್ರದರ್ಶನ ಕೈಗೊಳ್ಳಲು ಸಾಧ್ಯವಾಗಲಿಲ್ಲ.

ಯುವ ಕಾಂಗ್ರೆಸ್ಸಿನವರ ವರ್ತನೆಯಿಂದ ಆಕ್ರೋಶಗೊಂಡಿದ್ದ ಪ್ರಧಾನಿ ಮೋದಿಯವರು ''ಬಟ್ಟೆ ಕಳಚಿದ ಕಾಂಗ್ರೆಸ್ಸಿಗರ ವರ್ತನೆಯು, ಅವರು ಬೌದ್ಧಿಕವಾಗಿ ಎಷ್ಟು ದಿವಾಳಿಯಾಗಿದ್ದಾರೆ ಎಂಬುದನ್ನು ತೋರಿಸುತ್ತದೆ'' ಎಂದು ಕಟುವಾಗಿ ಟೀಕಿಸಿದರು.

ದುರ್ದೈವವೆಂದರೆ, ಬಂಧಿತ ಯುವಕಾಂಗ್ರೆಸ್ ಕಾರ್ಯಕರ್ತರು ಮುಂದಾಗುವ ಪರಿಣಾಮವನ್ನೂ ಯೋಚಿಸದೆ ಕೈಗೊಂಡ ಹೋರಾಟವು ಅವರನ್ನು ಅನೇಕ ಸಂಕಷ್ಟಕ್ಕೆ ದೂಡಿದೆ. ದೆಹಲಿ ಪೊಲೀಸರು ಸ್ವತಃ ಯುವ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಉದಯಭಾನು ಚಿಬ್ ಅವರನ್ನು ಬಂಧಿಸಿದ್ದಾರೆ. ಹತ್ತಾರು ಪ್ರಕರಣಗಳು ಇವರೆಲ್ಲರ ಮೇಲೆ ದಾಖಲಾಗಿವೆ. ಹತ್ತು ಜನರ ಪ್ರತಿಭಟನೆಯನ್ನು ಸರಕಾರ ಇಷ್ಟು ಗಂಭೀರವಾಗಿ ತೆಗೆದುಕೊಂಡಿದ್ದು ಎಷ್ಟು ಸರಿ? ಎಂಬ ಪ್ರಶ್ನೆ ಇಲ್ಲಿ ಮೂಡುತ್ತದೆ. ಆದರೆ ಇದನ್ನು ಹಗುರವಾಗಿ ತೆಗೆದುಕೊಂಡರೆ ನಾಳೆ ನಡೆಯುವ ಪ್ರತಿಯೊಂದು ಸಮ್ಮೇಳನ ಮತ್ತು ಸರಕಾರಿ ಕಾರ್ಯಕ್ರಮಗಳಲ್ಲೂ ಗೊಂದಲವನ್ನು ಸೃಷ್ಟಿಸಲು ಇವರು ಜನರನ್ನು ಕಳುಹಿಸುತ್ತಾರೆ, ತನ್ಮೂಲಕ ಕಾರ್ಯಕ್ರಮವನ್ನು ಹಾಳು ಮಾಡುವ ಪ್ರಯತ್ನವನ್ನು ಮುಂದುವರಿಸುತ್ತಾರೆ.

2020ರಲ್ಲಿ ಡೊನಾಲ್ಡ್ ಟ್ರಂಪ್ ಅವರು ಭಾರತದ ಭೇಟಿಗೆ ಬಂದಾಗ ದೆಹಲಿಯಲ್ಲಿ ಬಹುದೊಡ್ಡ ಕೋಮು ಗಲಭೆಯನ್ನು ಸೃಷ್ಟಿಸಲಾಗಿತ್ತು. ದೆಹಲಿ ಹೊತ್ತಿ ಉರಿಯುವಂತೆ ಮಾಡಲಾಗಿತ್ತು. ಮೊನ್ನೆ ನಡೆದ ಅರೆಬೆತ್ತಲೆ ಪ್ರತಿಭಟನೆಯು ಕೂಡ ದೇಶದ ಗೌರವಕ್ಕೆ ಧಕ್ಕೆ ತರುವ ಷಡ್ಯಂತ್ರದ ಭಾಗವಾಗಿತ್ತು.

ರಾಹುಲ್ ಗಾಂಧಿಯವರ ಹತಾಶೆಯ ಮಟ್ಟ ಅಪಾಯದ ಗಡಿಯನ್ನು ದಾಟಿ ಹೋಗಿದೆ. ಮೊದಲು 'ಸರೆಂಡರ್' ಎಂದರು, ಈಗ 'ಮೋದಿ ಕಾಂಪ್ರಮೈಸ್ ಆಗಿದ್ದಾರೆ' ಎಂದು ಹೊಸ ವರಸೆಯನ್ನು ಆರಂಭಿಸಿದ್ದಾರೆ. ಇಂಡೋ-ಅಮೆರಿಕ ವ್ಯಾಪಾರ ಒಪ್ಪಂದದ ಪೂರ್ಣ ವಿವರ ಹೊರ ಬರುವ ಮುನ್ನವೇ 'ರೈತರನ್ನು ಬಲಿ ಕೊಡಲಾಗಿದೆ, ಜವಳಿ ಉದ್ಯಮಕ್ಕೆ ಮಾರಣಾಂತಿಕ ಪೆಟ್ಟು ನೀಡಲಾಗಿದೆ' ಎನ್ನುತ್ತಾ ಅವರು ವಿವಿಧ ವರ್ಗದವರನ್ನು ಎತ್ತಿ ಕಟ್ಟುವ ಪ್ರಯತ್ನದಲ್ಲಿ ತೊಡಗಿದ್ದಾರೆ.

ದೆಹಲಿಯಲ್ಲಿ ಜಿ-20 ಶೃಂಗಸಭೆ ನಡೆದಾಗಲೂ ಕಾಂಗ್ರೆಸ್ ದಿನ ಬೆಳಗಾದರೆ ದುರ್ಬಿನ್ ಹಾಕಿ ಮೋದಿಯವರನ್ನು ಟೀಕಿಸಿ ಸಭೆಯ ಯಶಸ್ಸು ಅವರಿಗೆ ಸಲ್ಲಬಾರದು ಎಂದು ಬಹುವಾಗಿ ಕಸರತ್ತು ಮಾಡಿತು. ಇದೀಗ, ಯುವಜನರ ಭವಿಷ್ಯಕ್ಕೆ ವೇದಿಕೆಯಾಗಿದ್ದ ಎಐ ಸಮ್ಮೇಳನವನ್ನು ವಿಫಲಗೊಳಿಸಲು ನಡೆದ ಪಿತೂರಿಗಳು ಮೋದಿಯವರ ಮೇಲಿನ ದ್ವೇಷವನ್ನು ಭಾರತದ ಮೇಲೆ ತಿರುಗಿಸಿವೆ.

ದೇಶದ ಪ್ರಗತಿಯು ಹಾಳಾದರೂ ಪರವಾಗಿಲ್ಲ ಎಂಬ ಕಾಂಗ್ರೆಸ್ಸಿಗರ ಧೋರಣೆ ಮತ್ತು ದೇಶದ ಗೌರವ ಹಾಳಾಗುವುದನ್ನು ಲೆಕ್ಕಿಸದೆ ಸಂಪೂರ್ಣ ವಿವೇಕ ಕಳೆದುಕೊಂಡು ಅವರು ನಡೆದುಕೊಳ್ಳುತ್ತಿರುವ ರೀತಿ ಸರ್ವಥಾ ಸ್ವೀಕಾರಾರ್ಹವಲ್ಲ; ಈ ಅಧಿಕಾರವಿಹೀನರು ಮತ್ತೆ ತಮ್ಮ ಸಾಮ್ರಾಜ್ಯವನ್ನು ಮರುಸ್ಥಾಪಿಸಲು, ತಾವು ಅರಾಜಕತೆಯ ದಾರಿಯಲ್ಲಿ ಸಾಗುವುದಕ್ಕೂ ಹಿಂಜರಿಯುವುದಿಲ್ಲ ಎಂಬ ಸ್ಪಷ್ಟ ಸಂದೇಶವನ್ನು ರವಾನಿಸಿದ್ದಾರೆ...

(ಲೇಖಕರು ಬಿಜೆಪಿಯ ವಕ್ತಾರರು)

ಭಟ್ಟರ್ ಸ್ಕಾಟ್

- ಸದಾನಂದ ಶೆಣೈ, ಕಾರ್ಕಳ
ಭಟ್ರೇ, ನಿದ್ದೆಗೂ, ಸಾವಿಗೂ ಇರುವ ವ್ಯತ್ಯಾಸವೇನು?
- **ನಿದ್ದೆಯಲ್ಲಿ ನೀವು ಗೊರಕೆ ಹೊಡೆಯಬಹುದು, ಸಾವಿನಲ್ಲಿ ನಿಮ್ಮ ಬಗ್ಗೆ ಬೇರೆಯವರು ಗುಣಗಾನ ಮಾಡ್ತಾರೆ!**

- ನಾಗರಾಜ ವೈದ್ಯ, ಅಂಕೋಲಾ
ಭಟ್ರೇ, ಬ್ರಹ್ಮಚಾರಿಗಳಿಗೂ, ಸಂಸಾರಿಗಳಿಗೂ ಇರುವ ವ್ಯತ್ಯಾಸ?
- **ಒಬ್ಬರಿಗೆ ಮನೆಯಲ್ಲಿ ಶಾಂತಿ ಇರುತ್ತದೆ, ಇನ್ನೊಬ್ಬರು ಶಾಂತಿಗಾಗಿ ದೇವಸ್ಥಾನಕ್ಕೆ ಹೋಗುತ್ತಾರೆ!**

- ವಾಮನಮೂರ್ತಿ, ಚಿತ್ರದುರ್ಗ
ಭಟ್ರೇ, ಕುಡಿಯುವವನಿಗೆ ಮತ್ತು ಫಿಲಾಸಫರ್‌ಗೆ ಇರುವ ಸಾಮ್ಯತೆ ಏನು?
- **ಇಬ್ಬರೂ ಮಾತು ಶುರುಮಾಡಿದರೆ ನಿಲ್ಲಿಸುವುದು ಕಷ್ಟ!**

- ಜಯರಾಮ ಉಪಾಧ್ಯ,
ಭಟ್ರೇ, ಮಳೆಯಾದಾಗ ಕಪ್ಪೆಗಳು ಯಾಕೆ ಶಬ್ದ ಮಾಡುತ್ತವೆ?
- **ಅವುಗಳ ಹೆಂಡತಿಯರು ಮಳೆ ಬರುವಾಗ ಶಾಪಿಂಗ್ ಹೋಗೋಣ ಅಂತ ವರಾತ ತೆಗೆಯುತ್ತವಂತೆ!**

- ಜಗದೀಶ ಪಾಪಯ್ಯ, ಬೆಳಗಾವಿ
ಭಟ್ರೇ, ಜೀವನದ ಅತಿ ದೊಡ್ಡ ವಿಪರ್ಯಾಸ ಯಾವುದು?
- **ಸಂಬಳ ಬರುವಾಗ ಪತ್ನಿ ಮೊದಲು ಲೆಕ್ಕ ಹಾಕುವುದು, ಖರ್ಚು ಮಾಡುವಾಗ ಗಂಡ ಲೆಕ್ಕ ಹಾಕುವುದು!**

- ಶಾಮಲತಾ ಪಾಟೀಲ, ಧಾರವಾಡ
ಭಟ್ರೇ, ಮೊಬೈಲ್ ಫೋನ್ ಬಂದ ಮೇಲೆ ಮನುಷ್ಯನಿಗೆ ಸಿಕ್ಕ ದೊಡ್ಡ ಲಾಭ?
- **ಬಾತ್‌ರೂಮ್‌ನಲ್ಲಿ ಕುಳಿತು ಕೂಡ ಇಡೀ ಪ್ರಪಂಚ ನೋಡುವುದು!**

- ಅಮರ ರೆಡ್ಡಿ, ಭೈರಸಂದ್ರ
ಭಟ್ರೇ, ಜೀವನದ ಅತಿ ದೊಡ್ಡ ಸಸ್ಪೆನ್ಸ್ ಯಾವುದು ಗೊತ್ತಾ?
- **ಹೆಂಡತಿ 'ನೋಡಿ, ಒಂದು ಮಾತು ಹೇಳ್ಬೇಕು' ಅಂದಾಗ ಗಂಡನ ಎದೆ ಬಡಿತ!**

- ಕೆ.ರಾವ್, ಸಾಗರ
ಭಟ್ರೇ, ಡಯಟ್ ಅಂದ್ರೆ ಏನು?
- **ಅತಿ ಹೆಚ್ಚು ರುಚಿಯಾದ ಪದಾರ್ಥಗಳನ್ನು ನೋಡಿ ನಂತರ ಸೌತೆಕಾಯಿ ತಿನ್ನುವುದು!**

- ಆಕಾಶ ಸಿದ್ದಪ್ಪ, ಕಾಡುಗೋಡಿ
ಭಟ್ರೇ, ಪರೀಕ್ಷೆ ಬರೆಯುವಾಗ ವಿದ್ಯಾರ್ಥಿಗಳು ಯಾಕೆ ಆಕಾಶ ನೋಡ್ತಾರೆ?
- **ಯಾಕಂದ್ರೆ, ಉತ್ತರಗಳು ಭೂಮಿ ಮೇಲೆ ಸಿಗಲ್ಲ ಅನ್ನೋದು ಅವರಿಗೆ ಕನ್ಫರ್ಮ್ ಆಗಿರುತ್ತೆ!**

- ಕಮಲಾ, (ಇಮೇಲ್ ಮೂಲಕ)
ಭಟ್ರೇ, ಪ್ರಪಂಚದ ಎಂಟನೇ ಅದ್ಭುತ ಯಾವುದು?
- **ಹೆಂಡತಿ ಹೇಳಿದ ಮಾತಿಗೆ ಗಂಡ 'ಸರಿ' ಎಂದು ಹೇಳಿ, ಆ ಮಾತು ನಿಜವಾಗುವುದು!**

ಸ್ವರ್ಣಪ್ರಾಶನ: ಮಕ್ಕಳ ಆರೋಗ್ಯದ ಸುವರ್ಣ ಅಧ್ಯಾಯ

ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ
ಡಾ. ಸಾಧನಶ್ರೀ
vveditoped@gmail.com

ಮಗುವು ಒಂದು ಕುಟುಂಬದ ಭವಿಷ್ಯ, ಸಮಾಜದ ಆಸ್ತಿಯೂ ಆಗಿದೆ. ಮಗುವಿನ ಶಾರೀರಿಕ, ಮಾನಸಿಕ ಮತ್ತು ಬೌದ್ಧಿಕ ಬೆಳವಣಿಗೆಗಳು ಸಮತೋಲನದಲ್ಲಿ ನಡೆದಾಗ ಮಾತ್ರ ಅದು ಸಂಪೂರ್ಣ ವ್ಯಕ್ತಿತ್ವವಾಗಿ ರೂಪುಗೊಳ್ಳುತ್ತದೆ. ಇಂದಿನ ವೇಗದ ಯುಗದಲ್ಲಿ ಪೋಷಕರು ಮಕ್ಕಳಿಗೆ ಉತ್ತಮ ಶಿಕ್ಷಣ, ಪೌಷ್ಟಿಕ ಆಹಾರ, ಲಸಿಕೆ, ವೈದ್ಯಕೀಯ ಆರೈಕೆ- ಎಲ್ಲವನ್ನೂ ಒದಗಿಸುವ ಪ್ರಯತ್ನದಲ್ಲಿದ್ದಾರೆ. ಆದರೂ ಮಕ್ಕಳಲ್ಲಿ ಪದೇಪದೆ ಕಾಡುವ ಜ್ವರ-ನೆಗಡಿ, ಅಲರ್ಜಿ, ಜೀರ್ಣದೋಷ, ಏಕಾಗ್ರತೆಯ ಕೊರತೆ, ಸ್ಮರಣಶಕ್ತಿ ಕುಂದುವಿಕೆ ಮುಂತಾದ ಸಮಸ್ಯೆಗಳು ಹೆಚ್ಚುತ್ತಿರು ವುದು ವಾಸ್ತವ. ಈ ಹಿನ್ನೆಲೆಯಲ್ಲಿ ಆಯುರ್ವೇದವು ಸಾವಿ ರಾರು ವರ್ಷಗಳ ಮುನ್ನವೇ ಪರಿಚಯಿಸಿದ ಒಂದು ಅಮೂಲ್ಯ ಸಂಸ್ಕಾರ ಇಂದಿಗೂ ಪ್ರಸ್ತುತತೆ ಯನ್ನು ಉಳಿಸಿಕೊಂಡಿದೆ- ಅದೇ ಸ್ವರ್ಣಪ್ರಾಶನ.

ಸ್ವರ್ಣಪ್ರಾಶನವೆಂದರೇನು?

'ಸ್ವರ್ಣ' ಎಂದರೆ ಚಿನ್ನ, 'ಪ್ರಾಶನ' ಎಂದರೆ ತಿನ್ನಿಸು ವುದು. ಅಂದರೆ ಶಾಸ್ತ್ರೋಕ್ತ ವಿಧಾನದಲ್ಲಿ ಸಂಸ್ಕರಿಸಲಾದ ಸ್ವರ್ಣವನ್ನು ಅತಿ ಸೂಕ್ಷ್ಮ ಪ್ರಮಾಣದಲ್ಲಿ ಮಗುವಿಗೆ ನೀಡುವುದು ಸ್ವರ್ಣಪ್ರಾಶನ. ಇದು ಕೇವಲ ಚಿನ್ನವನ್ನು ತಿನ್ನಿಸುವ ಪದ್ಧತಿಯಲ್ಲ. ಸಂಸ್ಕರಿತ, ಶೋಧಿತ, ಭಸ್ಮೀಕೃತ ಸ್ವರ್ಣವನ್ನು ಔಷಧೀಯ ರೂಪದಲ್ಲಿ ನೀಡುವ ರಸಾಯನ ಕ್ರಮ.

ಶಾಸ್ತ್ರೀಯ ಆಧಾರ

ಸ್ವರ್ಣಪ್ರಾಶನದ ಉಲ್ಲೇಖವು ಕಾಶ್ಯಪ ಸಂಹಿತಾ ಸಮೇತ ಎಲ್ಲಾ ಬೃಹತ್ರಯಿಗಳಲ್ಲಿಯೂ ಕಾಣಿಸಿಕೊಳ್ಳುತ್ತದೆ. ಅಲ್ಲಿ 'ಸ್ವರ್ಣಪ್ರಾಶನಂ ಮೇಧಾಗ್ನಿಬಲವರ್ಧನಮ್' ಎಂದು ಹೇಳಿ, ಸ್ವರ್ಣ ಸೇವನೆಯಿಂದ ಮೇಧಾಶಕ್ತಿ (ಬುದ್ಧಿಶಕ್ತಿ), ಅಗ್ನಿ (ಜೀರ್ಣಶಕ್ತಿ) ಮತ್ತು ದೇಹಬಲವು ವೃದ್ಧಿಯಾಗುತ್ತದೆ ಎಂದು ವಿವರಿಸಲಾಗಿದೆ. ಇದು ಕೇವಲ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುವುದಲ್ಲ, ಜತೆಗೆ ಸಮಗ್ರ ಬೆಳವಣಿಗೆಗೂ ಸಹಾಯಕವೆಂದು ಶಾಸ್ತ್ರದಲ್ಲಿ ವರ್ಣಿಸಲಾಗಿದೆ.

ಖನಿಜವನ್ನು ನೇರವಾಗಿ ಸೇವಿಸಬಹುದೇ?

ಪ್ರಕೃತಿಯಲ್ಲಿ ದೊರೆಯುವ ಚಿನ್ನವನ್ನು ನೇರವಾಗಿ ಸೇವಿಸುವುದು ಆಯುರ್ವೇದದ ದೃಷ್ಟಿಯಲ್ಲಿ ಯೋಗ್ಯವಲ್ಲ. ಯಾಕೆಂದರೆ ಅದು ದೇಹಕ್ಕೆ ಅವಶ್ಯಕವಾದ ರೀತಿಯಲ್ಲಿ ಪರಿವರ್ತಿತವಾಗುವುದಿಲ್ಲ. ಶರೀರವು ಪಂಚಭೂತಗಳ ಸಮನ್ವಯದಿಂದ ನಿರ್ಮಿತವಾಗಿದೆ- ಭೂಮಿ, ಆಪ್, ತೇಜಸ್, ವಾಯು ಮತ್ತು ಆಕಾಶ. ಇದೇ ರೀತಿಯಾಗಿ ಖನಿಜವೂ ಭೌತಿಕ ಗುಣಗಳನ್ನು ಹೊಂದಿದೆ. 'ಸಂಸ್ಕಾರೋ ಹಿ ಗುಣಾಂತರಾಧಾನಮ್'- ಸಂಸ್ಕಾರವು ಗುಣವನ್ನು ಪರಿವರ್ತಿಸುತ್ತದೆ. ಚಿನ್ನವನ್ನು ದೇಹಕ್ಕೆ ಗ್ರಾಹ್ಯವಾಗುವ, ಸೂಕ್ಷ್ಮವಾಗುವ ಮತ್ತು ಧಾತುಪೋಷಣೆಗೆ ಯೋಗ್ಯವಾಗುವ ಸ್ಥಿತಿಗೆ ತರುವುದೇ ಸಂಸ್ಕಾರದ ಉದ್ದೇಶ.

ಶೋಧನ ಮತ್ತು ಸಂಸ್ಕಾರ

ಆಯುರ್ವೇದದಲ್ಲಿ ಲೋಹಗಳು ಮತ್ತು ಖನಿಜಗಳನ್ನು ಔಷಧ ರೂಪದಲ್ಲಿ ಬಳಸುವ ಮುನ್ನ ಅವುಗಳನ್ನು ಶೋಧನ (ಶುದ್ಧೀಕರಣ) ಮತ್ತು ಮಾರಣ (ಭಸ್ಮೀ ಕರಣ) ಎಂಬ ಪ್ರಕ್ರಿಯೆಗಳಿಗೆ ಒಳಪಡಿಸಲಾಗುತ್ತದೆ. ಈ ಪ್ರಕ್ರಿಯೆಗಳು ಕೇವಲ ಭೌತಿಕ ಶುದ್ಧೀಕರಣವಲ್ಲ; ಅವು ಔಷಧದ ಗುಣಗಳನ್ನು ಪರಿವರ್ತಿಸಿ, ದೇಹಕ್ಕೆ ಸೂಕ್ಷ್ಮವಾಗಿ ಪ್ರವೇಶಿಸುವ ಶಕ್ತಿಯನ್ನು ನೀಡುತ್ತವೆ. ಶೋಧನ ಪ್ರಕ್ರಿಯೆ ಯಲ್ಲಿ ಲೋಹವನ್ನು ವಿವಿಧ ದ್ರವ್ಯಗಳಲ್ಲಿ ಸಂಸ್ಕರಿಸ ಲಾಗುತ್ತದೆ. ಇದರಿಂದ ಅಶುದ್ಧಿಗಳು ನಿವಾರಣೆಯಾಗು ತ್ತವೆ ಮತ್ತು ಅದರ ದೋಷಕಾರಿ ಅಂಶಗಳು ಕಡಿಮೆ ಯಾಗುತ್ತವೆ. ನಂತರ ಮಾರಣ ಪ್ರಕ್ರಿಯೆಯಲ್ಲಿ ನಿಯಂತ್ರಿತ ವಿಧಾನದಲ್ಲಿ ಭಸ್ಮ ರೂಪಕ್ಕೆ ಪರಿವರ್ತಿಸಲಾ ಗುತ್ತದೆ. ಈ ಭಸ್ಮವು ಸೂಕ್ಷ್ಮ ಕಣಗಳಾಗಿ ರೂಪುಗೊಂಡು ದೇಹಕ್ಕೆ ಸುಲಭವಾಗಿ ಗ್ರಾಹ್ಯವಾಗುತ್ತದೆ. ಈ ರೀತಿಯಾಗಿ ಸಂಸ್ಕರಿತವಾದ ಸ್ವರ್ಣವೇ 'ಸ್ವರ್ಣ ಭಸ್ಮ' ಎಂದು ಕರೆಯ ಲ್ಪಡುತ್ತದೆ. ಇದು ಕೇವಲ ಚಿನ್ನವಲ್ಲ; ಆಯುರ್ವೇದದ ದೀರ್ಘ ಸಂಸ್ಕಾರದ ಫಲವಾಗಿ ರೂಪುಗೊಂಡ ಔಷಧ.

ಸ್ವರ್ಣದ ಗುಣಗಳು

ಸ್ವರ್ಣವನ್ನು ಆಯುರ್ವೇದದಲ್ಲಿ 'ರಸಾಯನ ದ್ರವ್ಯ' ವೆಂದು ಪರಿಗಣಿಸಲಾಗಿದೆ. ಅದರ ಗುಣಗಳು ಹೀಗಿವೆ:
ರಸ: ಮಧುರ, ಧಾತುಪೋಷಕ.
ಗುಣ: ಲಘು, ಸ್ನಿಗ್ಧ-ಸೂಕ್ಷ್ಮ ಸ್ರೋತಸ್ಸುಗಳಲ್ಲಿ ಪ್ರವೇಶಶಕ್ತಿ.
ವೀರ್ಯ: ಶೀತ, ಪಿತ್ತಶಮನಕಾರಿ.
ವಿಪಾಕ: ಮಧುರ, ಓಜೋವರ್ಧಕ.
ಪ್ರಭಾವ: ಮೇಧ್ಯ, ರಸಾಯನ, ಆಯುರ್ವರ್ಧಕ.
ಸ್ವರ್ಣವು ಓಜಸ್ಸನ್ನು ವೃದ್ಧಿಸಿ ವ್ಯಾಧಿಕ್ಷಮತ್ವವನ್ನು ಬಲಪಡಿಸುತ್ತದೆ.

ಯಾವ ಚಿನ್ನ ಉಪಯೋಗಿಸಬೇಕು?

ಸ್ವರ್ಣಪ್ರಾಶನಕ್ಕೆ ಅಪರಂಜಿ (24 ಕ್ಯಾರೆಟ್) ಶುದ್ಧ ಚಿನ್ನ ಬಳಸಬೇಕು. ಆಭರಣ ಚಿನ್ನದಲ್ಲಿ ತಾಮ್ರ ಮುಂತಾದ ಮಿಶ್ರಧಾತುಗಳಿರುತ್ತವೆ. ಆದ್ದರಿಂದ ಅದು ಔಷಧೀಯ ಉಪಯೋಗಕ್ಕೆ ಯೋಗ್ಯವಲ್ಲ. ಸಾಮಾನ್ಯವಾಗಿ ಸ್ವರ್ಣದ ಶೋಧನದಲ್ಲಿ ಅಪರಂಜಿ ಚಿನ್ನವನ್ನು ಕೆಂಪಾಗುವ ತನಕ ಕಾಯಿಸಿ, ನಂತರ ವಿವಿಧ ಔಷಧೀಯ ಕಷಾಯಗಳಲ್ಲಿ ಅದ್ದಿ ಶುದ್ಧಗೊಳಿಸಲಾಗುತ್ತದೆ. ಇಂಥ ಚಿನ್ನ ಬಳಸಲು ಯೋಗ್ಯ

ಸ್ವರ್ಣಪ್ರಾಶನದ ವಿಧಾನಗಳು

- **ಉಜ್ಜಿ ನೀಡುವ ವಿಧಾನ:** ಅಪರಂಜಿ ಚಿನ್ನವನ್ನು (ಬಳೆ/ಉಂಗುರ) ಒಂದು ಹನಿ ಜೇನುತುಪ್ಪ ಮತ್ತು ತುಪ್ಪದೊಂದಿಗೆ ಸಾಣೆ ಕಲ್ಲಿನ ಮೇಲೆ ಉಜ್ಜಿ, ಮಗುವಿಗೆ ನಿತ್ಯವೂ ನೆಕ್ಕಿಸುವುದು.
- **ಸ್ವರ್ಣ ಸಂಸ್ಕರಿತ ಹಾಲು:** ಅಕ್ಕಸಾಲಿಗರ ಬಳಿ ಅಪರಂಜಿ ಚಿನ್ನದ ಹಾಳೆಯನ್ನು ಪಡೆದು, ಆ ಚಿನ್ನದ ಹಾಳೆಯನ್ನು ಅರ್ಧ ಅಂಶ ಹಾಲು, ಅರ್ಧ ಅಂಶ ನೀರಿನಲ್ಲಿ 2-3 ನಿಮಿಷ ಕುದಿಸಿ ನಂತರ ಆ ಹಾಲನ್ನು ನಿತ್ಯವೂ ಸೇವಿಸುವುದು. ಈ ಹಾಲು ರಸಾಯನವಾಗಿ ಎಲ್ಲಾ ಧಾತುಗಳನ್ನು ಪೋಷಿಸುತ್ತದೆ. ಗರ್ಭಾವಸ್ಥೆ ಯಲ್ಲಿ- ಗರ್ಭಿಣಿಯರು ಸ್ವರ್ಣ ಸಂಸ್ಕರಿತ ಹಾಲನ್ನು ನಿತ್ಯವೂ ಸೇವಿಸುವುದು ಭ್ರೂಣದ ಬೆಳವಣಿಗೆಗೆ ಪೂರಕವೆಂದು ಪರಿಗಣಿಸಲಾಗಿದೆ.
- **ವಚಾ-ಸ್ವರ್ಣ ವಿಧಾನ:** ಬಜೆ ಬೇರಿನ ಕಡ್ಡಿಯ ಒಳಗೆ ಸುಸಂಸ್ಕರಿತ ಚಿನ್ನದ ಕಡ್ಡಿಯನ್ನು ಅಳವಡಿಸಿ, ಇದನ್ನು ನಿತ್ಯವೂ ಜೇನುತುಪ್ಪ ಮತ್ತು ತುಪ್ಪದ ಜತೆ ತೇಯ್ದು ಮಗುವಿಗೆ ನೆಕ್ಕಿಸುವುದು.
- **ಸ್ವರ್ಣಬಿಂದು ಪ್ರಾಶನ:** ನುರಿತ ಆಯುರ್ವೇದ ವೈದ್ಯರು ನಿಗದಿತ ಪ್ರಮಾಣದ ಸ್ವರ್ಣ ಭಸ್ಮ + ಮೇಧ್ಯ ತುಪ್ಪ + ಜೇನುತುಪ್ಪಗಳನ್ನು ಹನಿ ಪ್ರಮಾಣದಲ್ಲಿ ಮಿಶ್ರಣ ಮಾಡಿ ನೀಡುವರು. ಪುಷ್ಯ ನಕ್ಷತ್ರದಂದು ತಿಂಗಳಿಗೆ ಒಮ್ಮೆ ನೀಡುವುದು ಜನಪ್ರಿಯ. ತಿಂಗಳಿಗೊಮ್ಮೆ ನೀಡುವ ಸ್ವರ್ಣಬಿಂದು ಪ್ರಾಶನವು ಹೆಚ್ಚು ಪ್ರಚಲಿತದಲ್ಲಿದ್ದರೂ ನಿತ್ಯಪ್ರಾಶನವೇ ಹೆಚ್ಚು ಪರಿಣಾಮಕಾರಿ.

ಉತ್ತಮ ಕಾಲ ಯಾವುದು?

ಆಯುರ್ವೇದದಲ್ಲಿ ಔಷಧಿಯ ಫಲಪ್ರದತೆ ಕೇವಲ ಅದರ ಗುಣಧರ್ಮದಿಂದ ಮಾತ್ರ ನಿರ್ಧಾರವಾಗು ವುದಿಲ್ಲ; ಕಾಲ (ಸಮಯ) ಕೂಡ ಅಷ್ಟೇ ಮುಖ್ಯ. ಸರಿಯಾದ ಕಾಲದಲ್ಲಿ ನೀಡಿದ ಔಷಧಿಯೇ ಭೇಷಜ (ಔಷಧ)ವಾಗಿ ಕಾರ್ಯನಿರ್ವಹಿಸುತ್ತದೆ. ಸ್ವರ್ಣ ಪ್ರಾಶನವು 'ರಸಾಯನ' ಕ್ರಮವಾಗಿರುವುದರಿಂದ, ಅದನ್ನು ನೀಡುವ ಸಮಯವೂ 'ರಸಾಯನ ಕಾಲ' ದಲ್ಲೇ ಇರಬೇಕು.

ರಸಾಯನ ಕಾಲ ಎಂದರೇನು? ಬೆಳಗ್ಗೆ ಖಾಲಿ ಹೊಟ್ಟೆಯಲ್ಲಿ, ಅಂದರೆ ರಾತ್ರಿ ವಿಶ್ರಾಂತಿಯ ನಂತರ, ಜಠರಾಗ್ನಿ ಸ್ವಾಭಾವಿಕವಾಗಿ ಸಮಸ್ಥಿತಿಯಲ್ಲಿ ಇರುವ ಸಮಯವನ್ನು ಆಯುರ್ವೇದದಲ್ಲಿ ರಸಾಯನ ಕಾಲ ಎಂದು ಕರೆಯುತ್ತಾರೆ. ಈ ಸಮಯದಲ್ಲಿ ಸ್ರೋತಸ್ಸುಗಳು ಸ್ವಚ್ಛವಾಗಿರುತ್ತವೆ, ಅಗ್ನಿಯು ಜೀರ್ಣಕ್ಕೆ ಸಿದ್ಧವಾಗಿರುತ್ತದೆ, ಹಿಂದಿನ ಆಹಾರ ಸಂಪೂರ್ಣ ಜೀರ್ಣವಾಗಿರುತ್ತದೆ, ಔಷಧಿಯ ಅವಶೋಷಣ ಶಕ್ತಿ ಹೆಚ್ಚು. ಹೀಗಾಗಿ ಸ್ವರ್ಣಪ್ರಾಶನವನ್ನು ಬೆಳಗ್ಗೆ ಮಗು ಎದ್ದ ಕೂಡಲೇ, ಯಾವುದೇ ಆಹಾರ ಅಥವಾ ಸ್ತನ್ಯಪಾನ ಮಾಡುವ ಮೊದಲು ನೀಡುವುದು ಅತ್ಯುತ್ತಮ.

ಸ್ವರ್ಣಪ್ರಾಶನ ನೀಡಿದ ಬಳಿಕ ಕನಿಷ್ಠ ಅರ್ಧ ಗಂಟೆ (30 ನಿಮಿಷ) ಅಂತರ ನೀಡಬೇಕು. ಈ ಅವಧಿಯಲ್ಲಿ ಔಷಧಿ ಜಠರಾಗ್ನಿಯಲ್ಲಿ ಸಂಸ್ಕರಿತವಾಗುತ್ತದೆ, ಸೂಕ್ಷ್ಮ ಕಣಗಳು ಸ್ರೋತಸ್ಸುಗಳಲ್ಲಿ ಪ್ರವೇಶಿಸುತ್ತವೆ , ಧಾತುಮಟ್ಟದ ಕಾರ್ಯಾರಂಭವಾಗುತ್ತದೆ. ಆ ನಂತರವೇ ಆಹಾರ ಅಥವಾ ಸ್ತನ್ಯಪಾನ ನೀಡುವುದು ಯೋಗ್ಯ. ಇದನ್ನು ಪಾಲಿಸದಿದ್ದರೆ ಔಷಧಿಯ ಪರಿಣಾಮ ಕುಂಠಿತವಾಗುತ್ತದೆ.

ಯಾವ ಸಮಯದಲ್ಲಿ ನೀಡಬಾರದು?

- **ಆಹಾರದ ನಂತರ:** ಆಹಾರದ ನಂತರ ಜಠರಾಗ್ನಿ ಆಗಲೇ ಆಹಾರ ಜೀರ್ಣದಲ್ಲಿ ತೊಡಗಿರುತ್ತದೆ. ಈ ಸಂದರ್ಭದಲ್ಲಿ ಸ್ವರ್ಣಪ್ರಾಶನ ನೀಡಿದರೆ ಅದು ಸರಿಯಾಗಿ ಅವಶೋಷಿತವಾಗದೆ, ಆಹಾರದೊಂದಿಗೆ ಬೆರೆತು ನಿಷ್ಪ್ರಯೋಜಕವಾಗುತ್ತದೆ.
- **ಹಸಿವಿಲ್ಲದಾಗ:** ಅಗ್ನಿ ಮಂದವಾಗಿದ್ದರೆ ಔಷಧಿ ಜೀರ್ಣವಾಗದು. ಆಯುರ್ವೇದದ ಪ್ರಕಾರ 'ಆಮ' ಉತ್ಪತ್ತಿಯಾಗುವ ಸಾಧ್ಯತೆ ಇರುತ್ತದೆ.
- **ಅಜೀರ್ಣ ಸ್ಥಿತಿ:** ಅತಿಸಾರ, ಮಲಬದ್ಧತೆ, ಹೊಟ್ಟೆ ಉಬ್ಬರ, ಜೀರ್ಣದೋಷ ಇರುವಾಗ ನೀಡಬಾರದು.
- **ಜ್ವರ, ನೆಗಡಿ ಸಮಯದಲ್ಲಿ:** ಜ್ವರ (ಜ್ವರಾವಸ್ಥೆ) ಅಥವಾ ನೆಗಡಿ ಇರುವಾಗ ದೇಹದ ಅಗ್ನಿ ವ್ಯತ್ಯಯಗೊಂಡಿರುತ್ತದೆ. ಈ ಸಂದರ್ಭದಲ್ಲಿ ರಸಾಯನ ನೀಡುವುದು ಯುಕ್ತವಲ್ಲ, ಮೊದಲು ಆ ತಾತ್ಕಾಲಿಕ ರೋಗಾವಸ್ಥೆ ನಿವಾರಣೆ ಅಗತ್ಯ.

ಯಾವ ವಯಸ್ಸಿನಲ್ಲಿ ನೀಡಬಹುದು?

ಹುಟ್ಟಿದ ದಿನದಿಂದ 16 ವರ್ಷಗಳವರೆಗೆ ಸ್ವರ್ಣಪ್ರಾಶನ ವನ್ನು ನೀಡಬಹುದು. ಆದರೆ ವಯಸ್ಸು, ದೇಹಪ್ರಕೃತಿ (ವಾತ-ಪಿತ್ತ-ಕಫ), ಜೀರ್ಣಶಕ್ತಿ, ಆರೋಗ್ಯ ಸ್ಥಿತಿ- ಇವುಗಳನ್ನು ಪರಿಗಣಿಸಿ ವೈದ್ಯರ ಸಲಹೆಯೊಂದಿಗೆ ನೀಡಬೇಕು.

ಸ್ವರ್ಣಪ್ರಾಶನದ ಲಾಭಗಳು

ಆಯುರ್ವೇದದ ದೃಷ್ಟಿಯಲ್ಲಿ, ಬಾಲ್ಯವು ದೇಹ- ಮನಸ್ಸಿನ ಅತ್ಯಂತ ಸೂಕ್ಷ್ಮ ಮತ್ತು ರೂಪುಗೊಳ್ಳುವ ಹಂತ. ಈ ಸಮಯದಲ್ಲಿ ಸರಿಯಾದ ಪೋಷಣೆಯೂ, ಸಂಸ್ಕಾರಗಳೂ ಇದ್ದರೆ ಭವಿಷ್ಯದಲ್ಲಿ ಸ್ವಾಸ್ಥ್ಯದ ಬುನಾದಿ ಬಲವಾಗುತ್ತದೆ.

- **ಮೇಧಾ ವರ್ಧನ (ಬುದ್ಧಿವರ್ಧನೆ):** ಮೇಧಾ ಎಂದರೆ ಕೇವಲ ಓದಿನಲ್ಲಿ ಚೆನ್ನಾಗಿರುವುದು ಅಲ್ಲ, ಅದು- ಗ್ರಹಣ ಶಕ್ತಿ, ಧಾರಣ ಶಕ್ತಿ, ಸ್ಮರಣೆ, ವಿವೇಕ, ಏಕಾಗ್ರತೆ. ಸ್ವರ್ಣವು 'ಮೇಧ್ಯ ರಸಾಯನ'ದ ಗುಣ ಹೊಂದಿದೆ. ಇದು ಮನಸ್ಸು ಮತ್ತು ಬುದ್ಧಿಗೆ ಪೋಷಕ. ಆಯುರ್ವೇದದ ಪ್ರಕಾರ ಬುದ್ಧಿಯ ಆಧಾರ 'ಸಾತ್ವಿಕ ಮನಸ್ಸು' ಮತ್ತು 'ಉತ್ತಮ ಓಜಸ್ಸು'. ಸ್ವರ್ಣವು ಓಜಸ್ಸನ್ನು ವೃದ್ಧಿಸುವುದರಿಂದ, ಮಕ್ಕಳಲ್ಲಿ ಆತ್ಮವಿಶ್ವಾಸ, ಸ್ಥಿರತೆ ಮತ್ತು ಸ್ಪಷ್ಟ ಚಿಂತನೆ ಬೆಳೆಯುತ್ತದೆ. ಶಾಸ್ತ್ರದಲ್ಲಿ ಉಲ್ಲೇಖಿಸಿರುವಂತೆ- ಒಂದು ತಿಂಗಳ ನಿಯತ ಸ್ವರ್ಣಪ್ರಾಶನವು ಮಗುವನ್ನು ಬುದ್ಧಿವಂತನನ್ನಾಗಿ ಮಾಡಿದರೆ, ಆರು ತಿಂಗಳ ನಿತ್ಯಸೇವನೆಯು ಮಗುವನ್ನು 'ಶ್ರುತಧರ'ನನ್ನಾಗಿ ಮಾಡುತ್ತದೆ (ಕೇಳಿದುದನ್ನು ನೆನಪಿಟ್ಟುಕೊಳ್ಳುವ ಸಾಮರ್ಥ್ಯ). ಇದು ವಿಶೇಷವಾಗಿ ವಿದ್ಯಾಭ್ಯಾಸದ ಪ್ರಾರಂಭದ ಹಂತದಲ್ಲಿರುವ ಮಕ್ಕಳಿಗೆ ಪೂರಕ.
- **ಅಗ್ನಿ ವರ್ಧನ (ಜೀರ್ಣಶಕ್ತಿ ವೃದ್ಧಿ):** ಆಯು ರ್ವೇದದಲ್ಲಿ ಅಗ್ನಿಯೇ ಆರೋಗ್ಯದ ಮೂಲ. ಅಗ್ನಿ ದುರ್ಬಲವಾದರೆ- ಅಜೀರ್ಣ, ಹೊಟ್ಟೆ ಉಬ್ಬರ, ಮಲಬದ್ಧತೆ, ಪೌಷ್ಟಿಕಾಂಶ ಶೋಷಣದ ಕೊರತೆ, ಮರುಮರು ಜ್ವರ, ನೆಗಡಿಗೆ ಕಾರಣವಾಗುತ್ತದೆ. ಸ್ವರ್ಣಪ್ರಾಶನವು ಜಠರಾಗ್ನಿಯನ್ನು ಉತ್ತೇಜಿಸಿ, ಸಮಪ್ರಜ್ವಲಿತ ಸ್ಥಿತಿಯಲ್ಲಿ ಇಡುತ್ತದೆ. ಅಗ್ನಿ ಸುಸ್ಥಿರವಾಗಿದ್ದರೆ- ಆಹಾರ ಸರಿಯಾಗಿ ಜೀರ್ಣವಾಗಿ, ಧಾತುಪೋಷಣೆ ಉತ್ತಮವಾಗಿ, ಮಗು ಚುರುಕಾಗುತ್ತದೆ.
- **ಬಲ ವರ್ಧನ (ಶಾರೀರಿಕ ಬಲ ಮತ್ತು ರೋಗ ನಿರೋಧಕ ಶಕ್ತಿ):** ಓಜಸ್ಸನ್ನು ಹೆಚ್ಚಿಸುತ್ತದೆ ಮತ್ತು ವ್ಯಾಧಿಕ್ಷಮತ್ವವನ್ನು (Immunity) ಬಲಪಡಿಸುತ್ತದೆ. ದೇಹದ ಸೂಕ್ಷ್ಮ ಸ್ರೋತಸ್ಸುಗಳಲ್ಲಿ ಪ್ರವೇಶಿಸಿ ಧಾತುಮಟ್ಟದಲ್ಲಿ ಕಾರ್ಯನಿರ್ವಹಿಸುವುದರಿಂದ, ಇದು ಆಂತರಿಕ ಬಲವನ್ನು ವೃದ್ಧಿಸುತ್ತದೆ.
- **ಆಯುಷ್ಯ ವರ್ಧನ (ದೀರ್ಘಾಯುಷ್ಯ):** ಸ್ವರ್ಣವು 'ರಸಾಯನ ದ್ರವ್ಯ'. ರಸಾಯನಗಳ ಮುಖ್ಯ ಉದ್ದೇಶವೆಂದರೆ ಧಾತು ಪುನರುಜ್ಜೀವನ, ವಯೋ ವೃದ್ಧಿ ನಿಧಾನಗೊಳಿಸುವುದು ಮತ್ತು ಜೀವಕಾಂತಿ ಯನ್ನು ಕಾಪಾಡುವುದು. ಬಾಲ್ಯದಲ್ಲಿ ಸ್ವರ್ಣ ಪ್ರಾಶನವು ಧಾತು ನಿರ್ಮಾಣದ ಪ್ರಕ್ರಿಯೆಯನ್ನು ಸಮತೋಲನಗೊಳಿಸುತ್ತದೆ. ಧಾತುಗಳು ಬಲವಾಗಿದ್ದರೆ, ಮುಂದಿನ ಜೀವನದಲ್ಲಿ ದೇಹದ ಸ್ಥೈರ್ಯ ಉತ್ತಮವಾಗಿರುತ್ತದೆ.
- **ಮಂಗಳ, ಪುಣ್ಯ (ಶುಭಫಲಕಾರಿತ್ವ):** ಸ್ವರ್ಣವು ಭಾರತೀಯ ಸಂಸ್ಕೃತಿಯಲ್ಲಿ ಶುದ್ಧತೆ, ಶ್ರೇಷ್ಠತೆ ಮತ್ತು ಮಂಗಳದ ಪ್ರತೀಕ. ಆಧ್ಯಾತ್ಮಿಕವಾಗಿ: ಸಾತ್ವಿಕ ಗುಣ ವೃದ್ಧಿ, ಮನಃಶಾಂತಿ ಮತ್ತು ಸಕಾರಾತ್ಮಕ ಸ್ಪಂದನೆಗೆ ಸಹಾಯಕಾರಿ. ಬಾಲ್ಯದಲ್ಲಿ ಸಾತ್ವಿಕ ಸಂಸ್ಕಾರಗಳು ಅತ್ಯಂತ ಪರಿಣಾಮಕಾರಿ. ಸ್ವರ್ಣಪ್ರಾಶನವನ್ನು ಸಂಸ್ಕಾರ ರೂಪದಲ್ಲಿ ಮಾಡುವುದರಿಂದ, ಅದು ಕೇವಲ ಔಷಧೀಯ ಲಾಭವಷ್ಟೇ ಅಲ್ಲ- ಸಾಂಸ್ಕೃತಿಕ -ಮಾನಸಿಕ ಪ್ರಭಾವವನ್ನೂ ಉಂಟುಮಾಡುತ್ತದೆ.
- **ವೃಷ್ಯ (ಪ್ರಜನನ ಶಕ್ತಿ ಪೋಷಣೆ):** 'ವೃಷ್ಯ' ಎಂದರೆ ಪ್ರಜನನ ಧಾತುಗಳನ್ನು ಪೋಷಿಸುವುದು. ಬಾಲ್ಯದಲ್ಲಿ ನೀಡಿದ ರಸಾಯನಗಳು ಶರೀರ ಧಾತುಗಳ ಸಮತೋಲನವನ್ನು ಸಾಧಿಸಿ, ಭವಿಷ್ಯದಲ್ಲಿ ಸುಸ್ಥಿರ ಪ್ರಜನನ ಆರೋಗ್ಯಕ್ಕೆ ಸಹಾಯಕಾರಿ. ಇದು ತಕ್ಷಣದ ಪರಿಣಾಮವಲ್ಲ; ದೀರ್ಘಕಾಲದ ಧಾತು ಪೋಷಣೆಯ ಫಲ.
- **ಗ್ರಹಾಪಹ (ಅಶುಭ ಪ್ರಭಾವ ನಿವಾರಣೆ):** ಶಾಸ್ತ್ರಗಳಲ್ಲಿ 'ಗ್ರಹ' ಎಂಬ ಪದವನ್ನು ಹಲವು ಅರ್ಥಗಳಲ್ಲಿ ಬಳಸಲಾಗಿದೆ. ಅಸ್ಪಷ್ಟ ಮನೋವೈಕಲ್ಯ, ಅತಿಭಯ, ಚಂಚಲತೆ, ಅಸಹಜ ವರ್ತನೆ ಎಂಬ ಅರ್ಥಗಳಿವೆ. ಸ್ವರ್ಣಪ್ರಾಶನವು ಮನಸ್ಸನ್ನು ಸ್ಥಿರಗೊಳಿಸುತ್ತದೆ, ಭಯ-ಚಿಂತೆಗಳನ್ನು ಕಡಿಮೆ ಮಾಡಿ ನಿದ್ರೆಯನ್ನು ಸುಧಾರಿಸುತ್ತದೆ. ಇದರಿಂದ ಮಗುವಿನ ವರ್ತನೆ ಸಮತೋಲನದಲ್ಲಿ ಇರುತ್ತದೆ.

ಒಟ್ಟಾರೆ ಸ್ವರ್ಣಪ್ರಾಶನವು ಕೇವಲ ಒಂದು ಔಷಧವಲ್ಲ. ಅದು ಬುದ್ಧಿ, ಜೀರ್ಣಶಕ್ತಿ, ರೋಗನಿರೋಧಕ ಶಕ್ತಿ, ಧಾತುಪೋಷಣೆ, ಮಾನಸಿಕ ಸ್ಥೈರ್ಯ ಇವುಗಳ ಸಮನ್ವಯದ ಮೂಲಕ ಸರ್ವಾಂಗೀಣ ಬೆಳವಣಿಗೆಗೆ ದಾರಿಯಾಗುತ್ತದೆ. ಆದರೆ, ಇದು ವೈದ್ಯರ ಮಾರ್ಗದರ್ಶನದಲ್ಲಿ, ಶಾಸ್ತ್ರೋಕ್ತ ಸಂಸ್ಕರಿತ ಸ್ವರ್ಣದಿಂದ, ಸರಿಯಾದ ಕಾಲ ಮತ್ತು ಪ್ರಮಾಣದಲ್ಲಿ ನೀಡಿದಾಗ ಮಾತ್ರ ಪೂರ್ಣ ಫಲಪ್ರದ.

ಸ್ನೇಹಿತರೆ, ಸ್ವರ್ಣಪ್ರಾಶನವು ಕೇವಲ ಒಂದು ಆಚರಣೆ ಅಲ್ಲ; ಅಥವಾ ಯಾವುದೋ ಅಡಗೂಲಜ್ಜಿಯ ಕಥೆಯಲ್ಲ, ಇದು ಶುದ್ಧ ವಿಜ್ಞಾನ. ಇದು ಖನಿಜವನ್ನು ಔಷಧವಾಗಿಸುವ ಆಯುರ್ವೇದದ ಜ್ಞಾನ. ಸರಿಯಾದ ಸಂಸ್ಕಾರ, ಸರಿಯಾದ ಕಾಲ, ಸರಿಯಾದ ಪ್ರಮಾಣ- ಇವುಗಳ ಸಮನ್ವಯದಲ್ಲೇ ಅದರ ಪೂರ್ಣಫಲ ದೊರೆಯುತ್ತದೆ. ಬಾಲ್ಯದಲ್ಲಿ ಬಿತ್ತಿದ ಆರೋಗ್ಯದ ಬೀಜಗಳು ಜೀವನಪೂರ್ಣ ಫಲ ನೀಡುತ್ತವೆ. ಸ್ವರ್ಣಪ್ರಾಶನವು ಅಂಥ ಸುವರ್ಣಮಯ ರಸಾಯನ ಸಂಸ್ಕಾರ- ದೇಹ, ಮನಸ್ಸು ಮತ್ತು ಬುದ್ಧಿಯ ಸಮಗ್ರ ಬೆಳವಣಿಗೆಗೆ ದಾರಿದೀಪ.

ಪ್ರತಿಸ್ಪಂದನ
ಶಂಕರನಾರಾಯಣ ಭಟ್

ಬರೆಯಲು ಕೂರಲೇಬೇಕು!

ಶಿಶಿರ್ ಹೆಗಡೆಯವರ 'ಶಿಶಿರಕಾಲ' ಅಂಕಣಬರಹವು (ಫೆ.27) ಒಂದಿಷ್ಟು ಚಿಂತನೆಗೆ ಹಚ್ಚಿದ್ದು ನಿಜ. ಬರೆಯಬೇಕು ಎನ್ನುವವರು ಅದಕ್ಕೂ ಮೊದಲು ಕೆಲ ಹೊತ್ತಾದರೂ ಒಂದೆಡೆ ಕೂತಿರಬೇಕು ಎಂಬುದು ಇಲ್ಲಿನ ಅಂಬೋಣ.

ಆದರೆ ಒಂದಂತೂ ನಿಜ. ಬರೆಯಲೇಬೇಕು ಎಂದು ಒಂದು ಕಡೆ ಎಷ್ಟೊತ್ತು ಕುಳಿತರೂ, ಹಲವು ಸಲ ಏನು ಬರೆಯುವುದು ಎಂಬುದೇ ತಿಳಿಯದೆ ಮನಸ್ಸು ಗೊಂದಲಕ್ಕೆ ಸಿಲುಕುವುದುಂಟು. ಒಂದೊಮ್ಮೆ ಪಟ್ಟುಹಿಡಿದು ಏನಾದರೂ ಬರೆದು ಮುಗಿಸಿದರೂ, ಮನಸ್ಸಿಗೆ ಸಮಾ ಧಾನ ಸಿಗದು. ಹಾಗಂತ, ಬರೆಯದೇ ಬರೀ ವಿಚಾರ ಮಾಡಿಕೊಂಡೇ ಕುಳಿತರೂ ಸಮಯ ಮೀರಿ ಹೋಗಿಬಿಡು ತ್ತದೆ. ಹೀಗಾಗಿ, ಮಾಡು ತ್ತಿರುವ ಇತರ ಕೆಲಸಗಳ ಒಟ್ಟೊಟ್ಟಿಗೇ ಬರೆಯುವ ವಿಚಾರವನ್ನೂ ಮಾಡುತ್ತಾ ಹೋದರೆ, ಒಂದಲ್ಲಾ ಒಂದು ವಿಷಯವು ಹೊಳೆದೇತೀ ರುತ್ತದೆ. ಉದಾಹರಣೆಗೆ, ತೋಟದಲ್ಲಿ ಗಿಡಗಳಿಗೆ ನೀರುಣಿಸುವಾಗ, ಕಸ ಗುಡಿಸುವಾಗ, ಅಡಕೆ ಹೆಕ್ಕು ವಾಗ, ಮನೆಗೆಲಸದಲ್ಲಿ ಹೆಂಡತಿಗೆ ಸಹಾಯ ಮಾಡುತ್ತಿರುವಾಗ ಅದೆಷ್ಟೋ ವಿಷಯಗಳು 'ಥಟ್' ಅಂತ ಹೊಳೆದುಬಿಡುತ್ತವೆ. ತಾಸುಗಟ್ಟಲೆ ಒಂದೆಡೆ ಕುಳಿತ ಮಾತ್ರಕ್ಕೆ ವಿಚಾರಕ್ಕೆ ಹರವು ಸಿಕ್ಕಿಬಿಡುತ್ತದೆ ಎನ್ನಲಾಗದು.

ಹಾಗೆ ನೋಡಿದರೆ, ಬಹಳ ಕಾಲ ಒಂದೆಡೆ ಕುಳಿತರೆ ತಲೆಯೇ ಖಾಲಿಯಾಗುವ ಸಾಧ್ಯತೆಯೂ ಇದೆ. ವಿಚಾರವು ಮೊಳೆಯುವುದು ಯಾವಾಗ ನಮ್ಮ ಮಿದುಳು ಚುರುಕಾಗಿರುತ್ತದೋ ಆವಾಗಲೇ ಹೊರತು, ಸುಮ್ಮನೆ ಕುಳಿತಿರುವುದರಿಂದಲ್ಲ. ಸುಮ್ಮನೇ ಕುಳಿತಿದ್ದಾಗ ಶಾರೀರಿಕವಾಗಷ್ಟೇ ಅಲ್ಲದೆ ಮಾನಸಿಕವಾಗಿಯೂ ಕ್ರಿಯಾಶೀಲತೆ ಸೊರಗಿಹೋಗುತ್ತದೆ. ಹಾಗಂತ, ಸದಾ ಖಾಲಿತಲೆಯಲ್ಲೇ ಇದ್ದರೆ ಯಾರೂ ಎಂದೂ ಏನನ್ನೂ ಬರೆಯ ಲಾರರು; ಮಾನಸಿಕ ಚಲನೆ ಇದ್ದೇ ಇರಬೇಕು.

ಕೆಲ ವರ್ಷಗಳ ಹಿಂದೆ ಮಿತ್ರರೊಬ್ಬರು ಹೇಳಿದ ಮಾತು ನೆನ ಪಾಗುತ್ತದೆ. ಅವರು ಕವನವನ್ನು ಬರೆಯಲು ಬಹಳ ಉತ್ಸುಕರಾಗಿ ದ್ದರು; ಅದರಲ್ಲೂ ಸಿನಿಮಾ ಗಳಿಗೆ ಹಾಡು ಬರೆಯಬೇಕೆಂಬ ತುಡಿತ ವಿತ್ತು. ಹೀಗಾಗಿ ಕಡಲತೀರ, ಬೆಟ್ಟ, ಬಯಲು, ನದೀತಟ, ಏಕಾಂತ ಅಂತ ಸುತ್ತಾಡಿದ್ದೇ ಸುತ್ತಾಡಿದ್ದು; ಆದರೆ ಒಂದು ಸಾಲೂ ಹೊರಡಲೇ ಇಲ್ಲ. ಹೀಗಾಗಿ ಕೆಲಹೊತ್ತು ಒಂದೇ ಕಡೆ ಕುಳಿತುಕೊಳ್ಳುವ ಅಭ್ಯಾಸ ವನ್ನೇ ಬಿಟ್ಟು, ಸದಾ ಜನರೊಡನೆ ಬೆರೆಯುತ್ತ, ಹರಟೆ ಹೊಡೆಯುತ್ತ, ಹಾಸ್ಯ ಮಾಡುತ್ತ ಇರುವಾಗಲೇ ನಡೆದ ಘಟನೆಯೊಂದು ಮನಸ್ಸಿಗೆ ನಾಟಿ, ಅದೇ ಹಾಡಿನ ರೂಪದಲ್ಲಿ ಹೊರಬಂದಿತಂತೆ. ಇದುವೇ ವಾಸ್ತವ. ಬರೆಯಬೇಕೆನ್ನುವವರು ಮನಸ್ಸಿನಲ್ಲಿ ಸದಾ ಅದರ ಬಗ್ಗೆಯೇ ಆಲೋಚಿಸುತ್ತಿರುತ್ತಾರೆ. ಹೊರನೋಟಕ್ಕೆ ನಮ್ಮೊಟ್ಟಿಗೆ ಅವರು ಮಾತನಾಡುತ್ತಿರುವಂತೆ ಇರುತ್ತದೆ, ಆದರೆ ಅವರ ಮನಸ್ಸು ಇನ್ನೆಲ್ಲೋ ಇರುತ್ತದೆ. ಬಹುಶಃ, ಅಂಕಣಕಾರ ಶಿಶಿರ್ ಹೆಗಡೆಯವರ ಪರಿಸ್ಥಿತಿಯೂ ಇದೇ ಇರಲಿಕ್ಕೂ ಸಾಕು. ಕೆಲಸದ ಒತ್ತಡದಲ್ಲಿ, ಪ್ರತಿವಾರ ಒಂದಿಷ್ಟು ಹೊತ್ತು, ಮುಂದಿನ ವಾರ ಏನು ಬರೆಯ ಬೇಕೆಂಬುದರ ಬಗ್ಗೆ ತಾಸುಗಟ್ಟಲೆ ಯೋಚಿಸುತ್ತ ಹಾಗೇ ಕುಳಿತಿದ್ದಿದ್ದರೆ, ಇಷ್ಟೊತ್ತಿಗೆ ಅವರು ತಮ್ಮ ಕೆಲಸವನ್ನೂ ಬಿಡಬೇಕಾಗುತ್ತಿತ್ತೋ ಏನೋ?! ನಿಗದಿತ ಕೆಲಸವನ್ನು ಮಾಡುತ್ತ ಮಾಡುತ್ತಲೇ ಅವರು ತಮ್ಮ ಲೇಖನದ ವಿಷಯವನ್ನೂ ಕಂಡುಕೊಳ್ಳುತ್ತಿರುವುದರಿಂದಲೇ, ಪ್ರತಿ ಶುಕ್ರವಾರ ನಿರಂತರವಾಗಿ ಹೊಸ ಹೊಸ ವಿಚಾರಗಳನ್ನು ಓದುಗರಿಗೆ ತಲುಪಿಸುತ್ತಿದ್ದಾರೆ. ಅವರು ವಾರದ ಹಿಂದೆ ಹುಟ್ಟೂರಿನ ಗಣೇಶ ಭಟ್ಟರ ಬಗ್ಗೆಯೂ ಬರೆದಿದ್ದನ್ನು ಓದಿದ್ದೇವೆ. ದಿನನಿತ್ಯದ ಕೆಲಸಗಳ ಜತೆಜತೆಗೇ ಬರವಣಿಗೆಯು ಸಾಗಿದ್ದರಿಂದಲೇ ಇವೆಲ್ಲವೂ ಸಾಧ್ಯವಾಯಿತೇ ಹೊರತು, ಶುಕ್ರವಾರದ ಲೇಖನಕ್ಕೆ ಗುರುವಾರ ಬೆಳಗಿನಿಂದಲೇ ಕುಳಿತಿದ್ದರ ಪರಿಣಾಮವಾಗಿ ಅಲ್ಲ!

(ಲೇಖಕರು ಹವ್ಯಾಸಿ ಬರಹಗಾರರು)

ಕೃತಕ ಬುದ್ಧಿಮತ್ತೆ: ಸಾಕ್ಷ್ಯಾಧಾರ, ಅಪರಾಧ ಮತ್ತು ವ್ಯಾಜ್ಯಗಳ ನಿರ್ವಹಣೆಯ ಸವಾಲುಗಳು

'ಎಐ' ತಂತ್ರಜ್ಞಾನ ವೇಗವಾಗಿ ಬೆಳೆಯುತ್ತಿದೆ. ದಿನೇ ದಿನೆ ಹೊಸ ಆವಿಷ್ಕಾರಗಳು, ಸುಧಾರಣೆಗಳು ಹೊರಬರುತ್ತಿವೆ. ಅಮೆರಿಕ, ಚೀನಾದಂಥ ರಾಷ್ಟ್ರಗಳು ಪೈಪೋಟಿಯಲ್ಲಿ ಹೊಸ ಸಾಧನಗಳನ್ನು ಹೊರತರುತ್ತಿವೆ. ಅವುಗಳ ಬಳಕೆಗೆ ತಗಲುವ ವೆಚ್ಚದ ವಿಷಯದಲ್ಲೂ ಪೈಪೋಟಿಯಿದೆ. ಆದರೆ ನ್ಯಾಯಾಂಗದಂಥ ಸೂಕ್ಷ್ಮ ವಿಷಯದಲ್ಲಿ ಯಾವ ಸಾಧನದ ಬಳಕೆ ಹೆಚ್ಚು ಸುರಕ್ಷಿತ ಎಂಬುದನ್ನು ತಜ್ಞರು ಪ್ರಮಾಣೀಕರಿಸಬೇಕು. ಇಲ್ಲವಾದಲ್ಲಿ ದತ್ತಾಂಶ ಮತ್ತು ಡಿಜಿಟಲ್ ದಾಖಲೆಗಳ ಸುರಕ್ಷತೆಗೆ ಅಪಾಯವಾಗಬಹುದು.

ಕಾನೂನ್ ಸೆನ್ಸ್
ತಿಮ್ಮಣ್ಣ ಭಾಗ್ವತ್
vveditoped@gmail.com

'ಕನಕಾಂಗಿ ಕಲ್ಯಾಣ' (ಮಾಯಾ ಬಝಾರ್) ಎಂಬ ಯಕ್ಷಗಾನ ಪ್ರಸಂಗದಲ್ಲಿ ಘಟೋದ್ಗಜನು ಕೌರವರ ದಿಬ್ಬಣವನ್ನು ಕೃತಕವಾಗಿ ನಿರ್ಮಿಸಿದ ಸನ್ನಿವೇಶ ಬರುತ್ತದೆ. ಆ ಎಲ್ಲಾ ಕೃತಕ ವ್ಯಕ್ತಿಗಳಿಗೆ ತಾವು ಯಾರು, ಏನು ಮಾಡಬೇಕಾಗಿದೆ ಎಂಬೆಲ್ಲ ವಿವರಗಳ ತರಬೇತು ನೀಡಲಾಗುತ್ತದೆ. ಹಾಗೆ ತರಬೇತು ಪಡೆದ 'ಮಾಯಕ'ದ ದಿಬ್ಬಣ, ಬಲರಾಮ ಹಾಗೂ ಇತರರನ್ನು ವಂಚಿಸಿ ಕನಕಾಂಗಿಯನ್ನು ಅಭಿಮನ್ಯುವಿಗೆ ಮದುವೆ ಮಾಡಿಸುವಲ್ಲಿ ಯಶಸ್ವಿಯಾಗುತ್ತದೆ. ಬಹುಶಃ ಕೃತಕ ಬುದ್ಧಿಮತ್ತೆಗೆ ಇದೊಂದು ಸರಳ ಉದಾಹರಣೆಯಾಗಬಹುದು. ಹಾಗಂತ ಮಹಾಭಾರತದ ಕಾಲದಲ್ಲೇ ಭಾರತದಲ್ಲಿ ಕೃತಕ ಬುದ್ಧಿಮತ್ತೆಯ ಅನ್ವೇಷಣೆಯಾಗಿತ್ತು ಎಂಬುದು ನನ್ನ ವಾದವಲ್ಲ.

ಯಾವುದೇ ಕಾರ್ಯ ಮಾಡುವಾಗ ಅಥವಾ ಸಮಸ್ಯೆಯನ್ನು ಬಗೆಹರಿಸುವಾಗ ಮನುಷ್ಯರು ತಾರ್ಕಿಕವಾಗಿ ತಮ್ಮ ವಿವೇಚನೆಯನ್ನು ಉಪಯೋಗಿಸಿ, ಹಲವು ಆಯ್ಕೆಗಳ ನಡುವೆ ಉತ್ತಮವಾದುದನ್ನು ಆಯ್ದು, ಸರಿಯಾದ ನಿರ್ಣಯ ಕೈಗೊಳ್ಳುತ್ತಾರೆ. ಆ ಪ್ರಕ್ರಿಯೆಯಲ್ಲಿ ಅವರಿಗೆ ತಮ್ಮ ಜ್ಞಾನದ ಜತೆಗೆ ಅನುಭವ ಅಂದರೆ ಹಳೆಯ ನೆನಪು ಸಹಾಯಕವಾಗುತ್ತದೆ. ಅದೇ ಕಾರ್ಯವನ್ನು ಒಂದು ಕಂಪ್ಯೂಟರ್ ಅಥವಾ ಮಷಿನ್ ಮಾಡಿದರೆ, ಕೆಲವು ಸಲ ಮನುಷ್ಯರಿಗಿಂತ ಹೆಚ್ಚು ವೇಗವಾಗಿ, ಸಮರ್ಥವಾಗಿ ಮತ್ತು ಹೆಚ್ಚು ಪರಿಣಾಮಕಾರಿಯಾಗಿ ಮಾಡಬಲ್ಲದು. ಹೀಗೆ ಮಾಡುವಲ್ಲಿ ಆ ಮಷಿನ್‌ಗೆ ಮೊದಲೇ ಅಗತ್ಯ 'ಡೇಟಾ' ಮತ್ತು ಪ್ರೋಗ್ರಾಮ್ ಮೂಲಕ ತರಬೇತು ನೀಡಿ ಸಿದ್ಧ ಪಡಿಸಲಾಗುತ್ತದೆ. ಸಾಮಾನ್ಯರ ಭಾಷೆಯಲ್ಲಿ ಅಂಥ ಪ್ರಕ್ರಿಯೆ ಅಥವಾ ವ್ಯವಸ್ಥೆಯನ್ನು 'ಕೃತಕ ಬುದ್ಧಿಮತ್ತೆ' (ಎಐ) ಎನ್ನಬಹುದು. ಸಂಕೀರ್ಣವಾದ ತಾಂತ್ರಿಕ ವಿಷಯಗಳು ನನಗೆ ತಿಳಿದಿಲ್ಲ. ಅವು ಇಲ್ಲಿ ಅಪ್ರಸ್ತುತ ಕೂಡಾ.

ಜಗತ್ತು ಈಗ ಸ್ವಯಂಚಾಲಿತ (Automation) ವ್ಯವಸ್ಥೆಯಲ್ಲಿ ಬದುಕುತ್ತಿದೆ. ದಾರಿ ಹುಡುಕಲು ಗೂಗಲ್ ಮ್ಯಾಪ್, ಹಣ ನೀಡಲು ಯುಪಿಐ, ಮಾಹಿತಿಗೆ ಗೂಗಲ್ ಹೀಗೆ ಮಷಿನ್ ಅಥವಾ ವಿದ್ಯುನ್ಮಾನ ಆಧಾರಿತ ತಂತ್ರಜ್ಞಾನವು ಜೀವನದ ಅವಿಭಾಜ್ಯ ಅಂಗವಾಗಿದೆ. ಅಂಥ ಕೆಲವು ಆ್ಯಪ್‌ಗಳಲ್ಲಿ 'ಎಐ' ಆಧಾರಿತ ತಂತ್ರಜ್ಞಾನದ ಬಳಕೆಯಾಗುತ್ತದೆ. ಅಂಥ ವ್ಯವಸ್ಥೆಯಲ್ಲಿಯೇ ಬದುಕುತ್ತಿರುವ ಸಮಾಜದಲ್ಲಿ ಜರುಗುವ ಅಪರಾಧಗಳು ಅಥವಾ ವ್ಯಾಜ್ಯಗಳಲ್ಲಿ ಕೂಡಾ ಡಿಜಿಟಲ್ ಅಥವಾ 'ಎಐ' ಸಂಬಂಧಿತ ಅನೇಕ ಅಂಶಗಳು ಭಾಗಿಯಾಗುತ್ತವೆ ಅಥವಾ ಕಾರಣವಾಗುತ್ತವೆ. ಈ ಕಾರಣಕ್ಕೆ ಕಾನೂನಿನ ಕ್ಷೇತ್ರದಲ್ಲಿ ಕೂಡಾ 'ಎಐ' ಪ್ರವೇಶಿಸಿ ದಿಗಿಣ ಹೊಡೆಯುತ್ತಿದೆ.

ಸಿವಿಲ್ ವ್ಯಾಜ್ಯಗಳು ಅಥವಾ ಕ್ರಿಮಿನಲ್ ಪ್ರಕರಣಗಳಲ್ಲಿ ನಿಯೋಜಿಸುವ ಕೆಲವು ಸಾಕ್ಷ್ಯಾಧಾರಗಳು 'ಎಐ' ಮೂಲಕ ತಯಾರಾದ (AI Generated) ಡಿಜಿಟಲ್ ಎವಿಡೆನ್ಸ್ ಆಗಿರಬೇಕಾದದ್ದು ಅನಿವಾರ್ಯ. ಪೂರ್ವ ನಿದರ್ಶನಗಳ ತೀರ್ಪುಗಳು ಮತ್ತು ಕಾನೂನುಗಳ ಕಲಮುಗಳನ್ನು ಹುಡುಕುವುದು, ವಿವಿಧ ದಸ್ತಾವೇಜುಗಳು, ನೋಟಿಸ್‌ಗಳು, ಕೋರ್ಟಿಗೆ ಸಲ್ಲಿಸುವ ಮನವಿ (Petition), ಪ್ರಾರ್ಥನೆ (Pleadings), ವಾದ (Arguments), ಅಫಿಡವಿಟ್‌ಗಳು ಮುಂತಾದವುಗಳನ್ನು ರಚಿಸುವುದು (Legal drafting), ವಿವಿಧ ಭಾಷೆಗಳಿಂದ ಭಾಷಾಂತರ, ಮುಂತಾದ ವಿಷಯಗಳಲ್ಲಿ ವ್ಯಾಪಕವಾಗಿ ಬಳಕೆಯಾಗುವ ಮೂಲಕ ಕಾನೂನು ವೃತ್ತಿಯಲ್ಲಿ ಕ್ರಾಂತಿಕಾರಕ ಬದಲಾವಣೆಗೆ 'ಎಐ' ಕಾರಣವಾಗುತ್ತಿದೆ. ಇವೆಲ್ಲಕ್ಕಿಂತ ಮಿಗಿಲಾಗಿ ಅಪರಾಧಗಳ ತನಿಖೆ, ವಿಚಾರಣೆ, ಸಾಕ್ಷ್ಯ ಸಂಗ್ರಹ, ಸಾಕ್ಷ್ಯ-ವಿಶ್ಲೇಷಣೆಯಂಥ ವಿಷಯಗಳಲ್ಲಿ 'ಎಐ' ಬಳಕೆ ಕೋರ್ಟುಗಳ ಕಾರ್ಯನಿರ್ವಹಣೆಯಲ್ಲಿ ಹೊಸ ಆಯಾಮವನ್ನೇ ಸೃಷ್ಟಿಸಿದೆ. ಪ್ರತಿವಾದಿಗಳ ವಾದ ಅಥವಾ ನ್ಯಾಯಮೂರ್ತಿಗಳ ತೀರ್ಪು/ಅವಲೋಕನಗಳನ್ನು ವಿಶ್ಲೇಷಿಸುವ ಸಾಫ್ಟ್‌ವೇರ್ ಕೂಡಾ ಇದೆ.

Legal drafting ಸಾಮಾನ್ಯವಾಗಿ ಒಂದು ನಿರ್ದಿಷ್ಟ ಮಾದರಿಯಲ್ಲಿರುತ್ತದೆ. ಮೂಲಭೂತ ವಿವರಗಳನ್ನು ಒದಗಿಸಿದರೆ ಕೆಲವು 'ಎಐ' ಆಧಾರಿತ ಆ್ಯಪ್‌ಗಳು ನೋಟಿಸ್, ಪಿಟಿಶನ್, ಕಂಪ್ಲೇಂಟ್, ಅಫಿಡವಿಟ್‌ನಂಥವುಗಳನ್ನು ತಯಾರಿಸುತ್ತವೆ. ಅದರಂತೆ, ಅಡಮಾನ ಪತ್ರ, ಕ್ರಯ ದಸ್ತಾವೇಜಿನಂಥ ದಾಖಲೆಗಳನ್ನು ಕೂಡಾ ತಯಾರಿಸುವ ಆ್ಯಪ್‌ಗಳಿವೆ. ಅಂಥ ಆ್ಯಪ್‌ಗಳು ವೇಗವಾಗಿ ಕೆಲಸ ಮುಗಿಸಲು ಸಹಾಯಕ. ಅಗತ್ಯ ಕಾಳಜಿಯೊಂದಿಗೆ ಅವುಗಳನ್ನು ಬಳಸಿದರೆ ಅವು ವಕೀಲಿ ವೃತ್ತಿಗೆ ನಿಜಕ್ಕೂ ಸಹಕಾರಿ.

ಕೋರ್ಟುಗಳಿಗೆ ವಿಚಾರಣೆಗೆ ಸಲ್ಲಿಸಲಾಗುವ ಅರ್ಜಿಗಳ ಪ್ರಾಥಮಿಕ ಪರಿಶೀಲನೆ ಮಾಡಿ ನೋಂದಣಿ ಹಂತದಲ್ಲೇ ಅನರ್ಹ ಪ್ರಕರಣಗಳನ್ನು ತಿರಸ್ಕರಿಸುವ ಮೂಲಕ ಬಾಕಿ ಇರುವ ಪ್ರಕರಣಗಳ ಸಂಖ್ಯೆಯನ್ನು ಕಡಿತಗೊಳಿಸಬಹುದು. ಉದಾಹರಣೆಗೆ ಗ್ರಾಹಕ ಕುಂದುಕೊರತೆ ವ್ಯಾಜ್ಯಗಳಲ್ಲಿ ಸಂಬಂಧಿತ ಉತ್ಪನ್ನ ಅಥವಾ ಸೇವೆಯ ನ್ಯೂನತೆಯು ಮಾದರಿ ಮಟ್ಟಕ್ಕಿಂತ ಕಡಿಮೆ ಇಲ್ಲದಿದ್ದರೆ ಅಥವಾ . ಈಗಾಗಲೇ ಇತ್ಯರ್ಥವಾಗಿರುವ ವಿಷಯಗಳಲ್ಲಿ (Res-judicata) ಪುನಃ ಪ್ರಕರಣ ದಾಖಲಾದರೆ, ಅಂಥ ಪ್ರಕರಣಗಳನ್ನು 'ಎಐ' ಪತ್ತೆಹಚ್ಚಬಲ್ಲದು. ಕೋರ್ಟಿನ ಮುಂದೆ ಹಾಜರುಪಡಿಸಲಾದ ಮನವಿ, ಪ್ಲೀಡಿಂಗ್, ಸಾಕ್ಷಿಗಳ ಸವಾಲು ಮತ್ತು ಪಾಟಿ ಸವಾಲುಗಳು, ಎವಿಡೆನ್ಸ್, ವಾದ-ಪ್ರತಿವಾದಗಳು ಮುಂತಾದವುಗಳ ವಿಶ್ಲೇಷಣೆ ಮಾಡಿ ಸರಿಯಾದ ನ್ಯಾಯನಿರ್ಣಯ ನೀಡಲು ಮತ್ತು ಶಿಕ್ಷೆ ವಿಧಿಸುವ ಇಡೀ ಪ್ರಕ್ರಿಯೆಯಲ್ಲಿ 'ಎಐ'ನ ಸಹಾಯ ಪಡೆಯಬಹುದು. ಎವಿಡೆನ್ಸ್‌ಗಳಲ್ಲಿರಬಹುದಾದ ವಿರೋಧಾಭಾಸಗಳು, ಸಾಕ್ಷಿಗಳ ಸಾಚಾತನ, ಪಾಟಿ ಸವಾಲಿನಲ್ಲಿ ಅವರು ಎಡವಿದ ವಿಷಯಗಳನ್ನೆಲ್ಲ ಎತ್ತಿ ಹೇಳಬಹುದು.

ಅಪರಾಧ ತನಿಖೆಯ ವಿವಿಧ ಹಂತಗಳಲ್ಲಿ 'ಎಐ' ಅನ್ನು ವ್ಯಾಪಕವಾಗಿ ಬಳಸಲಾಗುತ್ತಿದೆ. ತಂತ್ರಜ್ಞಾನ ಆಧಾರಿತ ಅಪರಾಧಗಳ (ಉದಾಹರಣೆಗೆ ಸೈಬರ್ ಅಪರಾಧ) ತಡೆ ಮತ್ತು ತನಿಖೆಗೆ 'ಎಐ' ತುಂಬಾ ಸಹಾಯಕವಾಗಬಲ್ಲದು. ಒಂದು ಅಫಘಾತ ಅಥವಾ ಅಪರಾಧ ಸಂಭವಿಸಿದಾಗ ಅಂಥ ಘಟನೆಯ ಮರುಸೃಷ್ಟಿಯನ್ನು 'ಎಐ' ಮೂಲಕ ಮಾಡಬಹುದು; ನಿಜವಾದ ತಪ್ಪಿತಸ್ಥರನ್ನು



ಕಂಡುಹಿಡಿಯುವಲ್ಲಿ ಅದು ಸಹಕಾರಿಯಾಗುತ್ತದೆ. ತಪ್ಪಿತಸ್ಥ ವ್ಯಕ್ತಿಗಳ ಮುಖ ಮತ್ತು ಧ್ವನಿ ಗುರುತಿಸುವ ಫೊರೆನ್ಸಿಕ್ ಪ್ರಕ್ರಿಯೆಗಳಲ್ಲಿ ಕೂಡಾ 'ಎಐ' ತಂತ್ರಜ್ಞಾನವನ್ನು ಬಳಸಲಾಗುತ್ತಿದೆ. ಭಯೋತ್ಪಾದಕ ಚಟುವಟಿಕೆಗಳಂಥ ದುಷ್ಕೃತ್ಯಗಳನ್ನು ಮೊದಲೇ ಗುರುತಿಸಲು ಪೂರ್ವಭಾವಿ ವಿಶ್ಲೇಷಣೆಯ ಮೂಲಕ ಕೆಲವು ಕಾಲಘಟ್ಟಗಳಲ್ಲಿ/ಪ್ರದೇಶಗಳಲ್ಲಿ ಸಂಭವಿಸಬಹುದಾದ ದುರಂತಗಳನ್ನು ತಪ್ಪಿಸುವ ಪ್ರಯತ್ನಗಳಿಗೆ ಕೂಡಾ 'ಎಐ' ಅನ್ನು ಬಳಸಲಾಗುತ್ತಿದೆ ಎನ್ನಲಾಗಿದೆ. Predictive Policing ಎಂಬ ಪ್ರಕ್ರಿಯೆಯ ಮೂಲಕ ಅಪರಾಧಗಳನ್ನು ಎಸಗುವ ಮನಸ್ಥಿತಿಯುಳ್ಳ ವ್ಯಕ್ತಿಗಳನ್ನು ಗುರುತಿಸಲು ಕೂಡಾ 'ಎಐ' ತಂತ್ರಜ್ಞಾನವನ್ನು ಅಮೆರಿಕದಂಥ ದೇಶಗಳಲ್ಲಿ ಬಳಸಲಾಗಿದೆ.

ಕ್ಯಾಲಿಫೋರ್ನಿಯಾದಲ್ಲಿ ನಡೆದ 'ಮೆಂಡೋನ್ ವರ್ಸಸ್ ಕುಶ್ ಮೇನ್ ಆ್ಯಂಡ್ ವೇಕ್‌ಫೀಲ್ಡ್' ಪ್ರಕರಣದಲ್ಲಿ ಸಾಕ್ಷಿಯೊಬ್ಬರ ವಿಡಿಯೋವನ್ನು ವೀಕ್ಷಿಸಿದ ನ್ಯಾಯಾಧೀಶರಿಗೆ ಆ ಸಾಕ್ಷಿಯ ಅಸಹಜ ವರ್ತನೆ ಕಂಡುಬಂತು. ಅದನ್ನು ತೀವ್ರ ಪರಿಶೀಲನೆಗೆ ಒಳಪಡಿಸಿದಾಗ ಅದು 'ಎಐ' ತಂತ್ರಜ್ಞಾನದ ಮೂಲಕ ತಯಾರಿಸಿದ ನಕಲಿ ವಿಡಿಯೋ (Deep fake) ಎಂದು ತಿಳಿಯಿತು. ಇನ್ನೊಂದು ಪ್ರಕರಣದಲ್ಲಿ ಮಹಿಳೆಯೊಬ್ಬಳ ಮಾಜಿ ಪ್ರಿಯಕರ ಆಕೆಯ ಹೆಸರಿನಲ್ಲಿ ನಕಲಿ ಮೆಸೇಜ್‌ಗಳನ್ನು ಸೃಷ್ಟಿಸಿ ಆಕೆಯನ್ನು ಜೈಲುಪಾಲು ಮಾಡಲು ಕಾರಣನಾದ. ಸೂಪರ್ ಮಾರ್ಕೆಟ್ ಒಂದರ ಸರ್ವೆಲನ್ಸ್ ಕೆಮರಾದ ಇಮೇಜ್‌ಗಳನ್ನು ಗ್ರಾಹಕರ ಐಡಿಗಳ ಜತೆ ತಾಳೆಮಾಡಿ ವ್ಯಕ್ತಿಗಳನ್ನು ಗುರುತಿಸುವ 'ಎಐ' ಆಧಾರಿತ ವ್ಯವಸ್ಥೆಯ ದೋಷದಿಂದಾಗಿ ನಿರಪರಾಧಿಯೊಬ್ಬನನ್ನು ವಾಚ್ ಕದ್ದ ಆರೋಪದಲ್ಲಿ ಬಂಧಿಸಿದ ಘಟನೆ ನಡೆಯಿತು. ಇಂಥ Deep fake ವಿಡಿಯೋಗಳು ಮತ್ತು ನಕಲಿ ದಾಖಲೆಗಳು ಅಪಾಯಕಾರಿಯಾಗಿದ್ದು ನ್ಯಾಯನಿರ್ಣಯ ವ್ಯವಸ್ಥೆಯನ್ನೇ ಬುಡಮೇಲು ಮಾಡಬಹುದು. Deep fake ಆಧಾರಿತ ನಕಲಿ ವಿಡಿಯೋ ಮತ್ತು ದಾಖಲೆಗಳ ಮೂಲಕ ರಾಜಕಾರಣಿಗಳನ್ನು, ಹಣವಂತರನ್ನು ಬ್ಲ್ಯಾಕ್‌ಮೇಲ್ ಮಾಡುವ, ತೇಜೋವಧೆ ಮಾಡುವ ಪ್ರಯತ್ನಗಳೂ ನಡೆದಿವೆ. 'ಎಐ' ಮೂಲಕ ಧ್ವನಿಯ ಅನುಕರಣೆ ಮತ್ತು ನಕಲಿ ವಿಡಿಯೋಗಳ ಮೂಲಕ ನಕಲಿ ತಪ್ಪೊಪ್ಪಿಗೆ, ಮರಣ ಹೇಳಿಕೆಗಳು ಕೂಡಾ ಈ ತಂತ್ರಜ್ಞಾನದ ದುರುಪಯೋಗದ ಇನ್ನೊಂದು ಮಜಲು. ಆದರೆ ಇತ್ತೀಚಿನ ವರ್ಷಗಳಲ್ಲಿ ತಂತ್ರಜ್ಞಾನದಲ್ಲಿ ಆದ ಸುಧಾರಣೆಯಿಂದ Deep fake ವಿಡಿಯೋಗಳನ್ನು ಪತ್ತೆ ಹಚ್ಚುವದು ಸಾಧ್ಯ ಮತ್ತು ಅಂಥ ಅನೇಕ ಪ್ರಯತ್ನಗಳನ್ನು ಬಯಲಿಗೆಳೆಯಲಾಗಿದೆ. AI generated ದಾಖಲೆಗಳಿಗೆ water marking, barcode ಮುಂತಾದವುಗಳನ್ನು ಅಳವಡಿಸುವ ಮೂಲಕ ನೈಜ ಮತ್ತು ನಕಲಿ ದಾಖಲೆಗಳನ್ನು ಪ್ರತ್ಯೇಕಿಸಬಹುದು.

'ಎಐ' ತಂತ್ರಜ್ಞಾನದ ಮೂಲಕ ನಿರ್ವಹಿಸುವ ಕಾರ್ಯಗಳಲ್ಲಿ ಘಟಿಸುವ ತಪ್ಪುಗಳಿಗೆ ಉತ್ತರದಾಯಿತ್ವವನ್ನು ನಿರ್ಧರಿಸುವಾಗ ಇಡೀ ಪ್ರಕ್ರಿಯೆಯ ವಿವರಗಳನ್ನು ಕೋರ್ಟು ಪರಿಶೀಲಿಸಬೇಕಾಗುತ್ತದೆ. ಇದು ಎಲ್ಲಾ ಡಿಜಿಟಲ್ ವ್ಯವಸ್ಥೆಗಳಿಗೂ ಅನ್ವಯವಾಗುವುದಾದರೂ 'ಎಐ' ತಂತ್ರಜ್ಞಾನದ ವಿಸ್ತೃತ ಬಳಕೆ, ಸಂಕೀರ್ಣತೆಯನ್ನು ಹೆಚ್ಚಿಸುತ್ತದೆ. ಈ ಕುರಿತು ಸೂಕ್ತ ಕಾನೂನು ಮತ್ತು ನಿಯಮಾವಳಿಗಳ ಅಗತ್ಯವಿದೆ. ಶತಮಾನಗಳಷ್ಟು ಹಳೆಯ Law of Torts ಆಧಾರದಲ್ಲಿ ನ್ಯಾಯನಿರ್ಣಯ ಮಾಡಿದರೆ ನ್ಯಾಯದ ವಿಫಲತೆಗೆ (mis-carriage of justice) ಎಡೆಮಾಡಬಹುದು. ಇಡೀ ಸಮುದಾಯವು 'ಎಐ' ತಂತ್ರಜ್ಞಾನದ ಮೇಲೆ ಅವಲಂಬಿತವಾಗಿರುವಾಗ ಅಂಥ ತಂತ್ರಜ್ಞಾನವೆಂದರೇನು, ಅದರ ಸಾಧ್ಯತೆ ಮತ್ತು ಮಿತಿಗಳೇನು, ತಂತ್ರಜ್ಞಾನ ಬಳಸಿ ಹೇಗೆಲ್ಲ ನಕಲಿ ದಾಖಲೆ ಮತ್ತು ಸಾಕ್ಷ್ಯಾಧಾರಗಳನ್ನು ಸೃಷ್ಟಿ ಮಾಡಬಹುದು ಮತ್ತು ಅದರ ಸರಿಯಾದ ಬಳಕೆಯು ನ್ಯಾಯನಿರ್ಣಯಕ್ಕೆ ಹೇಗೆ ಸಹಕಾರಿ ಎಂಬುದರ ಕುರಿತು ನ್ಯಾಯವಾದಿಗಳಿಗೆ ಹಾಗೂ ನ್ಯಾಯಾಧೀಶರಿಗೆ ಕನಿಷ್ಠಜ್ಞಾನದ ಅಗತ್ಯವಿದೆ. ಆ ಕುರಿತು ತರಬೇತಿ ನೀಡಬೇಕು ಮತ್ತು ಇನ್ನು ಮುಂದೆ ಕಾನೂನು ವಿದ್ಯಾರ್ಥಿಗಳಿಗೆ 'ಎಐ ತಂತ್ರಜ್ಞಾನ'ವು ಸೈಬರ್ ಕಾಯಿದೆಯ ಪಠ್ಯಕ್ರಮದಲ್ಲಿ ಅಳವಡಿಸಲ್ಪಡಬೇಕು.

ಭಾರತೀಯ ಸಾಕ್ಷ್ಯ ಅಧಿನಿಯಮ 2023ರ 63ನೇ ಹಾಗೂ ಮಾಹಿತಿ ತಂತ್ರಜ್ಞಾನ ಕಾಯಿದೆ 2000ದ 4 ಮತ್ತು 79-ಎ ಕಲಮುಗಳ ಪ್ರಕಾರ, ವಿದ್ಯುನ್ಮಾನ ರೂಪದಲ್ಲಿರುವ ದಾಖಲೆಗಳು ನ್ಯಾಯಾಲಯದಲ್ಲಿ ಮಾನ್ಯವಾಗುತ್ತವೆ. 63(4)ರ ಪ್ರಕಾರ ಅಂಥ ದಾಖಲೆಯನ್ನು ಪುರಾವೆಯೆಂದು ಹಾಜರುಪಡಿಸುವಾಗ ಒಂದು ಪ್ರಮಾಣ ಪತ್ರವನ್ನು ನೀಡಬೇಕಾಗುತ್ತದೆ. ಮಾಹಿತಿ ತಂತ್ರಜ್ಞಾನ ಕಾಯಿದೆಯ 79-ಎ ಕಲಮಿನ ಪ್ರಕಾರ ವಿದ್ಯುನ್ಮಾನ ದಾಖಲೆಗಳನ್ನು ಪರಿಶೀಲಿಸಿ ತಜ್ಞ ವರದಿ ನೀಡುವ ಅಧಿಕಾರವುಳ್ಳ Examiner of Electronic Evidence ಅನ್ನು ನೇಮಿಸುವ ಅಧಿಕಾರ ಕೇಂದ್ರ ಸರಕಾರಕ್ಕೆ ಇದೆ. ಅಂಥ ಅಧಿಕಾರಿಗಳು ನೀಡುವ ಪ್ರಮಾಣಪತ್ರವು ಕೋರ್ಟಿನಲ್ಲಿ ಹಾಜರುಪಡಿಸುವ ಡಿಜಿಟಲ್ ಎವಿಡೆನ್ಸ್‌ಗಳಿಗೆ ಮಾನ್ಯತೆಯನ್ನು ದೃಢೀಕರಿಸುತ್ತವೆ. ಎಲ್ಲಾ ಹಂತದ ನ್ಯಾಯಾಲಯಗಳಲ್ಲಿ ಇಂಥ ತಂತ್ರಜ್ಞಾನ ಆಧಾರಿತ ಸಾಕ್ಷ್ಯಗಳನ್ನು ಪರಿಶೀಲಿಸಲು ಅಗತ್ಯವಿರುವ ಸುಧಾರಿತ ಡಿಜಿಟಲ್ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು. ಅಲ್ಲದೆ ಫೊರೆನ್ಸಿಕ್ ಪ್ರಯೋಗಾಲಯಗಳಲ್ಲಿ 'ಎಐ' ಮತ್ತು ಡಿಜಿಟಲ್ ಎವಿಡೆನ್ಸ್‌ಗಳ ಪರಿಶೀಲನೆ ಮತ್ತು ಪ್ರಮಾಣೀಕರಣದ ವ್ಯವಸ್ಥೆಯನ್ನು ಅಳವಡಿಸಬೇಕು.

'ಎಐ' ತಂತ್ರಜ್ಞಾನ ಅತಿ ವೇಗವಾಗಿ ಬೆಳೆಯುತ್ತಿದೆ. ದಿನೇ ದಿನೆ ಹೊಸ ಆವಿಷ್ಕಾರಗಳು, ಸುಧಾರಣೆಗಳು ಹೊರಬರುತ್ತಿವೆ. ಅಮೆರಿಕ, ಚೀನಾದಂಥ ರಾಷ್ಟ್ರಗಳು ಪೈಪೋಟಿಯಲ್ಲಿ ಹೊಸ ಸಾಧನಗಳನ್ನು ಹೊರತರುತ್ತಿವೆ. ಅವುಗಳ ಬಳಕೆಗೆ ತಗಲುವ ವೆಚ್ಚದ ವಿಷಯದಲ್ಲೂ ಪೈಪೋಟಿಯಿದೆ. ಆದರೆ ನ್ಯಾಯಾಂಗದಂಥ ಸೂಕ್ಷ್ಮ ವಿಷಯದಲ್ಲಿ ಯಾವ ಸಾಧನದ ಬಳಕೆ ಹೆಚ್ಚು ಸುರಕ್ಷಿತ ಎಂಬುದನ್ನು ತಜ್ಞರು ಪ್ರಮಾಣೀಕರಿಸಬೇಕು. ಇಲ್ಲವಾದಲ್ಲಿ ದತ್ತಾಂಶ (ಡೇಟಾ) ಮತ್ತು ಡಿಜಿಟಲ್ ದಾಖಲೆಗಳ ಸುರಕ್ಷತೆಗೆ ಅಪಾಯವಾಗಬಹುದು.

ಡಿಜಿಟಲ್ ಮತ್ತು 'ಎಐ' ಆಧಾರಿತ ಎವಿಡೆನ್ಸ್‌ಗಳನ್ನು ಸ್ವೀಕಾರಾರ್ಹವೆಂದು (admissible) ಪರಿಗಣಿಸುವುದು ಈಗ ಅನಿವಾರ್ಯವಾಗಿದೆ. ಬದಲಾವಣೆ ಮತ್ತು ಸುಧಾರಣೆಯ ಈ ಯುಗದಲ್ಲಿ ತಂತ್ರಜ್ಞಾನದ ಜತೆಗೆ ವ್ಯವಸ್ಥೆಗಳು ಬದಲಾಗದಿದ್ದರೆ ಅಪರಾಧ ತನಿಖೆ ಮತ್ತು ನ್ಯಾಯಾಂಗ ವ್ಯವಸ್ಥೆ ನಗೆಪಾಟಲಿಗೀಡಾಗಬಹುದು. ಹೊಸ ತಂತ್ರಜ್ಞಾನಗಳು ಒಡ್ಡಬಹುದಾದ ಸವಾಲುಗಳಿಗೆ ನಮ್ಮ ಪೊಲೀಸ್ ವ್ಯವಸ್ಥೆ ತನ್ನ ಕಾರ್ಯಕ್ಷಮತೆ ಮತ್ತು ತಂತ್ರಜ್ಞಾನವನ್ನು ಉನ್ನತೀಕರಿಸಿಕೊಳ್ಳುವ ತುರ್ತು ಅವಶ್ಯಕತೆಯಿದೆ. ಇಲ್ಲವಾದರೆ ಮೇಕೆಯ ಬಾಯಿಗೆ ಮೊಸರು ಮೆತ್ತಿ ಮಂಗ ಜಿಗಿದಾಡಬಹುದು. 'ಎಐ' ಇರಲಿ ಅಥವಾ ಇನ್ಯಾವುದೋ ತಂತ್ರಜ್ಞಾನವಿರಲಿ ಅಗತ್ಯ ಕಾಳಜಿವಹಿಸದಿದ್ದರೆ ಸೃಷ್ಟಿಸಿದ ಶಿವನನ್ನೇ ಸುಡಲು ಬಂದ ಭಸ್ಮಾಸುರನಂತೆ ಅನಿಯಂತ್ರಿತವಾಗುವ ಅಪಾಯವಿದೆ.

(ಲೇಖಕರು ಕಾನೂನು ತಜ್ಞರು ಮತ್ತು ಕೆವಿಜಿ ಬ್ಯಾಂಕ್‌ನ ನಿವೃತ್ತ ಎಜಿಎಂ)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:11, Issue:44

ಸಮಾಚಾರ ಸಣ್ಣದಲ್ಲ

ಆಜೀವ ಶಿಕ್ಷೆ ವಿಧಿಸಿದ ಜಡ್ಜ್‌ಗೆ ಕೊಲೆ ಬೆದರಿಕೆ

ಬಿಜ್ನೋರ್: ತಮಗೆ ಜೀವಾವಧಿ ಶಿಕ್ಷೆ ವಿಧಿಸಿದ ಕೂಡಲೇ ಇಬ್ಬರು ವ್ಯಕ್ತಿಗಳು ನ್ಯಾಯಾಧೀಶರಿಗೆ ಕೊಲೆ ಬೆದರಿಕೆ ಹಾಕಿರುವ ಪ್ರಕರಣ ಉತ್ತರ ಪ್ರದೇಶದಲ್ಲಿ ನಡೆದಿದೆ. 2024ರ ಮೇ 19ರಂದು ಕಾರು ಡಿಕ್ಕಿ ಹೊಡೆಸಿ ಪುಖ್ ರಾಜ್ ಎಂಬಾತನನ್ನು ಕೊಲೆ ಮಾಡಿದ ಪ್ರಕರಣದಲ್ಲಿ ಜೈದೀಪ್ ಮತ್ತು ಪಿಂಟು ಚೌಹಾಣ್ ಅವರನ್ನು ದೋಷಿಗಳು ಎಂದು ನ್ಯಾಯಾಲಯ ತೀರ್ಪು ನೀಡಿತ್ತು. ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ನಿಜೇಂದ್ರ ಕುಮಾರ್ ಶುಕ್ರವಾರ ಆರೋಪಿಗಳಿಗೆ ಜೀವಾವಧಿ ಶಿಕ್ಷೆ ವಿಧಿಸಿದರು. ಶಿಕ್ಷೆ ವಿಧಿಸಿದ ಕೂಡಲೇ ಅಪರಾಧಿಗಳು ನ್ಯಾಯಾಧೀಶರಿಗೆ ಬೆದರಿಕೆ ಹಾಕಿದರು. 'ನೀವು ಎಲ್ಲಿ ವಾಸಿಸುತ್ತಿದ್ದೀರಿ ಎಂದು ನಮಗೆ ತಿಳಿದಿದೆ. ನಿಮ್ಮನ್ನು ಬಿಡುವುದಿಲ್ಲ' ಎಂದು ಆರೋಪಿಗಳು ಬೆದರಿಕೆ ಹಾಕಿದರು. ಬೆದರಿಕೆಯ ನಂತರ ನ್ಯಾಯಾಧೀಶರ ಭದ್ರತೆಯನ್ನು ಹೆಚ್ಚಿಸಲಾಗಿದೆ ಎಂದು ಪೊಲೀಸ್ ಅಧಿಕಾರಿ ಸಂಗ್ರಾಮ್ ಸಿಂಗ್ ಹೇಳಿದರು. ಧಾಂಪುರ್ ಪ್ರದೇಶದ ಮತೌರಾ ದುರ್ಗ್ ಗ್ರಾಮದಲ್ಲಿ ಪುಖ್ ರಾಜ್ ಅವರನ್ನು ಕೊಲ್ಲಲಾಗಿತ್ತು.

ದಿ ಕೇರಳ ಸ್ಟೋರಿ 2 ಬಿಡುಗಡೆಗೆ ಅನುಮತಿ

ತಿರುವನಂತಪುರ: 'ದಿ ಕೇರಳ ಸ್ಟೋರಿ 2 ಸಿನಿಮಾ ಬಿಡುಗಡೆ ಮೇಲಿನ ತಡೆಯಾಜ್ಞೆ ಆದೇಶಕ್ಕೆ ಕೇರಳ ಹೈಕೋರ್ಟ್ ತಡೆ ನೀಡಿದೆ. ಇದರೊಂದಿಗೆ ಶುಕ್ರವಾರ 'ದಿ ಕೇರಳ ಸ್ಟೋರಿ 2 – ಗೋಸ್ ಬಿಯಾಂಡ್' ಚಿತ್ರ ಶುಕ್ರವಾರ ದೇಶಾದ್ಯಂತ ತೆರೆ ಕಂಡಿದೆ. ನ್ಯಾಯಮೂರ್ತಿ ಸುಶ್ರುತ್ ಅರವಿಂದ್ ಧರ್ಮಾಧಿಕಾರಿ ಮತ್ತು ನ್ಯಾಯಮೂರ್ತಿ ಪಿ.ವಿ. ಬಾಲಕೃಷ್ಣನ್ ಅವರ ವಿಭಾಗೀಯ ಪೀಠವು, ಚಿತ್ರದ ಬಿಡುಗಡೆಯನ್ನು 15 ದಿನಗಳವರೆಗೆ ತಡೆಹಿಡಿದಿದ್ದ ಏಕಸದಸ್ಯ ನ್ಯಾಯಾಧೀಶರ ಮಧ್ಯಂತರ ಆದೇಶಕ್ಕೆ ವಿಭಾಗೀಯ ಪೀಠ ತಡೆ ನೀಡಿದೆ. ರಾಜ್ಯದಲ್ಲಿ ಚಿತ್ರದ ಪ್ರದರ್ಶನಕ್ಕೆ ಸಂಬಂಧಿಸಿದಂತೆ ಕಾನೂನು ಹೋರಾಟ ನಡೆಯುತ್ತಿರುವ ಮಧ್ಯೆ ಈ ಮಹತ್ವದ ತೀರ್ಪು ಬಂದಿದೆ. ನಿರ್ಮಾಪಕರು ಚಿತ್ರದ ಬಿಡುಗಡೆಗೆ ಸಂಬಂಧಿಸಿದಂತೆ ನೀಡಲಾದ ಮಧ್ಯಂತರ ತಡೆಯಾಜ್ಞೆಯನ್ನು ಪ್ರಶ್ನಿಸಿದ್ದರು.ಚಿತ್ರಕ್ಕೆ ನೀಡಿದ ಸೆನ್ಸಾರ್ ಮಂಡಳಿ ಪ್ರಮಾಣಪತ್ರವನ್ನು ಏಕಸದಸ್ಯ ಪೀಠ ತರಾಟೆಗೆ ತೆಗೆದುಕೊಂಡು, ಮರುಪರಿಶೀಲನೆಗೆ ಆದೇಶಿಸಿತ್ತು. ಈ ತೀರ್ಪಿನ ಕೆಲವೇ ಗಂಟೆಗಳ ನಂತರ, ವಿಭಾಗೀಯ ಪೀಠವು ತುರ್ತು ಮೇಲ್ಮನವಿ ವಿಚಾರಣೆ ನಡೆಸಿ ಈ ತೀರ್ಪಿಗೆ ತಡೆ ನೀಡಿದೆ.

ಕಾಬೂಲ್ ಸೇರಿ ಅಫ್ಘಾನಿಸ್ತಾನದ ಮೂರು ನಗರಗಳ ಮೇಲೆ ವೈಮಾನಿಕ ದಾಳಿ

55 ಸೈನಿಕರ ಹತ್ಯೆಗೆ ಪ್ರತ್ಯುತ್ತರ, 274 ತಾಲಿಬಾನಿಗಳ ಹತ್ಯೆ ಎಂದ ಪಾಕಿಸ್ತಾನ

ತಾಲಿಬಾನ್ ವಿರುದ್ಧ ಪಾಕ್ ಯುದ್ಧ ಘೋಷಣೆ

ಇಸ್ಲಾಮಾಬಾದ್/ಕಾಬೂಲ್: ಪವಿತ್ರ ರಂಜಾನ್ ಮಾಸದಲ್ಲಿಯೇ ಪಾಕಿಸ್ತಾನ ಮತ್ತು ಅಫ್ಘಾನಿಸ್ತಾನದ ತಾಲಿಬಾನ್ ಆಡಳಿತದ ನಡುವೆ ನಡೆಸಿದ ಮಿಲಿಟರಿ ಸಂಘರ್ಷ ತೀವ್ರಗೊಂಡಿದ್ದು,55 ಪಾಕ್ ಸೈನಿಕರ ಹತ್ಯೆಗೆ ಪ್ರತಿಯಾಗಿ ಪಾಕಿಸ್ತಾನವು ನೆರೆ ರಾಷ್ಟ್ರದ ಜತೆ ಪೂರ್ಣ ಪ್ರಮಾಣದ ಯುದ್ಧ ಘೋಷಿಸಿದೆ.

ಪಾಕಿಸ್ತಾನವು ತಾಲಿಬಾನ್ ಆಳ್ವಿಕೆಯಲ್ಲಿರುವ ರಾಷ್ಟ್ರದೊಂದಿಗೆ ಪೂರ್ಣ ಪ್ರಮಾನದ ಯುದ್ಧ (ಓಪನ್ ವಾರ್) ಘೋಷಿಸಿದೆ ಎಂದು ಪ್ರಧಾನಿ ಶೆಹಬಾಜ್ ಷರೀಫ್ ಘೋಷಿಸಿದ್ದಾರೆ. ಶುಕ್ರವಾರ ಬೆಳ್ಳಂಬೆಳಗ್ಗೆ ಕಾನೂಲ್ ಮತ್ತು ಇತರ 2 ಅಫ್ಘಾನ್ ಪ್ರಾಂತ್ಯಗಳ ಮೇಲೆ ಪಾಕಿಸ್ತಾನ ವಾಯುದಾಳಿ ನಡೆಸಿದೆ. ಕಾಬೂಲ್‌ನಲ್ಲಿ ಕನಿಷ್ಠ ಮೂರು ಸ್ಫೋಟಗಳು ಸಂಭವಿಸಿದೆ. ಅಫ್ಘಾನಿಸ್ತಾನದ ರಾಜಧಾನಿ ಕಾಬೂಲ್, ಕಂದಹಾರ್ ಮತ್ತು ಪಕ್ತಿಯಾ ಸ್ಥಳಗಳ ಮೇಲೆ ಬಾಂಬ್ ದಾಳಿ ಮಾಡಿದೆ.

ವಿವಾದಿತ ಡುರಾಂಡ್ ರೇಖೆಯ ಉದ್ದಕ್ಕೂ ಮಿಲಿಟರಿ ನೆಲೆಗಳು ಮತ್ತು ಔಟ್‌ಪೋಸ್ಟ್‌ಗಳನ್ನು ತನ್ನ ಪಡೆಗಳು ವಶಪಡಿಸಿಕೊಂಡಿವೆ ಎಂದು ತಾಲಿಬಾನ್ ಹೇಳಿಕೊಂಡಿತ್ತು. ಇದಾದ ಕೆಲವೇ ಗಂಟೆಗಳಲ್ಲಿ ಪಾಕಿಸ್ತಾನ ವಾಯುದಾಳಿ ನಡೆಸಿದೆ.

ಈ ಬೆನ್ನಲ್ಲೇ ಡುರಾಂಡ್ ರೇಖೆ ಎಂದು ಕರೆಯಲ್ಪಡುವ 2,611 ಕೀಮೀ ಉದ್ದದ ಗಡಿ ಹಾಗೂ ಗಡಿಯ ಇನ್ನೊಂದು ಭಾಗವಾದ ಟೋರ್ಖಾಮ್ ನಲ್ಲಿಯೂ ಉಭಯ ದೇಶಗಳ ನಡುವೆ ಭಾರೀ ಗುಂಡಿನ ಚಕಮಕಿ ನಡೆದಿದೆ. ಪಾಕಿಸ್ತಾನ ಸೇನೆ ಗಡಿ ಗ್ರಾಮಗಳನ್ನ ಖಾಲಿ ಮಾಡಿಸಿದೆ.

ಸಂಘರ್ಷ ಶುರುವಾಗಿದ್ದು ಹೇಗೆ?: ನಂಗರ್‌ಹಾರ್ ಮತ್ತು ಪಕ್ತಿಯಾ ಪ್ರಾಂತ್ಯಗಳಲ್ಲಿ ಪಾಕಿಸ್ತಾನ ನಡೆಸಿದ್ದ ದಾಳಿಗೆ ಪ್ರತೀಕಾರವಾಗಿ ಅಫ್ಘಾನ್ ಪಡೆ ಪಾಕ್ ಮೇಲೆ ದಾಳಿ ನಡೆಸಿ, 55 ಪಾಕ್ ಸೈನಿಕರನ್ನು ಕೊಂದು 23 ಮಂದಿಯನ್ನು ಸೆರೆ ಹಿಡಿದಿತ್ತು. ಡುರಾಂಡ್ ರೇಖೆಯ ಉದ್ದಕ್ಕೂ ಪಾಕಿಸ್ತಾನಿ ಸೇನಾ ಕೇಂದ್ರಗಳು ಮತ್ತು ಮಿಲಿಟರಿ ಸೌಲಭ್ಯಗಳ ಮೇಲೆ ದಾಳಿ ಮಾಡಿದ್ದ ತಾಲಿಬಾನ್ ಪಡೆ ಒಂದು ಪ್ರಧಾನ ಕಚೇರಿ ಮತ್ತು 19 ಔಟ್‌ಪೋಸ್ಟ್ ಹಾಗೂ ಅಪಾರ ಪ್ರಮಾಣದ ಶಸ್ತ್ರಾಸ್ತ್ರ ವಶಕ್ಕೆ ಪಡೆದುಕೊಂಡಿತ್ತು. ಇದಲ್ಲದೆ ಪಾಕಿಸ್ತಾನದ ಎಫ್–16 ಯುದ್ಧ ವಿಮಾನವನ್ನು ಹೊಡೆದುರುಳಿಸಲಾಗಿದೆ ಎಂದು ತಾಲಿಬಾನ್ ವಕ್ತಾರರು ಹೇಳಿಕೊಂಡಿದ್ದಾರೆ.

274 ತಾಲಿಬಾನಿಗಳ ಹತ್ಯೆ : ಅಫ್ಘಾನ್ ದಾಳಿಗೆ ಪ್ರತಿಯಾಗಿ ನಡೆದ ವೈಮಾನಿಕ ದಾಳಿಯಲ್ಲಿ ಕಾಬೂಲ್ ನಲ್ಲಿರುವ ತಾಲಿಬಾನ್ ಸೇನೆಯ ಎರಡು ಬ್ರಿಗೇಡ್ ಪ್ರಧಾನ ಕಚೇರಿಗಳು ಧ್ವಂಸಗೊಂಡಿವೆ. ಸುಮಾರು 274 ತಾಲಿಬಾನ್ ಅಧಿಕಾರಿಗಳು ಮತ್ತು ಉಗ್ರರು ಹತರಾಗಿದ್ದಾರೆ ಎಂದು ಪಾಕ್ ಹೇಳಿಕೊಂಡಿದೆ. ಅಫ್ಘಾನ್ ಕಡೆಯಿಂದ ನಡೆದ ಪ್ರಚೋದನೆಯಿಲ್ಲದ ದಾಳಿಗೆ ಇದು ಪ್ರತಿಕ್ರಿಯೆ ಎಂದು ಪಾಕಿಸ್ತಾನ ಹೇಳಿಕೊಂಡಿದೆ.

ನೆರೆ ರಾಷ್ಟ್ರಗಳ ನಿಲುವೇನು ?

ಅಫ್ಘಾನಿಸ್ತಾನದ ಭೂಭಾಗದ ಮೇಲೆ ಪಾಕಿಸ್ತಾನ ನಡೆಸುತ್ತಿರುವ ವೈಮಾನಿಕ ದಾಳಿ ಆ ರಾಷ್ಟ್ರದ ಸಾರ್ವಭೌಮತ್ವದ ಮೇಲಿನ ಪ್ರಹಾರ ಎಂದು ಭಾರತ ಖಂಡಿಸಿದೆ. ರಷ್ಯಾ ಮತ್ತು ಚೀನಾ ಈ ಸಮರಕ್ಕೆ ತೀವ್ರ ಕಳವಳ ವ್ಯಕ್ತಪಡಿಸಿದ್ದು, ಕೂಡಲೇ ಯುದ್ಧ ನಿಲ್ಲಿಸಿ ಮಾತುಕತೆಯ ಮೂಲಕ ಸಮಸ್ಯೆ ಬಗೆಹರಿಸಿಕೊಳ್ಳುವಂತೆ ಮನವಿ ಮಾಡಿವೆ.

ತಾಲಿಬಾನ್ ನೆಲೆಗಳ ಮೇಲೆ ನಮ್ಮ ಸೇನೆ ಅಪಾರ ಪ್ರಮಾಣದ ಹಾನಿಯನ್ನು ಮಾಡಿದೆ. 27 ತಾಲಿಬಾನ್ ಮಿಲಿಟರಿ ಪೋಸ್ಟ್‌ಗಳನ್ನು ಧ್ವಂಸಮಾಡಿದ್ದು, 9 ಔಟ್ ಪೋಸ್ಟ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಕಾರ್ಯಾಚರಣೆಗಳಲ್ಲಿ ಅಫ್ಘಾನಿಸ್ತಾನದ 80ಕ್ಕೂ ಹೆಚ್ಚು ಯುದ್ಧ ಟ್ಯಾಂಕ್‌ಗಳು, ಫಿರಂಗಿಗಳು ಮತ್ತು ಶಸ್ತ್ರಸಜ್ಜಿತ ಸಿಬ್ಬಂದಿ ವಾಹನಗಳು ನಾಶವಾಗಿವೆ ಎಂದು ಪಾಕಿಸ್ತಾನ ಪ್ರಧಾನಿ ಕಚೇರಿಯ ವಕ್ತಾರ ಮೊಷರಫ್ ಜೈದಿ ಹೇಳಿದ್ದಾರೆ.

55 ಪಾಕ್ ಸೈನಿಕರ ಸಾವು: ತಾಲಿಬಾನ್ ಇನ್ನೊಂದೆಡೆ, ತಾಲಿಬಾನ್ ಪಡೆಗಳು ಗಡಿಯಲ್ಲಿ ನಡೆಸಿದ ದಾಳಿಯಲ್ಲಿ ಸುಮಾರು 55 ಪಾಕಿಸ್ತಾನಿ ಸೈನಿಕರು ಮೃತಪಟ್ಟಿದ್ದಾರೆ ಎಂದು ಅಫ್ಘಾನಿಸ್ತಾನ ಪ್ರತಿಪಾದಿಸಿದೆ. ಪಾಕಿಸ್ತಾನ ಇದನ್ನು ನಿರಾಕರಿಸಿದ್ದು ಕೇವಲ 12 ಸೈನಿಕರು ಮೃತಪಟ್ಟಿದ್ದಾರೆ ಎಂದು ತಿಳಿಸಿದೆ. ವಿವಾದಿತ ಡುರಾಂಡ್ ಲೈನ್‌ನ ಉದ್ದಕ್ಕೂ ಕಂದಹಾರ್ ಮತ್ತು ಹೆಲ್ಮಂಡ್‌ನಲ್ಲಿಯೂ ಕಾರ್ಯಾಚರಣೆ ಪ್ರಾರಂಭಿಸಲಾಗಿದೆ ಎಂದು ತಾಲಿಬಾನ್ ವಕ್ತಾರ ಜಬಿಹುಲ್ಲಾ ಮುಜಾಹಿದ್ ಹೇಳಿದ್ದಾರೆ. ಉಭಯ ದೇಶಗಳ ನಡುವಿನ ಪ್ರಮುಖ ವ್ಯಾಪಾರ ಮಾರ್ಗವಾದ ತೋರ್ಖಾಮ್ ಗಡಿಯನ್ನು ಮುಚ್ಚಲಾಗಿದ್ದು, ಅಲ್ಲಿಯೂ ಶೆಲ್ ದಾಳಿಗಳು ನಡೆಯುತ್ತಿವೆ.

ಪಾಕ್–ತಾಲಿಬಾನ್ ಯುದ್ಧದ ಮೂಲ ಏನು ?

ಡ್ಯುರಾಂಡ್ ಲೈನ್ ಗಡಿ ವಿವಾದ ಎರಡೂ ರಾಷ್ಟ್ರಗಳ ನಡುವಣ ವಿವಾದದ ಮೂಲ. ಇದು ಬ್ರಿಟಿಷ್ ಭಾರತ ಮತ್ತು ಅಫ್ಘಾನಿಸ್ತಾನದ ನಡುವೆ 1893ರಲ್ಲಿ ಎಳೆಯಲಾದ 2,640 ಕಿ.ಮೀ ಉದ್ದದ ಗಡಿರೇಖೆ. ಪಾಕಿಸ್ತಾನವು ಇದನ್ನು ಅಧಿಕೃತ ಅಂತರಾಷ್ಟ್ರೀಯ ಗಡಿ ಎಂದು ಪರಿಗಣಿಸುತ್ತದೆ. ಆದರೆ ಅಫ್ಘಾನಿಸ್ತಾನದ ಯಾವುದೇ ಸರಕಾರ ಈ ಗಡಿಯನ್ನು ಒಪ್ಪಿಕೊಂಡಿಲ್ಲ. ಇದು ಪಶ್ತೂನ್ ಬುಡಕಟ್ಟು ಜನರನ್ನು ಇಬ್ಭಾಗ ಮಾಡುತ್ತದೆ ಎಂಬುದು ಅವರ ವಾದ. ಗಡಿಯಲ್ಲಿ ಪಾಕಿಸ್ತಾನ ನಿರ್ಮಿಸುತ್ತಿರುವ ಬೇಲಿಯನ್ನು ತಾಲಿಬಾನ್ ಪದೇ ಪದೇ ವಿರೋಧಿಸುತ್ತಿದೆ.

ತಕ್ಷಣದ ಕಾರಣ ಏನು : ಪಾಕಿಸ್ತಾನದ ಮೇಲೆ ದಾಳಿ ನಡೆಸುವ ಪಾಕಿಸ್ತಾನಿ ತಾಲಿಬಾನ್ ಉಗ್ರರಿಗೆ ಅಫ್ಘಾನ್ ತಾಲಿಬಾನ್ ಆಶ್ರಯ ನೀಡುತ್ತಿದೆ ಎಂಬುದು ಪಾಕಿಸ್ತಾನದ ಬಲವಾದ ಆರೋಪ. 2021 ರಲ್ಲಿ ಅಫ್ಘಾನಿಸ್ತಾನದಲ್ಲಿ ತಾಲಿಬಾನ್ ಅಧಿಕಾರಕ್ಕೆ ಬಂದ ನಂತರ ಪಾಕಿಸ್ತಾನದಲ್ಲಿ ಉಗ್ರಗಾಮಿ ದಾಳಿಗಳು ಶೇ.50ರಷ್ಟು ಹೆಚ್ಚಾಗಿವೆ. ಕಳೆದ ವರ್ಷವೊಂದರಲ್ಲೇ 2,500 ಕ್ಕೂ ಹೆಚ್ಚು ಜನರು ಈ ದಾಳಿಗಳಲ್ಲಿ ಮೃತಪಟ್ಟಿದ್ದಾರೆ. ಆದರೆ ತಾಲಿಬಾನ್ ಸರಕಾರ ಇದನ್ನು ನಿರಾಕರಿಸಿದ್ದು, ಪಾಕಿಸ್ತಾನವೇ ಅಫ್ಘಾನಿಸ್ತಾನದ ಸಾರ್ವಭೌಮತ್ವವನ್ನು ಉಲ್ಲಂಘಿಸಿ ನಾಗರಿಕರ ಮೇಲೆ ದಾಳಿ ಮಾಡುತ್ತಿದೆ ಎಂದು ಆರೋಪಿಸಿದೆ.

ಆಪರೇಷನ್ ಗಜಬ್–ಲಿಲ್–ಹಕ್ : ಪಾಕಿಸ್ತಾನವು ಕಾಬೂಲ್‌ನಲ್ಲಿರುವ ಟಿಟಿಪಿ ಮುಖ್ಯಸ್ಥ ನೂರ್ ವಾಲಿ ಮೆಹ್ಸೂದ್ ಗುರಿಯಾಗಿಸಿ 2025ರ ಅಕ್ಟೋಬರ್ 9ರಂದು ಆಪರೇಷನ್ ಗಜಬ್–ಲಿಲ್–ಹಕ್ ಹೆಸರಿನಲ್ಲಿ ವೈಮಾನಿಕ ದಾಳಿ ನಡೆಸಿತ್ತು. ಇದಕ್ಕೆ ಪ್ರತಿಯಾಗಿ ಅಫ್ಘಾನ್ ತಾಲಿಬಾನ್ ಪಡೆಗಳು ಪಾಕಿಸ್ತಾನದ ಗಡಿ ಪೋಸ್ಟ್‌ಗಳ ಮೇಲೆ ದಾಳಿ ನಡೆಸಿ ಹಲವು ಸೈನಿಕರನ್ನು ಕೊಂದಿದ್ದರು. ಅಕ್ಟೋಬರ್ 19 ರಂದು ಟರ್ಕಿ ಮಧ್ಯಪ್ರವೇಶದ ಬಳಿಕ ಕದನ ವಿರಾಮ ಘೋಷಿಸಿದ್ದ ಎರಡು ದೇಶಗಳ ನಡುವೆ ಮತ್ತೆ ಉದ್ವಿಗ್ನತೆ ಏರ್ಪಟ್ಟಿದೆ. ಹಲವು ಕದನ ವಿರಾಮಗಳ ನಂತರ ಬಹಿರಂಗ ಯುದ್ಧವಾಗಿ ಮಾರ್ಪಟ್ಟಿದೆ.

ನಿರಾಶ್ರಿತರ ಹಸ್ತಾಂತರದ ಬಿಕ್ಕಟ್ಟು: ಪಾಕಿಸ್ತಾನವು ತನ್ನ ದೇಶದಲ್ಲಿರುವ ಸುಮಾರು 17 ಲಕ್ಷ ದಾಖಲೆಗಳಿಲ್ಲದ ಅಫ್ಘಾನ್ ನಿರಾಶ್ರಿತರನ್ನು ಬಲವಂತವಾಗಿ ಹೊರಹಾಕಲು ನಿರ್ಧರಿಸಿತ್ತು. ಇದು ಉಭಯ ದೇಶಗಳ ರಾಜತಾಂತ್ರಿಕ ಸಂಬಂಧ ಸಂಪೂರ್ಣವಾಗಿ ಹದಗೆಡಲು ಕಾರಣವಾಯಿತು.

600 ಕಿ.ಮೀ. ದೂರದ 'ಗುರಿ' ಹೊಡೆದುರುಳಿಸಿದ ಎಸ್–400 ಕ್ಷಿಪಣಿ ನಿರೋಧಕ ವ್ಯವಸ್ಥೆ

ಸುದರ್ಶನ ಚಕ್ರದ ಶಕ್ತಿಗೆ ಬೆರಗಾದ ವಿಶ್ವ

ದೆಹಲಿ: ಭಾರತೀಯ ವಾಯುಪಡೆಯ ರಕ್ಷಣಾ ವ್ಯವಸ್ಥೆಯ ಪ್ರಮುಖ ಅಸ್ತ್ರವಾದ ಎಸ್–400 'ಸುದರ್ಶನ್' ದೀರ್ಘ ಶ್ರೇಣಿಯ ಕ್ಷಿಪಣಿ ವ್ಯವಸ್ಥೆಯು ತನ್ನ ಸಾಮರ್ಥ್ಯವನ್ನು ಜಗತ್ತಿಗೆ ತೋರಿಸಿದೆ. ಈ ಕ್ಷಿಪಣಿಯ ಪರಾಕ್ರಮವನ್ನು ತೋರಿಸುವ ವಿಡಿಯೋವನ್ನು ವಾಯುಪಡೆ ಇದೇ ಮೊದಲ ಬಾರಿಗೆ ಬಿಡುಗಡೆ ಮಾಡಿದೆ. ಸೇನಾ ಇತಿಹಾಸದಲ್ಲಿಯೇ ಅತಿ ದೂರದ ಗುರಿಯನ್ನು ಯಶಸ್ವಿಯಾಗಿ ಹೊಡೆದುರುಳಿಸುವ ಮೂಲಕ ಭಾರತ ಹೊಸ ದಾಖಲೆ ಬರೆದಿದೆ. ರಾಜಸ್ಥಾನದ ಪೋಖ್ರಾನ್‌ನಲ್ಲಿ ನಡೆಯಲಿರುವ 'ವಾಯು ಶಕ್ತಿ–2026' ಸಮರಾಭ್ಯಾಸಕ್ಕೂ ಮುನ್ನ ವಾಯುಪಡೆಯು ಈ ದೃಶ್ಯಗಳನ್ನು ಹಂಚಿಕೊಂಡಿದೆ.

ವಿಡಿಯೋದಲ್ಲಿ, ರಾಡಾರ್‌ಗಳು ದೂರದಲ್ಲಿರುವ ಶತ್ರು ಗುರಿಯನ್ನು ಪತ್ತೆಹಚ್ಚುವುದನ್ನು ಮತ್ತು ಕೆಲವೇ ಕ್ಷಣಗಳಲ್ಲಿ ಕ್ಷಿಪಣಿಯು ಆಕಾಶಕ್ಕೆ ಚಿಮ್ಮಿ ಅದನ್ನು ನಾಶಪಡಿಸುವುದನ್ನು ನೋಡಬಹುದು. ಶತ್ರು ನಮ್ಮ ಕಣ್ಣಿಗೆ ಕಾಣಿಸದಿದ್ದರೂ, ಸುದರ್ಶನ ಚಕ್ರದ ವ್ಯಾಪ್ತಿಯಿಂದ ಹೊರಗಿಲ್ಲ ಎಂಬ ಸ್ಪಷ್ಟ ಎಚ್ಚರಿಕೆಯನ್ನು ವಾಯುಪಡೆ ಈ ಮೂಲಕ ನೀಡಿದೆ. 2025ರ ಮೇ ತಿಂಗಳಲ್ಲಿ ನಡೆದ 'ಆಪರೇಷನ್ ಸಿಂಧೂರ್' ಕಾರ್ಯಾಚರಣೆಯ ವೇಳೆ, ಪಾಕಿಸ್ತಾನದ ಗಡಿಯೊಳಗೆ ಸುಮಾರು 300 ಕಿಲೋಮೀಟರ್ ದೂರದಲ್ಲಿದ್ದ ಗುರಿಯನ್ನು ಈ ಕ್ಷಿಪಣಿ ವ್ಯವಸ್ಥೆ ಮೂಲಕ ಹೊಡೆದುರುಳಿಸಲಾಗಿತ್ತು. ಇದು ವಿಶ್ವದಲ್ಲಿಯೇ ದಾಖಲಾದ ಅತಿ ದೂರದ ಕ್ಷಿಪಣಿ ದಾಳಿ ಎಂದು ಪರಿಗಣಿಸಲಾಗಿದೆ.

ಮರಳುಗಾಡಿನಲ್ಲಿ ಶಕ್ತಿ ಪ್ರದರ್ಶನ

ಭಾರತದ ವಾಯುಗಡಿಗೆ 'ಸುದರ್ಶನ' ಒಂದು ಬಲಿಷ್ಠ ರಕ್ಷಣಾ ಕವಚವನ್ನು ಒದಗಿಸಿದೆ. ಇದು ಆಕಾಶ್ ಕ್ಷಿಪಣಿಗಳು ಮತ್ತು ಇತರ ರಕ್ಷಣಾ ವ್ಯವಸ್ಥೆಗಳ ಜೊತೆಗೂಡಿ ಕಾರ್ಯನಿರ್ವಹಿಸುತ್ತದೆ. ಪೋಖ್ರಾನ್ ನಲ್ಲಿ ನಡೆಯಲಿರುವ 'ವಾಯು ಶಕ್ತಿ' ಪ್ರದರ್ಶನದಲ್ಲಿ ಸುದರ್ಶನದ ಜೊತೆಗೆ ತೇಜಸ್, ರಫೇಲ್, ಸುಖೋಯ್–30ಎಂಕೆಐ , ಮಿಗ್–29, ಮತ್ತು ಜಾಗ್ವಾರ್‌ನಂತಹ ಯುದ್ಧ ವಿಮಾನಗಳು ಕೂಡ ತಮ್ಮ ಶಕ್ತಿ ಪ್ರದರ್ಶಿಸಲಿವೆ. ಒಂದೇ ಸಮಯದಲ್ಲಿ ಅನೇಕ ಗುರಿಗಳನ್ನು ಗುರುತಿಸಿ, ಅವುಗಳ ಮೇಲೆ ದಾಳಿ ಮಾಡುವ ಸಾಮರ್ಥ್ಯವೇ ಎಸ್–400 ಕ್ಷಿಪಣಿಯ ಅತಿದೊಡ್ಡ



ಭಾರತದ ರಕ್ಷಣಾ ಕವಚ

ರಷ್ಯಾದ ತಂತ್ರಜ್ಞಾನದಲ್ಲಿ ತಯಾರಾದ ಎಸ್–400 ಟ್ರಯಂಫ್ ವ್ಯವಸ್ಥೆಯನ್ನು ಭಾರತದಲ್ಲಿ 'ಸುದರ್ಶನ ಚಕ್ರ' ಎಂದು ಕರೆಯಲಾಗುತ್ತದೆ. 2018ರಲ್ಲಿ ರಷ್ಯಾ ಜತೆ ಮಾಡಿಕೊಂಡ 540 ಕೋಟಿ ಡಾಲರ್ ಒಪ್ಪಂದದ ಅಡಿಯಲ್ಲಿ ಭಾರತ ಈ ವ್ಯವಸ್ಥೆಯನ್ನು ಪಡೆದುಕೊಂಡಿದೆ. ಯುದ್ಧ ವಿಮಾನಗಳು, ಡ್ರೋನ್ ಗಳು, ಕ್ರೂಸ್ ಕ್ಷಿಪಣಿಗಳು ಮತ್ತು ಬ್ಯಾಲಿಸ್ಟಿಕ್ ಕ್ಷಿಪಣಿಗಳನ್ನು ಆಗಸದಲ್ಲಿಯೇ ನಾಶಪಡಿಸುವ ಸಾಮರ್ಥ್ಯ ಇದಕ್ಕಿದೆ. ಈ ವ್ಯವಸ್ಥೆಯಲ್ಲಿರುವ 40 ಎನ್6 ಕ್ಷಿಪಣಿಗಳು 400 ಕಿಲೋಮೀಟರ್‌ವರೆಗೂ ಗುರಿ ತಲುಪಬಲ್ಲವು. ಅಲ್ಲದೇ, 600 ಕಿಲೋಮೀಟರ್ ದೂರದಲ್ಲಿರುವ ಶತ್ರುಗಳ ಚಲನವಲನವನ್ನು ಪತ್ತೆಹಚ್ಚುವ ಸಾಮರ್ಥ್ಯ ಇದರ ರಾಡಾರ್‌ಗಳಿಗಿದೆ.

ಪತ್ನಿ ಸಂಗೀತಾ ವಿಚ್ಛೇದನ ಕೋರಿ ಅರ್ಜಿ

ದಳಪತಿ ದಾಂಪತ್ಯದಲ್ಲಿ ಬಿರುಕು

ಚೆನ್ನೈ: ತಮಿಳುನಾಡಿನ ಮುಂಬರುವ ಚುನಾವಣೆಯಲ್ಲಿ ತಮ್ಮ ರಾಜಕೀಯ ಭವಿಷ್ಯವನ್ನು ಅರಸಲು ಹೊರಟಿರುವ ಟಿವಿಕೆ ಮುಖ್ಯಸ್ಥ, ದಳಪತಿ ನಟ ವಿಜಯ್‌ಗೆ ಹೊಸ ಸಂಕಷ್ಟ ಎದುರಾಗಿದೆ. ನಾಡಿನ ಕಷ್ಟಗಳನ್ನು ಪರಿಹಾರ ಮಾಡಲು ಹೊರಟ ದಳಪತಿ ವಿಜಯ್ ತಮ್ಮ ಕೌಟುಂಬಿಕ ಬದುಕಿನಲ್ಲಿಯೇ ಸಮಸ್ಯೆ ಎದುರಿಸಿದ್ದಾರೆ. ಚಿತ್ರನಟಿ ತ್ರಿಷಾ ಅವರೊಂದಿಗಿನ ಸಂಬಂಧದ ಗುಸು ಗುಸು ನಡುವೆ ವಿಜಯ್ ಪತ್ನಿ ಸಂಗೀತಾ ಸೊರ್ನಲಿಂಗಂ ಅವರು ವಿವಾಹ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿದ್ದಾರೆ. ಈ ಮೂಲಕ ನಟನ ಜೊತೆಗಿನ 27 ವರ್ಷಗಳ ದಾಂಪತ್ಯವನ್ನು ಕೊನೆಗೊಳಿಸಲು ನಿರ್ಧರಿಸಿದ್ದಾರೆ.

ವಿಜಯ್ ಅವರು ತಮಿಳಿನ ಖ್ಯಾತ ನಟಿಯೊಂದಿಗೆ ವಿವಾಹೇತರ ಸಂಬಂಧ ಹೊಂದಿದ್ದಾರೆಂದು ಪತ್ನಿ ಆರೋಪಿಸಿದ್ದಾರೆ. ಈ ಸಂಬಂಧ ನಿಲ್ಲಿಸುತ್ತೇನೆ ಅಂತ ವಿಜಯ್ ಭರವಸೆ ಕೊಟ್ಟಿದ್ದರು. ಆದರೆ, ಅದು ಹಾಗೆಯೇ ಮುಂದುವರಿದಿದೆ ಎಂದು ಅರ್ಜಿಯಲ್ಲಿ ಸಂಗೀತಾ ಉಲ್ಲೇಖಿಸಿದ್ದಾರೆ. 1999ರ ಆಗಸ್ಟ್‌ನಲ್ಲಿ ವಿವಾಹವಾದ ಈ ದಂಪತಿಗೆ ಜೇಸನ್ ಸಂಜಯ್ ಮತ್ತು ದಿವ್ಯಾ ಸಾಶಾ ಎಂಬ ಇಬ್ಬರು ಮಕ್ಕಳಿದ್ದಾರೆ.

ಪತಿ ನನ್ನನ್ನು ಸಾಮಾಜಿಕ ಮತ್ತು ವೃತ್ತಿಪರ ಜೀವನದಿಂದ ದೂರ ಇಟ್ಟಿದ್ದಾರೆ. ವಿದೇಶ ಪ್ರವಾಸ ಮಾಡು ವುದು ಮತ್ತು ಆ ನಟಿಯೊ ಂದಿಗೆ ಸಾರ್ವಜನಿಕ ಕಾರ್ಯಕ್ರಮ ಗಳಲ್ಲಿ ಭಾಗವಹಿಸುವುದನ್ನು ಮುಂದುವರಿಸಿದ್ದಾರೆ. ಈ ಪ್ರವಾಸದ ಫೋಟೋಗಳನ್ನು ನಟಿ ಸೋಷಿಯಲ್ ಮೀಡಿಯಾದಲ್ಲಿ ಪೋಸ್ಟ್ ಮಾಡುತ್ತಿದ್ದಾರೆ. ಇದರಿಂದ ನನಗೆ ಮತ್ತು ಮಕ್ಕಳಿಗೆ ಅವಮಾನವಾಗಿದೆ ಎಂದು ವಿಜಯ್ ಪತ್ನಿ ಆರೋಪಿಸಿದ್ದಾರೆ.

ತಮಿಳು ಕೈಗಾರಿ ಕೋದ್ಯಮಿ ಯೊಬ್ಬರ ಪುತ್ರಿ, ಸಂಗೀತಾ ಅವರು 1999ರ ಆಗಸ್ಟ್ 25 ರಂದು ವಿಜಯ್ ಅವರನ್ನು ವಿವಾಹವಾಗಿದ್ದರು. ವಿದೇಶದಲ್ಲಿದ್ದ ಸಂಗೀತಾ ಅವರು ವಿಜಯ್ ಅಭಿಮಾನಿ ಯಾಗಿದ್ದರು.

ಹಾಗಾಗಿ ವಿಜಯ್ ಅವರ ಚೆನ್ನೈ ನಿವಾಸಕ್ಕೆ ಬಂದಿ ದ್ದರು. ಇವರಿಬ್ಬರ ಮಧ್ಯೆ ಸ್ನೇಹ ಶುರುವಾಗಿ ಹಿಂದೂ ಮತ್ತು ಕ್ರಿಶ್ಚಿಯನ್ ಸಂಪ್ರದಾಯದಂತೆ ಮದುವೆ ಯಾಗಿದ್ದರು.

ವಿಚ್ಛೇದನಕ್ಕೆ ಕಾರಣ ಏನು?

ವಿಜಯ್ ನಟಿಯೊಬ್ಬರ ಜೊತೆ ಸಂಬಂಧದಲ್ಲಿದ್ದಾರೆ ಎಂದು ಎಂಬ ಗಾಸಿಪ್ ತಮಿಳು ಚಿತ್ರರಂಗದಲ್ಲಿ ದಟ್ಟವಾಗಿದೆ. ಕೆಲ ದಿನಗಳ ಹಿಂದೆ ತಮಿಳುನಾಡು ಬಿಜೆಪಿ ಮುಖ್ಯಸ್ಥ ಎನ್.ನಾಗೇಂದ್ರನ್ ಅವರು 'ನಟಿ ತ್ರಿಶಾ ಮನೆಯಿಂದ ವಿಜಯ್ ಅವರು ಹೊರಗಡೆ ಬಂದು, ಸಮಸ್ಯೆ ನೋಡಲಿ' ಎಂದು ಹೇಳಿ ವಿವಾದಕ್ಕೀಡಾಗಿದ್ದರು. ಈ ಹೇಳಿಕೆಗೆ ತ್ರಿಶಾ ಪ್ರತಿಕ್ರಿಯಿಸಿದ ನಂತರ ನಾಗೇಂದ್ರನ್ ಕ್ಷಮೆ ಯಾಚಿಸಿದ್ದರು.

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಯಾದಗಿರ.
ಸಂಖ್ಯೆ:ಕಾಪಾಅ/ಪಂರಾಇಂ/ವಿಯಾ/ಕೆಕೆಆರ್‌ಡಿಬಿ/2025–26/2051 ದಿನಾಂಕ: 26.02.2026
ಸಂಕ್ಷಿಪ್ತ ಟೆಂಡರ ಪ್ರಕಟಣೆ (ಅಲ್ಪಾವಧಿ) KW 3
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ) 2ನೇ ಕರೆ
1) ಕಾಮಗಾರಿಗಳ ವಿವರ.: Pck. No.YDG-YDG-01-2025-26 (4 Worsk) (1)ಯಾದಗಿರಿ ತಾಲ್ಲೂಕಿನ ಗೌಡಗೇರಾ ಗ್ರಾಮದ ಅಂಗನವಾಡಿ–01 ಕಟ್ಟಡ ನಿರ್ಮಾಣ. (2) ಗುರುಮಿಠಕಲ್ ತಾಲ್ಲೂಕಿನ ಹೊನಗೇರಾ ಗ್ರಾಮದ ಅಂಗನಾವಡಿ–03 ಕಟ್ಟಡ ನಿರ್ಮಾಣ. (3) ಗುರುಮಿಠಕಲ್ ತಾಲ್ಲೂಕಿನ ಶಿವಪೂರ ಗ್ರಾಮದ ಅಂಗನವಾಡಿ–01 ಕಟ್ಟಡ ನಿರ್ಮಾಣ.(4) ಯಾದಗಿರಿ ತಾಲ್ಲೂಕಿನ ಕೌಳೂರು ಗ್ರಾಮದ ಅಂಗನವಾಡಿ–03 ಕಟ್ಟಡ ನಿರ್ಮಾಣ. RDPR/2025-26/BD/WORK_INDENT24509/CALL-2 CAT-I Bidders Only 2) ಲೆಕ್ಕ ಶೀರ್ಷಿಕೆ :2025–26ನೇ ಕೆ.ಕೆ.ಆರ್.ಡಿ.ಬಿ. ಯೋಜನೆ 3) ಟೆಂಡರಿಗಿಟ್ಟ ಅಂದಾಜು ಮೊತ್ತ: ಕನಿಷ್ಠ ಮತ್ತು ಗರಿಷ್ಠ ರೂ. 64.00 ಲಕ್ಷ 4) ಗುತ್ತಿಗೆದಾರರ ದರ್ಜೆ: 3ನೇ ದರ್ಜೆ ಮೇಲ್ಪಟ್ಟು 5) ಟೆಂಡರ ಫಾರಂ ಪಡೆಯಲು ಕೊನೆಯ ದಿನಾಂಕ: 27.02.2026 ರಿಂದ 07.03.2026 ಸಾಯಂಕಾಲ 4:00 ಗಂಟೆವರೆಗೆ 6) ಟೆಂಡರ ಅರ್ಜಿ ಬೆಲೆ ಮತ್ತು ಇ.ಎಂ.ಡಿ. ಮೊತ್ತ: ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನಮೂದಿಸಿದಂತೆ (ಅರ್ಜಿ ಶುಲ್ಕು ಹಿಂದಿರುಗಿಸಲಾಗುವುದಿಲ್ಲಾ) 7) ಟೆಂಡರ ಫಾರಂ ಸಲ್ಲಿಸುವ ಅಂತಿಮ ದಿನಾಂಕ: 07.03.2026 ಸಾಯಂಕಾಲ 4:00 ಗಂಟೆವರೆಗೆ 8) ಟೆಂಡರ ತೆರೆಯುವ ದಿನಾಂಕ ತಾಂತ್ರಿಕ ಬಿಡ್ಡ್ (ಕೆ.ಡಬ್ಲ್ಯೂ– 3): 09.03.2026 ಬೆಳಿಗ್ಗೆ 11:00 ನಂತರ 9) ಟೆಂಡರ ತೆರೆಯುವ ದಿನಾಂಕ ಆರ್ಥಿಕ ಬಿಡ್ಡ್ (ಕೆ.ಡಬ್ಲ್ಯೂ– 3): 13.03.2026 ಬೆಳಿಗ್ಗೆ 11:00 ನಂತರ 10) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ (ಕಛೇರಿ ಅವಧಿಯಲ್ಲಿ): ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಯಾದಗಿರ. 11) ಅಂತರಜಾಲ ತಾಣದ ವಿಳಾಸ:https://kppp.karnataka.gov.in
ಸೂಚನೆ :– ಟೆಂಡರರಿಗೆ ಸಂಬಂದಿಸಿದ ಮಾಹಿತಿಗಳನ್ನು ಈ ಕಛೇರಿಯಿಂದ ಕಛೇರಿ ಅವಧಿಯಲ್ಲಿ ಅಥವಾ https://kppp.karnataka.gov.in/ ವೆಬ್‌ಸೈಟ್‌ನಲ್ಲಿ ಪಡೆಯಬಹುದು (ರಜಾದಿನಗಳು ಹೊರತುಪಡಿಸಿ).
ಸಹಿ/– ಕಾರ್ಯಪಾಲಕ ಇಂಜಿನೀಯರರು,
ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಯಾದಗಿರ.
ವಾ.ಸಾ.ಸಂ.ಇ/ಯಾದಗಿರ/556/ಕೆ.ಎಸ್.ಎಂ.ಸಿ.&ಎ/2025–26

ಲೋಕೋಪಯೋಗಿ ಇಲಾಖೆ
ಕಾರ್ಯನಿರ್ವಾಹಕ ಇಂಜಿನೀಯರರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಬಾಗಲಕೋಟೆ.
ಸಂಖ್ಯೆ : ಲೋ.ಇ./ಬಾ.ವಿ./ಪಿ.ಬಿ./ಕೆ.ಡಬ್ಲ್ಯೂ/2025–26/5212 ದಿನಾಂಕ : 26–02–2026
ಟೆಂಡರ್ ಪ್ರಕಟಣೆ
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999 – 2000 ರ ಪ್ರಕಾರ ಆ್ಯಕ್ಟ 2000 ರ ನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯುಮೆಂಟ್ ಕೆ.ಡಬ್ಲ್ಯೂ – 1, 2, 3, 4 ನಿಯಮದನ್ವಯ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಕೆ.ಪಿ.ಪಿ.ಪಿ. ಪೋರ್ಟಲ್ ಮುಖಾಂತರ **ಬಾಗಲಕೋಟೆ ವಿಭಾಗದ ಅಡಿಯಲ್ಲಿಯ** ಈ ಕೆಳಕಾಣಿಸಿದ ಕಾಮಗಾರಿಗಳ ಟೆಂಡರ್ ಅಹ್ವಾನಿಸಲಾಗಿದೆ.
ವರ್ಕ ಇಂಡೆಂಟ್ ನಂ. ಸಾಮಾನ್ಯ : **33638, 33567, 33726, 33734, 32609, 32611, 32411, 31568, 33159, 31113, 31119, 31111, 31106, 31108, 33196, 33197, 33988, 34052, 34021, 34136, 33968, 31116, 34153, 31110.**
ಪರಿಶಿಷ್ಟ ಜಾತಿ : **28985, 34157.**
ಪರಿಶಿಷ್ಟ ಪಂಗಡ : **34150.**
ಕ್ಯಾಟಗರಿ – 2(ಎ) : 33739, 34020.
ಈ ಎಲ್ಲ ಕಾಮಗಾರಿಗಳ ಗರಿಷ್ಠ ಟೆಂಡರ್‌ಗಿಟ್ಟ ಮೊತ್ತ ರೂ. 400.00 ಲಕ್ಷ ಹಾಗೂ ಕನಿಷ್ಠ ಮೊತ್ತ ರೂ. 10.00 ಲಕ್ಷಗಳ ವರೆಗಿನ ಕಾಮಗಾರಿಗಳಿಗೆ ಈ ಕೆಳಕಾಣಿಸಿದ ದಿನಾಂಕಗಳಂತೆ ಟೆಂಡರ್ ಅಹ್ವಾನಿಸಲಾಗಿದೆ.

ಅ) ಪೂರ್ವ ಭಾವಿ ಸಭೆಯ ದಿನಾಂಕ	:	13–03–2026 ರ ಬೆಳಿಗ್ಗೆ 11.30 ಗಂಟೆಗೆ.
ಬ) ಟೆಂಡರ್ ಆಕ್ಷೇಪಣೆಗಾಗಿ ನಿಗಧಿ ಪಡಿಸಿದ ದಿನಾಂಕ	:	16–03–2026 ರ ಸಂಜೆ 5.30 ಘಂಟೆಯವರೆಗೆ.
ಕ) ಟೆಂಡರ್ ಸ್ವೀಕರಿಸುವ ದಿನಾಂಕ	:	18–03–2026 ರ ಸಂಜೆ 4.00 ಘಂಟೆಯವರೆಗೆ.
ಡ) ತಾಂತ್ರಿಕ ಬಿಡ್ ತೆರೆಯುವ ದಿನಾಂಕ	:	20–03–2026 ರ ಸಂಜೆ 4.30 ಘಂಟೆಯವರೆಗೆ.
ಚ) ಆರ್ಥಿಕ ಬಿಡ್ ತೆರೆಯುವ ದಿನಾಂಕ	:	23–03–2026 ರ ಸಂಜೆ 4.30 ಘಂಟೆಯವರೆಗೆ.

ಕಾಮಗಾರಿಗಳಿಗೆ ಸಂಬಂಧಿಸಿದ ವಿವರವಾದ ಮಾಹಿತಿಯನ್ನು ವೈಬ್‌ಸೈಟ್ ವಿಳಾಸ : https://kppp.karnataka.gov.in ರಲ್ಲಿ ಪಡೆಯಬಹುದು.
ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ, ಬಾಗಲಕೋಟೆ.
ಡಿಐಪಿಆರ್/ಬಾಗಲಕೋಟೆ/616/ಮಣಿಪಾಲ್/2025–26

ಎಡಿಎಂಕೆ ಉಚ್ಚಾಟಿತ ನಾಯಕ, ಜಯಲಲಿತಾ ಅತ್ಯಾಪ್ತನಿಗೆ ಸಿಎಂ ಸ್ಟಾಲಿನ್ ಆಸರೆ

ಮಾಜಿ ಮುಖ್ಯಮಂತ್ರಿ ಪನ್ನೀರ್ ಸೆಲ್ವಂ ಡಿಎಂಕೆಗೆ

ಚೆನ್ನೈ: ರಾಜಕೀಯದಲ್ಲಿ ಶಾಶ್ವತ ಶತ್ರುಗಳೂ ಇಲ್ಲ, ಮಿತ್ರರೂ ಇಲ್ಲ. ಇದಕ್ಕೆ ಸಾಕ್ಷಿ ಎಂಬಂತೆ ತಮಿಳುನಾಡಿನ ಮಾಜಿ ಸಿಎಂ, ಎಐಎಡಿಎಂಕೆ ನಾಯಕ, ಮಾಜಿ ಮುಖ್ಯಮಂತ್ರಿ ಜಯಲಲಿತಾ ಅವರ ಕಟ್ಟಾ ಬೆಂಬಲಿಗ ಓ. ಪನ್ನಿರ್ ಸೆಲ್ವಂ ಅವರು ಶುಕ್ರವಾರ ಡಿಎಂಕೆ ಪಕ್ಷಕ್ಕೆ ಸೇರಿದ್ದಾರೆ.

ಚೆನ್ನೈನ ಡಿಎಂಕೆ ಪ್ರಧಾನ ಕಚೇರಿ 'ಅಣ್ಣಾ ಅರಿವಾಲಯಂ'ನಲ್ಲಿ ನಡೆದ ಕಾರ್ಯಕ್ರಮದಲ್ಲಿ ತಮಿಳುನಾಡು ಮುಖ್ಯಮಂತ್ರಿ ಮತ್ತು ಡಿಎಂಕೆ ಅಧ್ಯಕ್ಷ ಎಂ.ಕೆ. ಸ್ಟಾಲಿನ್ ಅವರ ಸಮ್ಮುಖದಲ್ಲಿ ಪನ್ನೀರ್ ಸೆಲ್ವಂ ಅವರು ಡಿಎಂಕೆ ಪಕ್ಷದ ಸದಸ್ಯತ್ವ ಪಡೆದರು.

ಎಐಎಡಿಎಂಕೆ ಮುಖ್ಯಸ್ಥೆ ದಿವಂಗತ ಜೆ. ಜಯಲಲಿತಾ ಅವರ ವಿಶ್ವಾಸಾರ್ಹ ಆಪ್ತ ಮತ್ತು ಒಪಿಎಸ್ ಎಂದೇ ಜನಪ್ರಿಯರಾಗಿದ್ದ ಪನ್ನೀರ್ ಸೆಲ್ವಂ ಮೂರು ಬಾರಿ ರಾಜ್ಯದ ಮುಖ್ಯಮಂತ್ರಿಯಾಗಿದ್ದರು. ಜಯಲಲಿತಾ ಜೈಲಿನಲ್ಲಿದ್ದಾಗಲೂ ಮುಖ್ಯಮಂತ್ರಿಯಾಗಿ ಸರಕಾರ ಮತ್ತು ಪಕ್ಷವನ್ನು ಮುನ್ನಡೆಸಿದ್ದರು. ಆದರೆ ಜಯಾ ಅವರ ನಿಧನದ ಬಳಿಕ ಪಕ್ಷದಲ್ಲಿ ಅವರನ್ನು ಮೂಲೆಗುಂಪು ಮಾಡಲಾಗಿತ್ತು. 2022ರಲ್ಲಿ ಅವರನ್ನು ಪಕ್ಷದಿಂದಲೇ ಉಚ್ಚಾಟಿಸಲಾಗಿತ್ತು. ಮರಳಿ ಮಾತೃಪಕ್ಷವನ್ನು ಸೇರಲು ನಡೆಸಿದ ಪ್ರಯತ್ನ ವಿಫಲವಾದ ನಂತರ ಇದೀಗ ತಾವು ಬದ್ಧ ವೈರಿ ಎಂದು ಪರಿಗಣಿಸಿದ್ದ ಡಿಎಂಕೆ ಪಕ್ಷ ಸೇರಿಕೊಂಡಿದ್ದಾರೆ.

ಸೆಲ್ವಂ ಜತೆ ಪುತ್ರ ಪಿ. ರವೀಂದ್ರನಾಥ್ ಕುಮಾರ್ ಮತ್ತು ಬೆಂಬಲಿಗರೂ ಡಿಎಂಕೆ ಪಕ್ಷ ಸೇರಿದ್ದಾರೆ. ಪಕ್ಷ ಸೇರ್ಪಡೆ ಬಳಿಕ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಸೆಲ್ವಂ, ತಮಿಳುನಾಡಿನಲ್ಲಿ ಇಂದು ಡಿಎಂಕೆಯನ್ನು ವಿರೋಧಿಸುವ ಯಾವುದೇ ಪಕ್ಷವಿಲ್ಲ. ಎಐಎಡಿಎಂಕೆ ಮುಖ್ಯಸ್ಥ ಎಡಪ್ಪಾಡಿ ಕೆ ಪಳನಿಸ್ವಾಮಿ ನಿರಂಕುಶಾಧಿಕಾರಿ ಮತ್ತು ದುರಹಂಕಾರಿ. ಅವರು ಎಐಎಡಿಎಂಕೆಗೆ ಎಲ್ಲಾ ಸಮಯದಲ್ಲೂ ಗೆಲುವು ಇಲ್ಲ ಎಂಬ ಪರಿಸ್ಥಿತಿಯನ್ನು ಸೃಷ್ಟಿಸಿದ್ದಾರೆ ಎಂದು ಎಂದು ಟೀಕಿಸಿದರು. ತಮ್ಮನ್ನು ಪಕ್ಷದಿಂದ ಉಚ್ಚಾಟಿಸಿದ ನಂತರ ಎದುರಿಸಿದ ಪರಿಸ್ಥಿತಿ ಬಗ್ಗೆ ಕೇಳಿದಾಗ, ಹಿಂದಿನ ಬಗ್ಗೆ ಚಿಂತಿಸುವುದಿಲ್ಲ. ಸಿಎಂ ಸ್ಟಾಲಿನ್ ಅವರ ಆದೇಶವನ್ನು ಪಾಲಿಸುತ್ತೇನೆ ಎಂದು ಹೇಳಿದರು. ಸ್ಟಾಲಿನ್ ಜನರ ಅಗತ್ಯಗಳನ್ನು ಅರ್ಥ ಮಾಡಿಕೊಳ್ಳುತ್ತಾರೆ. ಎಲ್ಲಾ ವರ್ಗದ ಜನರಿಗೆ ಕಲ್ಯಾಣ ಯೋಜನೆಗಳನ್ನು ಯಾವುದೇ ಪಕ್ಷಪಾತವಿಲ್ಲದೆ ತಲುಪಿಸುತ್ತಾರೆ ಎಂದು ಅವರು ಹೇಳಿದರು.

ತ.ನಾ ರಾಜಕೀಯದಲ್ಲಿ ಸಂಚಲನ

ಎಐಎಡಿಎಂಕೆ ಪಕ್ಷದಿಂದ ಉಚ್ಚಾಟನೆಯಾದ ಬಳಿಕ ತಮ್ಮದೇ ಪ್ರತ್ಯೇಕ ಎಡಿಎಂಕೆ ಬಣ ರಚಿಸಿಕೊಂಡು, ಎಡಪ್ಪಾಡಿ ಪಳನಿಸ್ವಾಮಿ ಅವರೊಂದಿಗೆ ದೀರ್ಘಕಾಲದ ಅಧಿಕಾರ ಸಂಘರ್ಷ ನಡೆಸಿದ ಪನ್ನೀರ್ ಸೆಲ್ವಂ, ಪಕ್ಷದ ಅಧಿಕೃತ ಚಿಹ್ನೆ ಪಡೆಯುವಲ್ಲಿ ಸುಪ್ರೀಂ ಕೋರ್ಟ್ ಮತ್ತು ಚುನಾವಣಾ ಆಯೋಗದಲ್ಲಿ ಹಿನ್ನಡೆ ಅನುಭವಿಸಿದ್ದರು. ಪಕ್ಷವನ್ನು ಸಂಪೂರ್ಣವಾಗಿ ಇಪಿಎಸ್ ನಿಯಂತ್ರಣಕ್ಕೆ ತೆಗೆದುಕೊಂಡ ನಂತರ, ಓಪಿಎಸ್ ಅವರಿಗೆ ರಾಜಕೀಯ ಅಸ್ತಿತ್ವ ಉಳಿಸಿಕೊಳ್ಳಲು ಈ ನಿರ್ಧಾರ ಅನಿವಾರ್ಯವಾಗಿತ್ತು ಎನ್ನಲಾಗುತ್ತಿದೆ. ತಮಿಳುನಾಡು ರಾಜಕೀಯದಲ್ಲಿ ಇದು ದೊಡ್ಡ ಮಟ್ಟದ ಸಂಚಲನ ಮೂಡಿಸಿದೆ. ಮುಂಬರುವ ಚುನಾವಣೆಗಳಲ್ಲಿ ದಕ್ಷಿಣ ತಮಿಳುನಾಡಿನ 'ಥೇವರ್' ಸಮುದಾಯದ ಮತಗಳ ಮೇಲೆ ಸೆಲ್ವಂ ಪ್ರಭಾವ ಬೀರಬಹುದು ಎಂದು ವಿಶ್ಲೇಷಿಸಲಾಗುತ್ತಿದೆ. ಇಪಿಎಸ್ ಬಣವು ಇದನ್ನು ದ್ರೋಹದ ಪರಮಾವಧಿ ಎಂದು ಕರೆದಿದೆ.

ಸಮಾಚಾರ ಸಣ್ಣದಲ್ಲ

ಕೆ.ಸಿ.ರೆಡ್ಡಿ ಆದರ್ಶ ನಮಗೆ ಸ್ಫೂರ್ತಿ

ಬೆಂಗಳೂರು: ರಾಜ್ಯದ ಅಭಿವೃದ್ಧಿಗೆ ಮಹತ್ತರ ಕೊಡುಗೆ ನೀಡಿದ ಮಾಜಿ ಮುಖ್ಯಮಂತ್ರಿ ದಿವಂಗತ ಕೆ.ಸಿ.ರೆಡ್ಡಿಯವರ ಆದರ್ಶಗಳು ನಮಗೆ ಸ್ಫೂರ್ತಿ ಹಾಗೂ ಮಾರ್ಗದರ್ಶನ ನೀಡಿವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು. ಮಾಜಿ ಮುಖ್ಯಮಂತ್ರಿ ದಿವಂಗತ ಕೆ.ಸಿ.ರೆಡ್ಡಿ ಯವರ ಪುಣ್ಯ ತಿಥಿಯ ಅಂಗವಾಗಿ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಸುದ್ದಿಗಾರರೊಂದಿಗೆ ಮಾತನಾಡಿ, ಮಾಜಿ ಮುಖ್ಯಮಂತ್ರಿ ದಿವಂಗತ ಕೆ ಸಿ ರೆಡ್ಡಿ ಯವರಿಗೆ ಗೌರವ ಅರ್ಪಿಸಲಾಗಿದೆ. ಅವರು ಸ್ವತಂತ್ರ ಭಾರತದ ರಾಜ್ಯದ ಮೊದಲ ಮುಖ್ಯಮಂತ್ರಿ. ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯರಾಗಿದ್ದ ಅವರು ಅನೇಕ ಬಾರಿ ಜೈಲುವಾಸ ಅನುಭವಿಸಿದ್ದಾರೆ. ಮೈಸೂರು ಸಂಸ್ಥಾನ ಒಗ್ಗೂಡಿಸುವುದರಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಮುಖ್ಯಮಂತ್ರಿಯಾಗಿ, ಕೇಂದ್ರ ಸಚಿವರಾಗಿ, ರಾಜ್ಯಪಾಲರಾಗಿ ಜನಸೇವೆ ಮಾಡಿದ್ದರು, ಕರ್ನಾಟಕದಲ್ಲಿ ಕಾರ್ಖಾನೆಗಳ ಸ್ಥಾಪನೆಗೆ ಶ್ರಮಿಸಿದ ಕೆ.ಸಿ.ರೆಡ್ಡಿಯವರು ರಾಜ್ಯ ಅಭಿವೃದ್ಧಿಗೆ ಮಹತ್ತರ ಕೊಡುಗೆ ಪ್ರಾಮಾಣಿಕ ರಾಜಕೀಯ ನಾಯಕರಾಗಿದ್ದರು. ಅವರ ಆತ್ಮಕ್ಕೆ ಭಗವಂತನು ಚಿರಶಾಂತಿ ನೀಡಲಿ ಹಾಗೂ ಅವರ ಆದರ್ಶಗಳು ಸದಾ ನಮಗೆ ಮಾರ್ಗದರ್ಶನ ನೀಡಿದೆ ಎಂದರು.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ಉದ್ಯೋಗದಾತ–ಕಾರ್ಮಿಕರ ನಡುವೆ ಸಮತೋಲನ ಮುಖ್ಯ | ವಿಶೇಷ ಚೇತನರಿಗೆ ಮೋಟಾರು ಚಾಲಿತ ತ್ರಿಚಕ್ರ ವಾಹನ ವಿತರಣೆ

ಕಾರ್ಮಿಕರ ಹಕ್ಕುಗಳ ರಕ್ಷಣೆಗೆ ಸರಕಾರ ಬದ್ಧ: ಡಿಕೆಶಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಸಂತೋಷ್ ಲಾಡ್ ನೇತೃತ್ವದ ಕಾರ್ಮಿಕ ಇಲಾಖೆಯು ಹಲವು ಹೊಸ ಕಾಯಿದೆಗಳನ್ನು ಜಾರಿಗೆ ತರುವುದರ ಮೂಲಕ ಕಾರ್ಮಿಕರ ಹಕ್ಕುಗಳ ರಕ್ಷಣೆಗೆ ಬದ್ಧವಾಗಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ನಗರದ ಅರಮನೆ ಆವರಣದ ಗಾಯತ್ರಿ ವಿಹಾರದಲ್ಲಿ ಶುಕ್ರವಾರ ಆಯೋಜಿಸಿದ್ದ ಕಾರ್ಮಿಕ ಇಲಾಖೆ ಹಾಗೂ ರಾಜ್ಯದ ವಿವಿಧ ಕಾರ್ಮಿಕ ಸಂಘಟನೆಗಳ ಸಹಯೋಗದಲ್ಲಿ, 1600 ವಿಶೇಷ ಚೇತನರಿಗೆ ಮೋಟಾರು ಚಾಲಿತ ತ್ರಿಚಕ್ರ ವಾಹನಗಳ ವಿತರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕಾರ್ಮಿಕರನ್ನು ನೋಡಿದಂತೆ ನಿಯೋಜಕರನ್ನೂ ನೋಡಬೇಕು. ನಿಯೋಜಕರಿಲ್ಲದೆ ಉದ್ಯೋಗ ಸೃಷ್ಟಿಯಾಗುವುದಿಲ್ಲ. ಉದ್ಯೋಗದಾತ ಬಲಿಷ್ಠನಾದರೆ ಕಾರ್ಮಿಕರೂ ಬಲಿಷ್ಠರಾಗುತ್ತಾರೆ. ಎರಡರ ನಡುವೆ ಸಮತೋಲನ ಇರಬೇಕು ಎಂದರು.

ವಿಶೇಷ ಚೇತನರಿಗೆ ಇರುವ ದೋಷಗಳು ದೇವರ ಶಾಪವಲ್ಲ, ಪರೀಕ್ಷೆ. ನಿಮ್ಮ ಆತ್ಮವಿಶ್ವಾಸ ಕಡಿಮೆಯಾಗಬಾರದು. ನೀವು ಸಹ ಎಲ್ಲಾ ಅಡೆತಡೆಗಳನ್ನು ಮೀರಿ ಯಶಸ್ಸಿನತ್ತ ಸಾಗಬೇಕು. ವಿಶೇಷ ಚೇತನರಿಗೆ ಉದ್ಯೋಗಾವಕಾಶ ಕಲ್ಪಿಸಲು ಸರಕಾರ ಮತ್ತು ಸಂಘಟನೆಗಳ ಕಾರ್ಯ ಶ್ಲಾಘನೀಯ ಎಂದರು.

ಕಾರ್ಮಿಕ ಸಚಿವ ಸಂತೋಷ್ ಎಸ್.ಲಾಡ್ ಮಾತನಾಡಿ, ಕಾರ್ಮಿಕರ ಕಲ್ಯಾಣಕ್ಕಾಗಿ ಕಾರ್ಮಿಕ ಇಲಾಖೆಯು ನಾಲ್ಕು ಮಸೂದೆಗಳನ್ನು ಈಗಾಗಲೇ ಜಾರಿ ಮಾಡಿದೆ. ಇದರೊಂದಿಗೆ ಇನ್ನೂ ನಾಲ್ಕು ಮಸೂದೆಗಳನ್ನು ಜಾರಿ ಮಾಡಲು ಉದ್ದೇಶಿಸಲಾಗಿದೆ. ಗಿಗ್ ಕಾರ್ಮಿಕರ ವಿಮಾ ಮಸೂದೆ, ಋತು ಚಕ್ರ ರಜೆ, ಸಾರಿಗೆ ಕಾರ್ಮಿಕರಿಗೆ ಅಪಘಾತ ಮತ್ತು ವಿಮಾ ಯೋಜನೆ ಮತ್ತು ಸಿನಿಮಾ ಕಾರ್ಮಿಕರಿಗೆ ಮಸೂದೆ ಜಾರಿ ಮಾಡಲಾಗಿದೆ. ಮನೆಗೆಲಸದ ಕಾರ್ಮಿಕರು, ವಿಧವೆಯರು, ಅಂಗವಿಕಲರಿಗೆ ಸಂಬಂಧಿಸಿದ ಮಸೂದೆಗಳನ್ನು ಜಾರಿ ಮಾಡಲು ಉದ್ದೇಶಿಸಲಾಗಿದೆ ಎಂದರು.

ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಸ್ವಲ್ಪಮಟ್ಟಿನ ಸುಂಕ ವಿಧಿಸಿ ಅಸಂಘಟಿತ ಕಾರ್ಮಿಕ ಕಲ್ಯಾಣಕ್ಕೆ ಬಳಸುವ ಉದ್ದೇಶವಿದೆ. ಕೋಟ್ಯಂತರ ಸಂಖ್ಯೆಯಲ್ಲಿರುವ ಅಸಂಘಟಿತ ಕಾರ್ಮಿಕರಿಗೆ ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ ಹೊಸ ಮಸೂದೆಗಳನ್ನು ಸಿದ್ಧಪಡಿಸಲಾಗುತ್ತಿದೆ. ವಿಶೇಷ ಚೇತನರಿಗೆ ತ್ರಿಚಕ್ರ ವಿತರಿಸುವ ನಮ್ಮ ಆಲೋಚನೆಯನ್ನು ವಿವಿಧ ಕಂಪನಿ ಹಾಗೂ ಸಂಸ್ಥೆಗಳ ಜತೆಗೆ ತಿಳಿಸಿದಾಗ ಅವರು ನಮ್ಮ ಮನವಿಗೆ ಸ್ಪಂದಿಸಿದರು. ವಿವಿಧ ಕಂಪನಿಗಳು ರಾಜ್ಯದಾದ್ಯಂತ 1608 ತ್ರಿಚಕ್ರ ವಾಹನಗಳನ್ನು ವಿತರಣೆ ಮಾಡಲಾಗುತ್ತಿದೆ. ಇದಕ್ಕಾಗಿ ಇಲಾಖೆ ಪರವಾಗಿ ಧನ್ಯವಾದಗಳು ಎಂದರು.

ಕಾರ್ಯಕ್ರಮದಲ್ಲಿ ಶಿವಮೊಗ್ಗದ ನಿಟ್ಟೂರಿನ ನಾರಾಯಣ ಗುರು ಮಹಾಸಂಸ್ಥಾನದ ರೇಣುಕಾನಂದ ಸ್ವಾಮೀಜಿ, ಬೋವಿಮಠದ ಸಿದ್ದರಾಮೇಶ್ವರ ಸ್ವಾಮೀಜಿ, ರೇಣುಕಾನಂದ ಸ್ವಾಮೀಜಿ, ಮಾದಾರ ಚೆನ್ನಯ್ಯ ಸ್ವಾಮೀಜಿ, ಹಡಪದ ಪೀಠದ ಸ್ವಾಮೀಜಿ, ಶಾಂತವೀರ ಸ್ವಾಮೀಜಿ, ಸಂಸದ ಈ. ತುಕಾರಾಮ್, ಕಾರ್ಮಿಕ ಆಯುಕ್ತ ಡಾ. ಎಚ್.ಎನ್ ಗೋಪಾಲಕೃಷ್ಣ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಕಾರ್ಮಿಕ ಇಲಾಖೆ ಹಾಗೂ ರಾಜ್ಯದ ವಿವಿಧ ಕಾರ್ಮಿಕ ಸಂಘಟನೆಗಳ ಸಹಯೋಗದಲ್ಲಿ ಶುಕ್ರವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿಶೇಷ ಚೇತನರಿಗೆ ಮೋಟಾರು ಚಾಲಿತ ತ್ರಿಚಕ್ರ ವಾಹನಗಳನ್ನು ವಿತರಿಸಲಾಯಿತು. ಈ ವೇಳೆ ಡಿಸಿಎಂ ಡಿ.ಕೆ.ಶಿವಕುಮಾರ್, ಕಾರ್ಮಿಕ ಸಚಿವ ಸಂತೋಷ್ ಎಸ್.ಲಾಡ್, ಹರಿಹರ ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿ, ಶಿವಮೊಗ್ಗದ ನಿಟ್ಟೂರಿನ ನಾರಾಯಣ ಗುರು ಮಹಾಸಂಸ್ಥಾನದ ರೇಣುಕಾನಂದ ಸ್ವಾಮೀಜಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಬೆಂಗಳೂರು ಉದ್ಯೋಗದ ಕೇಂದ್ರ

ಬೆಂಗಳೂರು ದೇಶದ ವಿವಿಧ ಭಾಗಗಳಿಂದ ಜನರನ್ನು ಆಕರ್ಷಿಸುತ್ತಿರುವುದು ಉತ್ತಮ ಉದ್ಯೋಗ, ಸಂಬಳ ಮತ್ತು ಸಮಾನತೆಯ ವಾತಾವರಣದ ಫಲಿತಾಂಶವಾಗಿದೆ. ತಂತ್ರಜ್ಞಾನ ಹಾಗೂ ಕಟ್ಟಡ ಕಾರ್ಮಿಕರ ಕ್ಷೇತ್ರದಲ್ಲಿ ಕರ್ನಾಟಕ ವೇಗವಾಗಿ ಬೆಳೆಯುತ್ತಿದೆ. ದೆಹಲಿ, ಮುಂಬೈ, ಹೈದರಾಬಾದ್, ಚೆನ್ನೈ ಸೇರಿದಂತೆ ಪ್ರಮುಖ ನಗರಗಳೊಂದಿಗೆ ಸ್ಪರ್ಧಿಸುವ ಮಟ್ಟಕ್ಕೆ ಬೆಂಗಳೂರು ಬೆಳೆಯುತ್ತಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ತಿಳಿಸಿದರು.

ವಿಶೇಷ ಚೇತನರ ಸಮಸ್ಯೆಗಳನ್ನು, ನೋವನ್ನು ನಾನು ತೀರಾ ಹತ್ತಿರದಿಂದ ನೋಡಿದ್ದೇನೆ. ಅವರು ಬದುಕು ನಡೆಸಲು ಕಷ್ಟಪಡುವುದನ್ನು ಕಂಡಿದ್ದೇನೆ. ಇಂತಹವರಿಗೆ ಏನಾದರೂ ಸಹಾಯ ಮಾಡಬೇಕು. ಅವರ ಜೀವನಕ್ಕೆ ಊರುಗೋಲಾಗಬೇಕು ಎಂಬ ಸದುದ್ದೇಶದಿಂದ ಇಂತಹ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

–ಸಂತೋಷ್ ಎಸ್.ಲಾಡ್, ಕಾರ್ಮಿಕ ಸಚಿವ

ಕಲಬುರಗಿ ಭಾಗದಲ್ಲಿ ಸಾವಿರಾರು ಮನೆಗಳನ್ನು ನಿರ್ಮಿಸುವ ಕಾರ್ಯದಲ್ಲಿ ಸಂತೋಷ್ ಲಾಡ್ ತೊಡಗಿಸಿಕೊಂಡಿರುವ ಕಾರ್ಯ ಗಮನಾರ್ಹ. ಸಂತೋಷ್ ಲಾಡ್ ಅವರು, ಕಾರ್ಮಿಕರಿಗೆ ಹೆಚ್ಚು ಅನುಕೂಲ ನೀಡಿದ್ದಾರೆ ಹಾಗೂ ಇಲಾಖೆಯಲ್ಲಿ ಉತ್ತಮ ಆಡಳಿತ ನೀಡುತ್ತಿದ್ದು, ಮುಂದೆಯೂ ಜನಪರ ಸೇವೆಯಲ್ಲಿ ತೊಡಗಿರಲಿ.

–ವಚನಾನಂದ ಸ್ವಾಮೀಜಿ, ಹರಿಹರ ಪಂಚಮಸಾಲಿ

625 ಕೋಟಿ ರು. ದುರ್ಬಳಕೆ ಆರೋಪ

ಜಮೀರ್‌ಗೆ ಲೋಕಾ ಸಂಕಷ್ಟ

ಬೆಂಗಳೂರು: ಮತ್ತೊಬ್ಬ ಸಚಿವರಿಗೆ ಸಂಕಷ್ಟ ಎದುರಾಗಿದ್ದು, ಅಲ್ಪಸಂಖ್ಯಾತ ಕಲ್ಯಾಣ ಇಲಾಖೆಯಲ್ಲಿ ಬರೋಬ್ಬರಿ 625 ಕೋಟಿ ರು. ಅನುದಾನ ದುರ್ಬಳಕೆ ಮಾಡಿಕೊಂಡಿರುವ ಗಂಭೀರ ಆರೋಪದ ಹಿನ್ನೆಲೆಯಲ್ಲಿ ವಕ್ಫ್ ಮತ್ತು ಅಲ್ಪ ಸಂಖ್ಯಾತ ಕಲ್ಯಾಣ ಸಚಿವ ಜಮೀರ್ ಅಹ್ಮದ್ ಖಾನ್‌ಗೆ ಲೋಕಾಯುಕ್ತದಿಂದ ನೋಟಿಸ್ ಜಾರಿಯಾಗಿದೆ. ಅಲ್ಪಸಂಖ್ಯಾತ ಕಾಲೋನಿಗಳ ಅಭಿವೃದ್ಧಿಗೆ ಮೀಸಲಾ ಗಿದ್ದ ಕೋಟ್ಯಂತರ ರು. ಹಣ ನಿಯಮ ಬಾಹಿರವಾಗಿ ಬಳಸಲಾಗಿದೆ ಎಂಬುದು ಜಮೀರ್ ಮೇಲಿರುವ ಆರೋಪ. ಆರ್ಥಿಕ ಇಲಾಖೆ ಪೂರ್ವಾನುಮತಿ ಪಡೆಯದ

ಗುತ್ತಿಗೆದಾರರ ಜತೆ ಶಾಮೀಲಾಗಿ 625 ಕೋಟಿ ರು.ಕಾಮಗಾರಿಗಳನ್ನು ಹಂಚಿಕೆ ಮಾಡಿ, ಹಣ ದುರ್ಬಳಕೆ ಮಾಡಿಕೊಳ್ಳಲಾಗಿದೆ ಎಂದು ದೂರಲಾಗಿದೆ.

ಲೋಕಾಯುಕ್ತ ಮೆಟ್ಟಿಲೇರಿದ್ದ ಜೆಡಿಎಸ್: ಅಲ್ಪಸಂಖ್ಯಾತ ಕಾಲೋನಿ ಅಭಿವೃದ್ಧಿ ಹೆಸರಿನಲ್ಲಿ ನಡೆದ ಹಗರಣದ ಕುರಿತು ಜೆಡಿಎಸ್ ವಕ್ತಾರ ಪ್ರದೀಪ್ ಕುಮಾರ್ ಲೋಕಾಯುಕ್ತಕ್ಕೆ ದೂರು ಸಲ್ಲಿಕೆ ಮಾಡಿದ್ದರು. ಸಚಿವರ ವಿರುದ್ಧ ತನಿಖೆ ನಡೆಸಿ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದ್ದರು.

ಸಮಯ ಕೇಳಿದ ಜಮೀರ್ ವಕೀಲರು

ಲೋಕಾಯುಕ್ತ ನೋಟಿಸ್ ಬೆನ್ನಲ್ಲೇ ಎಚ್ಚೆತ್ತುಕೊಂಡಿರುವ ಸಚಿವ ಜಮೀರ್ ಅಹ್ಮದ್, ತಮ್ಮ ವಕೀಲರ ಮೂಲಕ ಪ್ರತಿಕ್ರಿಯಿಸಿದ್ದಾರೆ. ದೂರಿನಲ್ಲಿರುವ ಆರೋಪಗಳಿಗೆ ಸಂಬಂಧಿಸಿದಂತೆ ವಿವರವಾದ ಉತ್ತರ ಹಾಗೂ ದಾಖಲೆ ಗಳನ್ನು ಒದಗಿಸಲು ಇನ್ನಷ್ಟು ಕಾಲಾವಕಾಶ ನೀಡುವಂತೆ ಜಮೀರ್ ಪರ ವಕೀಲರು ಲೋಕಾಯುಕ್ತರಿಗೆ ಮನವಿ ಮಾಡಿದ್ದಾರೆ.

ಸಕ್ರಾ ವರ್ಲ್ಡ್ ಆಸ್ಪತ್ರೆಯಲ್ಲಿ ಕ್ಯಾನ್ಸರ್ ಘಟಕಕ್ಕೆ ಚಾಲನೆ

ಬೆಂಗಳೂರು: ಸಕ್ರಾ ವರ್ಲ್ಡ್ ಆಸ್ಪತ್ರೆಯಲ್ಲಿ ಸುಧಾರಿತ ತಂತ್ರಜ್ಞಾನ ಆಧಾರಿತ ಇನ್ಸ್ಟಿಟ್ಯೂಟ್ ಆಫ್ ಕ್ಯಾನ್ಸರ್ ಕೇರ್ ಅಂಡ್ ಬ್ಲಡ್ ಡಿಸಾರ್ಡರ್ಸ್ ಘಟಕಕ್ಕೆ ಚಾಲನೆ ನೀಡಲಾಯಿತು. ಮೆಡಿಕಲ್ ಆಂಕೊಲಾಜಿ, ಸರ್ಜಿಕಲ್ ಆಂಕೊಲಾಜಿ, ಬ್ರೆಸ್ಟ್ ಆಂಕೊಲಾಜಿ, ಹೆಮಟಾಲಜಿ, ಅರಿವಳಿಕೆ, ಸೇವೆಗಳನ್ನು ಒದಗಿಸಲಿದೆ.

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ:

ಇಂಡಿಯಾ ಎಸ್‌ಎಂಇ ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ ಲಿಮಿಟೆಡ್ (ಐಎಸ್‌ಎಆರ್‌ಸಿ) ನ ಕೆಳಗೆ ಸಹಿ ಮಾಡಲಾದ ಅಧಿಕೃತ ಅಧಿಕಾರಿ **(CIN:U67190MH2008PLC181062)**, ಆಸ್ತಿ ಪುನರ್ನಿರ್ಮಾಣ ಕಂಪನಿಯಾಗಿದ್ದು, ಇದು ಹಣಕಾಸು ಆಸ್ತಿಗಳ ಸೆಕ್ಯುರಿಟೈಸೇಶನ್ ಮತ್ತು ಪುನರ್ನಿರ್ಮಾಣ ಮತ್ತು ಭದ್ರತಾ ಹಿತಾಸಕ್ತಿ ಕಾಯ್ದೆ, 2002 (ಸರ್ಫೇಸಿ ಕಾಯ್ದೆ) ದ ಸೆಕ್ಷನ್ 3 ರ ಅಡಿಯಲ್ಲಿ ನೋಂದಾಯಿಸಲ್ಪಟ್ಟಿದೆ, ಇದು **ಐಎಸ್‌ಎಆರ್‌ಸಿ- 2025-2026-5** ಟ್ರಸ್ಟ್‌ಸ ಟ್ರಸ್ಟಿಯಾಗಿ ಕಾರ್ಯನಿರ್ವಹಿಸುತ್ತದೆ ಮತ್ತು ಸೆಕ್ಯುರಿಟಿ ಹಿತಾಸಕ್ತಿ (ಜಾರಿ) ನಿಯಮಗಳು, 2002 (ನಿಯಮಗಳು) ನ ಸಂಬಂಧಿತ ನಿಯಮಗಳೊಂದಿಗೆ ಓದಲಾದ ಸೆಕ್ಷನ್ 13 (12) ರ ಅಡಿಯಲ್ಲಿ ನೀಡಲಾದ ಅಧಿಕಾರಗಳನ್ನು ಚಲಾಯಿಸುತ್ತದೆ. ಈ ಕೆಳಗಿನ ಸೂಚನೆಯನ್ನು ನೀಡಲಾಗಿದೆ:

ಸಮ್ಮಾನ್ ಫಿನ್‌ಸರ್ವ್ ಲಿಮಿಟೆಡ್ (CIN:U65923DL2006PLC150632) (ಈಗಿನ ಹೆಸರು: **ಇಂಡಿಯಾಬುಲ್ಸ್ ಕಮರ್ಷಿಯಲ್ ಕ್ರೆಡಿಟ್ ಲಿಮಿಟೆಡ್)** ನ ಅಧಿಕೃತ ಅಧಿಕಾರಿಯು, ಸರ್ಫೇಸಿ ಕಾಯ್ದೆಯ ಸೆಕ್ಷನ್ 13 (12) ಮತ್ತು ನಿಯಮಗಳ 3 ನೇ ನಿಯಮದ ಅಡಿಯಲ್ಲಿ ನೀಡಲಾದ ಅಧಿಕಾರವನ್ನು ಚಲಾಯಿಸಿ, ದಿನಾಂಕ **14.10.2025** ರಂದು ಡಿಮ್ಯಾಂಡ್ ನೋಟಿಸ್ ಅನ್ನು ಹೊರಡಿಸಿ, ಸಾಲಗಾರರು (ಗಳು) **ಮೊಂಡೋ ಬಿಲ್ಡರ್ಸ್ ಪ್ರೈವೇಟ್ ಲಿಮಿಟೆಡ್, ಆಯೇಷಾ ಸುಲ್ತಾನ, ಮೊಹಮ್ಮದ್ ಖಾದರ್ಖಾನ್ ದುರಾನಿ, ಎನ್ ಡಿ ಡೆವಲಪರ್ಸ್ ಪ್ರೈವೇಟ್ ಲಿಮಿಟೆಡ್,** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ **ರೂ. 2,33,41,504.38 (ಎರಡು ಕೋಟಿ ಮೂವತ್ತಮೂರು ಲಕ್ಷದ ನಲವತ್ತೊಂದು ಸಾವಿರದ ಐದುನೂರ ನಾಲ್ಕು ರೂಪಾಯಿಗಳು ಮತ್ತು ಮೂವತ್ತೆಂಟು ಪೈಸೆ ಮಾತ್ರ)** ಸಾಲ ಖಾತೆ ನಂ. **HLLABNE00495736** ಈ ಲೋನ್ ಅಕೌಂಟ್‌ಗೆ ಸಂಬಂಧಿಸಿದಂತ, ಹೇಳಲಾಗಿರುವ ನೋಟಿಸ್ ನಿಮ್ಮನ್ನು ತಲುಪಿ 60 ದಿನಗಳಾಗುವುದರೊಳಗೆ **13.10.2025** ರ ವರೆಗಿನ ಮೊತ್ತ ಮತ್ತು ಅದರ ಮೇಲಿನ ಬಡ್ಡಿ.

ಸಮ್ಮಾನ್ ಫಿನ್‌ಸರ್ವ್ ಲಿಮಿಟೆಡ್, ಸರ್ಫೇಸಿ ಕಾಯ್ದೆಯ ನಿಬಂಧನೆಗಳ ಅಡಿಯಲ್ಲಿ, ಮೇಲೆ ತಿಳಿಸಿದ ಸಾಲಗಾರರ ಸಾಲವನ್ನು **ಇಂಡಿಯಾ ಎಸ್‌ಎಂಇ ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ ಲಿಮಿಟೆಡ್** ಗೆ ವಹಿಸಿದೆ, **ಐಎಸ್‌ಎಆರ್‌ಸಿ - 2025-2026 - 5 ಟ್ರಸ್ಟ್‌ನ** ಟ್ರಸ್ಟಿಯಾಗಿ ಕಾರ್ಯನಿರ್ವಹಿಸುತ್ತಿದೆ, ದಿನಾಂಕ **26.12.2025** ರ ನಿಯೋಜನೆ ಒಪ್ಪಂದದ ಪ್ರಕಾರ **(ಐಎಸ್‌ಎಆರ್‌ಸಿ)** ಮೇಲಿನ ಸಾಲ ಖಾತೆಗೆ ಸಂಬಂಧಿಸಿದಂತೆ ಸುರಕ್ಷಿತ ಸಾಲಗಾರನಾಗಿ ಹೆಜ್ಜೆ ಹಾಕಿದೆ (ಖಾತೆ ಸಂಖ್ಯೆ ಹಂಚಿಕೆಯಾಗಿಲ್ಲ)

ಮೇಲೆ ತಿಳಿಸಿದಂತೆ ಮೊತ್ತವನ್ನು ಮರುಪಾವತಿಸಲು ಸಾಲಗಾರ (ರು) / ಜಾಮೀನುದಾರ(ರು) / ಅಡಮಾನದಾರರು ವಿಫಲರಾಗಿದ್ದು, ಕೆಳಗೆ ಸಹಿ ಮಾಡಿದವರು 2002 ರ ಭದ್ರತಾ ಹಿತಾಸಕ್ತಿ (ಜಾಮೀನು) ನಿಯಮಗಳ ನಿಯಮ 8 ರೊಂದಿಗೆ ಓದಲಾದ ಕಾಯ್ದೆಯ ಸೆಕ್ಷನ್ 13 ರ ಉಪ-ವಿಭಾಗ (4) ರ ಅಡಿಯಲ್ಲಿ ಅವರಿಗೆ ನೀಡಲಾದ ಅಧಿಕಾರವನ್ನು ಚಲಾಯಿಸಿ ಕೆಳಗೆ ವಿವರಿಸಿದ ಆಸ್ತಿಯನ್ನು **ಸಾಂಕೇತಿಕವಾಗಿ ಸ್ವಾಧೀನ** ಪಡಿಸಿಕೊಂಡಿದ್ದಾರೆ ಎಂದು ಸಾಲಗಾರ (ರು) / ಜಾಮೀನುದಾರ (ರು) / ಅಡಮಾನದಾರರು ಮತ್ತು ಸಾರ್ವಜನಿಕರಿಗೆ **23.02.2026** ರಂದು ಸೂಚನೆ ನೀಡಲಾಗಿದೆ.

ಸಾಲಗಾರರು/ಜಾಮೀನುದಾರರು/ಅಡಮಾನದಾರರು ವಿಶೇಷವಾಗಿ ಮತ್ತು ಸಾರ್ವಜನಿಕರು ಆಸ್ತಿಯೊಂದಿಗೆ ವ್ಯವಹರಿಸದಂತೆ ಇಲ್ಲಿ ಎಚ್ಚರಿಕೆ ನೀಡಲಾಗಿದೆ ಮತ್ತು ಆಸ್ತಿಯೊಂದಿಗಿನ ಯಾವುದೇ ವ್ಯವಹಾರವು ದಿನಾಂಕ **13.10.2025** ರಂತೆ **ರೂ. 2,33,41,504.38 (ಎರಡು ಕೋಟಿ ಮೂವತ್ತಮೂರು ಲಕ್ಷದ ನಲವತ್ತೊಂದು ಸಾವಿರದ ಐದುನೂರ ನಾಲ್ಕು ರೂಪಾಯಿಗಳು ಮತ್ತು ಮೂವತ್ತೆಂಟು ಪೈಸೆ ಮಾತ್ರ)** ಮೊತ್ತದ **(ಐಎಸ್‌ಎಆರ್‌ಸಿ)** ಶುಲ್ಕಕ್ಕೆ ಒಳಪಟ್ಟಿರುತ್ತದೆ ಮತ್ತು ಅದರ ಮೇಲಿನ ಬಡ್ಡಿ ಮತ್ತು ಇತರ ಶುಲ್ಕಗಳೊಂದಿಗೆ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ಧವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8) ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

ಸ್ಥಿರಾಸ್ತಿಯ ವರ್ಣನೆ

ಭೂ/ಆಸ್ತಿಗಳ ಎಲ್ಲಾ ಪಾರ್ಸೆಲ್ಗಳು, ಅವುಗಳ ಜೊತೆಗೆ ಪ್ರಸ್ತುತ ಮತ್ತು / ಅಥವಾ ಭವಿಷ್ಯದ ಎಲ್ಲಾ ರಚನೆಗಳು, ಕಟ್ಟಡಗಳು, ಪೀಠೋಪಕರಣಗಳು, ಫಿಕ್ಚರ್ಗಳು, ಫಿಟ್ಟಿಂಗ್ಗಳು, ಸ್ಟ್ಯಾಂಡಿಂಗ್ ಮತ್ತು / ಅಥವಾ ಪ್ಲಾಂಟ್ ಮತ್ತು ಮೆಷಿನರಿಗಳನ್ನು ಸ್ಥಾಪಿಸಲಾಗಿದೆ / ಸ್ಥಾಪಿಸಲಾಗುವುದು ಮತ್ತು/ಅಥವಾ ನಿರ್ಮಿಸಲಾಗುವುದು / ನಿರ್ಮಿಸಲಾಗುವುದು ಮತ್ತು ಅದರಲ್ಲಿರುವ ಎನ್ಡಿ ಡೆವಲಪರ್ಸ್ ಪ್ರೈವೇಟ್ ಲಿಮಿಟೆಡ್ನ ಎಲ್ಲಾ ಪ್ರಸ್ತುತ ಮತ್ತು/ಅಥವಾ ಭವಿಷ್ಯದ ಹಕ್ಕುಗಳು, ಶೀರ್ಷಿಕೆ ಮತ್ತು / ಅಥವಾ ಆಸಕ್ತಿ:

ಹಂತ 1 ಮತ್ತು ಹಂತ 2 ರಲ್ಲಿ ಮಾರಾಟವಾಗದ ವಿಲ್ಲಾ ಸಂಖ್ಯೆ 5 ರಲ್ಲಿರುವ ಎಲ್ಲಾ ಆಸ್ತಿಯ ತುಣುಕು ಮತ್ತು ಪಾರ್ಸೆಲ್, ಕೆಳಗೆ ಉಲ್ಲೇಖಿಸಿದಂತೆ ಕ್ರಮ ಸಂಖ್ಯೆ 1 ರಿಂದ 38 ರವರೆಗೆ:

ಮೊದಲ ಹಂತ

ಕ್ರಮ ಸಂಖ್ಯೆ	ವಿಲ್ಲಾ ಸಂಖ್ಯೆ	ಚದರ ಅಡಿಗಳಲ್ಲಿ ಭೂಪ್ರದೇಶ.	ಚದರ ಅಡಿಗಳಲ್ಲಿ ಬಾವು.	ಚದರ ಅಡಿಗಳಲ್ಲಿ ಎಸ್‌ಬಿಎ.
1.	A1	2475	2890	3030
2.	A2	2230	2890	3030
3.	B93	2820	3260	3420
4.	B7	2725	3260	3420
5.	B91	2475	3260	3420

ಮೊದಲ ಹಂತ

ಎರಡನೇ ಹಂತ (ಎಲ್ಲಾ ಘಟಕಗಳು ನಮ್ಮ ಬಳಿ ಇವೆ, ಯಾವುದೇ ತಾತ್ಕಾಲಿಕ NOC ನೀಡಲಾಗಿಲ್ಲ)

ಕ್ರಮ ಸಂಖ್ಯೆ	ವಿಲ್ಲಾ ಸಂಖ್ಯೆ	ಚದರ ಅಡಿಗಳಲ್ಲಿ ಭೂಪ್ರದೇಶ.	ಚದರ ಅಡಿಗಳಲ್ಲಿ ಬಾವು.	ಚದರ ಅಡಿಗಳಲ್ಲಿ ಎಸ್‌ಬಿಎ.
1.	A29	2535	2840	2980
2.	A32	2260	2840	2980
3.	A33	2250	2840	2980
4.	A34	2250	2840	2980
5.	A38	2475	2840	2980
6.	A39	2475	2840	2980
7.	B18	2475	3260	3420
8.	B19	2475	3260	3420
9.	B28	2725	3260	3420
10.	B31	2475	3260	3420
11.	B32	2725	3260	3420
12.	B38	2725	3260	3420
13.	B39	2475	3260	3420
14.	B40	2475	3260	3420
15.	B14	2475	3265	3430
16.	B16	2725	3260	3430
17.	B24	2475	3265	3430
18.	B25	2475	3265	3430
19.	B33	2725	3265	3430
20.	B34	2475	3265	3430
21.	B49	2725	3265	3430
22.	B64	2475	3265	3430
23.	C12	4220	4695	4920
24.	C16	4220	4695	4920
25.	C19	4220	4695	4920
26.	B56	2725	3751	3420
27.	B58	2475	3501	3420
28.	B52	2475	3504	3430
29.	B53	2475	3504	3430
30.	B54	2475	3504	3430
31.	B55	2725	3754	3430
32.	B65	2475	3504	3430
33.	B66	2475	3504	3430
34.	B67	2475	3504	3430
35.	B68	2475	3504	3430
36.	B69	2725	3754	3430
37.	59	2475	3501	3420
38.	60	2475	3501	3420

ಮೇಲೆ ಉಲ್ಲೇಖಿಸಲಾದ ವಿಲ್ಲಾಗಳನ್ನು ಐಟಂ ಸಂಖ್ಯೆ 1 ರಿಂದ **V** ರವರೆಗೆ ಉಲ್ಲೇಖಿಸಲಾದ ಪರಿವರ್ತಿತ ಆಸ್ತಿಯ ಮೇಲೆ ನಿರ್ಮಿಸಲಾಗಿದೆ.

ಐಟಂ ಸಂಖ್ಯೆ. I

ಬೆಂಗಳೂರು ಜಿಲ್ಲೆಯ ವರ್ತೂರು ಹೋಬಳಿಯ ಗುಂಜೂರು ಗ್ರಾಮದಲ್ಲಿ ನೆಲೆಗೊಂಡಿರುವ, 5 ಎಕರೆ 38 ಗುಂಟ ಅಳತೆಯ, ಸರ್ವೆ ಸಂಖ್ಯೆ 63/1 ರ ಸ್ಥಿರ ಆಸ್ತಿಯ ಎಲ್ಲಾ ತುಣುಕು ಮತ್ತು ಪಾರ್ಸೆಲ್, ಮತ್ತು ಇವುಗಳಿಗೆ ಸಂಬಂಧಿಸಿದೆ:

ಪೂರ್ವ : ಜಿ ವಿ ತಿಪ್ಪಣ್ಣನ ಜಮೀನು,
ಪಶ್ಚಿಮದಲ್ಲಿ : ಸಾರಕಾರಿ ಕಾಲುವೆ,
ಉತ್ತರದಲ್ಲಿ : ತಳವಾರ ಇನಾಮಿನ ಜಮೀನು
ದಕ್ಷಿಣದಲ್ಲಿ : ಪೂಜಾರಿ ಯಲ್ಲಪ್ಪ ಅವರ ಜಮೀನು.

ಐಟಂ ಸಂಖ್ಯೆ. II

ಬೆಂಗಳೂರು ಜಿಲ್ಲೆಯ ವರ್ತೂರು ಹೋಬಳಿಯ ಗುಂಜೂರು ಗ್ರಾಮದಲ್ಲಿ ನೆಲೆಗೊಂಡಿರುವ, 2 ಎಕರೆ 13 ಗುಂಟ ಅಳತೆಯ, ಸರ್ವೆ ಸಂಖ್ಯೆ 64 ರ ಸ್ಥಿರ ಆಸ್ತಿಯ ಎಲ್ಲಾ ತುಣುಕು ಮತ್ತು ಪಾರ್ಸೆಲ್, ಮತ್ತು ಇವುಗಳಿಗೆ ಸಂಬಂಧಿಸಿದೆ:

ಪೂರ್ವ : ಸರ್ಕಾರ ಕಾಲುವೆ,
ಪಶ್ಚಿಮದಲ್ಲಿ : ಅದೇ ಪ್ರದೇಶದಲ್ಲಿ ಉಳಿದ ಭೂಮಿ,
ಉತ್ತರದಲ್ಲಿ : ಜಿ.ವಿ. ನಾಗರಾಜ ರೆಡ್ಡಿ ಅವರ ಆಸ್ತಿ,
ದಕ್ಷಿಣದಲ್ಲಿ : ಜಿ.ವಿ. ನಾಗರಾಜ ರೆಡ್ಡಿ ಅವರ ಆಸ್ತಿ.

ಐಟಂ ಸಂಖ್ಯೆ. III

ಬೆಂಗಳೂರು ಜಿಲ್ಲೆಯ ವರ್ತೂರು ಹೋಬಳಿಯ ಗುಂಜೂರು ಗ್ರಾಮದಲ್ಲಿ ನೆಲೆಗೊಂಡಿರುವ, 3 ಎಕರೆ 10 ಗುಂಟ ಅಳತೆಯ, ಸರ್ವೆ ಸಂಖ್ಯೆ 65/1 ರ ಸ್ಥಿರ ಆಸ್ತಿಯ ಎಲ್ಲಾ ತುಣುಕು ಮತ್ತು ಪಾರ್ಸೆಲ್, ಮತ್ತು ಇವುಗಳಿಗೆ ಸಂಬಂಧಿಸಿದೆ:

ಪೂರ್ವ : ಮರಿಯಪ್ಪ ಶೆಟ್ಟಿಯವರ ಜಮೀನು,
ಪಶ್ಚಿಮದಲ್ಲಿ : ಸಾರಕಾರಿ ದೊಡ್ಡಹಳ್ಳಿ,
ಉತ್ತರದಲ್ಲಿ : ಜಿ ನಂಜಪ್ಪ ರೆಡ್ಡಿಯವರ ಜಮೀನು,
ದಕ್ಷಿಣದಲ್ಲಿ : ವಿ ರಾಮಯ್ಯ ರೆಡ್ಡಿ ಅವರ ಜಮೀನು.

ಐಟಂ ಸಂಖ್ಯೆ. IV

ಬೆಂಗಳೂರು ಜಿಲ್ಲೆಯ ವರ್ತೂರು ಹೋಬಳಿಯ ಗುಂಜೂರು ಗ್ರಾಮದಲ್ಲಿ ನೆಲೆಗೊಂಡಿರುವ, 6 ಎಕರೆ 22 ಗುಂಟ ಅಳತೆಯ, ಸರ್ವೆ ಸಂಖ್ಯೆ 65/2 ರ ಸ್ಥಿರ ಆಸ್ತಿಯ ಎಲ್ಲಾ ತುಣುಕು ಮತ್ತು ಪಾರ್ಸೆಲ್, ಮತ್ತು ಇವುಗಳಿಗೆ ಸಂಬಂಧಿಸಿದೆ:

ಪೂರ್ವ : ಕಾಲುವೆ,
ಪಶ್ಚಿಮದಲ್ಲಿ : ದೊಡ್ಡಹಳ್ಳಿ,
ಉತ್ತರದಲ್ಲಿ : ಜಿ ಟಿ ಮರಿಸ್ವಾಮಿ ರೆಡ್ಡಿ ಹೆಸರಿನಲ್ಲಿರುವ ಭೂಮಿ,
ದಕ್ಷಿಣದಲ್ಲಿ : ತಲ್ವಾರ್ ಇನಾಂ ಭೂಮಿ.

ಐಟಂ ಸಂಖ್ಯೆ. V

ಬೆಂಗಳೂರು ಜಿಲ್ಲೆಯ ವರ್ತೂರು ಹೋಬಳಿಯ ಗುಂಜೂರು ಗ್ರಾಮದಲ್ಲಿ ನೆಲೆಗೊಂಡಿರುವ, 09.60 ಎಕರೆ ಗುಂಟ ಅಳತೆಯ, ಸರ್ವೆ ಸಂಖ್ಯೆ 65/5 ರ ಸ್ಥಿರ ಆಸ್ತಿಯ ಎಲ್ಲಾ ತುಣುಕು ಮತ್ತು ಪಾರ್ಸೆಲ್, ಮತ್ತು ಇವುಗಳಿಗೆ ಸಂಬಂಧಿಸಿದೆ:

ಪೂರ್ವ : ಸರ್ಕಾರ/ಚಾನೆಲ್,
ಪಶ್ಚಿಮದಲ್ಲಿ : ಅದೇ ಆಸ್ತಿಯ ಉಳಿದ ಭಾಗ,
ಉತ್ತರದಲ್ಲಿ : ಸರ್ಕಾರಿ ರಸ್ತೆ,
ದಕ್ಷಿಣದಲ್ಲಿ : ಭೂ ಸಂಖ್ಯೆ 65/1 ರಲ್ಲಿನ ಭೂಮಿ ಎರಡನೇ ವ್ಯಕ್ತಿಗೆ ಸೇರಿದೆ.

ಅಧಿಕಾರವಿರುವ ಅಧಿಕಾರಿ
ಇಂಡಿಯಾ ಎಸ್‌ಎಂಇ ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ ಲಿಮಿಟೆಡ್
ಐಎಸ್‌ಎಆರ್‌ಸಿ -2025-2026-5 ಟ್ರಸ್ಟ್‌ನ ಟ್ರಸ್ಟಿಯಾಗಿ ಕಾರ್ಯನಿರ್ವಹಿಸುತ್ತಿದೆ.

ದಿನಾಂಕ: 23.02.2026
ಸ್ಥಳ : ಬೆಂಗಳೂರು

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ:

ಇಂಡಿಯಾ ಎಸ್‌ಎಂಇ ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ ಲಿಮಿಟೆಡ್ (ಐಎಸ್‌ಎಆರ್‌ಸಿ) ನ ಕೆಳಗೆ ಸಹಿ ಮಾಡಲಾದ ಅಧಿಕೃತ ಅಧಿಕಾರಿ **(CIN:U67190MH2008PLC181062)**, ಆಸ್ತಿ ಪುನರ್ನಿರ್ಮಾಣ ಕಂಪನಿಯಾಗಿದ್ದು, ಇದು ಹಣಕಾಸು ಆಸ್ತಿಗಳ ಸೆಕ್ಯುರಿಟೈಸೇಶನ್ ಮತ್ತು ಪುನರ್ನಿರ್ಮಾಣ ಮತ್ತು ಭದ್ರತಾ ಹಿತಾಸಕ್ತಿ ಕಾಯ್ದೆ, 2002 (ಸರ್ಫೇಸಿ ಕಾಯ್ದೆ) ದ ಸೆಕ್ಷನ್ 3 ರ ಅಡಿಯಲ್ಲಿ ನೋಂದಾಯಿಸಲ್ಪಟ್ಟಿದೆ, ಇದು **ಐಎಸ್‌ಎಆರ್‌ಸಿ- 2025-2026-5** ಟ್ರಸ್ಟ್‌ಸ ಟ್ರಸ್ಟಿಯಾಗಿ ಕಾರ್ಯನಿರ್ವಹಿಸುತ್ತದೆ ಮತ್ತು ಸೆಕ್ಯುರಿಟಿ ಹಿತಾಸಕ್ತಿ (ಜಾರಿ) ನಿಯಮಗಳು, 2002 (ನಿಯಮಗಳು) ನ ಸಂಬಂಧಿತ ನಿಯಮಗಳೊಂದಿಗೆ ಓದಲಾದ ಸೆಕ್ಷನ್ 13 (12) ರ ಅಡಿಯಲ್ಲಿ ನೀಡಲಾದ ಅಧಿಕಾರಗಳನ್ನು ಚಲಾಯಿಸುತ್ತದೆ. ಈ ಕೆಳಗಿನ ಸೂಚನೆಯನ್ನು ನೀಡಲಾಗಿದೆ:

ಸಮ್ಮಾನ್ ಫಿನ್‌ಸರ್ವ್ ಲಿಮಿಟೆಡ್ (CIN:U65923DL2006PLC150632) (ಈಗಿನ ಹೆಸರು: **ಇಂಡಿಯಾಬುಲ್ಸ್ ಕಮರ್ಷಿಯಲ್ ಕ್ರೆಡಿಟ್ ಲಿಮಿಟೆಡ್)** ನ ಅಧಿಕೃತ ಅಧಿಕಾರಿಯು, ಸರ್ಫೇಸಿ ಕಾಯ್ದೆಯ ಸೆಕ್ಷನ್ 13 (12) ಮತ್ತು ನಿಯಮಗಳ 3 ನೇ ನಿಯಮದ ಅಡಿಯಲ್ಲಿ ನೀಡಲಾದ ಅಧಿಕಾರವನ್ನು ಚಲಾಯಿಸಿ, ದಿನಾಂಕ **14.10.2025** ರಂದು ಡಿಮ್ಯಾಂಡ್ ನೋಟಿಸ್ ಅನ್ನು ಹೊರಡಿಸಿ, ಸಾಲಗಾರರು (ಗಳು) **ಮೊಂಡೋ ಬಿಲ್ಡರ್ಸ್ ಪ್ರೈವೇಟ್ ಲಿಮಿಟೆಡ್, ಆಯೇಷಾ ಸುಲ್ತಾನ, ಮೊಹಮ್ಮದ್ ಖಾದರ್ಖಾನ್ ದುರಾನಿ, ಎನ್ ಡಿ ಡೆವಲಪರ್ಸ್ ಪ್ರೈವೇಟ್ ಲಿಮಿಟೆಡ್,** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ **ರೂ. 1,98,69,395.40 (ಒಂದು ಕೋಟಿ ತೊಂಬತ್ತೆಂಟು ಲಕ್ಷದ ಅರವತ್ತೊಂಬತ್ತು ಸಾವಿರದ ಮೂರು ನೂರ ತೊಂಬತ್ತೈದು ರೂಪಾಯಿಗಳು ಮತ್ತು ನಲವತ್ತು ಪೈಸೆ ಮಾತ್ರ)** ಸಾಲ ಖಾತೆ ನಂ. **HLLABNE00502341** ಈ ಲೋನ್ ಅಕೌಂಟ್‌ಗೆ ಸಂಬಂಧಿಸಿದಂತ, ಹೇಳಲಾಗಿರುವ ನೋಟಿಸ್ ನಿಮ್ಮನ್ನು ತಲುಪಿ 60 ದಿನಗಳಾಗುವುದರೊಳಗೆ **13.10.2025** ರ ವರೆಗಿನ ಮೊತ್ತ ಮತ್ತು ಅದರ ಮೇಲಿನ ಬಡ್ಡಿ.

ಸಮ್ಮಾನ್ ಫಿನ್‌ಸರ್ವ್ ಲಿಮಿಟೆಡ್, ಸರ್ಫೇಸಿ ಕಾಯ್ದೆಯ ನಿಬಂಧನೆಗಳ ಅಡಿಯಲ್ಲಿ, ಮೇಲೆ ತಿಳಿಸಿದ ಸಾಲಗಾರರ ಸಾಲವನ್ನು **ಇಂಡಿಯಾ ಎಸ್‌ಎಂಇ ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ ಲಿಮಿಟೆಡ್** ಗೆ ವಹಿಸಿದೆ, **ಐಎಸ್‌ಎಆರ್‌ಸಿ - 2025-2026 - 5 ಟ್ರಸ್ಟ್‌ನ** ಟ್ರಸ್ಟಿಯಾಗಿ ಕಾರ್ಯನಿರ್ವಹಿಸುತ್ತಿದೆ, ದಿನಾಂಕ **26.12.2025** ರ ನಿಯೋಜನೆ ಒಪ್ಪಂದದ ಪ್ರಕಾರ **(ಐಎಸ್‌ಎಆರ್‌ಸಿ)** ಮೇಲಿನ ಸಾಲ ಖಾತೆಗೆ ಸಂಬಂಧಿಸಿದಂತೆ ಸುರಕ್ಷಿತ ಸಾಲಗಾರನಾಗಿ ಹೆಜ್ಜೆ ಹಾಕಿದೆ (ಖಾತೆ ಸಂಖ್ಯೆ ಹಂಚಿಕೆಯಾಗಿಲ್ಲ)

ಮೇಲೆ ತಿಳಿಸಿದಂತೆ ಮೊತ್ತವನ್ನು ಮರುಪಾವತಿಸಲು ಸಾಲಗಾರ (ರು) / ಜಾಮೀನುದಾರ(ರು) / ಅಡಮಾನದಾರರು ವಿಫಲರಾಗಿದ್ದು, ಕೆಳಗೆ ಸಹಿ ಮಾಡಿದವರು 2002 ರ ಭದ್ರತಾ ಹಿತಾಸಕ್ತಿ (ಜಾಮೀನು) ನಿಯಮಗಳ ನಿಯಮ 8 ರೊಂದಿಗೆ ಓದಲಾದ ಕಾಯ್ದೆಯ ಸೆಕ್ಷನ್ 13 ರ ಉಪ-ವಿಭಾಗ (4) ರ ಅಡಿಯಲ್ಲಿ ಅವರಿಗೆ ನೀಡಲಾದ ಅಧಿಕಾರವನ್ನು ಚಲಾಯಿಸಿ ಕೆಳಗೆ ವಿವರಿಸಿದ ಆಸ್ತಿಯನ್ನು **ಸಾಂಕೇತಿಕವಾಗಿ ಸ್ವಾಧೀನ** ಪಡಿಸಿಕೊಂಡಿದ್ದಾರೆ ಎಂದು ಸಾಲಗಾರ (ರು) / ಜಾಮೀನುದಾರ (ರು) / ಅಡಮಾನದಾರರು ಮತ್ತು ಸಾರ್ವಜನಿಕರಿಗೆ **23.02.2026** ರಂದು ಸೂಚನೆ ನೀಡಲಾಗಿದೆ.

ಸಾಲಗಾರರು/ಜಾಮೀನುದಾರರು/ಅಡಮಾನದಾರರು ವಿಶೇಷವಾಗಿ ಮತ್ತು ಸಾರ್ವಜನಿಕರು ಆಸ್ತಿಯೊಂದಿಗೆ ವ್ಯವಹರಿಸದಂತೆ ಇಲ್ಲಿ ಎಚ್ಚರಿಕೆ ನೀಡಲಾಗಿದೆ ಮತ್ತು ಆಸ್ತಿಯೊಂದಿಗಿನ ಯಾವುದೇ ವ್ಯವಹಾರವು ದಿನಾಂಕ **13.10.2025** ರಂತೆ **ರೂ. 1,98,69,395.40 (ಒಂದು ಕೋಟಿ ತೊಂಬತ್ತೆಂಟು ಲಕ್ಷದ ಅರವತ್ತೊಂಬತ್ತು ಸಾವಿರದ ಮೂರು ನೂರ ತೊಂಬತ್ತೈದು ರೂಪಾಯಿಗಳು ಮತ್ತು ನಲವತ್ತು ಪೈಸೆ ಮಾತ್ರ)** ಮೊತ್ತದ **(ಐಎಸ್‌ಎಆರ್‌ಸಿ)** ಶುಲ್ಕಕ್ಕೆ ಒಳಪಟ್ಟಿರುತ್ತದೆ ಮತ್ತು ಅದರ ಮೇಲಿನ ಬಡ್ಡಿ ಮತ್ತು ಇತರ ಶುಲ್ಕಗಳೊಂದಿಗೆ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ಧವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8) ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

ಸ್ಥಿರಾಸ್ತಿಯ ವರ್ಣನೆ

ಭೂ/ಆಸ್ತಿಗಳ ಎಲ್ಲಾ ಪಾರ್ಸೆಲ್ಗಳು, ಅವುಗಳ ಜೊತೆಗೆ ಪ್ರಸ್ತುತ ಮತ್ತು / ಅಥವಾ ಭವಿಷ್ಯದ ಎಲ್ಲಾ ರಚನೆಗಳು, ಕಟ್ಟಡಗಳು, ಪೀಠೋಪಕರಣಗಳು, ಫಿಕ್ಚರ್ಗಳು, ಫಿಟ್ಟಿಂಗ್ಗಳು, ಸ್ಟ್ಯಾಂಡಿಂಗ್ ಮತ್ತು / ಅಥವಾ ಪ್ಲಾಂಟ್ ಮತ್ತು ಮೆಷಿನರಿಗಳನ್ನು ಸ್ಥಾಪಿಸಲಾಗಿದೆ / ಸ್ಥಾಪಿಸಲಾಗುವುದು ಮತ್ತು/ಅಥವಾ ನಿರ್ಮಿಸಲಾಗುವುದು / ನಿರ್ಮಿಸಲಾಗುವುದು ಮತ್ತು ಅದರಲ್ಲಿರುವ ಎನ್ಡಿ ಡೆವಲಪರ್ಸ್ ಪ್ರೈವೇಟ್ ಲಿಮಿಟೆಡ್ನ ಎಲ್ಲಾ ಪ್ರಸ್ತುತ ಮತ್ತು/ಅಥವಾ ಭವಿಷ್ಯದ ಹಕ್ಕುಗಳು, ಶೀರ್ಷಿಕೆ ಮತ್ತು / ಅಥವಾ ಆಸಕ್ತಿ:

ಹಂತ 1 ಮತ್ತು ಹಂತ 2 ರಲ್ಲಿ ಮಾರಾಟವಾಗದ ವಿಲ್ಲಾ ಸಂಖ್ಯೆ 5 ರಲ್ಲಿರುವ ಎಲ್ಲಾ ಆಸ್ತಿಯ ತುಣುಕು ಮತ್ತು ಪಾರ್ಸೆಲ್, ಕೆಳಗೆ ಉಲ್ಲೇಖಿಸಿದಂತೆ ಕ್ರಮ ಸಂಖ್ಯೆ 1 ರಿಂದ 38 ರವರೆಗೆ:

ಮೊದಲ ಹಂತ

ಕ್ರಮ ಸಂಖ್ಯೆ	ವಿಲ್ಲಾ ಸಂಖ್ಯೆ	ಚದರ ಅಡಿಗಳಲ್ಲಿ ಭೂಪ್ರದೇಶ.	ಚದರ ಅಡಿಗಳಲ್ಲಿ ಬಾವು.	ಚದರ ಅಡಿಗಳಲ್ಲಿ ಎಸ್‌ಬಿಎ.
1.	A1	2475	2890	3030
2.	A2	2230	2890	3030
3.	B93	2820	3260	3420
4.	B7	2725	3260	3420
5.	B91	2475	3260	3420

ಮೊದಲ ಹಂತ

ಎರಡನೇ ಹಂತ (ಎಲ್ಲಾ ಘಟಕಗಳು ನಮ್ಮ ಬಳಿ ಇವೆ, ಯಾವುದೇ ತಾತ್ಕಾಲಿಕ NOC ನೀಡಲಾಗಿಲ್ಲ)

ಕ್ರಮ ಸಂಖ್ಯೆ	ವಿಲ್ಲಾ ಸಂಖ್ಯೆ	ಚದರ ಅಡಿಗಳಲ್ಲಿ ಭೂಪ್ರದೇಶ.	ಚದರ ಅಡಿಗಳಲ್ಲಿ ಬಾವು.	ಚದರ ಅಡಿಗಳಲ್ಲಿ ಎಸ್‌ಬಿಎ.
1.	A29	2535	2840	2980
2.	A32	2260	2840	2980
3.	A33	2250	2840	2980
4.	A34	2250	2840	2980
5.	A38	2475	2840	2980
6.	A39	2475	2840	2980
7.	B18	2475	3260	3420
8.	B19	2475	3260	3420
9.	B28	2725	3260	3420
10.	B31	2475	3260	3420
11.	B32	2725	3260	3420
12.	B38	2725	3260	3420
13.	B39	2475	3260	3420
14.	B40	2475	3260	3420
15.	B14	2475	3265	3430
16.	B16	2725	3260	3430
17.	B24	2475	3265	3430
18.	B25	2475	3265	3430
19.	B33	2725	3265	3430
20.	B34	2475	3265	3430
21.	B49	2725	3265	3430
22.	B64	2475	3265	3430
23.	C12	4220	4695	4920
24.	C16	4220	4695	4920
25.	C19	4220	4695	4920
26.	B56	2725	3751	3420
27.	B58	2475	3501	3420
28.	B52	2475	3504	3430
29.	B53	2475	3504	3430
30.	B54	2475	3504	3430
31.	B55	2725	3754	3430
32.	B65	2475	3504	3430
33.	B66	2475	3504	3430
34.	B67	2475	3504	3430
35.	B68	2475	3504	343
36.	B69	2725	3754	3430
37.	59	2475	3501	3420
38.	60	2475	3501	3420

ಮೇಲೆ ಉಲ್ಲೇಖಿಸಲಾದ ವಿಲ್ಲಾಗಳನ್ನು ಐಟಂ ಸಂಖ್ಯೆ 1 ರಿಂದ **V** ರವರೆಗೆ ಉಲ್ಲೇಖಿಸಲಾದ ಪರಿವರ್ತಿತ ಆಸ್ತಿಯ ಮೇಲೆ ನಿರ್ಮಿಸಲಾಗಿದೆ.

ಐಟಂ ಸಂಖ್ಯೆ. I

ಬೆಂಗಳೂರು ಜಿಲ್ಲೆಯ ವರ್ತೂರು ಹೋಬಳಿಯ ಗುಂಜೂರು ಗ್ರಾಮದಲ್ಲಿ ನೆಲೆಗೊಂಡಿರುವ, 5 ಎಕರೆ 38 ಗುಂಟ ಅಳತೆಯ, ಸರ್ವೆ ಸಂಖ್ಯೆ 63/1 ರ ಸ್ಥಿರ ಆಸ್ತಿಯ ಎಲ್ಲಾ ತುಣುಕು ಮತ್ತು ಪಾರ್ಸೆಲ್, ಮತ್ತು ಇವುಗಳಿಗೆ ಸಂಬಂಧಿಸಿದೆ:

ಪೂರ್ವ : ಜಿ ವಿ ತಿಪ್ಪಣ್ಣನ ಜಮೀನು,
ಪಶ್ಚಿಮದಲ್ಲಿ : ಸಾರಕಾರಿ ಕಾಲುವೆ,
ಉತ್ತರದಲ್ಲಿ : ತಳವಾರ ಇನಾಮಿನ ಜಮೀನು
ದಕ್ಷಿಣದಲ್ಲಿ : ಪೂಜಾರಿ ಯಲ್ಲಪ್ಪ ಅವರ ಜಮೀನು.

ಐಟಂ ಸಂಖ್ಯೆ. II

ಬೆಂಗಳೂರು ಜಿಲ್ಲೆಯ ವರ್ತೂರು ಹೋಬಳಿಯ ಗುಂಜೂರು ಗ್ರಾಮದಲ್ಲಿ ನೆಲೆಗೊಂಡಿರುವ, 2 ಎಕರೆ 13 ಗುಂಟ ಅಳತೆಯ, ಸರ್ವೆ ಸಂಖ್ಯೆ 64 ರ ಸ್ಥಿರ ಆಸ್ತಿಯ ಎಲ್ಲಾ ತುಣುಕು ಮತ್ತು ಪಾರ್ಸೆಲ್, ಮತ್ತು ಇವುಗಳಿಗೆ ಸಂಬಂಧಿಸಿದೆ:

ಪೂರ್ವ : ಸರ್ಕಾರ ಕಾಲುವೆ,
ಪಶ್ಚಿಮದಲ್ಲಿ : ಅದೇ ಪ್ರದೇಶದಲ್ಲಿ ಉಳಿದ ಭೂಮಿ,
ಉತ್ತರದಲ್ಲಿ : ಜಿ.ವಿ. ನಾಗರಾಜ ರೆಡ್ಡಿ ಅವರ ಆಸ್ತಿ,
ದಕ್ಷಿಣದಲ್ಲಿ : ಜಿ.ವಿ. ನಾಗರಾಜ ರೆಡ್ಡಿ ಅವರ ಆಸ್ತಿ.

ಐಟಂ ಸಂಖ್ಯೆ. III

ಬೆಂಗಳೂರು ಜಿಲ್ಲೆಯ ವರ್ತೂರು ಹೋಬಳಿಯ ಗುಂಜೂರು ಗ್ರಾಮದಲ್ಲಿ ನೆಲೆಗೊಂಡಿರುವ, 3 ಎಕರೆ 10 ಗುಂಟ ಅಳತೆಯ, ಸರ್ವೆ ಸಂಖ್ಯೆ 65/1 ರ ಸ್ಥಿರ ಆಸ್ತಿಯ ಎಲ್ಲಾ ತುಣುಕು ಮತ್ತು ಪಾರ್ಸೆಲ್, ಮತ್ತು ಇವುಗಳಿಗೆ ಸಂಬಂಧಿಸಿದೆ:

ಪೂರ್ವ : ಮರಿಯಪ್ಪ ಶೆಟ್ಟಿಯವರ ಜಮೀನು,
ಪಶ್ಚಿಮದಲ್ಲಿ : ಸಾರಕಾರಿ ದೊಡ್ಡಹಳ್ಳಿ,
ಉತ್ತರದಲ್ಲಿ : ಜಿ ನಂಜಪ್ಪ ರೆಡ್ಡಿಯವರ ಜಮೀನು,
ದಕ್ಷಿಣದಲ್ಲಿ : ವಿ ರಾಮಯ್ಯ ರೆಡ್ಡಿ ಅವರ ಜಮೀನು.

ಐಟಂ ಸಂಖ್ಯೆ. IV

ಬೆಂಗಳೂರು ಜಿಲ್ಲೆಯ ವರ್ತೂರು ಹೋಬಳಿಯ ಗುಂಜೂರು ಗ್ರಾಮದಲ್ಲಿ ನೆಲೆಗೊಂಡಿರುವ, 6 ಎಕರೆ 22 ಗುಂಟ ಅಳತೆಯ, ಸರ್ವೆ ಸಂಖ್ಯೆ 65/2 ರ ಸ್ಥಿರ ಆಸ್ತಿಯ ಎಲ್ಲಾ ತುಣುಕು ಮತ್ತು ಪಾರ್ಸೆಲ್, ಮತ್ತು ಇವುಗಳಿಗೆ ಸಂಬಂಧಿಸಿದೆ:

ಪೂರ್ವ : ಕಾಲುವೆ,
ಪಶ್ಚಿಮದಲ್ಲಿ : ದೊಡ್ಡಹಳ್ಳಿ,
ಉತ್ತರದಲ್ಲಿ : ಜಿ ಟಿ ಮರಿಸ್ವಾಮಿ ರೆಡ್ಡಿ ಹೆಸರಿನಲ್ಲಿರುವ ಭೂಮಿ,
ದಕ್ಷಿಣದಲ್ಲಿ : ತಲ್ವಾರ್ ಇನಾಂ ಭೂಮಿ.

ಐಟಂ ಸಂಖ್ಯೆ. V

ಬೆಂಗಳೂರು ಜಿಲ್ಲೆಯ ವರ್ತೂರು ಹೋಬಳಿಯ ಗುಂಜೂರು ಗ್ರಾಮದಲ್ಲಿ ನೆಲೆಗೊಂಡಿರುವ, 09.60 ಎಕರೆ ಗುಂಟ ಅಳತೆಯ, ಸರ್ವೆ ಸಂಖ್ಯೆ 65/5 ರ ಸ್ಥಿರ ಆಸ್ತಿಯ ಎಲ್ಲಾ ತುಣುಕು ಮತ್ತು ಪಾರ್ಸೆಲ್, ಮತ್ತು ಇವುಗಳಿಗೆ ಸಂಬಂಧಿಸಿದೆ:

ಪೂರ್ವ : ಸರ್ಕಾರ/ಚಾನೆಲ್,
ಪಶ್ಚಿಮದಲ್ಲಿ : ಅದೇ ಆಸ್ತಿಯ ಉಳಿದ ಭಾಗ,
ಉತ್ತರದಲ್ಲಿ : ಸರ್ಕಾರಿ ರಸ್ತೆ,
ದಕ್ಷಿಣದಲ್ಲಿ : ಭೂ ಸಂಖ್ಯೆ 65/1 ರಲ್ಲಿನ ಭೂಮಿ ಎರಡನೇ ವ್ಯಕ್ತಿಗೆ ಸೇರಿದೆ.

ಅಧಿಕಾರವಿರುವ ಅಧಿಕಾರಿ
ಇಂಡಿಯಾ ಎಸ್‌ಎಂಇ ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ ಲಿಮಿಟೆಡ್
ಐಎಸ್‌ಎಆರ್‌ಸಿ -2025-2026-5 ಟ್ರಸ್ಟ್‌ನ ಟ್ರಸ್ಟಿಯಾಗಿ ಕಾರ್ಯನಿರ್ವಹಿಸುತ್ತಿದೆ.

ದಿನಾಂಕ: 23.02.2026
ಸ್ಥಳ : ಬೆಂಗಳೂರು

ಸಮಾಚಾರ ಸಣ್ಣದಲ್ಲ

ಸೆ.4ರಿಂದ ಅಕ್ಕ ಸಂಸ್ಥೆ ರಜತ ಮಹೋತ್ಸವ

ಬೆಂಗಳೂರು: ಸೆಪ್ಟೆಂಬರ್ 4 ರಿಂದ 6 ರವರೆಗೆ ಅಮೇರಿಕದ ಫಿಲಡೆಲ್ಫಿಯಾ ನಗರದಲ್ಲಿ ಅಕ್ಕ ಸಂಸ್ಥೆಯ ರಜತ ಮಹೋತ್ಸವ ನಡೆಯಲಿದೆ. ಅಮೇರಿಕದ ಕನ್ನಡಿಗರ ಅತೀ ದೊಡ್ಡ ಸಂಘಟನೆಯಾದ ಅಕ್ಕ ಸಂಸ್ಥೆಯ ಕಳೆದ 25 ವರ್ಷಗಳಿಂದ ಕನ್ನಡ ಭಾಷೆ, ಸಂಸ್ಕೃತಿ, ಪರಂಪರೆ ಹಾಗೂ ಕನ್ನಡ ಸೇವೆ ಉತ್ತೇಜಿಸುವ ಮಹತ್ವದ ಕಾರ್ಯಗಳನ್ನು ನಿರಂತರವಾಗಿ ನಡೆಸುತ್ತಿದೆ. ಈ ಬೆಳ್ಳಿ ಹಬ್ಬದ ಸಂಭ್ರಮವು ವಿಶ್ವದ ಕನ್ನಡಿಗರ ಏಕತೆಯ ಪ್ರತೀಕವಾಗಿದ್ದು, ಅಮೇರಿಕಾದ ವಿವಿಧ ರಾಜ್ಯಗಳಿಂದ ಹಾಗೂ ಕರ್ನಾಟಕ ಸೇರಿದಂತೆ ಅನೇಕ ಕಡೆಗಳಿಂದ ಕನ್ನಡಾಭಿಮಾನಿಗಳು ಭಾಗವಹಿಸಲಿದ್ದಾರೆ. ಮೂರು ದಿನಗಳ ಕಾರ್ಯಕ್ರಮದಲ್ಲಿ ಕನ್ನಡ ನಾಡು-ನುಡಿಗೆ ಸಂಬಂಧಿಸಿದ ಸಾಂಸ್ಕೃತಿಕ ಕಾರ್ಯಕ್ರಮಗಳು, ವಾಣಿಜ್ಯ ಹಾಗೂ ಉದ್ಯಮಿಗಳ ಸಮ್ಮೇಳನ, ವಿಶೇಷ ಪ್ರದರ್ಶನ ಮಳಿಗೆಗಳು, ಕನ್ನಡ ಸಿನಿಮಾಗಳು, ನಾಟಕಗಳ ಪ್ರದರ್ಶನಗಳು ಸೇರಿದಂತೆ ಹಲವು ವೈವಿಧ್ಯಮಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಅಕ್ಕ ರಜತ ಮಹೋತ್ಸವ ಕಾರ್ಯಕ್ರಮವು ಕೇವಲ ಒಂದು ಉತ್ಸವವಲ್ಲ. ಇದು 25 ವರ್ಷಗಳ ಸಾಧನೆ, ಸಮರ್ಪಣೆ ಮತ್ತು ಕನ್ನಡಿಗರ ಏಕತೆಯ ಸಂಭ್ರಮವಾಗಿದೆ. ಈ ಐತಿಹಾಸಿಕ ಸಮಾರಂಭಕ್ಕೆ ವಿಶ್ವದ ವಿವಿಧ ಭಾಗಗಳ ಕನ್ನಡಿಗರು ಹಾಗೂ ಕರ್ನಾಟಕದ ಕಲಾಭಿಮಾನಿಗಳು ಆಗಮಿಸಲಿದ್ದು, ಎಲ್ಲರನ್ನು ಆತ್ಮೀಯವಾಗಿ ಆಹ್ವಾನಿಸುತ್ತಿದ್ದೇವೆ. ಕಾರ್ಯಕ್ರಮದ ದಿನಾಂಕ ನಿಗದಿಯಾಗಿದ್ದು, ಇನ್ನೂ ಕೆಲವೇ ದಿನಗಳಲ್ಲಿ ಕಾರ್ಯಕ್ರಮದ ರೂಪುರೇಷೆ ಹಾಗೂ ನೋಂದಣಿ ವಿವರ ಪ್ರಕಟಿಸಲಾಗುವುದು ಎಂದು ಅಕ್ಕ ಅಧ್ಯಕ್ಷ ಮಧು ರಂಗಯ್ಯ ತಿಳಿಸಿದ್ದಾರೆ.

ಮುತ್ಯಾ ಪರ ಭಕ್ತರ ಸಭೆ | ಪ್ರಕರಣ ರದ್ದತಿ ಕೋರಿ ಹೈಕೋರ್ಟ್‌ಗೆ ಮನವಿ, ಸೋಮವಾರ ವಿಚಾರಣೆ

ಪೊಲೀಸರ ಕೈಗೆ ಸಿಗದ ಮುತ್ಯಾ

ಯಾದಗಿರಿ: ಸ್ವಯಂ ಘೋಷಿತ ದೇವಮಾನವ ಮಹಲ್ ರೋಜಾ ಮಠದ ಮಲ್ಲಿಕಾರ್ಜುನ ಮುತ್ಯಾ ವಿರುದ್ಧ ದಾಖಲಾಗಿರುವ ಪೋಕ್ಸೋ ಪ್ರಕರಣ ದಿನದಿಂದ ದಿನಕ್ಕೆ ಗಂಭೀರ ಸ್ವರೂಪ ಪಡೆದುಕೊಳ್ಳುತ್ತಿದೆ.

ಪೊಲೀಸರ ನೋಟಿಸ್ ಬಳಿಕವೂ ಮಲ್ಲಿಕಾರ್ಜುನ್ ಮುತ್ಯಾ ಈವರೆಗೆ ವಿಚಾರಣೆಗೆ ಹಾಜರಾಗಿಲ್ಲ ಎನ್ನಲಾಗಿದೆ. ಆದಾಗ್ಯೂ ಮುತ್ಯಾ ಕೇಸ್ ರದ್ದತಿಗೆ ಹೈಕೋರ್ಟ್‌ಗೆ ಮನವಿ ಸಲ್ಲಿಸಿದ್ದಾರೆ. ಮತ್ತೊಂದೆಡೆ ಭಕ್ತರು ಬೃಹತ್ ಪ್ರಮಾಣದಲ್ಲಿ ಜಮಾವಣೆಗೊಂಡು ಶ್ರೀಮಠದಲ್ಲಿ ಸಭೆ ನಡೆಸಿ ಕೇಸ್ ರದ್ದು ಮಾಡಲು ಜಿಲ್ಲಾಡಳಿತಕ್ಕೆ 2 ದಿನಗಳ ಗಡುವು ನೀಡಿದ್ದಾರೆ.

ಇನ್ನೂ ಶುಕ್ರವಾರ ಪ್ರತ್ಯಕ್ಷರಾಗುವ ಸಾಧ್ಯತೆ ಇತ್ತಾದರೂ ವಿಚಾರಣೆಗೆ ಹಾಜರಾಗದ ಹಿನ್ನೆಲೆಯಲ್ಲಿ ಮಹಲ್ ರೋಜಾ ಮಠದ ಸ್ವಯಂ ಘೋಷಿತ ದೇವಮಾನ ಮಲ್ಲಿಕಾರ್ಜುನ ಮುತ್ಯಾಗೆ ಬಂಧನ ಭೀತಿ ಎದುರಾಗಿದೆ. ವಿಚಾರಣೆಗೆ ಹಾಜರಾಗುವಂತೆ ಯಾದಗಿರಿ ಪೊಲೀಸರು ನೋಟಿಸ್ ನೀಡಿದರೂ ಮುತ್ಯಾನ ಸುಳಿವಿಲ್ಲ ಎಂದು ತಿಳಿದುಬಂದಿದೆ.

ಅಲ್ಲದೇ ಪೋಕ್ಸೊ ಕೇಸ್ ರದ್ದು ಕೋರಿ ಹೈಕೋರ್ಟ್ ಕಲಬುರಗಿ ಪೀಠದಲ್ಲಿ ಅರ್ಜಿ ಸಲ್ಲಿಸಿದ್ದು, ಸೋಮವಾರ ವಿಚಾರಣೆ ನಡೆಯಲಿದೆ. ಪೋಷಕರೇ ದೂರು ನೀಡಿಲ್ಲ, ಹಾಗಾಗಿಯೂ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಅರ್ಜಿಯಲ್ಲಿ ಉಲ್ಲೇಖಿಸಲಾಗಿದೆ ಎನ್ನಲಾಗಿದೆ.

ಇನ್ನೊಂದೆಡೆ ಮಹತ್ತರ ಬೆಳವಣಿಗೆ ಸಹ ನಡೆದಿದ್ದು, ಸ್ವಯಂ ಘೋಷಿತ ದೇವಮಾನ ಮಲ್ಲಿಕಾರ್ಜುನ ಮುತ್ಯಾ ಮೇಲೆ ಪೋಕ್ಸೋ ಕೇಸ್ ದಾಖಲು ಮಾಡಿರುವುದಕ್ಕೆ ಶ್ರೀಮಠದ ಭಕ್ತರ ಕೆಂಗಣ್ಣಿಗೆ ಗುರಿಯಾಗಿದೆ.

ಈ ಹಿನ್ನೆಲೆಯಲ್ಲಿ ಶಹಾಪುರ ತಾಲೂಕಿನ ಮಹಲ್ ರೋಜಾ ಮಠದ ಆವರಣದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಮುಖಂಡರು ಸೇರಿ ನೂರಾರು ಸಂಖ್ಯೆಯಲ್ಲಿ ಜಮಾಯಿಸಿದ ಭಕ್ತರು ತುರ್ತು ಸಭೆ ನಡೆಸಿದರು. ಈ ವೇಳೆ ಮುತ್ಯಾ ಅವರಿಗೆ ತಮ್ಮ ಸಂಪೂರ್ಣ ಬೆಂಬಲ ಘೋಷಿಸಿದ ಭಕ್ತರು, ಪ್ರಕರಣದ ಹಾದಿಯ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಜಿಲ್ಲಾಡಳಿತ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಮಹಲ್‌ರೋಜಾದಲ್ಲಿ ಮಲ್ಲಿಕಾರ್ಜುನ ಮುತ್ಯಾನ ಭಕ್ತರು ಶ್ರೀಮಠದಲ್ಲಿ ಶುಕ್ರವಾರ ಸಭೆ ನಡೆಸಿದರು.

ಅಪ್ರಾಪ್ತೆ ಮತ್ತು ಪೋಷಕರು ದೂರು ನೀಡದೇ ಇದ್ದರೂ ಎಫ್‌ಐಆರ್ ದಾಖಲಿಸಿದ್ದಾರೆ. ಇದು ಪ್ರಕರಣವನ್ನು ರದ್ದು ಮಾಡಬೇಕು. ಅಪ್ರಾಪ್ತೆಯ ಹೇಳಿಕೆಯನ್ನೂ ಪಡೆಯದೆ ಎಫ್‌ಐಆರ್ ದಾಖಲಿಸಲಾಗಿದೆ. ಇಲ್ಲಿ ಜಿಲ್ಲಾಡಳಿತ ಎಡವಿದ್ದು, ಕೇಸ್ ರದ್ದು ಮಾಡಲು ಎರಡು ದಿನ ಗಡುವು ನೀಡುತ್ತೇವೆ. ಆ ಬಳಿಕವೂ ಪ್ರಕರಣ ರದ್ದು ಮಾಡದಿದ್ದಲ್ಲಿ ಭಕ್ತರು ಅನಿವಾರ್ಯವಾಗಿ ಹೋರಾಟದ ಹಾದಿ ಹಿಡಿಯಬೇಕಾಗುತ್ತದೆ.

-ಲಲಿತಾ ಅನಪುರ, ಮಠದ ಭಕ್ತರು

- ವಿಚಾರಣೆಗೆ ಹಾಜರಾಗದ ಮಲ್ಲಿಕಾರ್ಜುನ ಮುತ್ಯಾ
- ಪೋಕ್ಸೊ ಪ್ರಕರಣ ರದ್ದು ಕೋರಿ ಹೈಕೋರ್ಟ್‌ಗೆ ಮನವಿ
- ಮಹಲ್ ರೋಜಾ ಮಠದಲ್ಲಿ ಭಕ್ತರಿಂದ ಮಹತ್ವದ ಸಭೆ
- ಎರಡು ದಿನಗಳ ಗಡವು, ಇಲ್ಲವೇ ಪ್ರತಿಭಟನೆ ಎಚ್ಚರಿಕೆ

ಎಸ್‌ಎಸ್‌ಎಲ್‌ಸಿ ಪ್ರಶ್ನೆಪತ್ರಿಕೆ ನೀಡುವುದಾಗಿ ವಂಚನೆ, ಧಾರವಾಡದಲ್ಲಿ ವಿದ್ಯಾರ್ಥಿ ಆತ್ಮಹತ್ಯೆಗೆ ಯತ್ನ
ಪೋಷಕರಿಂದ ಡಿಡಿಪಿಐಗೆ ದೂರು, ಪ್ರಕರಣದ ವಿಚಾರಣೆ ನಡೆಸಿ, ತಕ್ಷಣ ಶಿಸ್ತುಕ್ರಮ ಕೈಗೊಳ್ಳಲು ಆದೇಶ

ಪ್ರಶ್ನೆಪತ್ರಿಕೆ ಲೀಕ್ ಮಾಡಲು 80 ಗ್ರಾಮ್ ಚಿನ್ನ ಪಡೆದ ಶಿಕ್ಷಕ!

ಧಾರವಾಡ: ವಿದ್ಯಾದೇಗುಲದ ಪಾವಿತ್ರ್ಯತೆಯನ್ನು ಕಾಪಾಡಬೇಕಾದ ಶಿಕ್ಷಕನೇ ವಿದ್ಯಾರ್ಥಿಯೊಬ್ಬನ ಭವಿಷ್ಯದ ಜೊತೆ ಚೆಲ್ಲಾಟವಾಡಿರುವ ಆಘಾತಕಾರಿ ಘಟನೆ ಸಾಂಸ್ಕೃತಿಕ ನಗರಿ ಧಾರವಾಡದಲ್ಲಿ ಬೆಳಕಿಗೆ ಬಂದಿದೆ. ಎಸ್‌ಎಸ್‌ಎಲ್‌ಸಿ ಪ್ರಶ್ನೆಪತ್ರಿಕೆ ನೀಡುವುದಾಗಿ ವಿದ್ಯಾರ್ಥಿಯೊಬ್ಬನಿಂದ ಬರೋಬ್ಬರಿ 80 ಗ್ರಾಮ್ ಚಿನ್ನ ಪಡೆದು ವಂಚಿಸಿರುವ ಶಿಕ್ಷಕನ ವಿರುದ್ಧ ಈಗ ಶಿಕ್ಷಣ ಇಲಾಖೆ ಚಾಟಿ ಬೀಸಿದೆ. ಈ ವಂಚನೆಯಿಂದ ಮನನೊಂದ ವಿದ್ಯಾರ್ಥಿ ಆತ್ಮಹತ್ಯೆಗೆ ಯತ್ನಿಸಿದ್ದು, ಪ್ರಕರಣ ಗಂಭೀರ ಸ್ವರೂಪ ಪಡೆದುಕೊಂಡಿದೆ.

ಏನಿದು ಘಟನೆ?: ಧಾರವಾಡದ ಪ್ರತಿಷ್ಠಿತ ಕೆ.ಇ.ಬೋರ್ಡ್ (K.E. Board) ಆಡಳಿತ ಮಂಡಳಿಯ ಅಡಿಯಲ್ಲಿ ಬರುವ ವಿದ್ಯಾರಣ್ಯ ಪ್ರೌಢಶಾಲೆಯ ಶಿಕ್ಷಕ ರಾಜಶೇಖರ್ ವಡತೇರ ಈ ಕೃತ್ಯ ಎಸಗಿದ ಆರೋಪಿ. 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದ ಅಭಿಷೇಕ್ ಶಿವಾನಂದ ಕರಕಿ ಎಂಬ ವಿದ್ಯಾರ್ಥಿಗೆ ಈತ ಗಾಳ ಹಾಕಿದ್ದನು. ಪರೀಕ್ಷೆಯಲ್ಲಿ ಉತ್ತೀರ್ಣನಾಗಲು ಮುಂಚಿತವಾಗಿಯೇ ಪ್ರಶ್ನೆ ಪತ್ರಿಕೆ ನೀಡುವುದಾಗಿ ನಂಬಿಸಿದ ಶಿಕ್ಷಕ, ಇದಕ್ಕಾಗಿ ಭಾರಿ ಪ್ರಮಾಣದ ಹಣ ಮತ್ತು ಚಿನ್ನಕ್ಕೆ ಬೇಡಿಕೆ ಇಟ್ಟಿದ್ದನು ಎನ್ನಲಾಗಿದೆ.

80 ಗ್ರಾಮ್ ಚಿನ್ನ ಪಡೆದು ವಂಚನೆ: ಶಿಕ್ಷಕನ ಮಾತನ್ನು ನಂಬಿದ ವಿದ್ಯಾರ್ಥಿ ಅಭಿಷೇಕ್, ತನ್ನ ಮನೆಯಲ್ಲಿದ್ದ ಸುಮಾರು 80 ಗ್ರಾಮ್ ತೂಕದ ಚಿನ್ನದ ಆಭರಣಗಳನ್ನು (ಸುಮಾರು 5 ತೊಲಕ್ಕೂ ಅಧಿಕ) ಶಿಕ್ಷಕನಿಗೆ ನೀಡಿದ್ದನು. ಆದರೆ, ಪರೀಕ್ಷೆಯ ನಂತರ ವಿದ್ಯಾರ್ಥಿ ಮರಳಿ ತನ್ನ ಚಿನ್ನವನ್ನು ಕೇಳಿದಾಗ ಶಿಕ್ಷಕ ರಾಜಶೇಖರ್ ವಡತೇರ ಅಸಲಿ ಬಣ್ಣ ತೋರಿಸಿದ್ದಾನೆ. ಚಿನ್ನ ವಾಪಸ್ ಕೊಡಲು ನಿರಾಕರಿಸಿದ್ದಲ್ಲದೆ, 'ಪೂರಕ ಪರೀಕ್ಷೆಗೆ ಹಾಜರಾಗಲು ಅನುಮತಿ ನೀಡುವುದಿಲ್ಲ' ಎಂದು ಬೆದರಿಕೆ ಹಾಕಿದ್ದಾನೆ ಎಂದು ದೂರಲಾಗಿದೆ. ತನ್ನಿಂದ ದೊಡ್ಡ ತಪ್ಪಾಗಿದೆ ಮತ್ತು ಮನೆಯವರ ಚಿನ್ನ ಕಳೆದುಹೋಯಿತು ಎಂಬ ನೋವಿನಿಂದ ವಿದ್ಯಾರ್ಥಿ ಅಭಿಷೇಕ್ ಆತ್ಮಹತ್ಯೆಗೆ ಯತ್ನಿಸಿದ್ದಾನೆ.

ಈ ಗಂಭೀರ ಪ್ರಕರಣದ ಬಗ್ಗೆ ವಿದ್ಯಾರ್ಥಿಯ ತಾಯಿ ಸರೋಜಿನಿ ಶಿವಾನಂದ ಕರಕಿ ಅವರು ಶಿಕ್ಷಣ ಇಲಾಖೆಗೆ ದೂರು ನೀಡಿದ್ದರು. ದೂರನ್ನು ಗಂಭೀರವಾಗಿ ಪರಿಗಣಿಸಿದ ಧಾರವಾಡದ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರು (ಡಿಡಿಪಿಐ), ಕೆ.ಇ.ಬೋರ್ಡ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳಿಗೆ ಅಧಿಕೃತ ನೋಟಿಸ್ ಜಾರಿ ಮಾಡಿದ್ದಾರೆ.

ನೋಟಿಸ್‌ನಲ್ಲಿ 'ಶಿಕ್ಷಕ ರಾಜಶೇಖರ ವಡತೇರ ಅವರು ಹಣದ ಬೇಡಿಕೆ ಇಟ್ಟು, ಚಿನ್ನದ ಆಭರಣಗಳನ್ನು ಪಡೆದು ವಂಚಿಸಿರುವುದು ಮತ್ತು ವಿದ್ಯಾರ್ಥಿಯ ಭವಿಷ್ಯಕ್ಕೆ ತೊಂದರೆ ನೀಡಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ. ಇದು ಕರ್ನಾಟಕ ಶಿಕ್ಷಣ ಕಾಯ್ದೆ 1983ರ ನಿಯಮಗಳ ಸ್ಪಷ್ಟ ಉಲ್ಲಂಘನೆಯಾಗಿದೆ. ಆದ್ದರಿಂದ ಸದರಿ ಶಿಕ್ಷಕನ ಮೇಲೆ ತಕ್ಷಣವೇ ವಿಚಾರಣೆ ನಡೆಸಿ, ಶಿಸ್ತು ಕ್ರಮ ಕೈಗೊಂಡು ತುರ್ತಾಗಿ ವರದಿ ಸಲ್ಲಿಸಬೇಕು' ಎಂದು ಆದೇಶಿಸಿದ್ದಾರೆ.

ಪೋಷಕರ ಆಕ್ರೋಶ: ಶಿಕ್ಷಕನ ಈ ವರ್ತನೆಯಿಂದಾಗಿ ಒಂದು ಸುಂದರ ಕುಟುಂಬ ಬೀದಿಗೆ ಬೀಳುವಂತಾಗಿದೆ. 'ಮಕ್ಕಳಿಗೆ ದಾರಿ ತೋರಿಸ ಬೇಕಾದ ಗುರುಗಳೇ ಹೀಗೆ ಮಾಡಿದರೆ ಯಾರನ್ನು ನಂಬಬೇಕು?' ಎಂದು ಪೋಷಕರು ಪ್ರಶ್ನಿಸುತ್ತಿದ್ದಾರೆ. ಆರೋಪಿ ಶಿಕ್ಷಕನನ್ನು ಕೂಡಲೇ ಸೇವೆಯಿಂದ ವಜಾಗೊಳಿಸಬೇಕು ಮತ್ತು ಕಾನೂನು ರೀತಿಯಲ್ಲಿ ಶಿಕ್ಷೆಯಾಗಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.



ಗೃಹಲಕ್ಷ್ಮಿಯರಿಗೆ ಒಟ್ಟು ₹52,000 ಜಮೆ

ಬೆಂಗಳೂರು: ಗೃಹಲಕ್ಷ್ಮಿ ಯೋಜನೆಯ 26ನೇ ಕಂತಿನ ತಲಾ 2000 ರು. ಹಣ ಫಲಾನುಭವಿಗಳ ಖಾತೆಗೆ ಯಶಸ್ವಿಯಾಗಿ ಜಮೆಯಾಗಿದ್ದು, ಇದರೊಂದಿಗೆ ಪ್ರತಿ ಮನೆಯ ಯಜಮಾನಿಗೆ ಈವರೆಗೆ ಒಟ್ಟು 52,000 ರು. ಪಾವತಿಯಾದಂತಾಗಿದೆ ಎಂದು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ರಾಜ್ಯ ಉಪಾಧ್ಯಕ್ಷ ದಿನೇಶ್ ಗೂಳಿಗೌಡ ತಿಳಿಸಿದ್ದಾರೆ.

ಕಳೆದ ಎರಡೂವರೆ ವರ್ಷದಲ್ಲಿ ರಾಜ್ಯ ಸರಕಾರ ಐದು ಗ್ಯಾರಂಟಿ ಯೋಜನೆಗಳ ಮೂಲಕ ಬರೋಬ್ಬರಿ 1 ಲಕ್ಷದ 20 ಸಾವಿರದ 433 ಕೋಟಿ ರುಪಾಯಿಗೂ ಅಧಿಕ ಹಣವನ್ನು ನೇರವಾಗಿ ಮತ್ತು ಪಾರದರ್ಶಕವಾಗಿ ಜನರ ಖಾತೆಗೆ ವರ್ಗಾಯಿಸುವ ಮೂಲಕ ನುಡಿದಂತೆ ನಡೆದಿದೆ. ಗೃಹಲಕ್ಷ್ಮೀ ಯೋಜನೆಯಡಿ ರಾಜ್ಯದಲ್ಲಿ ಒಟ್ಟು 1,24,10,629 ಮಹಿಳೆಯರು ನೋಂದಣಿಯಾಗಿದ್ದಾರೆ. ಈ ಯೋಜನೆಗಾಗಿ ಸರಕಾರ ಇದುವರೆಗೆ ಒಟ್ಟು 62,345.34 ಕೋಟಿ ರು. ವೆಚ್ಚ ಮಾಡಿದೆ. 26 ಕಂತುಗಳ ಹಣ ಯಶಸ್ವಿಯಾಗಿ ಪಾವತಿಯಾಗಿದ್ದು, 27ನೇ ಕಂತಿನ ಅನುದಾನ ಸಹ ಈಗಾಗಲೇ ಖಜಾನೆಯಿಂದ ಬಿಡುಗಡೆಗೊಳಿಸಲಾಗಿದೆ. ಶೀಘ್ರದಲ್ಲೇ 31 ಜಿಲ್ಲೆಗಳ ಫಲಾನುಭವಿಗಳಿಗೆ ಇದು ತಲುಪಲಿದೆ ಎಂದು ಅವರು ವಿವರಿಸಿದ್ದಾರೆ.

ಗೃಹಲಕ್ಷ್ಮೀ ಯೋಜನೆ ಕುಟುಂಬದ ಆರ್ಥಿಕ ನಿರ್ಧಾರಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಹೆಚ್ಚಿಸಿದೆ. ಗ್ಯಾರಂಟಿ ಯೋಜನೆಗಳು ಕೇವಲ ಹಣದ ಸಹಾಯವಲ್ಲ, ಗೌರವದ ಭರವಸೆ. ಪಕ್ಷಬೇಧವಿಲ್ಲದೆ ಎಲ್ಲರಿಗೂ ಗ್ಯಾರಂಟಿ ಯೋಜನೆಗಳನ್ನು ತಲುಪಿಸಲಾಗುತ್ತಿದೆ.

-ದಿನೇಶ್ ಗೂಳಿಗೌಡ, ಉಪಾಧ್ಯಕ್ಷರು, ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ

5 ಗ್ಯಾರಂಟಿ ಯೋಜನೆಗಳ ಸಮಗ್ರ ಪ್ರಗತಿ

ಗೃಹಲಕ್ಷ್ಮೀ ಯೋಜನೆ: 1,24,10,629 ಮಹಿಳಾ ಫಲಾನುಭವಿಗಳಿಗೆ ತಲಾ 2000 ರು. ನಂತೆ ಈವರೆಗೆ ಒಟ್ಟು 62,345.34 ಕೋಟಿ ವೆಚ್ಚ ಮಾಡಲಾಗಿದೆ.

ಗೃಹಜ್ಯೋತಿ ಯೋಜನೆ: ರಾಜ್ಯದ 1,65,65,000 ಮನೆಗಳಿಗೆ 200 ಯೂನಿಟ್ ವರೆಗೆ ಉಚಿತ ವಿದ್ಯುತ್ ಒದಗಿಸಲಾಗುತ್ತಿದ್ದು, ಈವರೆಗೆ ಒಟ್ಟು 22,839 ಕೋಟಿ ವೆಚ್ಚ

ಶಕ್ತಿ ಯೋಜನೆ: ಸರಕಾರಿ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣದಿಂದ ಈವರೆಗೆ 679.20 ಕೋಟಿ ಉಚಿತ ಟಿಕೆಟ್ ವಿತರಿಸಲಾಗಿದೆ. ಇದಕ್ಕಾಗಿ 17,606.49 ಕೋಟಿ ವೆಚ್ಚ

ಅನ್ನಭಾಗ್ಯ ಯೋಜನೆ: ಬಡ ಕುಟುಂಬಗಳಿಗೆ ಉಚಿತ ಅಕ್ಕಿ/ಹಣ ವಿತರಿಸುವ ಈ ಯೋಜನೆಗೆ ಒಟ್ಟು 16,000 ಕೋಟಿ ವ್ಯಯಿಸಲಾಗಿದೆ.

ಯುವನಿಧಿ ಯೋಜನೆ: 3,08,267 ನಿರುದ್ಯೋಗಿ ಪದವೀಧರರಿಗೆ ಪ್ರತಿ ತಿಂಗಳು ಆರ್ಥಿಕ ನೆರವು ನೀಡಲಾಗುತ್ತಿದ್ದು, ಇದುವರೆಗೆ ಒಟ್ಟು 915 ಕೋಟಿ ನೇರವಾಗಿ ಅವರ ಖಾತೆಗೆ

ರಾಣೆಬೆನ್ನೂರಿನ ಅಲ್ಪಸಂಖ್ಯಾತರ ಮೊರಾರ್ಜಿ ವಸತಿ ಶಾಲೆಯಲ್ಲಿ ಘಟನೆ | ಪೋಷಕರಿಗೆ ಆತಂಕ
ರಾತ್ರೋರಾತ್ರಿ ಕಾಂಪೌಂಡ್ ಜಿಗಿದು ನಾಪತ್ತೆ, ವಿದ್ಯಾರ್ಥಿಗಳಿರುವ ಜಾಗದ ಬಗ್ಗೆ ಮಾಹಿತಿ ಅಸ್ಪಷ್ಟ

ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಹೆದರಿ 5 ವಿದ್ಯಾರ್ಥಿಗಳು ಪರಾರಿ

ಹಾವೇರಿ: ಪರೀಕ್ಷೆಗಳ ಭಯದಿಂದಾಗಿ ಏಕಾಏಕಿ ಐವರು ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು ನಾಪತ್ತೆಯಾಗಿರುವ ಘಟನೆ ಹಾವೇರಿ ಜಿಲ್ಲೆಯ ರಾಣೆಬೆನ್ನೂರು ತಾಲೂಕಿನ ಸುಣಕಲ್-ಬಿದರಿ ಅಲ್ಪಸಂಖ್ಯಾತರ ಮೊರಾರ್ಜಿ ವಸತಿ ಶಾಲೆಯಲ್ಲಿ ಬೆಳಕಿಗೆ ಬಂದಿದೆ. ಪೂರ್ವಭಾವಿ ಪರೀಕ್ಷೆಗಳು ನಡೆಯುತ್ತಿದ್ದ ವೇಳೆ, ಇಂದು ಬೆಳಗಿನ ಜಾವ ವಿದ್ಯಾರ್ಥಿಗಳು ವಸತಿ ಶಾಲೆಯ ಕಾಂಪೌಂಡ್ ಹಾರಿ ಪರಾರಿಯಾಗಿದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ.

ನಾಪತ್ತೆಯಾಗಿರುವ ಐವರು ವಿದ್ಯಾರ್ಥಿಗಳಿಗೆ ಪರೀಕ್ಷೆಗಳ ಭಯ ಕಾಡುತ್ತಿತ್ತು ಎಂದು ಹೇಳಲಾಗುತ್ತಿದೆ. ಎಸ್‌ಎಸ್‌ಎಲ್‌ಸಿ ಪೂರ್ವಭಾವಿ ಪರೀಕ್ಷೆಗಳು ನಡೆಯುತ್ತಿದ್ದ ಹಿನ್ನೆಲೆಯಲ್ಲಿ, ಮಕ್ಕಳ ಮೇಲೆ ಮಾನಸಿಕ ಒತ್ತಡ ಹೆಚ್ಚಾಗಿದ್ದು, ಅದೇ ಕಾರಣಕ್ಕೆ ಅವರು ಪರಾರಿಯಾಗಿರಬಹುದು ಎಂಬ ಶಂಕೆ ವ್ಯಕ್ತವಾಗಿದೆ.

ಘಟನೆ ನಡೆದ ರಾತ್ರಿ ವಸತಿ ಶಾಲೆಯಲ್ಲಿ ವಾಚ್‌ಮ್ಯಾನ್ ಹಾಜರಿರಲಿಲ್ಲ ಎಂಬ ಆರೋಪ ಕೇಳಿಬಂದಿದೆ. ಬೆಳಗಿನ ನಸುಕಿನ ಜಾವ ಮಕ್ಕಳು ಕಾಂಪೌಂಡ್ ಹಾರಿ ಹೊರಗೆ ಹೋಗಿರುವುದು ಭದ್ರತಾ ವ್ಯವಸ್ಥೆಯ ಮೇಲೆಯೇ ಪ್ರಶ್ನೆಗಳನ್ನು ಎಬ್ಬಿಸಿದೆ. ವಸತಿ ಶಾಲೆಯಲ್ಲಿನ ಮೇಲ್ವಿಚಾರಣೆ ಹಾಗೂ ಮಕ್ಕಳ ಸುರಕ್ಷತೆ ಕುರಿತು ಪೋಷಕರಲ್ಲಿ ಆತಂಕ ಹೆಚ್ಚಾಗಿದೆ.

ಪರಸ್ಪರ ವಿರೋಧಿ ಹೇಳಿಕೆಗಳು: ಈ ಘಟನೆಗೆ ಸಂಬಂಧಿಸಿದಂತೆ ಅಧಿಕಾರಿಗಳಿಂದ ಸ್ಪಷ್ಟ ಮಾಹಿತಿ ಸಿಗದೆ ಗೊಂದಲ ನಿರ್ಮಾಣವಾಗಿದೆ. ವಸತಿ ಶಾಲೆಯ ಮುಖ್ಯೋಪಾಧ್ಯಾಯ ನಾಗರಾಜ್ ಅಕ್ಕುವಳ್ಳಿ ಅವರು, ಮಕ್ಕಳು ಸುರಕ್ಷಿತವಾಗಿದ್ದಾರೆ, ಪತ್ತೆಯಾಗಿದ್ದಾರೆ ಎಂದು ಹೇಳಿರುವರೆಂದು ತಿಳಿದುಬಂದಿದೆ. ಆದರೆ ಮತ್ತೊಂದೆಡೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧಿಕಾರಿ ಅಬ್ದುಲ್ ಮಿರ್ಜಾನವರ ಅವರು ಮಾಧ್ಯಮಗಳಿಗೆ ಮಕ್ಕಳು ಬೇರೆ ಕಡೆ ಇದ್ದಾರೆ ಎಂಬ ಅಸ್ಪಷ್ಟ ಉತ್ತರ ನೀಡಿದ್ದಾರೆ. ಇದರಿಂದ ನಾಪತ್ತೆಯಾಗಿರುವ ವಿದ್ಯಾರ್ಥಿಗಳ ಮಾಹಿತಿ ಉದ್ದೇಶಪೂರ್ವಕವಾಗಿ ಮುಚ್ಚಿಡಲಾಗುತ್ತಿದೆಯೇ ಎಂಬ ಅನುಮಾನವೂ ಮೂಡಿದೆ.

ಮಕ್ಕಳ ಪತ್ತೆಗೆ ಶೋಧ ಕಾರ್ಯ: ಪ್ರಸ್ತುತ ವಸತಿ ಶಾಲೆಯ ಮುಖ್ಯೋಪಾಧ್ಯಾಯ ನಾಗರಾಜ್ ಅಕ್ಕುವಳ್ಳಿ ಅವರು ವಿದ್ಯಾರ್ಥಿಗಳ ಪತ್ತೆಗೆ ಶೋಧ ಕಾರ್ಯದಲ್ಲಿ ತೊಡಗಿರುವುದಾಗಿ ತಿಳಿದುಬಂದಿದೆ.

ಪೋಷಕರ ಆತಂಕ, ಇಲಾಖೆಯ ಮೇಲೆ ಒತ್ತಡ

ಪರೀಕ್ಷೆಗಳ ಒತ್ತಡದಿಂದ ಮಕ್ಕಳು ಪರಾರಿಯಾಗಿರುವುದು ಶಿಕ್ಷಣ ವ್ಯವಸ್ಥೆಯಲ್ಲಿನ ಮಾನಸಿಕ ಒತ್ತಡದ ಗಂಭೀರತೆಯನ್ನು ಮತ್ತೊಮ್ಮೆ ಎತ್ತಿಹಿಡಿದಿದೆ. ಪೋಷಕರು ಮಕ್ಕಳ ಸುರಕ್ಷತೆ ಹಾಗೂ ಆರೋಗ್ಯದ ಬಗ್ಗೆ ತೀವ್ರ ಆತಂಕ ವ್ಯಕ್ತಪಡಿಸಿದ್ದು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಮತ್ತು ಶಾಲಾ ಆಡಳಿತ ಸ್ಪಷ್ಟ ಮಾಹಿತಿ ನೀಡಬೇಕು ಎಂಬ ಒತ್ತಾಯ ಜೋರಾಗಿದೆ. ಈ ಘಟನೆ, ವಸತಿ ಶಾಲೆಗಳಲ್ಲಿನ ಭದ್ರತೆ, ವಿದ್ಯಾರ್ಥಿಗಳ ಮಾನಸಿಕ ಆರೈಕೆ ಹಾಗೂ ಪರೀಕ್ಷಾ ಒತ್ತಡ ನಿರ್ವಹಣೆ ಕುರಿತು ಗಂಭೀರ ಚರ್ಚೆಗೆ ದಾರಿ ಮಾಡಿಕೊಟ್ಟಿದೆ. ಮಕ್ಕಳನ್ನು ಶೀಘ್ರವಾಗಿ ಪತ್ತೆ ಹಚ್ಚಿ ಸುರಕ್ಷಿತವಾಗಿ ಮನೆಗೆ ಕರೆತರುವುದೇ ಇದೀಗ ಎಲ್ಲರ ಮೊದಲ ಆದ್ಯತೆಯಾಗಿದೆ.

ಚಿತ್ರ: ದಿ ರೈಸ್ ಆಫ್ ಅಶೋಕ
ನಿರ್ದೇಶನ : ವಿನೋದ್ ದೋಂಡಾಳೆ
ನಿರ್ಮಾಣ : ವೃದ್ಧಿ ಕ್ರಿಯೇಷನ್ಸ್ ಮತ್ತು ಸತೀಶ್ ಪಿಕ್ಚರ್ ಹೌಸ್

ಅನ್ಯಾಯದ ವಿರುದ್ಧ ಕ್ರಾಂತಿಕಾರಿ ಹೋರಾಟ

ಐವತ್ತು ಅರವತ್ತು ವರ್ಷಗಳ ಹಿಂದೆ ಸಮಾಜದಲ್ಲಿ ಸಾಕಷ್ಟು ತಾರತಮ್ಯವಿತ್ತು. ಅದರ ವಿರುದ್ಧ ಹೋರಾಟವೂ ನಡೆಯುತ್ತಿತ್ತು. ಪ್ರಾಣವನ್ನೇ ಪಣಕ್ಕಿಟ್ಟು ಹೋರಾಟ ಮಾಡಿ ಗೆದ್ದವರೂ ಇದ್ದಾರೆ. ಅಂತಹದ್ದೇ ಕಥೆ ದಿ ರೈಸ್ ಆಫ್ ಅಶೋಕ ಚಿತ್ರದಲ್ಲಿದೆ. ಅದೊಂದು ಕುಗ್ರಾಮ, ನಾಯಕನ ತಂದೆಗೆ ತನ್ನ ಮಗ ಓದಿ ಸರಕಾರಿ ಕೆಲಸ ತೆಗೆದುಕೊಳ್ಳಬೇಕು ಎಂಬ ಆಸೆ. ವಿದ್ಯಾವಂತ ಮಗನಿಗೂ ಸರಕಾರಿ ಕೆಲಸ ಸಿಗುವ ನಿರೀಕ್ಷೆ. ಅಂತು ಶ್ರಮಪಟ್ಟು ನೌಕರಿ ಪಡೆಯುತ್ತಾನೆ. ಮಗನ ಸಾಧನೆಯನ್ನು ಕಂಡು ಅಪ್ಪನನ್ನು ಕೇಳಬೇಕೆ, ಹಿರಿ ಹಿರಿ ಹಿಗ್ಗುತ್ತಾನೆ. ತಾನು ಕೆಲಸ ತೆಗೆದುಕೊಂಡರು ತನ್ನೂರಿನಲ್ಲಿ ಬೇರೂರಿದ್ದ ತಾರತಮ್ಯ ಮಾತ್ರ ಕಡಿಮೆಯಾಗುವುದಿಲ್ಲ. ಅದರಲ್ಲಿಯೂ ಜಾತಿ ಎಂಬ ವಿಷ ದಮನಿತರನ್ನು ಸುಡುತ್ತಿರುತ್ತದೆ. ಇದೆನ್ನೆಲ್ಲ ನೋಡುವ ಅಶೋಕ ಅದರ ವಿರುದ್ಧ ಕಾನೂನಾತ್ಮಕವಾಗಿ ಹೋರಾಟ ಆರಂಭಿಸುತ್ತಾನೆ. ಆದರೆ ಹಣವಂತರು ಅದೆಲ್ಲವನ್ನೂ ಮೆಟ್ಟಿ ನಿಲ್ಲುತ್ತಾರೆ. ಇದರಿಂದ ಬೇಸತ್ತ ಅಶೋಕ ಅನ್ಯಾಯದ ವಿರುದ್ಧ ಸಿಡಿದೇಳುತ್ತಾನೆ. ನೌಕರಿಗೆ ರಾಜೀನಾಮೆ ನೀಡಿ ಜಾತಿಯೆಂಬ ವಿಷ ವರ್ತುಲದ ವಿರುದ್ಧ ಹೋರಾಡುತ್ತಾನೆ. ಅನ್ಯಾಯದ ವಿರುದ್ಧ ಅಶೋಕ ಹೇಗೆ ಜಯಿಸುತ್ತಾನೆ ಎಂಬುದನ್ನು ಸಿನಿಮಾ ನೋಡಿಯೇ ತಿಳಿಯಬೇಕು.

ಎಪ್ಪತ್ತರ ದಶಕದಲ್ಲಿ ಹಳೇ ಮೈಸೂರು ಭಾಗದಲ್ಲಿ ನಡೆದ ಘಟನೆಯನ್ನು ಆಧರಿಸಿ ಈ ಸಿನಿಮಾದ ಕಥೆ ಹೆಣೆಯಲಾಗಿದೆ. ಅದನ್ನು ಅಷ್ಟೇ ಸೊಗಸಾಗಿ ತೆರೆಗೆ ತರಲಾಗಿದೆ. ದಿ ರೈಸ್ ಆಫ್ ಅಶೋಕ ರೆಟ್ರೋ ಲುಕ್‌ನಲ್ಲಿ ಸಾಗುತ್ತದೆ. ಸಿನಿಮಾ ನೋಡುತ್ತಿದ್ದರೆ ಅದೇ ಕಾಲಘಟ್ಟಕ್ಕೆ ಹೋಗಿಬಂದ ಅನುಭವವಾಗುತ್ತದೆ. ನೀನಾಸಂ ಸತೀಶ್ ಕ್ರಾಂತಿಕಾರಿ ಯುವಕನಾಗಿ ಅಬ್ಬರಿಸಿ ಬೊಬ್ಬಿರಿದಿದ್ದಾರೆ. ಈ ಹಿಂದೆ ಎಂದು ನೋಡಿರದ ಸತೀಶ್ ಅವರನ್ನು ಈ ಸಿನಿಮಾದಲ್ಲಿ ಕಣ್ತುಂಬಿಕೊಳ್ಳಬಹುದು. ಸಪ್ತಮಿ ಗೌಡ, ಅಂಬಿಕಾ ಪಾತ್ರದಲ್ಲಿ ಅಪ್ಪಟ ಹಳ್ಳಿ ಹುಡುಗಿಯಾಗಿ ಕಂಗೊಳಿಸಿದ್ದಾರೆ. ಕಾಂತಾರ ಬಳಿಕ ಮತ್ತೊಮ್ಮೆ ಸಪ್ತಮಿಗೆ ಒಳ್ಳೆಯ ಪಾತ್ರವೇ ಸಿಕ್ಕಿದೆ. ಅಷ್ಟೇ ಸೊಗಸಾಗಿ ತಮ್ಮ ಪಾತ್ರವನ್ನು ನಿಭಾಯಿಸಿದ್ದಾರೆ. ಸಂಪತ್ ಮೈತ್ರೇಯ ಖದರ್ ಖಳನಾಗಿ ಅಬ್ಬರಿಸಿದ್ದಾರೆ. ರವಿಶಂಕರ್, ಗೋಪಾಲಕೃಷ್ಣ ದೇಶಪಾಂಡೆ, ಬಿ.ಸುರೇಶ್, ಜಗ್ಗಪ್ಪ ಹೀಗೆ ಎಲ್ಲರೂ ತಮ್ಮ ಪಾತ್ರಗಳಿಗೆ ಜೀವತುಂಬಿ ಅಭಿನಯಿಸಿದ್ದಾರೆ. ಪೂರ್ಣಚಂದ್ರ ತೇಜಸ್ವಿ ಅವರ ಸಂಗೀತ ಚಿತ್ರದ ಕಥೆಗೆ ಹೊಸತನ ತುಂಬಿದೆ. ಅಂತೆಯೇ ಎಪ್ಪತ್ತರ ದಶಕವನ್ನು ಸೆರೆಹಿಡಿದಿರುವ ಲವಿತ್ ಅವರ ಛಾಯಾಗ್ರಹಣಕ್ಕೂ ಫುಲ್ ಮಾರ್ಕ್ಸ್ ನೀಡಬಹುದು. ಒಟ್ಟಾರೆ ದಿ ರೈಸ್ ಆಫ್ ಅಶೋಕ ಚಂದನವನದ ಸುಂದರ ಸಿನಿಮಾಗಳಲ್ಲಿ ಒಂದಾಗಿದೆ.

ತುಳುನಾಡಿನ ಸಂಸ್ಕೃತಿಯ ಸಂಭ್ರಮ

ಚಿತ್ರ: ವೀರ ಕಂಬಳ
ನಿರ್ದೇಶನ: ರಾಜೇಂದ್ರಸಿಂಗ್ ಬಾಬು
ನಿರ್ಮಾಣ: ಡಾ.ವಿನಿತಾ ವಿಜಯ್ ಕುಮಾರ್ ರೆಡ್ಡಿ, ದಿವ್ಯಾ, ಅರುಣ್ ರೈ ತೊಡಾರ್
ತಾರಾಗಣ: ಆದಿತ್ಯ, ರವಿಶಂಕರ್, ಸ್ವರಾಜ್ ಶೆಟ್ಟಿ, ಗೋಪಿನಾಥ್ ಭಟ್, ನವೀನ್.ಡಿ.ಪಡೀಲ್ ಮುಂತಾದವರು
ರೇಟಿಂಗ್ : 3.5

ತುಳುನಾಡು ಎಂದರೆ ನಮಗೆಲ್ಲ ನೆನಪಾಗುವುದು ಕಂಬಳದ ಸಂಭ್ರಮ. ಕಂಬಳದ ಹಿನ್ನೆಲೆ, ಆಚಾರ ವಿಚಾರ ಇದೆಲ್ಲವನ್ನೂ ವೀರ ಕಂಬಳ ಚಿತ್ರದ ಮೂಲಕ ಎಳೆಎಳೆಯಾಗಿ ತೆರೆದಿಡಲಾಗಿದೆ. ಅರವತ್ತ ನಾಲ್ಕು ವರ್ಷಗಳ ಹಿಂದೆ ಕಂಬಳ ನಿಂತಿರುತ್ತದೆ, ಕರಾವಳಿಯ ಹೆಮ್ಮೆಯ ಪ್ರತೀಕವಾದ ಕಂಬಳವನ್ನು ಮತ್ತೆ ಆರಂಭಿಸುವ ತಯಾರಿಯೊಂದಿಗೆ ಸಿನಿಮಾದ ಕಥೆ ತೆರೆದುಕೊಳ್ಳುತ್ತದೆ. ಕಂಬಳ ಆರಂಭವಾಗದಂತೆ ಕೆಲವರು ತಡೆಯುವ ಷಡ್ಯಂತ್ರವನ್ನೂ ನಡೆಸುತ್ತಾರೆ, ಹೀಗಿರುವಾಗಲೇ ಎರಡು ದೊಡ್ಡ ಕುಟುಂಬಗಳ ಹಳೆಯ ಜಿದ್ದು ಆರಂಭವಾಗುತ್ತದೆ. ಅದರ ಜತೆಗೆ ಕಂಬಳದ ಮೇಲೆ ಭೂಗತ ಲೋಕದ ಬೆಟ್ಟಿಂಗ್ ದಂಧೆಯ ವಕ್ರದೃಷ್ಟಿಯೂ ಬೀಳುತ್ತದೆ. ಇದೆಲ್ಲವನ್ನೂ ನಿಭಾಯಿಸಿ ಕೊನೆಗೂ ಕಂಬಳ ಆರಂಭವಾಗುತ್ತದೆ. ಕಂಬಳವನ್ನು ಸಂಸ್ಕೃತಿಯ ಪ್ರತೀಕ ಎಂದು ತಿಳಿಯದ ಕೆಲವರು ಇಲ್ಲಿ ಗೆಲುವೊಂದೇ ಮುಖ್ಯ ಎಂದುಕೊಂಡಿರುತ್ತಾರೆ. ಅದಕ್ಕಾಗಿ ಕೆಲವರು ಯಾವೆಲ್ಲಾ ವಾಮಮಾರ್ಗ ಹಿಡಿಯುತ್ತಾರೆ ಎಂಬುದನ್ನು ಇಲ್ಲಿ ಕಟ್ಟಿಕೊಡಲಾಗಿದೆ. ಕಂಬಳ ಕೇವಲ ಕ್ರೀಡೆಯಾಗಿರದೇ ಅದು

ಕರಾವಳಿಯ ಸಂಸ್ಕೃತಿಯ ಭಾಗವಾಗಿರುವುದನ್ನು ಚಿತ್ರದಲ್ಲಿ ಸುಂದರವಾಗಿ ಚಿತ್ರಿಸಲಾಗಿದೆ. ಕಂಬಳವನ್ನು ನೋಡದ ಪ್ರೇಕ್ಷಕರಿಗೆ ವೀರ ಕಂಬಳ ಹೊಸ ಅನುಭವವನ್ನು ನೀಡುತ್ತದೆ. ಒಮ್ಮೆ ತುಳುನಾಡನ್ನು ಸಂಚರಿಸಿ ಬಂದಂತಾಗುತ್ತದೆ.

ನಿರ್ದೇಶಕ ರಾಜೇಂದ್ರ ಸಿಂಗ್ ಬಾಬು, ವೀರ ಕಂಬಳ ಚಿತ್ರಕ್ಕಾಗಿ ಸಾಕಷ್ಟು ಶ್ರಮವಹಿಸಿದ್ದಾರೆ ಎನ್ನುವುದು ಸಿನಿಮಾದ ಪ್ರತಿ ಸನ್ನಿವೇಶದಲ್ಲಿಯೂ ಅರಿವಾಗುತ್ತದೆ. ಕಂಬಳಕ್ಕಾಗಿ ನಡೆಯುವ ಸಿದ್ಧತೆ, ಕೋಣಗಳ ಆಯ್ಕೆ, ಅದನ್ನು ಸಾಕುವ ರೀತಿ, ಕಂಬಳದ ಎಮ್ಮೆಗಳ ಜತೆಗೆ ಓಡುವ ಓಟಗಾರನ ಮನಸ್ಥಿತಿ ಹೇಗಿರುತ್ತದೆ ಹೀಗೆ ಎಲ್ಲಾ ಅಂಶಗಳು ತೆರೆಯಲ್ಲಿ ಮನಕ್ಕೆ ಮುಟ್ಟುವಂತೆ ನಿರೂಪಿಸಲಾಗಿದೆ. ಕಂಬಳ ಇಲ್ಲಿ ಮನರಂಜನೆಯಾಗಿರದೆ ಅದರ ಇತಿಹಾಸ ತೆರೆಯಲ್ಲಿ ಹಾದು ಹೋಗುತ್ತದೆ.

ನಟ ಆದಿತ್ಯ ಈ ಚಿತ್ರದಲ್ಲಿ ಹಿಂದೆಂದೂ ಕಾಣದ ಹೊಸ ಲುಕ್‌ನಲ್ಲಿ ಮಿಂಚಿದ್ದಾರೆ, ಆದಿ ಸತ್ಯ ಎಂಬ ಅಂಡರ್ ವರ್ಲ್ಡ್ ಡಾನ್ ಪಾತ್ರದಲ್ಲಿ ಕಂಗೊಳಿಸಿದ್ದಾರೆ. ಉಳಿದಂತೆ ಪ್ರಕಾಶ್ ರೈ, ರವಿಶಂಕರ್, ಗೋಪಿನಾಥ್ ಭಟ್, ಶ್ರೀನಿವಾಸ್ ಗೌಡ, ಸ್ವರಾಜ್ ಶೆಟ್ಟಿ, ನವೀನ್ ಪಡೀಲ್, ಸೇರಿದಂತೆ ಎಲ್ಲರೂ ತಮ್ಮ ಪಾತ್ರಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ. ವೀರ ಕಂಬಳ ನಮ್ಮ ಮಣ್ಣಿನ ಕಥೆಯಾಗಿದ್ದು ಎಲ್ಲರೂ ನೋಡಲೇಬೇಕಾದ ಸಿನಿಮಾವಾಗಿದೆ.

ಕವಳದಲ್ಲಿ ರಕ್ತಚರಿತ್ರೆ

ಕವಳ ಶೀರ್ಷಿಕೆಯಲ್ಲಿ ಸಿನಿಮಾ ಸೆಟ್ಟೇರಿದ್ದು, ಈ ಸಿನಿಮಾದ ಪೋಸ್ಟರ್ ನೋಡಿ ಶಿವಣ್ಣ ಮೆಚ್ಚಿಕೊಂಡಿದ್ದರು. ಈ ಚಿತ್ರದ ಮುಹೂರ್ತ ಸಮಾರಂಭ ಕಾಡು ಮಲ್ಲಿಕಾರ್ಜುನ ದೇವಸ್ಥಾನದಲ್ಲಿ ನೆರವೇರಿತು. ಕ್ರೇಜಿಸ್ಟಾರ್ ರವಿಚಂದ್ರನ್, ಕವಳ ಚಿತ್ರದ ಮೊದಲ ದೃಶ್ಯಕ್ಕೆ ಕ್ಲಾಪ್ ಮಾಡಿ ಶುಭಕೋರಿದರು. ಆರ್.ಎಕ್ಸ್. ಸೂರಿ, ಭೈರಾದೇವಿ ಚಿತ್ರಗಳನ್ನು ನಿರ್ದೇಶಿಸಿದ್ದ ಶ್ರೀಜೈ ಈ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ರಾಧಾಕೃಷ್ಣ ಆರ್ಟ್ಸ್ ಹಾಗೂ ಡ್ರೀಮ್ ವರ್ಲ್ಡ್ ಸಿನಿಮಾಸ್ ಮೂಲಕ ಬಿ.ಲೋಕೇಶ್ ಹಾಗೂ ಅಡವಯ್ಯ ಪೂಜಾರ್ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡುತ್ತಿದ್ದಾರೆ. ಸಂದೀಪ್ ನಾಗರಾಜ್ ನಾಯಕನಾಗಿ ನಟಿಸುತ್ತಿದ್ದು, ಸಮುದ್ರ ಖನಿ ಕೂಡ ಪ್ರಮುಖ ಪಾತ್ರದಲ್ಲಿ ಅಭಿನಯಿಸುತ್ತಿದ್ದಾರೆ. ಅಚ್ಯುತ್ ಕುಮಾರ್, ರಂಗಾಯಣ ರಘು, ನಾಜರ್, ಈಶ್ವರಿ ರಾವ್, ಕಿಶೋರ್, ಶ್ರವಣ್, ಗಿಲ್ಲಿನಟ, ಪ್ರಕಾಶ್ ತುಮ್ಮಿನಾಡು ಮುಂತಾದವರು ತಾರಾಗಣದಲ್ಲಿದ್ದಾರೆ.

ಒಂದಷ್ಟು ನೈಜ ಘಟನೆಗಳನ್ನು ಸ್ಫೂರ್ತಿಯಾಗಿಟ್ಟುಕೊಂಡು ಈ ಚಿತ್ರದ ಕಥೆ ಹೆಣೆದಿದ್ದೇನೆ. ಯುಗಾದಿಯ ನಂತರ ಚಿತ್ರೀಕರಣ ಆರಂಭವಾಗಲಿದೆ. ಕಾಶಿ, ಹೈದರಾಬಾದ್ ಸೇರಿದಂತೆ ಹಲವು ಕಡೆ ಶೂಟಿಂಗ್ ನಡೆಸಲಾಗುವುದು ಎಂದು ನಿರ್ದೇಶಕ ಶ್ರೀಜೈ ಹೇಳಿದರು.

ನನಗೆ ಮೊದಲಿನಿಂದಲೂ ಸಿನಿಮಾ ಬಗ್ಗೆ ಒಲವಿತ್ತು. ಒಂದು ಒಳ್ಳೆಯ ಸಿನಿಮಾ ಮಾಡಬೇಕು ಅಂದುಕೊಂಡಿದ್ದೆ, ಅದೇ ಸಮಯಕ್ಕೆ ನಿರ್ದೇಶಕರು ಈ ಕಥೆ ಹೇಳಿದರು, ಕಥೆ ಮೆಚ್ಚಿ ಸಿನಿಮಾ ನಿರ್ಮಾಣ ಮಾಡಲು ಒಪ್ಪಿದೆ ಎಂದು ನಿರ್ಮಾಪಕ ಲೋಕೇಶ್ ಸಂತಸದಿಂದ ನುಡಿದರು. ಎ.ಕರುಣಾಕರನ್ ಛಾಯಾಗ್ರಹಣ, ಕೆ.ಕೆ.ಸೆಂಥಿಲ್ ಪ್ರಸಾದ್ ಸಂಗೀತ ನಿರ್ದೇಶನ, ಅರ್ಜುನ್ ರಾಜ್, ವಿಕ್ರಮ್ ಮೋರ್ ಸಾಹಸ ನಿರ್ದೇಶನ, ಕಲೈ, ಮುರಳಿ ನೃತ್ಯ ನಿರ್ದೇಶನ, ದೀಪು ಎಸ್.ಕುಮಾರ್ ಸಂಕಲನ ಈ ಚಿತ್ರಕ್ಕಿದೆ.

ಪಯಣದಲಿ ನಗುವಿನ ಅಲೆ

ಚಿತ್ರ : ಸೂಪರ್ ಹಿಟ್
ನಿರ್ದೇಶನ : ವಿಜಯಾನಂದ್
ನಿರ್ಮಾಣ : ಉಮೇಶ್
ತಾರಾಗಣ : ಗಿಲ್ಲಿ ನಟ, ಗೌರವ್ ಶೆಟ್ಟಿ, ಶ್ವೇತಾ, ಸಾಧು ಕೋಕಿಲ ಪ್ರಮೋದ್ ಶೆಟ್ಟಿ ಮುಂತಾದವರು.
ರೇಟಿಂಗ್ : ★★★

ಬಿಗ್‌ಬಾಸ್ ಮನೆಗೆ ಹೋಗಿ ಬಂದ ಬಳಿಕ ಗಿಲ್ಲಿ ನಟನಿಗೆ ಬಲು ಬೇಡಿಕೆ ಇದೆ. ಗಿಲ್ಲಿ ಅಭಿನಯದ ಸಿನಿಮಾಗಳು ಒಂದೊಂದಾಗಿ ತೆರೆಗೆ ಬರುತ್ತಿವೆ. ಅಂತೆಯೇ ಈಗ ಸೂಪರ್ ಹಿಟ್ ಸಿನಿಮಾ ಬಿಡುಗಡೆಯಾಗಿದೆ. ಸೂಪರ್ ಹಿಟ್ ಸಿನಿಪ್ರಿಯರನ್ನು ನಗುವಿನ ಅಲೆಯಲ್ಲಿ ತೇಲಿಸುತ್ತಿದೆ. ಸತ್ಯ, ಭೂಪತಿ, ಮತ್ತು ಅಪ್ಸರಾ ಅದ್ಯಾವುದೋ ಪಜೀತಿಯಲ್ಲಿ ಸಿಲುಕಿರುತ್ತಾರೆ. ಅದರಿಂದ ಹೇಗಾದರೂ ಮಾಡಿ ತಪ್ಪಿಸಿಕೊಳ್ಳಬೇಕು ಎಂದುಕೊಂಡಾಗ ಅದೊಂದು ಕಾರು ಸಿಗುತ್ತದೆ. ಆ ಕಾರಿನಿಂದ ಇನ್ನೂ ಒಂದಷ್ಟು ಸಮಸ್ಯೆಗಳಿಗೆ ಸಿಲುಕುತ್ತಾರೆ. ಅದೊಂದು ಕೊಲೆಯ ಪ್ರಕರಣ ಕೂಡ ಇವರನ್ನೇ ಸುತ್ತಿಕೊಳ್ಳುತ್ತದೆ. ಕಾರಿನಲ್ಲಿ ಸಾಗುತ್ತಾ, ಒಂದೊಂದೇ ಪಾತ್ರಗಳನ್ನು ಇವರನ್ನು ಸಂದಿಸುತ್ತವೆ, ಇವರ ಜತೆಯಾಗಿ ಸಾಗುತ್ತಾರೆ. ಈ ನಡುವೆಯೇ ಈ ಮೂವರ ಫ್ಲಾಶ್ ಬ್ಯಾಕ್ ಸ್ಟೋರಿ ತೆರೆದುಕೊಳ್ಳುತ್ತದೆ. ಮೊದಲಾರ್ಧದಲ್ಲಿ ಹಾಸ್ಯಮಯವಾಗಿ ಸಾಗುವ ಕಥೆ, ದ್ವಿತಿಯಾರ್ಧದಲ್ಲಿ ಕಾಮಿಡಿಯ ಜತೆಗೆ ಗಂಭೀರ ತಿರುವು ಪಡೆದುಕೊಳ್ಳುತ್ತದೆ. ಅಷ್ಟಕ್ಕೂ ಈ ಮೂವರು ಸಿಲುಕಿದ ಸಂದಿಗ್ಧ ಪರಿಸ್ಥಿತಿ ಯಾವುದು. ಅದರಿಂದ ಇವರು ಹೇಗೆ ಬಚಾವಾಗುತ್ತಾರೆ ಎಂಬುದನ್ನು ಸಿನಿಮಾ ನೋಡಿಯೇ ತಿಳಿಯಬೇಕು.

ಒಂದಷ್ಟು ನೈಜ ಅಂಶಗಳನ್ನು ಆಧರಿಸಿ ಸೂಪರ್ ಹಿಟ್ ಚಿತ್ರದ ಕಥೆ ಹೆಣೆಯಲಾಗಿದೆ. ಹಾಗಾಗಿ ಪ್ರಸ್ತುತ ನಡೆದ ಕೆಲವು ಸನ್ನಿವೇಶಗಳು ಗಮನಸೆಳೆಯುತ್ತವೆ. ನಿರ್ದೇಶಕ ವಿಜಯಾನಂದ್ ಕಾಮಿಡಿ ಕಥೆಗೆ ಥ್ರಿಲ್ಲರ್ ಅಂಶಗಳನ್ನು ಬೆರೆಸಿ ಅದನ್ನು ಎಲ್ಲರಿಗೂ ರುಚಿಸುವಂತೆ ಕಟ್ಟಿಕೊಡವಲ್ಲಿ ಯಶಸ್ವಿಯಾಗಿದ್ದಾರೆ. ಗೌರವ್ ಶೆಟ್ಟಿ ಕಾಮಿಡಿಯಲ್ಲಿ ಕಮಾಲ್ ಮಾಡಿದ್ದಾರೆ. ಅಂತೆಯೇ ಗಿಲ್ಲಿ ಕೂಡ ಪಂಚಿಂಗ್ ಡೈಲಾಗ್ ಹೊಡೆದು ರಂಜಿಸುತ್ತಾರೆ. ಶ್ವೇತಾ ಮುಗ್ಧತೆಯಲ್ಲಿ ಮನಗೆಲ್ಲುತ್ತಾರೆ. ಪಯಣದಲ್ಲಿ ಸಾಗುವ ಈ ಕಥೆಯಲ್ಲಿ ಸಾಧಕೋಕಿಲ, ಪ್ರಮೋದ್ ಶೆಟ್ಟಿ, ಟೆನ್ನಿಸ್ ಕೃಷ್ಣ, ಗೋವಿಂದೇ ಗೌಡ ಹೀಗೆ ಹಲವರು ಬಂದು ಹಾಸ್ಯದ ಮೂಲಕ ರಂಜಿಸುತ್ತಾರೆ. ಹಿನ್ನೆಲೆ ಸಂಗೀತ ಚಿತ್ರಕ್ಕೆ ಶಕ್ತಿತುಂಬಿದೆ. ಛಾಯಾಗ್ರಹಣಕ್ಕೂ ಫುಲ್ ಮಾರ್ಕ್ಸ್ ನೀಡಬಹುದು. ಒಟ್ಟಾರೆ ಸೂಪರ್ ಹಿಟ್ ಚಿತ್ರವನ್ನು ಮನೆಮಂದಿಯೆಲ್ಲಾ ಒಟ್ಟಾಗಿ ಕುಳಿತು ನೋಡಿ ಆನಂದಿಸಬಹುದು.

ವಿಶ್ವವಾಣಿ ಬೆಂಗಳೂರು 28-02-2026 ಶನಿವಾರ @vishwavaninews

ಆರಾಮ

ಅನುದಿನವೂ ವಿರಾಮಕ್ಕೆ ಒಂದು ನೆಪ

ಚಿತ್ತವಿಹಾರ

ಕುಡಿತದ ಚಟ, ಬೆಂಕಿ ಜತೆ ಆಟ!

ಶುರು ಸಹವಾಸಿಗಳ
ಬಲವಂತಕ್ಕೆ...
ಮೊದಲ ಗುಟುಕೆಲ್ಲ
ಉರಿ ಕಂಠಕ್ಕೆ...
ಅಮಲು ಮನಕೆ ಹಿತ
ಬಲಿಷ್ಠ ಅಮಲಿನ ಹಿಡಿತ!...
ಬಲಿತಂತೆ ಚಟ
ದಿನದಲ್ಲೇ ಕುಡಿತ...
ಕುಡೀತಾ ಕುಡೀತಾ
ಕುಡಿತಕ್ಕೇ ದುಡಿತ...

ಹೆಂಡತಿ ಮಕ್ಕಳ ಮರೆತ
ಆಡುತ್ತ ಬೈಗಳ ಮಾತ
ಬಾಳು ಗೋಳಾಗುವುದು
ಖಂಡಿತ...

• **ಎಚ್. ಪ್ರಹ್ಲಾದ ರಾವ್, ಬೆಂಗಳೂರು**

ಅವಳಾರು ಗೊತ್ತಾ?

ಮೃದು ಮನಸಿನ
ಹುಡುಗಿ ಅವಳು
ಮಧುರ ಮಾತಿನವಳು...



ಸದಾ ಮುಗುಳುನಗುವ ತೋರಿ
ಮರುಳು ಮಾಡುವವಳು..
ವಾರೆಗಣ್ಣ ನೋಟ ಬೀರಿ
ಮೋಡಿ ಮಾಡಿದವಳು...
ಬೇರೆ ಯಾರೂ ಅಲ್ಲ
ಮನಸೂರೆಗೊಂಡವಳು...
ಒಮ್ಮೆ ಹೇಳಿಬಿಡಲೇ
ನನಗೆ ನೀನೇ ಇಷ್ಟ ಅಂತ...
'ಹೂಂ' ಅಂದರೆ ತಾಳಿ ಕಟ್ಟಿ
ಮಾಡಿಕೊಳುವೆ ಸ್ವಂತ...

• **ಶೋಭಾ ಪುರೋಹಿತ್**

ಹಸಿರು ದೀಪ ಬೆಳಗುವುದು

ತಲ್ಲಣಿಸದಿರು ಕಂಡ್ಯ ತಾಳುಮನವೇ...

• **ಲಕ್ಷ್ಮೀಕಾಂತ್ ಎಲ್.ವಿ., ತುಮಕೂರು**

ನಗರದ ಯಾವುದೋ ಒಂದು ಕಿಕ್ಕಿರಿದ ಜಂಕ್ಷನ್‌ನಲ್ಲಿ ನಿಂತು ಗಮನಿಸಿ. ಅಲ್ಲಿ ಬಣ್ಣ ಬಣ್ಣದ ವಾಹನಗಳ ಸಾಗರ, ಹಾರ್ನ್‌ಗಳ ಕರ್ಕಶ ಸದ್ದು, ಅಸಹನೆಯಿಂದ ಉಸಿರುಬಿಡುತ್ತಿರುವ ಎಂಜಿನ್‌ಗಳು ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಮುಂದೆ ಹೋಗಲೇಬೇಕು ಎನ್ನುವ ತರಾತುರಿಯ ಮನುಷ್ಯರು. ಈ ದೃಶ್ಯ ಕೇವಲ ರಸ್ತೆಯದ್ದಲ್ಲ; ಇದು ನಮ್ಮ ಇಂದಿನ ವರ್ತಮಾನದ ಬದುಕಿನ ಪ್ರತಿಬಿಂಬ. ನಾವು ಇಂದು ಯಾವುದೋ ಅನಿವಾರ್ಯ ಓಟಕ್ಕೆ ಬಿದ್ದಿದ್ದೇವೆ. ಆ ಓಟದಲ್ಲಿ ನಮ್ಮನ್ನು ನಾವು ಮರೆತಿದ್ದೇವೆ. ಬದುಕಿನ ಈ ಟ್ರಾಫಿಕ್‌ನಲ್ಲಿ ನಮಗೆ ಸಿಗುವ ಕೆಂಪುದೀಪಗಳು ನಮ್ಮನ್ನು ತಡೆಯಲು ಬಂದ ಶಿಕ್ಷೆಗಳಲ್ಲ, ಬದಲಿಗೆ ನಾವು ಎಲ್ಲಿಗೆ ಸಾಗುತ್ತಿದ್ದೇವೆ ಎಂದು ಯೋಚಿಸಲು ಪ್ರಕೃತಿ ನೀಡುವ ಸಣ್ಣ ವಿರಾಮಗಳು.

ವೇಗ ಮತ್ತು ಆತುರದ ನಡುವೆ..

ಇಂದಿನ ಕಾಲಘಟ್ಟದಲ್ಲಿ ವೇಗ ಎನ್ನುವುದು ಯಶಸ್ಸಿನ ಪರ್ಯಾಯ ಪದವಾಗಿಬಿಟ್ಟಿದೆ. ಬೆಳಗ್ಗೆ ಎದ್ದ ಕೂಡಲೇ ಮೊಬೈಲ್ ನೋಟಿಫಿಕೇಶನ್‌ಗಳ ಟ್ರಾಫಿಕ್‌ನಿಂದ ಆರಂಭವಾಗುವ ನಮ್ಮ ದಿನ, ರಾತ್ರಿ ಮಲಗುವವರೆಗೂ ಯಾವುದೋ ಒಂದು ಗುರಿಯ ಬೆನ್ನತ್ತಿ ಸಾಗುತ್ತದೆ. ಪಕ್ಕದ ವಾಹನ ನಮಗಿಂತ ಒಂದು ಇಂಚು ಮುಂದೆಹೋದರೆ ನಮಗೆ ಆಗುವ ಉರಿ, ಆತಂಕ ಅಷ್ಟಿಷ್ಟಲ್ಲ. ಬದುಕಿನಲ್ಲೂ ಅಷ್ಟೇ; ಸಮಕಾಲೀನರ ಸಾಧನೆಗಳನ್ನು ನೋಡಿ, 'ನಾನು ಇನ್ನೂ ಇಲ್ಲೇ ಇದ್ದೇನಲ್ಲ?' ಎಂಬ ಕೀಳರಿಮೆ ನಮ್ಮನ್ನು ಕಾಡತೊಡಗುತ್ತದೆ. ಆದರೆ ಮರೆಯಬಾರದ ಸತ್ಯವೆಂದರೆ, ಪ್ರತಿಯೊಂದು ವಾಹನಕ್ಕೂ ತನ್ನದೇ ಆದ ಗಮ್ಯಸ್ಥಾನವಿರುತ್ತದೆ. ಬಸ್ಸು ನಿಲ್ಲುವ ನಿಲ್ದಾಣವೇ ಬೇರೆ, ಕಾರು ತಲುಪುವ ಮನೆಯೇ ಬೇರೆ. ನಮ್ಮ ಬದುಕಿನ ಹಾದಿ ಮತ್ತು ವೇಗ ಎರಡೂ ವೈಯಕ್ತಿಕವಾದವು. ಇನ್ನೊಬ್ಬರ ಹಸಿರು ದೀಪವನ್ನು ನೋಡಿ ನಮ್ಮ ಕೆಂಪು ದೀಪಕ್ಕೆ ಶಪಿಸುವುದು ಎಷ್ಟು ಸರಿ?

ಅದು ಅಡೆತಡೆಯಲ್ಲ, ಅವಲೋಕನ

ಟ್ರಾಫಿಕ್ ಸಿಗ್ನಲ್‌ನಲ್ಲಿ ಕೆಂಪುದೀಪ ಬಿದ್ದಾಗ ನಾವೇನು ಮಾಡುತ್ತೇವೆ? ಕೆಲವರು ಸಿಟ್ಟಿನಿಂದ ಸ್ಟೀರಿಂಗ್ ಕುಟ್ಟುತ್ತಾರೆ, ಇನ್ನು ಕೆಲವರು ಅಡ್ಡದಾರಿಯಲ್ಲಿ ನುಗ್ಗಲು ಪ್ರಯತ್ನಿಸಿ ಅಪಘಾತ ಮಾಡಿಕೊಳ್ಳುತ್ತಾರೆ. ಆದರೆ ಜಾಣನಾದವನು ಆ ಕ್ಷಣದಲ್ಲಿ ತನ್ನ ವಾಹನದ ಎಂಜಿನ್ ಆರಿಸಿ, ಸುತ್ತಲಿನ ಪರಿಸರವನ್ನು ಗಮನಿಸುತ್ತಾನೆ. ಬದುಕಿನಲ್ಲೂ ಅಡೆತಡೆಗಳು ಎದುರಾದಾಗ, ಕೆಲಸ ಕೈಗೂಡದಿದ್ದಾಗ ಅಥವಾ ಆರ್ಥಿಕ-ಸಾಮಾಜಿಕ ಸಂಕಷ್ಟಗಳು ಬಂದಾಗ ಅದು ಕೆಂಪು ದೀಪವಿದ್ದಂತೆ. ಈ ಸಮಯವು ನಮಗೆ ಸೋಲನ್ನು ಒಪ್ಪಿಕೊಳ್ಳಲು ಹೇಳುತ್ತಿಲ್ಲ, ಬದಲಿಗೆ 'ಸ್ವಲ್ಪ ತಾಳು, ಉಸಿರು ತಗೋ' ಎಂದು ಹೇಳುತ್ತಿದೆ. ಜೀವನದ ಅನಿವಾರ್ಯ ನಿಲುಗಡೆಗಳು ನಮ್ಮನ್ನು ನಾವು ತಿದ್ದಿಕೊಳ್ಳಲು ಮತ್ತು ಮುಂದಿನ ದಾರಿಗೆ ಸಿದ್ಧರಾಗಲು ಇರುವ ಅವಕಾಶಗಳು.

ಕಾಯುವಿಕೆಯ ಸೌಂದರ್ಯ

'ತಾಳಿದವನು ಬಾಳಿಯಾನು' ಎಂದರು ನಮ್ಮ ಹಿರಿಯರು. ಇಂದು ನಮಗೆ ತಾಳ್ಮೆ ಎನ್ನುವುದು ಡಿಕ್ಷ್ನರಿಯಲ್ಲಿ ಮಾತ್ರ ಇರುವ ಪದವಾಗಿದೆ. ಆನ್‌ಲೈನ್‌ನಲ್ಲಿ ಆರ್ಡರ್ ಮಾಡಿದ ಆಹಾರ ಹತ್ತು ನಿಮಿಷ ತಡವಾದರೆ ನಾವು ಚಡಪಡಿಸುತ್ತೇವೆ. ಆದರೆ ಪ್ರಕೃತಿಯನ್ನು ನೋಡಿ; ಒಂದು ಬೀಜ ಮರವಾಗಲು ವರ್ಷಗಟ್ಟಲೆ ಕಾಯಬೇಕು, ಮಗು ಹುಟ್ಟಲು ಒಂಬತ್ತು ತಿಂಗಳು ಬೇಕು. ಬದುಕಿನ ದೊಡ್ಡ ಸಾಧನೆಗಳೆಲ್ಲವೂ ದೀರ್ಘ ಕಾಯುವಿಕೆಯ ಫಲಗಳೇ ಆಗಿವೆ. ಹಸಿರು ದೀಪ ಬೀಳುವ ಮುನ್ನ ಇರುವ ಆ ಹಳದಿ ದೀಪ ನಮಗೆ ಈ ಎಚ್ಚರಿಕೆ ನೀಡುತ್ತದೆ: 'ಸನ್ನದ್ಧರಾಗಿರಿ, ನಿಮ್ಮ ಸಮಯ ಹತ್ತಿರದಲ್ಲಿದೆ'. ಈ ನಿರೀಕ್ಷೆಯಲ್ಲೇ ಒಂದು ಬಗೆಯ ಮಾಧುರ್ಯವಿದೆ. ಕಾಯುವಿಕೆ ನಮ್ಮನ್ನು ಮಾಗಿಸುತ್ತದೆ, ಅನುಭವಗಳ ಮೂಲಕ ನಮ್ಮನ್ನು ಗಟ್ಟಿಗೊಳಿಸುತ್ತದೆ.

ವರ್ತಮಾನದ ವಾಸ್ತವ

ಇಂದಿನ ಯುವಪೀಳಿಗೆಗೆ ಸಾಮಾಜಿಕ ಜಾಲತಾಣ ಗಳೇ ಒಂದು ದೊಡ್ಡ ಟ್ರಾಫಿಕ್ ಜ್ಯಾಮ್. ಅಲ್ಲಿ ಪ್ರತಿಯೊಬ್ಬರೂ ತಮ್ಮ ಬದುಕಿನ ಹಸಿರು ದೀಪದ ಕ್ಷಣಗಳನ್ನು ಮಾತ್ರ ಪ್ರದರ್ಶಿಸುತ್ತಾರೆ. ಅವರ ಪ್ರವಾಸಗಳು, ಉದ್ಯೋಗದ ಪ್ರಗತಿ ಅಥವಾ ಹೊಸ ವಸ್ತುಗಳ ಖರೀದಿ ನೋಡಿ ನಮಗೆ 'ನಮ್ಮ ಬದುಕು ಸ್ಥಗಿತಗೊಂಡಿದೆ' ಎಂದು ಅನ್ನಿಸಬಹುದು. ಆದರೆ ನೆನಪಿಡಿ, ಸ್ಕ್ರೀನ್ ಮೇಲೆ ಕಾಣುವ ಆ ಹಸಿರು ದೀಪದ ಹಿಂದೆ ಸಾವಿರಾರು ಕೆಂಪು ದೀಪಗಳ ಕಾಯುವಿಕೆಯ ಕಥೆಯಿರುತ್ತದೆ. ವಾಸ್ತವವೆಂದರೆ, ಯಾರ ಬದುಕೂ ಸದಾ ಸರಾಗವಾಗಿರುವುದಿಲ್ಲ. ಎಲ್ಲರ ಹಾದಿಯಲ್ಲೂ ಗುಂಡಿಗಳಿವೆ, ಸ್ಪೀಡ್‌ಬ್ರೇಕರ್‌ಗಳಿವೆ. ನೈಜ ಬದುಕು ಇರುವುದು ಪಕ್ಕದವರನ್ನು ನೋಡುವುದರಲ್ಲಲ್ಲ, ನಮ್ಮ ಹಾದಿಯಲ್ಲಿ ನಾವು ಹೇಗೆ ಸಂಯಮದಿಂದ ಸಾಗುತ್ತೇವೆ ಎಂಬುದರಲ್ಲಿ.

ಹಸಿರು ದೀಪ ಬೆಳಗುತ್ತದೆ

ಕೊನೆಯದಾಗಿ, ಬದುಕಿನ ಟ್ರಾಫಿಕ್‌ನಲ್ಲಿ ಸಿಲುಕಿಕೊಂಡಾಗ ಅತಿಶಯೋಕ್ತಿ ಅಥವಾ ಹತಾಶೆಗೆ ಒಳಗಾಗುವ ಅಗತ್ಯವಿಲ್ಲ. ಕೆಂಪು ದೀಪ ಶಾಶ್ವತವಲ್ಲ ಎನ್ನುವುದು ಸಂಚಾರ ನಿಯಮದಷ್ಟೇ ಸತ್ಯವಾದ ಜೀವನ ನಿಯಮ. ರಾತ್ರಿಯ ನಂತರ ಹಗಲು ಬರುವಂತೆ, ಕಷ್ಟದ ನಂತರ ಸುಖ ಬರುತ್ತದೆ. ನಾವು ಮಾಡಬೇಕಾದ್ದು ಇಷ್ಟೇ: ನಮ್ಮ ಪಥದ ಮೇಲೆ ನಂಬಿಕೆಯಿರಲಿ, ಸ್ಟೀರಿಂಗ್ ಮೇಲಿನ ಹಿಡಿತ ತಪ್ಪದಿರಲಿ ಮತ್ತು ಸರಿಯಾದ ಸಮಯಕ್ಕಾಗಿ ತಾಳ್ಮೆಯಿಂದ ಕಾಯುವ ಶಕ್ತಿಯಿರಲಿ.

ಹಸಿರು ದೀಪ ಬಿದ್ದ ತಕ್ಷಣ ನಮ್ಮ ಬದುಕು ಮತ್ತೆ ವೇಗವನ್ನು ಪಡೆದುಕೊಳ್ಳುತ್ತದೆ. ಅಂದು ನಾವು ಪಟ್ಟ ಶ್ರಮ ಮತ್ತು ತಾಳ್ಮೆ ನಮಗೆ ಯಶಸ್ಸಿನ ಸವಿಯನ್ನು ಉಣಿಸುತ್ತದೆ. ಅಲ್ಲಿಯವರೆಗೆ, ನಿಂತಲ್ಲೇ ಸುಂದರವಾಗಿ ಬದುಕುವುದನ್ನು ಕಲಿಯೋಣ.

• **ವಿಜಯಕುಮಾರ್ ಕಟ್ಟೆ, ಬೆಂಗಳೂರು**

'ನಮ್ಮ ಸಂಸಾರ, ಆನಂದ ಸಾಗರ' ಎಂಬ ಸಾಲು ಎಲ್ಲ ಕುಟುಂಬಗಳ ಧ್ಯೇಯವಾಕ್ಯವಾಗಬೇಕು. ಆದರೆ ಕೆಲವೊಮ್ಮೆ ಇದು ದುಸ್ತರವಾಗು ತ್ತದೆ. ಗಂಡನ ಒರಟುಮಾತು, ಹೆಂಡತಿಯ ಚುಚ್ಚುಮಾತು, ಅಕ್ಕಪಕ್ಕದವರ ಕಿರಿಕಿರಿಯ ಮಾತು, ಮೈದುನನ ಅಥವಾ ವಾರಗಿತ್ತಿಯ ನಿರ್ಲಕ್ಷ್ಯದ ಮಾತುಗಳು, ಅತ್ತೆಯಿಂದ ಹೊಮ್ಮುವ ಮನಸ್ಸಿಗೆ ನೋವುಂಟುಮಾಡುವ ಮಾತು– ಹೀಗೆ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಇದು ಒಬ್ಬಿಬ್ಬರ ಸಮಸ್ಯೆಯಲ್ಲ, ಸಾಕಷ್ಟು ಸಂಸಾರಗಳ ಕಥೆ-ವ್ಯಥೆ!

'ಸಂಬಂಧಗಳೆಂದರೆ ಸಂಭ್ರಮಕ್ಕೆ ಮೂಲಕಾರಣ, ಒಟ್ಟಾಗಿ ಬಾಳಿದರೆ ಅದುವೇ ಸೊಗಸು' ಎಂಬ ಗ್ರಹಿಕೆ ಯನ್ನು ಹುಸಿಯಾಗಿಸುತ್ತ, ಎಲ್ಲರ ಮನದಲ್ಲೂ ಸಂಕಟದ ಬೀಜವನ್ನು ಬಿತ್ತಿ ಬೆಳೆದುಬಿಡುತ್ತವೆ ಮೇಲೆ ಉಲ್ಲೇಖಿಸಿರುವ ಬಗೆಬಗೆಯ ಕೊಂಕು ಮಾತುಗಳು. ಒಂದು ಕುಟುಂಬವೆಂದ ಮೇಲೆ ವಿಭಿನ್ನ ವಯೋ ಮಾನದ ಮತ್ತು ವಿಭಿನ್ನ ಮನೋ ಧರ್ಮದ ಸದಸ್ಯರು ಅಲ್ಲಿ ಇದ್ದೇ ಇರುತ್ತಾರೆ. ಅಂದರೆ, ಗಂಡ– ಹೆಂಡತಿ, ಮಕ್ಕಳು, ತಂದೆ-ತಾಯಿ, ಅತ್ತೆ-ಮಾವ, ಅಣ್ಣ-ತಮ್ಮಂದಿರು, ಅಕ್ಕ-ತಂಗಿಯರು, ಅತ್ತಿಗೆ-ನಾದಿನಿ, ಭಾವ-ಮೈದುನ ಹೀಗೆ ವಿವಿಧ ತೆರನಾದ ಸಂಬಂಧಗಳು ಹಾಸುಹೊಕ್ಕಾಗಿರುವ ಮನೆಯೊಂದರಲ್ಲಿ ಆಗಾಗ ಸಣ್ಣಪುಟ್ಟ ವಿರಸ, ಜಗಳಗಳು ಆಗಬಹುದು. ಆದರೆ ಅದನ್ನು ಅಲ್ಲಲ್ಲೇ ನಿವಾರಿಸಿಕೊಳ್ಳುವ ಬದಲು ದೊಡ್ಡದು ಮಾಡಿಕೊಂಡರೆ, ಉರಿಯುವ ಬೆಂಕಿಗೆ ತುಪ್ಪವನ್ನು ಸುರಿದ ಹಾಗೆ ಅದು ಇಡೀ ಕುಟುಂಬದ ನೆಮ್ಮದಿಯನ್ನೇ ಆಪೋಶನ ತೆಗೆದುಕೊಂಡುಬಿಡುತ್ತದೆ. ಭೌತಿಕ ವಸ್ತುಗಳು ಮುರಿದರೆ ಅವನ್ನು ಜೋಡಿಸಬಹುದು, ಆದರೆ ಮುರಿದುಹೋದ ಮನಸ್ಸುಗಳನ್ನು ಒಂದುಮಾಡುವುದು ಹರಸಾಹಸದ ಕೆಲಸ.

ಸಂಸಾರದಲ್ಲಿ ವಿರಸ ಹೆಚ್ಚಾಗದಂತೆ ನೋಡಿಕೊಳ್ಳುವ ಔಷಧಿಯೆಂದರೆ ಒರಟಾಗಿ ಮಾತನಾಡದಿರುವುದು. ಯಾವುದೇ ವಿಷಯವನ್ನು ಚುಚ್ಚುಮಾತಿನಂತೆ ಹೇಳುವ ಬದಲು, ಸರಳವಾಗಿ-ನೇರವಾಗಿ-ಮೃದುವಾಗಿ' ಹೇಳಿದರೆ ಸಮಸ್ಯೆ ಉಲ್ಬಣವಾಗುವುದಿಲ್ಲ. ಮತ್ತೊಬ್ಬರು ಹೇಳುವ ಮಾತುಗಳನ್ನು ಕೇಳಿಸಿಕೊಳ್ಳುವ ತಾಳ್ಮೆಯೂ ಇಲ್ಲಿ ಬಹುಮುಖ್ಯವಾಗುತ್ತದೆ. ಅದನ್ನು ಬಿಟ್ಟು, 'ನನ್ನದೇ ಮಾತು ನಡೆಯಬೇಕು' ಎಂಬ ಧೋರಣೆ ತಳೆಯುವುದು ಸರಿಯಲ್ಲ. ಮನೆಯ ಸದಸ್ಯರ ಪೈಕಿ ತಪ್ಪು ಮಾಡಿದವರು ಯಾರೇ ಆಗಿರಲಿ, ನಾಲ್ಕಾರು ಜನರು ಇರುವಾಗ ಮೌನವನ್ನು ತಳೆದು, ತಪ್ಪು ಮಾಡಿದಾತನಿಗೆ ಖಾಸಗಿಯಾಗಿ ಬುದ್ಧಿವಾದ ಹೇಳುವುದು ಅಪೇಕ್ಷಣೀಯ. ಅದನ್ನು ಬಿಟ್ಟು, ಎಲ್ಲರೆದುರು ಕೊಂಕುಮಾತು/ಚುಚ್ಚುಮಾತು ಆಡಿದರೆ ಅದು ಮತ್ತಷ್ಟು ನೋವಿಗೆ ಕಾರಣವಾಗುತ್ತದೆ, ವಿರಸವನ್ನು ಹೆಚ್ಚಿಸುತ್ತದೆ.

ಮನುಷ್ಯನ ಮನಸ್ಸು ಗಾಜಿನ ಪಾತ್ರೆಯಿದ್ದಂತೆ. ಇರಿತದ ಮಾತಿನಿಂದಾಗಿ ಒಮ್ಮೆ ಬಿರುಕು ಮೂಡಿದರೆ, ಅದು ಹಾಗೆಯೇ ಉಳಿದುಬಿಡುತ್ತದೆ. 'ನಾನು ಹೇಳಿದ್ದು ಆ ಅರ್ಥದಲ್ಲಿ ಅಲ್ಲ' ಅಂತ ಮತ್ತೊಬ್ಬರು ನಂತರದಲ್ಲಿ ಸಮಜಾಯಿಷಿ ನೀಡಿದರೂ, ಆ ಬಿರುಕು ಮಾಯವಾಗುವುದಿಲ್ಲ. ಆದ್ದರಿಂದ, ತುಟಿಯಿಂದ ಮಾತು ಹೊಮ್ಮುವುದಕ್ಕೂ ಮುಂಚೆ ಕೊಂಚ ಆಲೋಚಿಸೋಣ. ಕೌಟುಂಬಿಕ ಬಾಂಧವ್ಯವು ಸುಮಧುರವಾಗಿರಬೇಕು ಎಂದರೆ ಇದು ಅತ್ಯಗತ್ಯ.

ಪರೀಕ್ಷೆ ಬಗ್ಗೆ ಭಯ ಬೇಡ, ಆತ್ಮವಿಶ್ವಾಸ ಇಟ್ಟುಕೊಳ್ಳಿ

• **ರಂಗನಾಥ ಎನ್. ವಾಲ್ಮೀಕಿ**

ಪರೀಕ್ಷೆ ಇಲ್ಲದ ಜೀವನವನ್ನು ಊಹಿಸಿಕೊಳ್ಳಲೂ ಸಾಧ್ಯವಿಲ್ಲ. ಬದುಕು ಅಂದಮೇಲೆ ನೂರಾರು ಪರೀಕ್ಷೆಗಳು ಎದುರಾಗುತ್ತವೆ. ಅವುಗಳನ್ನು ಎದುರಿಸಬೇಕೇ ಹೊರತು, ಹೆದರಿ ಓಡಬಾರದು ಅಲ್ಲವೇ?

ಪರೀಕ್ಷೆ ಎಂದಾಕ್ಷಣ ಕೆಲವರು ಭಯ ಬೀಳುವುದುಂಟು. ಕಾರಣ– ಯಶಸ್ಸು ಸಿಗುವುದೋ ಇಲ್ಲವೋ? ಎಂಬ ಆತಂಕ. ವಿದ್ಯಾರ್ಥಿ ಜೀವನದಲ್ಲಂತೂ ವಾರ್ಷಿಕ ಪರೀಕ್ಷೆಗಳನ್ನು ಎದುರಿಸಬೇಕಾದ್ದು ಅನಿವಾರ್ಯ. ಮಕ್ಕಳ ಕಲಿಕಾ ಸಾಮರ್ಥ್ಯವನ್ನು ಅಳೆಯುವ ಒಂದು ಸಾಧನವೇ ಈ ಪರೀಕ್ಷೆಗಳು ಎಂಬುದೇನೋ ಒಪ್ಪುವಂಥ ಮಾತೇ. ಆದರೆ 'ನಮ್ಮ ಮಕ್ಕಳು ಹೆಚ್ಚು ಹೆಚ್ಚು ಅಂಕಗಳನ್ನು ಗಳಿಸಬೇಕು' ಎಂಬ ಹಿರಿಯರ ಆಗ್ರಹ ಮತ್ತು ನಿರೀಕ್ಷೆಗಳೇ ವಿದ್ಯಾರ್ಥಿಗಳಲ್ಲಿ ಮತ್ತಷ್ಟು ಭಯವನ್ನು ಹುಟ್ಟಿಹಾಕಿಬಿಡುತ್ತವೆ. ಅದರಲ್ಲಿಯೂ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳಿಗೆ ಇಂದಿನ ದಿನಗಳಲ್ಲಿ ಪರೀಕ್ಷಾ ಒತ್ತಡ ಅಧಿಕವಾಗಿಬಿಟ್ಟಿದೆ. ಈ ಒತ್ತಡದ ಜತೆಗೆ ಧಾವಂತವೂ ಸೇರಿಕೊಂಡು ಪರೀಕ್ಷಾ ಭಯವನ್ನು ಹೆಚ್ಚಿಸುತ್ತದೆ. ವಾರ್ಷಿಕ ಪರೀಕ್ಷೆಗಳಿಗೆ ಸೂಕ್ತ ತಯಾರಿ ಇಲ್ಲದಿರುವಾಗಲೂ ಈ ಭಯ ಉಂಟಾಗುವುದೇನೋ ನಿಜ; ಆದರೆ ಪೋಷಕರು ತಮ್ಮ ಮಕ್ಕಳನ್ನು ಇತರರ ಮಕ್ಕಳೊಂದಿಗೆ ಹೋಲಿಸುವುದು ಮತ್ತು ಅವರಂತೆಯೇ ಓದಬೇಕೆಂದು ಒತ್ತಡ ಹಾಕುವುದು ಒಳ್ಳೆಯದಲ್ಲ. ಪರೀಕ್ಷಾ ವೇಳೆಯಲ್ಲಿ ಮನೆಯಲ್ಲಿ ನಿರಾಳ ವಾತಾವರಣವನ್ನು ಕಟ್ಟಿಕೊಡುವುದಕ್ಕೆ ಪೋಷಕರು ಕಟಿಬದ್ಧರಾಗಬೇಕು. ಶಿಕ್ಷಕರು ಕೂಡ ವಿದ್ಯಾರ್ಥಿಗಳ ಹಿತರಕ್ಷಣೆಗೆ ಮತ್ತು ತಲ್ಲಣದ ನಿವಾರಣೆಗೆ ಸಂಕಲ್ಪಿಸಬೇಕು.

ಪರೀಕ್ಷಾ ಭಯದಿಂದ ಮುಕ್ತರಾಗಲು ವಿದ್ಯಾರ್ಥಿಗಳು ನಿತ್ಯವೂ ಓದುವುದನ್ನು ರೂಢಿಸಿಕೊಳ್ಳಬೇಕು, ಅಂದರೆ ಅಂದಿನ ಅಭ್ಯಾಸವನ್ನು ಅಂದೇ ಮಾಡಿದರೆ ಮುಂದೆ ಹೊರೆ ಬೀಳುವುದಿಲ್ಲ ಮತ್ತು ಅದರಿಂದ ಭಯವೂ ಹುಟ್ಟಿಕೊಳ್ಳುವುದಿಲ್ಲ. ಅದನ್ನು ಬಿಟ್ಟು ಅಭ್ಯಾಸವನ್ನು ಮುಂದೂಡುತ್ತಾ ಹೋದರೆ, ಕೊನೆಕೊನೆಗೆ ಯಾವುದರ ಕಡೆಗೂ ಗಮನ ಹರಿಸಲಾಗದಂಥ ವಾತಾವರಣ ಸೃಷ್ಟಿಯಾಗುತ್ತದೆ.

ನಾವು ಎಷ್ಟೇ ಬುದ್ಧಿವಂತರಾಗಿದ್ದರೂ ಕೆಲವೊಂದು ಪರಿಕಲ್ಪನೆಗಳ ಆಳ ಮತ್ತು ವ್ಯಾಪಕತೆ ಅರ್ಥವಾಗುವುದಿಲ್ಲ. ಇಂಥ ವಿಚಾರಗಳನ್ನು ಶಿಕ್ಷಕರಿಂದ ಕೇಳಿ ಹಾಗೂ ಸಹಪಾಠಿಗಳೊಡನೆ 'ಗುಂಪುಚರ್ಚೆ' ನಡೆಸಿ ತಿಳಿದುಕೊಳ್ಳುವುದು ಒಳ್ಳೆಯ ನಡೆಯೆನಿಸುತ್ತದೆ. ಹೀಗೆ ಚರ್ಚೆ ಮಾಡಿದ್ದು ನೆನಪಿನಲ್ಲಿ ಉಳಿದು, ಪರೀಕ್ಷೆಯಲ್ಲಿ ಬರೆಯಲು ನೆರವಾಗುತ್ತದೆ. 'ನನಗೆ ಎಲ್ಲಾ ಗೊತ್ತಿದೆ, ಗುಂಪುಚರ್ಚೆ ಏಕೆ?' ಎಂಬ ಅತಿಯಾದ ಆತ್ಮವಿಶ್ವಾಸ ಒಳ್ಳೆಯದಲ್ಲ. ಸತತ ಪರಿಶ್ರಮ ಮತ್ತು ಶ್ರದ್ಧೆಯೇ ಯಶಸ್ಸಿಗೆ ಮೂಲ ಎಂಬ ಸತ್ಯವನ್ನು ವಿದ್ಯಾರ್ಥಿಗಳು ಅರಿಯಬೇಕು. ಅಧ್ಯಯನ ಎಂದಾಕ್ಷಣ ಹೇಗೇಗೋ ಓದುವುದಲ್ಲ, ಅದಕ್ಕೊಂದು ಶಿಸ್ತುಬದ್ಧತೆ ಬೇಕು.

ಹಗ್ಗದ ತುದಿಯಲ್ಲಿ ಬದುಕಿನ ನಡಿಗೆ..!

• **ಹೊಸ್ಮನೆ ಮುತ್ತು, ಬೆಂಗಳೂರು**

ನಗರೀಕರಣದ ವೇಗ ಹೆಚ್ಚಾದಂತೆ, ಗಗನಚುಂಬಿ ಕಟ್ಟಡಗಳು ನಮ್ಮ ನಗರಗಳ ಹೆಮ್ಮೆಯ ಗುರುತಾಗಿವೆ. ಈ ಆಧುನಿಕ ಕಟ್ಟಡಗಳ ಸೌಂದರ್ಯವನ್ನು ಹೆಚ್ಚಿಸಲು ಇಂದು ಹೆಚ್ಚಾಗಿ ಬಳಸಲಾಗುವ ಗಾಜಿನ ಹೊರಕವಚಗಳು ನೋಡುಗರ ಗಮನ ಸೆಳೆಯುತ್ತವೆ. ರಸ್ತೆಯಲ್ಲಿ ಸಾಗುವಾಗ ಸೂರ್ಯನ ಬೆಳಕಿಗೆ ಝಗಮಗಿಸುವ ಈ ಗಾಜಿನ ಗೋಡೆಗಳನ್ನು ಕಂಡು ನಾವು ಬೆರಗಾಗುತ್ತೇವೆ. ಆದರೆ, ಆ ಹೊಳಪಿನ ಹಿಂದೆ ಇರುವ ಕಠಿಣ ಪರಿಶ್ರಮ ಮತ್ತು ಪ್ರಾಣಾ ಪಾಯದ ಬಗ್ಗೆ ನಾವು ಎಂದಾದರೂ ಯೋಚಿಸಿ ದ್ದೇವೆಯೇ? ನೀಲಿ ಆಕಾಶದ ಹಿನ್ನೆಲೆಯಲ್ಲಿ, ಕೇವಲ ಒಂದು ಹಗ್ಗ ಹಾಗೂ ಸೀಟ್ ಬೋರ್ಡ್ ಸಹಾಯದಿಂದ ನೂರಾರು ಅಡಿ ಎತ್ತರದಲ್ಲಿ ತೂಗಾಡುತ್ತಾ ಕೆಲಸ ಮಾಡುವ ಈ 'ಗಗನ ಸೈನಿಕರ' ಸಾಹಸ ನಿಜಕ್ಕೂ ಮೈನವಿರೇಳಿ ಸುವಂಥದ್ದು.

ಹಗ್ಗದ ಮೇಲಣ ಬದುಕು: ಸಾಮಾನ್ಯವಾಗಿ 'ರೋಪ್ ಆ್ಯಕ್ಸೆಸ್ ಟೆಕ್ನಿಷಿಯನ್ಸ್' ಎಂದು ಕರೆಯಲ್ಪಡುವ ಈ ಕಾರ್ಮಿಕರು ಯಾವುದೇ ಆಧುನಿಕ ಯಂತ್ರೋಪಕರಣಗಳಿಲ್ಲದೆ, ಕೇವಲ ತೂಗುಹಗ್ಗಗಳ ಸಹಾಯದಿಂದ ಮೇಲಿಂದ ಕೆಳಕ್ಕೆ ಜಾರುತ್ತಾ ಪ್ರತಿಯೊಂದು ಗಾಜನ್ನೂ ಸ್ವಚ್ಛಗೊಳಿಸುತ್ತಾರೆ. ಇವರ ವೃತ್ತಿಜೀವನವು ಪ್ರತಿದಿನವೂ ಹಗ್ಗದ ಮೇಲಿನ ನಡಿಗೆಯಂತೆಯೇ ಸಾಹಸಮಯ. ಸುಡುವ ಬಿಸಿಲು, ವೇಗವಾಗಿ ಬೀಸುವ ಗಾಳಿ ಮತ್ತು ಎತ್ತರದ ಭಯದ (Acrophobia) ನಡುವೆ ಸಮತೋಲನ ಕಾಯ್ದುಕೊಳ್ಳುವುದು ಸಾಮಾನ್ಯ ಮಾತಲ್ಲ. ಗಾಳಿಯ ವೇಗ ಹೆಚ್ಚಾದಾಗ ತೂಗುಹಗ್ಗಗಳು ಅತ್ತಿತ್ತ ಅಲುಗಾಡತೊಡಗುತ್ತವೆ, ಆಗ ಜೀವ ಕೈಯಲ್ಲಿ ಹಿಡಿದು ಕೆಲಸ ಮಾಡ ಬೇಕಾಗುತ್ತದೆ.

ಸುರಕ್ಷತೆ ಮತ್ತು ಏಕಾಗ್ರತೆ: ಕಾರ್ಮಿಕರು ತಮ್ಮ ಸೊಂಟಕ್ಕೆ ಕಟ್ಟಿಕೊಂಡಿರುವ ಸುರಕ್ಷತಾ ಬೆಲ್ಟ್ ಮತ್ತು 'ಸೇಫ್ಟಿ ಲೈನ್'ಗಳೇ ಅವರ ಜೀವದಾತ. ಗಾಜಿನ ಮೇಲೆ ಸೋಪಿನ ನೊರೆ ಹರಡಿ, ವೈಪರ್ ಮೂಲಕ ನಾಜೂಕಾಗಿ ಒರೆಸುವಾಗ, ಪ್ರತಿ ಚಲನೆಯೂ ಎಚ್ಚರಿಕೆಯಿಂದ ಕೂಡಿರಬೇಕು. ಒಂದು ಸಣ್ಣ ತಪ್ಪು ಲೆಕ್ಕಾಚಾರವೂ ದೊಡ್ಡ ಅನಾಹುತಕ್ಕೆ ಆಹ್ವಾನ ನೀಡಬಹುದು. ಹಾಗಾಗಿ, ಇವರ ಕಣ್ಣು ಮತ್ತು ಮನಸ್ಸು ಸಂಪೂರ್ಣವಾಗಿ ಕೆಲಸದ ಮೇಲೆಯೇ ಕೇಂದ್ರೀಕೃತವಾಗಿರಬೇಕು. ಗಂಟೆಗಟ್ಟಲೆ ಬಿಸಿಲಿನಲ್ಲಿ ತೂಗಾಡುತ್ತಾ ದೈಹಿಕ ಶ್ರಮ ವಹಿಸಲು ಅಪಾರವಾದ ಮಾನಸಿಕ ಸ್ಥೈರ್ಯ ಬೇಕು. ರಕ್ತ ಸಂಚಾರದ ಸಮಸ್ಯೆ (Suspension Trauma) ಉಂಟಾಗುವ ಸಾಧ್ಯತೆ ಇದ್ದರೂ, ಹೊಟ್ಟೆಪಾಡಿಗಾಗಿ ಮತ್ತು ವೃತ್ತಿನಿಷ್ಠೆಗಾಗಿ ಇವರು ಈ ಸಾಹಸಕ್ಕೆ ಮುಂದಾಗು ತ್ತಾರೆ. ಇವರ ಶ್ರಮ ಮತ್ತು ತಾಳ್ಮೆ ನಿಜಕ್ಕೂ ಶ್ಲಾಘನೀಯ

ನಗರ ಸೌಂದರ್ಯದ ಪರೋಕ್ಷ ಶಿಲ್ಪಿಗಳು: ಆಧುನಿಕ ವಾಸ್ತುಶಿಲ್ಪದಲ್ಲಿ ಗಾಜಿನ ಬಳಕೆ ಹೆಚ್ಚು.

ಧೂಳು, ಮಳೆ ಮತ್ತು ಹೊಗೆಯಿಂದ ಮಂಕಾಗುವ ಈ ಕಟ್ಟಡಗಳಿಗೆ ಮತ್ತೆ ಮೆರುಗು ನೀಡಲು ಈ ಕಾರ್ಮಿಕರು ತಮ್ಮ ಪ್ರಾಣವನ್ನೇ ಪಣಕ್ಕಿಡುತ್ತಾರೆ. ನಾವು ಎ.ಸಿ. ರೂಮಿನಲ್ಲಿ ಕುಳಿತು ಹೊರಗಿನ ಲೋಕವನ್ನು ಸ್ಪಷ್ಟವಾಗಿ ನೋಡುತ್ತಿದ್ದೇವೆ ಎಂದರೆ, ಅದಕ್ಕೆ ಈ ಶ್ರಮಜೀವಿಗಳೇ ಕಾರಣ. ಇವರು ಕೇವಲ ಕಾರ್ಮಿಕರಲ್ಲ, ನಗರದ ಅಂದವನ್ನು ಕಾಪಾಡುವ 'ಸ್ಪೈಡರ್‌ಮ್ಯಾನ್'ಗಳು.

ಯಾವುದೇ ಕೆಲಸ ಚಿಕ್ಕದಲ್ಲ, ಆದರೆ ಕೆಲವು ಕೆಲಸಗಳು ಅತೀವ ಧೈರ್ಯವನ್ನು ಬಯಸುತ್ತವೆ. ಮುಂದಿನ ಬಾರಿ ನೀವು ಯಾವುದಾದರೂ ಎತ್ತರದ ಕಟ್ಟಡವನ್ನು ನೋಡಿದಾಗ, ಅದರ ಹೊಳಪಿನ ಹಿಂದಿರುವ ಈ 'ಸ್ವಚ್ಛತಾ ಸೈನಿಕರ'ನ್ನು ನೆನಪಿಸಿಕೊಳ್ಳಿ. ಭವಿಷ್ಯದಲ್ಲಿ ರೋಬೋಟ್‌ಗಳು ಅಥವಾ ಡ್ರೋನ್‌ಗಳು ಈ ಕೆಲಸವನ್ನು ನಿರ್ವಹಿಸಬಹುದಾದರೂ, ಇಂದಿನ ಅವರ ಧೈರ್ಯಕ್ಕೆ ನಮ್ಮದೊಂದು ನಮನ ಇರಲಿ. ಈ ಕಾರ್ಮಿಕರಿಗೆ ಉತ್ತಮ ವೇತನ, ವಿಮೆ ಮತ್ತು ಸುಧಾರಿತ ಸುರಕ್ಷತಾ ತಂತ್ರಜ್ಞಾನಗಳು ದೊರೆಯಲಿ ಎಂಬುದು ನಮ್ಮ ಆಶಯ.

ಪದಬಂಧ

• **ಸಿ.ರವಿಶಂಕರ ಶಾಸ್ತ್ರಿ, ದಂಬೆ**

1			■	■	■	2		3
	■	■	4	■	5	■	■	
	■	■	6			■	■	
7		8		■	9	10		
■	■		■	■	■		■	■
11			12	■	13			14
	■	■	15			■	■	
	■	■		■		■	■	
16			■	■	■	17		

ಎಡದಿಂದ ಬಲಕ್ಕೆ

1. ಮತ್ತೊಂದು ಒಣಹೆಮ್ಮೆ (3)
2. ತಿರುಗಿ ಬಂದ ಬಳಲಿಕೆ (3)
6. ಮೌನ ಅಥವಾ ನಿಶ್ಶಬ್ದ (3)
7. ಹೊಸದಾಗಿ ಬಂದಿರುವ ಬೆಣ್ಣೆ (4)
9. ವಾಸಿಸುವ ಜಾಗವಲ್ಲ, ಕಾರಾಗೃಹ (4)
11. ಹಾರದೊಂದಿಗೆ ಬಂದಿರುವ ಗಡಿಬಿಡಿ (4)
13. ಸಾಕೆನಿಸಿದ ದತ್ತುಪುತ್ರ (4)
15. ಗುಂಪು ಎನ್ನುವ ಮತ್ತೊಂದು ಪದ (3)
16. ವಿರಳವಾಗಿ ಬಂದಿದೆ ಮತ್ತೊಂದು ಹೋಮ (3)
17. ರಾಮಾಯಣದಲ್ಲಿ ಬರುವ ಜಟಾಯುವಿನ ಅಣ್ಣನ ಹೆಸರು (3)

ಮೇಲಿಂದ ಕೆಳಕ್ಕೆ

1. ಗೆದ್ದವರಿಗೆ ಸಿಕ್ಕಿತು ಪಾರಿತೋಷಕ (4)
3. ಮತ್ತೊಬ್ಬರ ಮೇಲೆ ತಪ್ಪು ಹೊರಿಸುವುದು (4)
4. ಬಾಗಿದ ಅಥವಾ ಸೌಜನ್ಯದಿಂದ ಕೂಡಿದ ಎಂದರ್ಥ (3)
5. ನೀರು ನಿಂತು ಉಂಟಾದ ಪಾಚಿ (3)
8. ಸಾರಹೀನವಾದದ್ದು (3)
10. ತಲೆಕೆಳಗಾಗಿ ಬಂದಿರುವುದು ಅಶ್ವ (3)
11. ಅಭಿಯ ನಟನೆ (4)
12. ರಸಗಳ ರುಚಿ ತಿಳಿಸುವ ನಾಲಗೆ (3)
13. ಶಕ್ತಿ ಮೀರಿ ಮಾಡುವ ಕೆಲಸ (3)
14. ಮೊದಲ ಪೂಜೆ ಪಡೆಯುವ ದೇವರು (4)

ಸರಿಯುತ್ತರಗಳು

ಅವಶೇಷಗಳ ನಡುವೆ ಅರಳಿದ ಸಹೋದರತ್ವ



ಒಂದೊಳ್ಳೆ ಮಾತು

ರೂಪಾ ಗುರುರಾಜ್

Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಸ್ಥಳ: ದಕ್ಷಿಣ ಟವರ್ (South Tower), ವಿಶ್ವ ವ್ಯಾಪಾರ ಕೇಂದ್ರ, ನ್ಯೂಯಾರ್ಕ್. ದಿನಾಂಕ: 2001ರ ಸೆಪ್ಟೆಂಬರ್ 11.

ಆ ಸುಂದರ ಬೆಳಗ್ಗೆ ನ್ಯೂಯಾರ್ಕ್ ನಗರ ಎಂದಿನಂತೆ ಚಟುವಟಿಕೆಯಿಂದ ಕೂಡಿತ್ತು. ಸ್ಟಾನ್ಲಿ ಪ್ರೇಮ್‌ನಾಥ್ ಅವರು ದಕ್ಷಿಣ ಟವರ್‌ನ 81ನೇ ಮಹಡಿಯಲ್ಲಿರುವ ತಮ್ಮ 'ಫುಜಿ ಬ್ಯಾಂಕ್' ಕಚೇರಿಯಲ್ಲಿ ಕೆಲಸ ಆರಂಭಿಸಿದ್ದರು. ಆದರೆ 8:46ರ ಸಮಯಕ್ಕೆ ನಡೆದ ಮೊದಲ ಸ್ಫೋಟ ಇಡೀ ಜಗತ್ತನ್ನೇ ನಡುಗಿಸಿತು. ಪಕ್ಕದ ಉತ್ತರ ಟವರ್‌ಗೆ ವಿಮಾನವೊಂದು ಅಪ್ಪಳಿಸಿತ್ತು. ಗಾಬರಿಗೊಂಡ ಸ್ಟಾನ್ಲಿ ಕೆಳಗೆ ಓಡಲು ಯತ್ನಿಸಿದಾಗ, ಭದ್ರತಾ ಸಿಬ್ಬಂದಿ 'ದಕ್ಷಿಣ ಟವರ್ ಸುರಕ್ಷಿತವಾಗಿದೆ, ವಾಪಸ್ ಹೋಗಿ' ಎಂದು ಸೂಚಿಸಿದರು. ಆ ಒಂದು ತಪ್ಪು ನಿರ್ಧಾರ ಸ್ಟಾನ್ಲಿಯನ್ನು ಸಾವಿನ ದವಡೆಗೆ ದೂಡಲಿತ್ತು. ಸ್ಟಾನ್ಲಿ ಕಚೇರಿಗೆ ಮರಳಿದ ಮರುಕ್ಷಣವೇ ಚಿಕಾಗೋದಲ್ಲಿದ್ದ ಅವರ ಸಹೋದ್ಯೋಗಿ ಫೋನ್ ಮಾಡಿ, 'ತಕ್ಷಣ ಅಲ್ಲಿಂದ ಹೊರಡು!' ಎಂದು ಕಿರುಚಿದರು. ಸ್ಟಾನ್ಲಿ ಕಿಟಕಿಯತ್ತ ನೋಡಿದಾಗ ಬೃಹತ್ ಬೋಯಿಂಗ್ 767 ವಿಮಾನವೊಂದು ನೇರವಾಗಿ ತಮ್ಮತ್ತಲೇ ಧಾವಿಸು ತ್ತಿರುವುದು ಕಂಡಿತು. ಸಾಕ್ಷಾತ್ ಯಮನನ್ನೇ ನೋಡಿದಂತಾದ ಸ್ಟಾನ್ಲಿ, ದೇವರನ್ನು ಸ್ಮರಿಸುತ್ತಾ ಉಕ್ಕಿನ ಮೇಜಿನ ಅಡಿಯಲ್ಲಿ ಅವಿತುಕೊಂಡರು. 9:03ಕ್ಕೆ ವಿಮಾ ನವು 77 ಮತ್ತು 85ನೇ ಮಹಡಿಗಳ ನಡುವೆ ಅಪ್ಪಳಿಸಿತು. ಗೋಡೆಗಳು ಪುಡಿಯಾದವು, ಬೆಂಕಿ ಆವರಿಸಿತು. ಸ್ಟಾನ್ಲಿ ಅವಶೇಷಗಳ ಅಡಿಯಲ್ಲಿ ರಕ್ತ ಸಿಕ್ತರಾಗಿ ಸಿಲುಕಿಕೊಂಡರು.

ದೇವದೂತನಂತೆ ಬಂದ ಬ್ರಿಯಾನ್: ಅದೇ ಸಮಯದಲ್ಲಿ ಮೂರು ಮಹಡಿಗಳ ಮೇಲೆ (84ನೇ ಮಹಡಿ) ಬ್ರಿಯಾನ್ ಕ್ಲಾರ್ಕ್ ಎಂಬುವವರು ತಮ್ಮ ಸಹೋದ್ಯೋಗಿಗಳೊಂದಿಗೆ ಕೆಳಗೆ ಇಳಿಯುತ್ತಿದ್ದರು. 81ನೇ ಮಹಡಿಗೆ ಬಂದಾಗ ಮಾರ್ಗವು ಬೆಂಕಿ ಮತ್ತು ಹೊಗೆಯಿಂದ ಆವೃತವಾಗಿತ್ತು. 'ಕೆಳಗೆ ಹೋಗಲು ಸಾಧ್ಯವಿಲ್ಲ, ಮೇಲೆ ಹೋಗೋಣ' ಎಂದು ಬ್ರಿಯಾನ್ ಅವರ ಜತೆಗಿದ್ದವರು ವಾದಿಸಿದರು. ಆದರೆ ಬ್ರಿಯಾನ್‌ಗೆ ಯಾವುದೋ ಒಂದು ಒಳಗಿನ ಧ್ವನಿ 'ಕೆಳಗೆ ಹೋಗು' ಎಂದು ಪ್ರೇರೇಪಿಸಿತು.

ಅದೇ ಸಮಯದಲ್ಲಿ ಸ್ಟಾನ್ಲಿ ಕತ್ತಲೆಯಲ್ಲಿ ಸಹಾಯಕ್ಕಾಗಿ ಅತೀವವಾಗಿ ಕಿರುಚುತ್ತಿದ್ದರು. 'ಸಹಾಯ ಮಾಡಿ! ಯಾರಾದರೂ ಇದ್ದೀರಾ?' ಎಂಬ ಆರ್ತನಾದ ಕೇಳಿದ ಬ್ರಿಯಾನ್, ಸಾವಿನ ಭಯವಿದ್ದರೂ ಧ್ವನಿ ಬಂದ ಕಡೆಗೆ ಓಡಿದರು. ಅವಶೇಷಗಳ ನಡುವೆ ಕೈ ಚಾಚಿದ ಬ್ರಿಯಾನ್, ಸ್ಟಾನ್ಲಿಯನ್ನು ಸುರಕ್ಷಿತವಾಗಿ ಹೊರಗೆಳೆದರು. ಆ

ಕ್ಷಣ ಇಬ್ಬರೂ ಅಪರಿಚಿತರು ಪರಸ್ಪರ ಅಪ್ಪಿಕೊಂಡರು. ಬ್ರಿಯಾನ್ ಮೆಲ್ಲಗೆ ಹೇಳಿದರು– 'ನನ್ನ ಜೀವನದುದ್ದಕ್ಕೂ ನನಗೆ ಒಬ್ಬ ಸಹೋದರ ಬೇಕೆಂದು ಬಯಸಿದ್ದೆ, ಇಂದು ಅವನು ನನಗೆ ಸಿಕ್ಕಿದ. ಬಾ ಗೆಳೆಯ, ಮನೆಗೆ ಹೋಗೋಣ'.

ಹೊಗೆ ಮತ್ತು ಧೂಳಿನ ನಡುವೆ ಇಬ್ಬರೂ ಮೆಟ್ಟಿಲುಗಳ ಮೂಲಕ ಕೆಳಗೆ ಇಳಿಯತೊಡಗಿದರು. ದಾರಿಯಲ್ಲಿ ಅವರು ಅನೇಕರನ್ನು ಕಂಡರು, ಕೆಲವರು ಮೇಲೆ ಹೋಗುತ್ತಿದ್ದರು, ಇನ್ನು ಕೆಲವರು ಅಲ್ಲೇ ಕುಳಿತಿದ್ದರು. 68ನೇ ಮಹಡಿಯಲ್ಲಿ ಭೇಟಿಯಾದ ಒಬ್ಬ ವ್ಯಕ್ತಿ ಸಹಾಯ ನಿರಾಕರಿಸಿ ಅಲ್ಲೇ ಉಳಿದರು, ಅವರು ಮತ್ತೆಂದೂ ಹಿಂತಿರುಗಲಿಲ್ಲ. 9:56ಕ್ಕೆ ಸ್ಟಾನ್ಲಿ ಮತ್ತು ಬ್ರಿಯಾನ್ ಹೇಗೋ ಕಟ್ಟಡದಿಂದ ಹೊರಬಂದರು. ಎರಡು ಬ್ಲಾಕ್ ದೂರ ಹೋದಾಗ ಕಟ್ಟಡ ಕುಸಿಯಲು ಪ್ರಾರಂಭಿಸಿತು. ಕೇವಲ ಮೂರು ನಿಮಿಷಗಳ ಮುಂಚೆ ಅವರು ಅಲ್ಲಿಂದ ಹೊರಬಂದಿದ್ದರು!

ಅಂದು ಆ ವಲಯದಲ್ಲಿ ಬದುಕುಳಿದವರು ಕೇವಲ 18 ಜನರು. ಅಂದಿನ ರಾತ್ರಿ ಸ್ಟಾನ್ಲಿ ಫೋನ್ ಮಾಡಿದಾಗ ಇಬ್ಬರ ಕಣ್ಣಲ್ಲೂ ಆನಂದ ಬಾಷ್ಪವಿತ್ತು. 9/11ರ ದುರಂತದ ನಂತರ, ಬ್ರಿಯಾನ್ ಮತ್ತು ಸ್ಟಾನ್ಲಿ ಕೇವಲ ಸ್ನೇಹಿತರಾಗಿ ಉಳಿಯಲಿಲ್ಲ. ಅವರು ಜಗತ್ತಿನಾದ್ಯಂತ ಸಂಚರಿಸಿ ತಮ್ಮ ಬದು ಕಿನ ಕಥೆಯನ್ನು ಹಂಚಿಕೊಂಡರು. ಧರ್ಮ, ದೇಶ ಮತ್ತು ಜನಾಂಗದ ಭೇದವಿಲ್ಲದೆ ಮಾನವೀಯತೆ ಹೇಗೆ ಕೆಲಸ ಮಾಡುತ್ತದೆ ಎಂಬುದಕ್ಕೆ ಇವರು ಮಾದರಿಯಾದರು. ಇವರ ಕಥೆಯನ್ನು ಆಧರಿಸಿ ಅನೇಕ ಸಾಕ್ಷ್ಯಚಿತ್ರಗಳು ನಿರ್ಮಾಣವಾಗಿವೆ.

ರಾಜಕೀಯ ಪ್ರೇರಿತವಾಗಿ ಧರ್ಮ, ಭಾಷೆ, ಜಾತಿ ವಿಷಯಗಳಲ್ಲಿ ದಿನ ಬೆಳಗಾದರೆ ಹೊಡೆದಾಡುತ್ತಾ, ಸಾಮಾಜಿಕ ಜಾಲತಾಣಗಳಲ್ಲಿ ವಿಷ ಕಾರುವ ಅನೇಕರಿಗೆ ಇಂಥ ಘಟನೆಗಳು ಪಾಠವಾಗಲಿ. ಮನುಷ್ಯಕುಲಕ್ಕೆ ಶತ್ರುವೆಂದರೆ ಅದು ಆತಂಕವಾದ ಮಾತ್ರವೇ; ಮಿಕ್ಕಿದ್ದೆಲ್ಲ ನಾವು ಮಾಡಿ ಕೊಂಡಂಥವು..

ನೀವೂ ಬರೆಯಬಹುದು | ನಮ್ಮ ವಿಳಾಸ: ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098 | e-mail: vishwavanimagazine@gmail.com

ಟಿ-20 ಮಹೋತ್ಸವ ವಿಶ್ವಕಪ್ 2026

ಭಾರತ | ಶ್ರೀಲಂಕಾ
ಫೆಬ್ರವರಿ 7ರಿಂದ ಮಾರ್ಚ್ 8

ICC MEN'S T20 WORLD CUP INDIA & SRI LANKA 2026

ಒಂದ್ ಕಪ್ ಮಾತು

ಉತ್ತಮ ಇನಿಂಗ್ಸ್ ಅಭಿಷೇಕ್ ಸರ್!: ಯುವರಾಜ್ ಸಿಂಗ್

ದೆಹಲಿ: ಐಸಿಸಿ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಹ್ಯಾಟ್ರಿಕ್ ಡಕ್ ಔಟ್ ಆಗುವ ಮೂಲಕ ತೀವ್ರ ನಿರಾಸೆ ಮೂಡಿಸಿದ್ದ ಭಾರತದ ಆರಂಭಿಕ ಬ್ಯಾಟ್ಸ್‌ಮನ್ ಅಭಿಷೇಕ್ ಶರ್ಮಾ ಬಳಿಕ ದಕ್ಷಿಣ ಆಫ್ರಿಕಾ ವಿರುದ್ಧ ಪಂದ್ಯದಲ್ಲೂ ರನ್ ಗಳಿಸುವಲ್ಲಿ ವಿಫಲರಾಗಿದ್ದರು. ಗುರುವಾರ ಜಿಂಬಾಬ್ವೆ ತಂಡದ ವಿರುದ್ಧ ಚುರುಕಿನ ಅರ್ಧಶತಕ ಬಾರಿಸುವ ಮೂಲಕ ಫಾರ್ಮ್‌ಗೆ ಮರಳಿದ್ದಾರೆ. ಹೀಗಾಗಿ ಅವರ ಅಭಿಮಾನಿಗಳು ಖುಷಿಯಾಗಿದ್ದಾರೆ. ಜೊತೆಗೆ ತಂಡದ ವ್ಯವಸ್ಥಾಪಕ ವಿಭಾಗ ಸಹ ನೆಮ್ಮದಿಯ ನಿಟ್ಟುಸಿರು ಬಿಟ್ಟಿದೆ. ಏತನ್ಮಧ್ಯೆ ಅವರ ಮೆಂಟರ್ ಆಗಿರುವ ಮಾಜಿ ಕ್ರಿಕೆಟಿಗ ಯುವರಾಜ್ ಸಿಂಗ್ ಅವರು ಅಭಿಷೇಕ ಶರ್ಮಾ ಅವರನ್ನು ಹೊಗಳಿದ್ದಾರೆ. ಈ ಬಗ್ಗೆ ಇನ್‌ಸ್ಟಾ ಸ್ಟೋರಿ ಹಾಕಿರುವ ಅವರು, ನೀವು ನಿಮ್ಮ ಬ್ಯಾಟ್‌ಗೆ ಮಾತನಾಡಲು ಅವಕಾಶ ನೀಡಿದಾಗ ಅದೇ ಉತ್ತಮ ಮಾತಾಗುತ್ತದೆ! ಉತ್ತಮ ಇನಿಂಗ್ಸ್ ಅಭಿಷೇಕ್ ಸರ್, ಹೀಗೇ ಮುಂದುವರಿಯುತ್ತಿರಿ ಎಂದು ಪ್ರಶಂಸೆ ವ್ಯಕ್ತಪಡಿಸಿದ್ದಾರೆ. ಅಂದರೆ ನಮ್ಮ ಆಟವೇ ಎಲ್ಲಾ ಟೀಕೆಗಳಿಗೆ ಉತ್ತರವಾಗಬೇಕು ಎಂಬುದು ಈ ಕಿವಿಮಾತನ್ನು ಈ ಮೂಲಕ ಹೇಳಿದ್ದಾರೆ. ಇದು ಈಗ ವೈರಲ್ ಆಗಿದೆ.

ಫಾರ್ಮ್ ಸಮಸ್ಯೆ: ಟಿ20 ವಿಶ್ವಕಪ್ ಟೂರ್ನಿಯಲ್ಲಿ ಅಭಿಷೇಕ್ ಶರ್ಮಾ ಅವರು ತೀವ್ರ ಫಾರ್ಮ್ ಸಮಸ್ಯೆಯಿಂದ ಬಳಲುತ್ತಿದ್ದರು. ಲೀಗ್ ಹಂತದಲ್ಲಿ ಅಮೆರಿಕ, ಪಾಕಿಸ್ತಾನ, ನೆದರ್ಲೆಂಡ್ ತಂಡಗಳ ವಿರುದ್ಧ ಶೂನ್ಯಕ್ಕೆ ಔಟಾಗಿದ್ದರು. ಇನ್ನು ಸೂಪರ್ 8ರ ಹಂತದಲ್ಲಿ ಅವರು ದಕ್ಷಿಣ ಆಫ್ರಿಕಾ ವಿರುದ್ಧ 15 ರನ್‌ಗಿಂತ ಹೆಚ್ಚು ಹೊಡೆಯಲು ಸಾಧ್ಯವಾಗಿರಲಿಲ್ಲ. ಹೀಗಾಗಿ ತಂಡ ದೊಡ್ಡ ಅಂತರದಿಂದ ಸೋಲನುಭವಿಸಿತು.

ಮಾರ್ಚ್ 4, 5ಕ್ಕೆ ಬೆಂಗಳೂರಲ್ಲಿ ರಾಜ್ಯ ಪ್ಯಾರಾ ಅಥ್ಲೆಟಿಕ್ಸ್

ಬೆಂಗಳೂರು: ಒಡಿಶಾದ ಭುವನೇಶ್ವರದಲ್ಲಿರುವ ಕಳಿಂಗ ಮೈದಾನದಲ್ಲಿ 24ನೇ ರಾಷ್ಟ್ರೀಯ ಪ್ಯಾರಾ ಅಥ್ಲೆಟಿಕ್ ಕ್ರೀಡಾಕೂಟ ನಡೆಯಲಿದೆ. ಇದರಲ್ಲಿ ರಾಜ್ಯ ತಂಡವೂ ಪಾಲ್ಗೊಳ್ಳಲಿದೆ. ಇದಕ್ಕೆ ಪೂರ್ವಭಾವಿಯಾಗಿ ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಮಾ.4, 5ರಂದು 34ನೇ ರಾಜ್ಯ ಪ್ಯಾರಾ ಅಥ್ಲೆಟಿಕ್ ಚಾಂಪಿಯನ್‌ಶಿಪ್ ನಡೆಯಲಿದೆ. ಇಲ್ಲಿ ಉತ್ತಮ ಪ್ರದರ್ಶನ ನೀಡಿದ ಆಟಗಾರರು ರಾಷ್ಟ್ರೀಯ ಕೂಟದಲ್ಲಿ ಆಡಲಿರುವ ರಾಜ್ಯ ತಂಡಕ್ಕೆ ಆಯ್ಕೆಯಾಗಲಿದ್ದಾರೆ. ಈ ಕ್ರೀಡಾಕೂಟದಲ್ಲಿ ರಾಜ್ಯಾದ್ಯಂತ ವಿವಿಧ ಜಿಲ್ಲೆಗಳಿಂದ ಹೆಚ್ಚಿನ ಕ್ರೀಡಾಪಟುಗಳು ಭಾಗವಹಿಸಬೇಕೆಂದು ಸಂಘಟಕರು ವಿನಂತಿ ಮಾಡಿಕೊಂಡಿದ್ದಾರೆ. ತಮ್ಮ ದಿನಪತ್ರಿಕೆಯಲ್ಲಿ ಪ್ರಕಟಿಸಬೇಕೆಂದು ಹೃದಯಪೂರ್ವಕವಾಗಿ ವಿನಂತಿಸಿಕೊಳ್ಳುತ್ತೇನೆ. ಹೆಚ್ಚಿನ ಮಾಹಿತಿಗಾಗಿ 080-2991 4590, +9163640 76239 ಸಂಖ್ಯೆಗಳಿಗೆ ಕರೆ ಮಾಡಬಹುದು.

ಅಪ್ಪನಾಗುವ ಸಂಭ್ರಮ: ಕಿವೀಸ್‌ನ ಮ್ಯಾಟ್ ಹೆನ್ರಿ ತವರಿಗೆ

ಕೊಲಂಬೋ: ನ್ಯೂಜಿಲೆಂಡ್ ತಂಡದ ವೇಗದ ಬೌಲರ್ ಮ್ಯಾಟ್ ಹೆನ್ರಿ ಅವರು ಇಂಗ್ಲೆಂಡ್ ವಿರುದ್ಧದ ಪಂದ್ಯದ ನಂತರ ಶುಕ್ರವಾರ ತಡರಾತ್ರಿ ನ್ಯೂಜಿಲೆಂಡ್‌ಗೆ ಮರಳಿದರು. ಮ್ಯಾಟ್ ಹೆನ್ರಿ ದಂಪತಿ ಎರಡನೇ ಮಗುವಿನ ನಿರೀಕ್ಷೆಯಲ್ಲಿದ್ದು, ಈ ವೇಳೆ ಪತ್ನಿ ಹೋಲಿ ಜೊತೆಯಲ್ಲಿರಲು ಅವರಿಗೆ ನ್ಯೂಜಿಲೆಂಡ್ ಕ್ರಿಕೆಟ್ ಮಂಡಳಿ ಪಿತೃತ್ವ ರಜೆ ಮಂಜೂರು ಮಾಡಿದೆ. ನ್ಯೂಜಿಲೆಂಡ್ ಸೆಮಿಫೈನಲ್‌ಗೆ ಅರ್ಹತೆ ಪಡೆದಲ್ಲಿ ಅವರು ಭಾರತಕ್ಕೆ ಹಿಂತಿರುಗಿ ಟೂರ್ನಿಯಲ್ಲಿ ಆಡಲಿದ್ದಾರೆ ಎಂದು ನ್ಯೂಜಿಲೆಂಡ್ ಕ್ರಿಕೆಟ್ ಹೇಳಿಕೆಯಲ್ಲಿ ತಿಳಿಸಿದೆ.

ವಿರಾಮ
ಪ್ರತಿ ಭಾನುವಾರ

ಸೂಪರ್-8 ಗುಂಪು-2: ಇಂಗ್ಲೆಂಡ್‌ಗೆ 4 ವಿಕೆಟ್ ಗೆಲುವು, ಸತತ 3ನೇ ಜಯ
ಸೋಲನುಭವಿಸಿದ ಕಿವೀಸ್-ಪಾಕ್ ನಡುವೆ ಇನ್ನೊಂದು ಸೆಮೀಸ್ ಸ್ಥಾನಕ್ಕೆ ಪೈಪೋಟಿ

ಸೋತ ನ್ಯೂಜಿಲೆಂಡ್ ಭವಿಷ್ಯ ಅಡಕತ್ತರಿಯಲ್ಲಿ

ಕೊಲಂಬೋ: ಟಿ20 ವಿಶ್ವಕಪ್ ಸೂಪರ್-8 ಗುಂಪು-2ರ ಪಂದ್ಯದಲ್ಲಿ ಶುಕ್ರವಾರ ಇಂಗ್ಲೆಂಡ್ ತಂಡ 4 ವಿಕೆಟ್‌ಗಳಿಂದ ನ್ಯೂಜಿಲೆಂಡ್ ತಂಡವನ್ನು ಮಣಿಸಿತು. ಈ ರೋಚಕ ಗೆಲುವಿನೊಂದಿಗೆ ಇಂಗ್ಲೆಂಡ್ ಸೂಪರ್-8ರ ಹಂತದಲ್ಲಿ ಆಡಿದ ಮೂರೂ ಪಂದ್ಯವನ್ನು ಗೆದ್ದಂತಾಯಿತು. ಈ ಸೋಲಿನೊಂದಿಗೆ ನ್ಯೂಜಿಲೆಂಡ್ ಸೆಮಿಫೈನಲ್ ಪ್ರವೇಶದ ಆಸೆ ಅಡಕತ್ತರಿಯಲ್ಲಿ ಸಿಕ್ಕಿದಂತಾಗಿದೆ. ಶನಿವಾರ ಶ್ರೀಲಂಕಾ ವಿರುದ್ಧ ಪಾಕಿಸ್ತಾನ ಗೆದ್ದರೆ, ಆಗ ದಾಖಲಾಗುವ ಪಾಕಿಸ್ತಾನದ ರನ್‌ರೇಟ್ ಆಧಾರದಲ್ಲಿ ಕಿವೀಸ್ ಸೆಮಿಫೈನಲ್ ಭವಿಷ್ಯ ನಿಂತಿದೆ. ಸದ್ಯದ ಮಟ್ಟಿಗೆ ಕಿವೀಸ್ ಪಾಕಿಸ್ತಾನಕ್ಕಿಂತ ಉತ್ತಮ ರನ್‌ರೇಟ್ ಹೊಂದಿದೆ.

ನ್ಯೂಜಿಲೆಂಡ್ ಸೋಲುವುದರೊಂದಿಗೆ ಪಾಕಿಸ್ತಾನ ನಿಟ್ಟುಸಿರುಬಿಟ್ಟಿದೆ. ಅದರ ಸೆಮಿಫೈನಲ್ ಆಸೆ ಜೀವಂತವಾಗಿದೆ. ಅದು ಶನಿವಾರ ಗೆಲ್ಲುವುದು ಮಾತ್ರವಲ್ಲ, ನ್ಯೂಜಿಲೆಂಡ್‌ಗಿಂತ ಅತ್ಯುತ್ತಮ ರನ್‌ರೇಟ್ ಸಾಧಿಸಬೇಕಾಗಿದೆ. ಶುಕ್ರವಾರ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ನ್ಯೂಜಿಲೆಂಡ್ ಸಾಮಾನ್ಯ ಮೊತ್ತ ಗಳಿಸಿತು. 20 ಓವರ್‌ಗಳಲ್ಲಿ ಅದು 7 ವಿಕೆಟ್‌ಗಳಿಗೆ 159 ರನ್ ಗಳಿಸಿತು. ಇದನ್ನು ಬೆನ್ನತ್ತಿದ ಇಂಗ್ಲೆಂಡ್ 19.3 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 161 ರನ್ ಗಳಿಸಿತು. ಸಣ್ಣ ಮೊತ್ತ ಎದುರಿದ್ದರೂ ಪಂದ್ಯವನ್ನು ಕೊನೆಯವರೆಗೆ ಎಳೆದಿದ್ದು ಕಿವೀಸ್ ಬೌಲಿಂಗ್ ಸಾಮರ್ಥ್ಯಕ್ಕೆ ಸಾಕ್ಷಿ. ಇಂಗ್ಲೆಂಡ್ ಪರ ಟಾಮ್ ಬ್ಯಾಂಟನ್ 33, ವಿಲ್ ಜ್ಯಾಕ್ಸ್ 32, ಹ್ಯಾರಿ ಬ್ರೂಕ್ 26 ರನ್ ಚಚ್ಚಿದರು. ಕಿವೀಸ್ ಪರ ರಚಿನ್ ರವೀಂದ್ರ 19 ರನ್ ನೀಡಿ 3 ವಿಕೆಟ್ ಪಡೆದು ಇಂಗ್ಲೆಂಡನ್ನು ನಿಯಂತ್ರಿಸಿದರು.

ನ್ಯೂಜಿಲೆಂಡ್ ತಂಡದ ಪರ ಒಂದೇ ಒಂದು ಅರ್ಧಶತಕ ದಾಖಲಾಗಲಿಲ್ಲ ಎನ್ನುವುದು ಅದರ ಬ್ಯಾಟಿಂಗ್ ಪರಿಸ್ಥಿತಿಯನ್ನು ತೋರಿಸುತ್ತದೆ. ಆರಂಭಿಕ ಟಿಮ್ ಸೀಫರ್ಟ್ 25 ಎಸೆತಗಳಲ್ಲಿ 35 ರನ್ ಚಚ್ಚಿದರು. ಇದರಲ್ಲಿ 3 ಬೌಂಡರಿ, 2 ಸಿಕ್ಸರ್‌ಗಳಿದ್ದವು. ಫಿನ್ ಅಲೆನ್ 29 ರನ್ ಸಿಡಿಸಿದರು. ಮಧ್ಯಮ ಕ್ರಮಾಂಕದಲ್ಲಿ ಗ್ಲೆನ್ ಫಿಲಿಪ್ಸ್ 28 ಎಸೆತಗಳಲ್ಲಿ 39 ರನ್ ಗಳಿಸಿದರು. ಅವರ ಮೇಲೆ ಬಹಳ ನಿರೀಕ್ಷೆಯಿದ್ದರೂ ಆ ಮಟ್ಟದ ಸ್ಫೋಟಕ ಆಟ ಅವರಿಂದ ಬರಲಿಲ್ಲ.

ಆರಂಭದಲ್ಲಿ ಕಿವೀಸ್ ವಿಕೆಟ್‌ಗಳು ನಿಧಾನಕ್ಕೆ ಉದುರಿದವು. ಮಧ್ಯಮ ಕ್ರಮಾಂಕದಲ್ಲೂ ಅದು ಬ್ಯಾಟಿಂಗ್ ಕುಸಿತವನ್ನೇನೂ ಅನುಭವಿಸಲಿಲ್ಲ. ಹಾಗಂತ ನೆಲಕಚ್ಚಿ ನಿಂತ ಬ್ಯಾಟರ್‌ಗಳು ದೊಡ್ಡ ಮೊತ್ತವನ್ನೂ ಗಳಿಸಲಿಲ್ಲ. ಇದು ನ್ಯೂಜಿಲೆಂಡ್‌ಗೆ ದೊಡ್ಡ ಹೊಡೆತ ನೀಡಿತು. ಇಂಗ್ಲೆಂಡ್ ಪರ ಸ್ಪಿನ್ನರ್‌ಗಳಾದ ಆದಿಲ್ ರಶೀದ್ 28 ರನ್‌ಗೆ 2, ವಿಲ್ ಜ್ಯಾಕ್ಸ್ 23 ರನ್‌ಗೆ 2 ವಿಕೆಟ್ ಪಡೆದರು.

ಸಂಕ್ಷಿಪ್ತ ಸ್ಕೋರ್: ನ್ಯೂಜಿಲೆಂಡ್ 20 ಓವರ್, 159/9 (ಟಿಮ್ ಸೀಫರ್ಟ್ 35, ಗ್ಲೆನ್ ಫಿಲಿಪ್ಸ್ 39, ಆದಿಲ್ ರಶೀದ್ 28ಕ್ಕೆ 2, ವಿಲ್ ಜ್ಯಾಕ್ಸ್ 23ಕ್ಕೆ 2). ಇಂಗ್ಲೆಂಡ್ 19.3 ಓವರ್, 161/6 (ಟಾಮ್ ಬ್ಯಾಂಟನ್ 33, ವಿಲ್ ಜ್ಯಾಕ್ಸ್ 32, ರಚಿನ್ ರವೀಂದ್ರ 19ಕ್ಕೆ 3)

ಸ್ಥಿತ್ಯಂತರ
ರನ್ ಬೆನ್ನತ್ತಿದ ಇಂಗ್ಲೆಂಡ್ ಪರ 3ನೇ ವಿಕೆಟ್‌ಗೆ 48, 5ನೇ ವಿಕೆಟ್‌ಗೆ 42, 7ನೇ ವಿಕೆಟ್‌ಗೆ 44 ರನ್‌ಗಳ ಜೊತೆಯಾಟ ದಾಖಲಾಯಿತು. ಇದು ಆ ತಂಡದ ಜಯದಲ್ಲಿ ನಿರ್ಣಾಯಕ ಪಾತ್ರ ವಹಿಸಿತು.

ಲಂಕಾ ಈಗಾಗಲೇ ಟಿ20 ವಿಶ್ವಕಪ್‌ನಿಂದ ಹೊರಕ್ಕೆ
ಪಾಕಿಸ್ತಾನಕ್ಕೆ ಗೆಲ್ಲಲೇಬೇಕಾದ ಪ್ರತಿಷ್ಠೆಯ ಪಂದ್ಯ

ಹಳೆಯ ನೆನಪುಗಳ ನಡುವೆ ಇಂದು ಪಾಕ್-ಲಂಕಾ ಕದನ

ಪಲ್ಲೇಕೆಲೆ: ಪಾಕಿಸ್ತಾನ-ಶ್ರೀಲಂಕಾ ನಡುವೆ ಶನಿವಾರ ಶ್ರೀಲಂಕಾದ ಪಲ್ಲೇಕೆಲೆ ಮೈದಾನದಲ್ಲಿ ಟಿ20 ವಿಶ್ವಕಪ್ ಗುಂಪು-2ರ ಸೂಪರ್-8 ಪಂದ್ಯ ನಡೆಯಲಿದೆ. ಈಗಾಗಲೇ ಸೆಮಿಫೈನಲ್ ಆಸೆ ಕೈಬಿಟ್ಟಿರುವ ಶ್ರೀಲಂಕಾಕ್ಕೆ ಇದು ಕೇವಲ ಇನ್ನೊಂದು ಪಂದ್ಯ. ಪಾಕಿಸ್ತಾನದ ಪಾಲಿಗೆ ಗೆಲ್ಲಲೇಬೇಕಾದ ಪ್ರತಿಷ್ಠೆಯ ಪಂದ್ಯ. ಒಂದು ಕಾಲದ ವಿಶ್ವಪ್ರಸಿದ್ಧ ತಂಡಗಳಾಗಿದ್ದ ಪಾಕಿಸ್ತಾನ-ಶ್ರೀಲಂಕಾಗಳು ತಮ್ಮ ಹಳೆಯ ನೆನಪುಗಳ ನಡುವೆ ಶನಿವಾರ ಕಣಕ್ಕಿಳಿಯಬೇಕಾದ ದುಸ್ಥಿತಿ ಎದುರಾಗಿದೆ.

ಸೂಪರ್-8 ಹಂತದಲ್ಲಿ ಪಾಕಿಸ್ತಾನ- ನ್ಯೂಜಿಲೆಂಡ್ ನಡುವಿನ ಪಂದ್ಯ ಮಳೆಯಿಂದ ರದ್ದಾಯಿತು. ಇದು ಪಾಕಿಸ್ತಾನವನ್ನು ಒತ್ತಡಕ್ಕೆ ಸಿಲುಕಿಸಿತು. ಅನಂತರ ಇಂಗ್ಲೆಂಡ್ ವಿರುದ್ಧ ಅದು ಸೋಲುವುದರೊಂದಿಗೆ ಅದರ ಸೆಮಿಫೈನಲ್ ಅವಕಾಶ ಬಹುತೇಕ ಹಾಳಾಯಿತು. ಇದರ ನಡುವೆ ಈ ಹಂತದಲ್ಲಿ ತಾನಾಡಲಿರುವ ಅಂತಿಮ ಪಂದ್ಯದಲ್ಲಿ ಗೆಲ್ಲುವ ನಿರೀಕ್ಷೆಯನ್ನು ಪಾಕಿಸ್ತಾನ ಹೊಂದಿದೆ.

ವಸ್ತುಸ್ಥಿತಿಯಲ್ಲಿ ಪಾಕಿಸ್ತಾನ ತಂಡ ತನ್ನ ಹಳೆಯ ಸಾಮರ್ಥ್ಯವನ್ನು ಕಳೆದುಕೊಂಡಿದೆ. ಅದರೆದುರು ಆಡುವುದು ಎದುರಾಳಿಗಳಿಗೆ ಒಂದು ಸವಾಲೇ ಅಲ್ಲ ಅನ್ನುವ ಪರಿಸ್ಥಿತಿಯಿದೆ. ಬ್ಯಾಟಿಂಗ್ ಹಾಗೂ ಬೌಲಿಂಗ್ ಎರಡೂ ದುರ್ಬಲವಾಗಿದೆ. ಭಾರತದ ರಣಜಿ ತಂಡಗಳೂ ಪಾಕಿಸ್ತಾನಕ್ಕಿಂತ ಉತ್ತಮ ಬ್ಯಾಟರ್‌ಗಳನ್ನು ಹೊಂದಿವೆ. ಬೌಲಿಂಗ್‌ನಲ್ಲಿ ಶಾಹೀನ್ ಅಫ್ರಿದಿ, ಮೊಹಮ್ಮದ್ ನವಾಜ್ ಇದ್ದರೂ ಅವರು ಈ ಕೂಟದಲ್ಲಿ ಬೆಚ್ಚಿಬೀಳಿಸುವ ಪ್ರದರ್ಶನ ತೋರಿಲ್ಲ. ಸದ್ಯದ ಪರಿಸ್ಥಿತಿಯಲ್ಲಿ ಇಡೀ ಪಾಕಿಸ್ತಾನ ಕ್ರಿಕೆಟ್ ತಂಡ ಕೋಮಾ ಸ್ಥಿತಿಯಲ್ಲಿದೆ. ಅದು ಸುಧಾರಿಸಿಕೊಳ್ಳುವ ಯಾವ ಲಕ್ಷಣವನ್ನೂ ತೋರುತ್ತಿಲ್ಲ.

ಇನ್ನು ಆತಿಥೇಯ ಶ್ರೀಲಂಕಾದ ಸ್ಥಿತಿ ದಾರುಣವಾಗಿದೆ. ಮಹೇಲ ಜಯವರ್ಧನೆ, ಕುಮಾರ ಸಂಗಕ್ಕರರಂತಹ ಆಟಗಾರರು ಇರುವವರೆಗೆ ವಿಶ್ವದ ಪ್ರಬಲ ತಂಡಗಳನ್ನು ನಡುಗಿಸಿದ್ದ ವಿಶ್ವವಿಜೇತ ಶ್ರೀಲಂಕಾ ಈಗ ಜಿಂಬಾಬ್ವೆಯಂತಹ ತಂಡಗಳೆದುರೂ ಸೋಲುತ್ತಿದೆ. ಆ ತಂಡ ಎಚ್ಚೆತ್ತುಕೊಳ್ಳದೇ ಹೋದರೆ ಇನ್ನು ಕೆಲವೇ ವರ್ಷಗಳಲ್ಲಿ ಐರ್ಲೆಂಡ್‌ನಂತಹ ತಂಡಗಳ ಪಟ್ಟಿಯಲ್ಲಿ ಸ್ಥಾನ ಪಡೆಯುವುದು ಖಚಿತ.

ಪಂದ್ಯಾರಂಭ: ರಾತ್ರಿ 7
ಸ್ಥಳ: ಪಲ್ಲೇಕೆಲೆ, ಶ್ರೀಲಂಕಾ
ನೇರಪ್ರಸಾರ: ಸ್ಟಾರ್‌ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

ಅಂಕಣ ಹೀಗಿದೆ
ಪಲ್ಲೇಕೆಲೆ ಅಂಕಣ ಬ್ಯಾಟಿಂಗ್ ಸ್ನೇಹಿ. ಇಲ್ಲಿ 150ಕ್ಕಿಂತ ಅಧಿಕ ಮೊತ್ತ ಬರುವುದು ಸಾಮಾನ್ಯ. ಆರಂಭದಲ್ಲಿ ವೇಗಿಗಳಿಗೆ ಉತ್ತಮ ನೆರವು ನೀಡುತ್ತದೆ. ಒಂದು ವೇಳೆ ಬ್ಯಾಟರ್‌ಗಳು ನೆಲೆನಿಂತರೆ ಅವರಿಗೆ ಉತ್ತಮ ಹೊಡೆತಗಳನ್ನು ಬಾರಿಸಲು ಸಾಧ್ಯ. ಬೌಲರ್‌ಗಳು ಶಿಸ್ತುಬದ್ಧ ದಾಳಿ ನಡೆಸುವುದು ಅನಿವಾರ್ಯ.

ಸಂಭಾವ್ಯ ತಂಡಗಳು
ಪಾಕಿಸ್ತಾನ: ಸಾಹಿಬ್‌ಜಾದಾ ಫರ್ಹಾನ್, ಸೈಮ್ ಆಯುಬ್, ಸಲ್ಮಾನ್ ಆಘಾ (ನಾಯಕ), ಬಾಬರ್ ಆಜಮ್, ಫಖರ್ ಜಮಾನ್, ಉಸ್ಮಾನ್ ಖಾನ್, ಶದಾಬ್ ಖಾನ್, ಮೊಹಮ್ಮದ್ ನವಾಜ್, ಶಾಹೀನ್ ಅಫ್ರಿದಿ, ಸಲ್ಮಾನ್ ಮಿರ್ಜಾ, ಉಸ್ಮಾನ್ ತಾರಿಖ್.
ಶ್ರೀಲಂಕಾ: ಪಾಥುಮ್ ನಿಸ್ಸಂಕ, ಕುಶಲ್ ಮೆಂಡಿಸ್, ಚರಿತ ಅಸಲಂಕ, ಪವನ್ ರತ್ನಾಯಕೆ, ಕಮಿಂಡು ಮೆಂಡಿಸ್, ದಸುನ್ ಶನಕ (ನಾಯಕ), ದುನಿತ್ ವೆಲ್ಲಲಗೆ, ದುಶನ್ ಹೇಮಂತ, ದುಷ್ಮಂತ ಚಮೀರ, ಮಹೀಶ್ ತೀಕ್ಷಣ, ದಿಲ್ಶಾನ್ ಮದುಶಂಕ.

ಆಸ್ಟ್ರೇಲಿಯಾ ವಿರುದ್ಧದ 3 ಪಂದ್ಯಗಳ ಸರಣಿ: ಹರ್ಮನ್ ಪಡೆಗೆ 2-0 ಅಪಜಯ

ಮಹಿಳಾ ಏಕದಿನ: ಭಾರತಕ್ಕೆ ಸರಣಿ ಸೋಲು

ಹೋಬರ್ಟ್: ಆಸ್ಟ್ರೇಲಿಯಾ ಮಹಿಳಾ ಕ್ರಿಕೆಟ್ ತಂಡ ಇನ್ನೂ ಪಂದ್ಯ ಬಾಕಿಯಿರುವಂತೆಯೇ ಭಾರತದ ವಿರುದ್ಧದ 3 ಪಂದ್ಯಗಳ ಏಕದಿನ ಸರಣಿಯನ್ನು 2-0ಯಿಂದ ಜೈಸಿದೆ. ಮೂರನೇ ಹಾಗೂ ಅಂತಿಮ ಏಕದಿನ ಪಂದ್ಯ ಭಾನುವಾರ ನಡೆಯಲಿದೆ. ಆಸೀಸ್ ಪರ ಜೀವದಾನಗಳ ಲಾಭ ಪಡೆದ ಜಾರ್ಜಿಯಾ ವೋಲ್ ಅವರು ಶತಕ (101) ಬಾರಿಸಿದರೆ, ಫೋಬ್ ಲಿಚ್‌ಫೀಲ್ಡ್ 80 ರನ್ ಬಾರಿಸಿದರು. ಇವರಿಬ್ಬರ ಬ್ಯಾಟಿಂಗ್ ನೆರವಿನಿಂದ ಆಸ್ಟ್ರೇಲಿಯಾ ತಂಡ ಮಹಿಳೆಯರ ಏಕದಿನ ಸರಣಿಯ ಎರಡನೇ ಪಂದ್ಯದಲ್ಲಿ ಭಾರತ ತಂಡದ ವಿರುದ್ಧ ಶುಕ್ರವಾರ ಐದು ವಿಕೆಟ್‌ಗಳ ಸುಲಭ ಜಯಗಳಿಸಿತು.

ಭಾರತ ತಂಡ ಬ್ಯಾಟಿಂಗ್ ಸ್ನೇಹಿ ಪಿಚ್‌ನಲ್ಲಿ 50 ಓವರ್‌ಗಳಲ್ಲಿ 9 ವಿಕೆಟ್‌ಗೆ 251 ರನ್ ಹೊಡೆಯಿತು. ಪ್ರತೀಕಾ ರಾವಲ್ (52) ಮತ್ತು ಹರ್ಮನ್‌ಪ್ರೀತ್ ಕೌರ್ (54) ಅವರು ಅರ್ಧಶತಕಗಳನ್ನು ಬಾರಿಸಿದರು. ಆಸ್ಟ್ರೇಲಿಯಾ ಇನ್ನೂ 13.5 ಓವರುಗಳಿರುವಂತೆಯೇ 5 ವಿಕೆಟ್‌ಗೆ 252 ರನ್ ಬಾರಿಸಿತು. ವಿಕೆಟ್ ಕೀಪರ್ ರಿಚಾ ಘೋಷ್ ಅವರು ಲೆಗ್‌ಸೈಡ್‌ನಲ್ಲಿ ಕ್ಯಾಚ್ ಪಡೆಯಲು ವಿಫಲರಾದ ಬಳಿಕ ವೋಲ್, ಏಕದಿನ ಪಂದ್ಯಗಳಲ್ಲಿ ತಮ್ಮ ಎರಡನೇ ಶತಕ ಪೂರೈಸಿದರು. ಅದಕ್ಕೆ ಮೊದಲು ಅವರಿಗೆ ಎರಡು ಜೀವದಾನ ದೊರಕಿತ್ತು. ವೋಲ್ ಮತ್ತು ಲಿಚ್‌ಫೀಲ್ಡ್ ಎರಡನೇ ವಿಕೆಟ್‌ಗೆ 119 ರನ್ ಸೇರಿಸಿದ್ದರಿಂದ ಆಸ್ಟ್ರೇಲಿಯಾ ತಂಡದ ಹಾದಿ ಸುಗಮವಾಯಿತು.

ಭಾರತದ ಇನಿಂಗ್ಸ್ ವೇಳೆ ಪ್ರತೀಕಾ ರಾವಲ್ ಮತ್ತು ಸ್ಮೃತಿ ಮಂಧಾನಾ (31) ಜೋಡಿ ಮೊದಲ ವಿಕೆಟ್‌ಗೆ 78 ರನ್ ಸೇರಿಸಿ ಭಾರತ ತಂಡಕ್ಕೆ ಉತ್ತಮ ಆರಂಭ ನೀಡಿತ್ತು. ಮಧ್ಯಮಹಂತದಲ್ಲಿ ಹರ್ಮನ್‌ಪ್ರೀತ್ ಉಪಯುಕ್ತ ಇನಿಂಗ್ಸ್ ಆಡಿದರು.

ಸಂಕ್ಷಿಪ್ತ ಸ್ಕೋರು: ಭಾರತ 50 ಓವರ್, 251/9 (ಪ್ರತೀಕಾ ರಾವಲ್ 52, ಹರ್ಮನ್‌ಪ್ರೀತ್ 54, ಆ್ಯಶ್ಲೆ ಗಾರ್ಡನರ್ 39ಕ್ಕೆ 2, ಅನ್ನಾಬೆಲ್ ಸದರ್ಲೆಂಡ್ 37ಕ್ಕೆ 2, ಅಲನಾ ಕಿಂಗ್ 41ಕ್ಕೆ 2). ಆಸ್ಟ್ರೇಲಿಯಾ 36.1 ಓವರ್, 252/5 (ಫೋಬ್ ಲಿಚ್‌ಫೀಲ್ಡ್ 80, ಜಾರ್ಜಿಯಾ ವೋಲ್ 101, ಬೆತ್ ಮೂನಿ 31; ಕಾಶ್ವಿ ಗೌತಮ್ 47ಕ್ಕೆ 2, ದೀಪ್ತಿ ಶರ್ಮಾ 32ಕ್ಕೆ2)

ಐಎಸ್‌ಎಲ್: ಬೆಂಗಳೂರು ತಂಡಕ್ಕೆ ಸೋಲಿನ ಹೊಡೆತ

ಬೆಂಗಳೂರು: ಇಲ್ಲಿನ ಕಂಠೀರವ ಮೈದಾನದಲ್ಲಿ ನಡೆದ ಇಂಡಿಯನ್ ಸೂಪರ್ ಲೀಗ್ ಫುಟ್‌ಬಾಲ್ ಪಂದ್ಯದಲ್ಲಿ ಬೆಂಗಳೂರು ಎಫ್‌ಸಿ ತಂಡ ಶುಕ್ರವಾರ 2-0 ಗೋಲುಗಳಿಂದ ಪಂಜಾಬ್ ಎಫ್‌ಸಿ ವಿರುದ್ಧ ಆಘಾತಕಾರಿಯಾಗಿ ಸೋಲನುಭವಿಸಿದೆ. ಇದು ಈ ಋತುವಿನಲ್ಲಿ ಪಂಜಾಬ್‌ಗೆ ದಕ್ಕಿದ ಮೊದಲ ಗೆಲುವು. ಬೆಂಗಳೂರು ಫೆ.15ರಂದು ಸ್ಪೋರ್ಟಿಂಗ್ ಡೆಲ್ಲಿ ವಿರುದ್ಧ 2-0ಯಿಂದ ಗೆಲುವು ಸಾಧಿಸಿತ್ತು. ಫೆ.22ರಂದು ನಾರ್ಥ್‌ಈಸ್ಟ್ ಯುನೈಟೆಡ್ ವಿರುದ್ಧ ಕಡೆಯ ಹಂತದಲ್ಲಿ ಡ್ರಾ ಫಲಿತಾಂಶವನ್ನು ಪಡೆದಿತ್ತು. ಪ್ರಸ್ತುತ ಪಂದ್ಯದಲ್ಲಿ ಗೆಲ್ಲುವ ಮಹತ್ವಾಕಾಂಕ್ಷೆ ಹೊಂದಿದ್ದ ಬೆಂಗಳೂರು ಅನಿರೀಕ್ಷಿತವಾಗಿ ಸೋತುಹೋಗಿದೆ.

ಪಂಜಾಬ್ ಪರ ಎಫಿಯಂಗ್ ಎನ್ನುಂಗುಸಿ ಪಂದ್ಯದ 20 ಮತ್ತು 30ನೇ ನಿಮಿಷದಲ್ಲಿ ಗೋಲು ಸಿಡಿಸಿದರು. ಬೆಂಗಳೂರು ಗೋಲು ಗಳಿಸಲು ಸಾಧ್ಯವಾಗದೇ ಪರದಾಡಿತು. ಈ ಸೋಲಿನೊಂದಿಗೆ ಬೆಂಗಳೂರು ಅಂಕಪಟ್ಟಿಯಲ್ಲಿ 6ನೇ ಸ್ಥಾನಕ್ಕೆ ಕುಸಿದಿದೆ. ಅದು ಇದುವರೆಗೆ 3 ಪಂದ್ಯಗಳನ್ನಾಡಿದ್ದು, ಒಟ್ಟು 4 ಅಂಕಗಳನ್ನು ಹೊಂದಿದೆ. ಗೆದ್ದ ಪಂಜಾಬ್ 2 ಪಂದ್ಯಗಳಲ್ಲಿ 1 ಜಯ, 1 ಸೋಲಿನೊಂದಿಗೆ 3 ಅಂಕ ಗಳಿಸಿ ಅಂಕಪಟ್ಟಿಯಲ್ಲಿ 7ನೇ ಸ್ಥಾನದಲ್ಲಿದೆ.

ಟಿ20 ವಿಶ್ವಕಪ್ ವೇಳೆಯಲ್ಲೇ ರಿಂಕುಗೆ ಆಘಾತ
ಯಕೃತ್ತಿನ ಕ್ಯಾನ್ಸರ್‌ಗೆ ಖಾನ್‌ಚಂದ್ ಬಲಿ

ಕ್ರಿಕೆಟಿಗ ರಿಂಕು ಸಿಂಗ್ ತಂದೆ ನಿಧನ

ದೆಹಲಿ: ದೀರ್ಘಕಾಲದಿಂದ ಯಕೃತ್ತಿನ ಕ್ಯಾನ್ಸರ್ ರೋಗದಿಂದ ಬಳಲುತ್ತಿದ್ದ, ಖ್ಯಾತ ಕ್ರಿಕೆಟಿಗ ರಿಂಕು ಸಿಂಗ್ ಅವರ ತಂದೆ ಖಾನ್‌ಚಂದ್ ಸಿಂಗ್ ಶುಕ್ರವಾರ ನಿಧನರಾಗಿದ್ದಾರೆ. ಕಳೆದ ವಾರ ಆರೋಗ್ಯ ಸ್ಥಿತಿ ಗಂಭೀರವಾದ ಕಾರಣ ಖಾನ್ ಚಂದ್ ಸಿಂಗ್ ಅವರನ್ನು ಗ್ರೇಟರ್ ನೋಯ್ಡಾದಲ್ಲಿರುವ ಯಥಾರ್ಥ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ರಿಂಕು ಸಿಂಗ್ ನಿಯಮಿತವಾಗಿ ಆಸ್ಪತ್ರೆಗೆ ಭೇಟಿ ನೀಡಿ ತಂದೆಯ ಆರೋಗ್ಯ ವಿಚಾರಿಸುತ್ತಿದ್ದರು. ಜಿಂಬಾಬ್ವೆ ಪಂದ್ಯಕ್ಕೂ ಮೊದಲು ರಿಂಕು ಸಿಂಗ್ ಯಥಾರ್ಥ್ ಆಸ್ಪತ್ರೆಗೆ ಭೇಟಿ ನೀಡಿದ್ದರು.

ಆದರೆ ನಾಲ್ಕನೇ ಹಂತದ ಯಕೃತ್ತಿನ ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಖಾನ್‌ಚಂದ್ ಸಿಂಗ್, ಚಿಕಿತ್ಸೆ ಫಲಕಾರಿಯಾಗದೇ ಇಂದು ಬೆಳಗ್ಗೆ ಕೊನೆಯುಸಿರೆಳೆದಿದ್ದಾರೆ ಎಂದು ಆಸ್ಪತ್ರೆ ಮೂಲಗಳು ತಿಳಿಸಿವೆ. ಖಾನ್‌ಚಂದ್ ಸಿಂಗ್ ಅವರ ಪಾರ್ಥಿವ ಶರೀರವನ್ನು ಅವರ ಸ್ವಂತ ಊರಾದ ಉತ್ತರಪ್ರದೇಶದ ಅಲಿಘಡಕ್ಕೆ ತರಲಾಗಿದೆ. ರಿಂಕು ಸಿಂಗ್ ಕ್ರಿಕೆಟ್ ಅನ್ನು ತಮ್ಮ ವೃತ್ತಿಯನ್ನಾಗಿ ಆಯ್ಕೆ ಮಾಡಿಕೊಳ್ಳುವಲ್ಲಿ ಅವರ ತಂದೆ ಖಾನ್‌ಚಂದ್ ಸಿಂಗ್ ಬಹಳ ದೊಡ್ಡ ಪಾತ್ರ ನಿರ್ವಹಿಸಿದ್ದರು. ಅಲಿಘಡದಲ್ಲಿ ಸಿಲಿಂಡರ್ ವಿತರಣಾ ಸಿಬ್ಬಂದಿಯಾಗಿ ಕೆಲಸ ಮಾಡುತ್ತಿದ್ದ ರಿಂಕು ಸಿಂಗ್ ತಂದೆ, ತಮ್ಮ ಆರ್ಥಿಕ ಮಿತಿಗಳ ಹೊರತಾಗಿಯೂ ಪುತ್ರನ ಕ್ರಿಕೆಟ್ ಜೀವನ ರೂಪಿಸಲು ಶ್ರಮಿಸಿದ್ದರು.



ಇನ್ನು ರಿಂಕು ಸಿಂಗ್ ಅವರ ತಂದೆಯ ನಿಧನಕ್ಕೆ ಭಾರತ ಕ್ರಿಕೆಟ್ ತಂಡದ ಹಾಲಿ ಮತ್ತು ಮಾಜಿ ಆಟಗಾರರು ತೀವ್ರ ಸಂತಾಪ ಸೂಚಿಸಿದ್ದಾರೆ. 2023ರ ಏಷ್ಯನ್ ಗೇಮ್ಸ್ ಕ್ರೀಡಾಕೂಟದಲ್ಲಿ ಪಾಲ್ಗೊಂಡು ಸ್ವರ್ಣ ಪದಕ ಗೆದ್ದ ಭಾರತ ತಂಡದ ಸದಸ್ಯರಾಗಿದ್ದ ರಿಂಕು ಸಿಂಗ್, ತಮಗೆ ಬಂದ 3 ಕೋಟಿ ರು.ಗಳಲ್ಲಿ ತಮ್ಮ ತಂದೆಗೆ ಕಾರು ಕೊಡಿಸಿದ್ದರು. ರಿಂಕು ಸಿಂಗ್ ತಮ್ಮ ತಂದೆ ಖಾನ್ ಚಂದ್ ಸಿಂಗ್‌ಗೆ ಕಾರು ಉಡುಗೊರೆ ನೀಡಿದ್ದು ಸುದ್ದಿಯಾಗಿತ್ತು.

ಪಂದ್ಯದ 4ನೇ ದಿನ ಕರ್ನಾಟಕದ ವಿರುದ್ಧ ಜಮ್ಮುಕಾಶ್ಮೀರಕ್ಕೆ ಮೊದಲ ಇನಿಂಗ್ಸ್ ಮುನ್ನಡೆ | 2ನೇ ಇನಿಂಗ್ಸ್ ಸೇರಿ 477 ರನ್ ಮುನ್ನಡೆ, ಪಂದ್ಯ ಡ್ರಾದತ್ತ, ಜಮ್ಮುಕಾಶ್ಮೀರ ಪ್ರಶಸ್ತಿಯತ್ತ

ಐತಿಹಾಸಿಕ ರಣಜಿ ಟ್ರೋಫಿ ಸನಿಹ ಜಮ್ಮುಕಾಶ್ಮೀರ

ಹುಬ್ಬಳ್ಳಿ: ಇದೇ ಮೊದಲ ಬಾರಿಗೆ ರಣಜಿ ಟ್ರೋಫಿಯನ್ನು ಎತ್ತಿ ಹಿಡಿದು ಐತಿಹಾಸಿಕ ಸಾಧನೆ ಮಾಡಲು ಜಮ್ಮುಕಾಶ್ಮೀರ ಸಿದ್ಧವಾಗಿದೆ. ಹುಬ್ಬಳ್ಳಿಯಲ್ಲಿ ನಡೆಯುತ್ತಿರುವ ರಣಜಿ ಟ್ರೋಫಿ ಫೈನಲ್ ಪಂದ್ಯದ 4ನೇ ದಿನವಾದ ಶುಕ್ರವಾರ ಆತಿಥೇಯ ಕರ್ನಾಟಕದ ವಿರುದ್ಧ ಅದು 477 ರನ್‌ಗಳ ಮುನ್ನಡೆ ಸಾಧಿಸಿದೆ. ಬಹುಶಃ ಕರ್ನಾಟಕಕ್ಕೆ ಇಷ್ಟೇ ಮೊತ್ತವನ್ನು ಗುರಿಯಾಗಿ ನೀಡಿದರೂ ಶನಿವಾರ ಅದನ್ನು ಬೆನ್ನತ್ತಲು ಸಾಧ್ಯವೇ ಇಲ್ಲ. ಹೀಗಾಗಿ ಪಂದ್ಯ ಡ್ರಾ ಆಗುವುದು ಖಚಿತ. ಆಗ ಮೊದಲ ಇನಿಂಗ್ಸ್ ಮುನ್ನಡೆ ಆಧಾರದಲ್ಲಿ ಜಮ್ಮುಕಾಶ್ಮೀರದಲ್ಲಿ ಮೊದಲ ಬಾರಿಗೆ ಟ್ರೋಫಿ ಎತ್ತಲಿದೆ. ಮೊದಲ ಬಾರಿಗೆ ಫೈನಲ್‌ಗೇರಿದ ಪರಸ್ ಡೋಗ್ರಾ ನೇತೃತ್ವದ ತಂಡ ಇದೇ ಯತ್ನದಲ್ಲಿ ಪ್ರಶಸ್ತಿ ಜೈಸಲು ಸಿದ್ಧವಾಗಿದೆ.

ಶನಿವಾರ ಏನಾದರೂ ಪವಾಡ ನಡೆದರೆ ಮಾತ್ರ ಕರ್ನಾಟಕ ಚಾಂಪಿಯನ್ ಆಗಬಹುದು. ಮೂರನೇ ದಿನ 5 ವಿಕೆಟ್ ನಷ್ಟಕ್ಕೆ 220 ರನ್ ಗಳಿಸಿದ್ದ ಕರ್ನಾಟಕ ಶುಕ್ರವಾರ, 73 ರನ್ ಸೇರಿಸಿ 93.3 ಓವರ್‌ಗಳಲ್ಲಿ 293 ರನ್‌ಗಳಿಗೆ ಆಲೌಟ್ ಆಯ್ತು. ಔಟಾಗದೇ ಇದ್ದ ಮಾಯಾಂಕ್ ಅಗರ್ವಾಲ್ 160 ರನ್ ಹೊಡೆದರೆ, ಕೃತಿಕ್ ಕೃಷ್ಣ 36 ರನ್, ವೇಗಿ ವಿಜಯ್ ಕುಮಾರ್ ವೈಶಾಕ್ ಔಟಾಗದೇ 17 ರನ್ ಹೊಡೆದರು. 291 ರನ್‌ಗಳ ಮುನ್ನಡೆಯೊಂದಿಗೆ ಎರಡನೇ ಇನಿಂಗ್ಸ್ ಆರಂಭಿಸಿದ ಜಮ್ಮುಕಾಶ್ಮೀರ 57 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 186 ರನ್ ಹೊಡೆದಿದೆ. ಖಮ್ರಾನ್ ಇಕ್ಬಾಲ್ ಔಟಾಗದೇ 94 ರನ್, ಅಬ್ದುಲ್ ಸಮದ್ 32 ರನ್, ಸಾಹಿಲ್ ಲೂತ್ರಾ, ಔಟಾಗದೇ 16 ರನ್ ಹೊಡೆದು ಬ್ಯಾಟಿಂಗ್ ಕಾಯ್ದುಕೊಂಡಿದ್ದಾರೆ.

ಕರ್ನಾಟಕ ಪರ ವೇಗಿ ಪ್ರಸಿದ್ಧ್‌ಕೃಷ್ಣ 2 ವಿಕೆಟ್ ಪಡೆದರೆ, ವಿಜಯ್ ಕುಮಾರ್ ವೈಶಾಖ್ ಮತ್ತು ಶ್ರೇಯಸ್ ಗೋಪಾಲ್ ತಲಾ ಒಂದೊಂದು ವಿಕೆಟ್ ಗಳಿಸಿದರು. ಶನಿವಾರ ಕೊನೆಯ ದಿನವಾಗಿದ್ದು, ಜಮ್ಮುಕಾಶ್ಮೀರವನ್ನು ಬೇಗನೇ ಆಲೌಟ್ ಮಾಡಿ ಏಕದಿನ ಶೈಲಿಯಲ್ಲಿ ಬ್ಯಾಟ್ ಬೀಸಿದರೆ ಮಾತ್ರ ಕರ್ನಾಟಕ ಜಯಗಳಿಸಬಹುದು. ಈ ರೀತಿ ಫಲಿತಾಂಶ ಬರಬೇಕಾದರೆ ಪವಾಡವೇ ನಡೆಯಬೇಕು.

ಸಂಕ್ಷಿಪ್ತ ಸ್ಕೋರ್: ಜಮ್ಮುಕಾಶ್ಮೀರ 1ನೇ ಇನಿಂಗ್ಸ್ 584, 2ನೇ ಇನಿಂಗ್ಸ್ 186/4 (ಖಮ್ರಾನ್ ಇಕ್ಬಾಲ್ 94, ಅಬ್ದುಲ್ ಸಮದ್ 32, ಪ್ರಸಿದ್ಧ್‌ಕೃಷ್ಣ 42ಕ್ಕೆ 2).

ತಂಡದ ಆಟದಿಂದ ಓಮರ್‌ಗೆ ಸಂತೋಷ, ಹುಬ್ಬಳ್ಳಿಗೆ ಆಗಮನದ ಚಿತ್ರ ಪೋಸ್ಟ್

ಇಂದು ಜಮ್ಮುಕಾಶ್ಮೀರ ಸಿಎಂ ಪಂದ್ಯ ವೀಕ್ಷಣೆ!

ಚೊಚ್ಚಲ ರಣಜಿ ಚಾಂಪಿಯನ್ ಆಗುವ ಹೊಸ್ತಿಲಿನಲ್ಲಿರುವ ಜಮ್ಮುಕಾಶ್ಮೀರದ ಕೊನೆಯ ದಿನದ ಆಟವನ್ನು ವೀಕ್ಷಿಸಲು ಸಿಎಂ ಓಮರ್ ಅಬ್ದುಲ್ಲಾ ಹುಬ್ಬಳ್ಳಿಗೆ ಬರುತ್ತಿದ್ದಾರೆ. ಈಗಾಗಲೇ ಅವರು ವಿಮಾನ ಹತ್ತಿದ್ದು ವಿಮಾನದಲ್ಲಿ ಕುಳಿತ ಫೋಟೋವನ್ನು ಹಂಚಿಕೊಂಡಿದ್ದಾರೆ. 'ರಣಜಿ ಟ್ರೋಫಿಯ ಫೈನಲ್ ಪಂದ್ಯ ಆಡುತ್ತಿರುವ ಜಮ್ಮುಕಾಶ್ಮೀರ ಕ್ರಿಕೆಟ್ ತಂಡವನ್ನು ಹುರಿದುಂಬಿಸಲು ಹುಬ್ಬಳ್ಳಿಗೆ ನಾವು ಹೋಗುತ್ತಿದ್ದೇವೆ. ಅವರು ಈಗಾಗಲೇ ಫೈನಲ್ ತಲುಪುವ ಮೂಲಕ ಲಕ್ಷಾಂತರ ಜನರು ತಮ್ಮ ಸಾಧನೆಗಳ ಬಗ್ಗೆ ಹೆಮ್ಮೆ ಪಡುವಂತೆ ಮಾಡಿದ್ದಾರೆ. ನಾಳೆಯ ದಿನವನ್ನು (ಶನಿವಾರ) ಸ್ಟ್ಯಾಂಡ್‌ಗಳಲ್ಲಿ ಆಟಗಾರರನ್ನು ಹುರಿದುಂಬಿಸುತ್ತಾ ಕಳೆಯಲು ನಾನು ನಿಜವಾಗಿಯೂ ಎದುರು ನೋಡುತ್ತಿದ್ದೇನೆ ಎಂದು ಬರೆದುಕೊಂಡಿದ್ದಾರೆ. ಇತಿಹಾಸದಲ್ಲೇ ಇದೇ ಮೊದಲಬಾರಿಗೆ ಜಮ್ಮುಕಾಶ್ಮೀರ ಫೈನಲ್‌ಗೇರಿದೆ, ಮಾತ್ರವಲ್ಲ ಪ್ರಶಸ್ತಿ ಗೆಲ್ಲುವ ಸನಿಹದಲ್ಲಿದೆ.



5 ವಿಕೆಟ್‌ಗಳ ನಿರಂತರ ಸಾಧಕ ವೇಗಿ ಆಖಿಬ್ ನಬಿ

ಕರ್ನಾಟಕ ವಿರುದ್ಧದ ರಣಜಿ ಪಂದ್ಯದಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದ ವೇಗದ ಬೌಲರ್ ಆಖಿಬ್ ನಬಿಯ ಪ್ರದರ್ಶನದ ಬಗ್ಗೆ ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ಸೌರವ್ ಗಂಗೂಲಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಕಠಿಣ ಪರಿಸರ ಕಠಿಣ ವ್ಯಕ್ತಿಗಳನ್ನೇ ಸೃಷ್ಟಿಮಾಡುತ್ತದೆ. ಈ ಯುವ ವೇಗಿಯನ್ನು ಇಂಗ್ಲೆಂಡ್ ಪ್ರವಾಸಕ್ಕೆ ಆಯ್ಕೆ ಮಾಡಿ ಎಂದು ಸೌರವ್ ಗಂಗೂಲಿ ಹೇಳಿದ್ದಾರೆ. ಹುಬ್ಬಳ್ಳಿಯ ಕೆಎಸ್‌ಸಿಎ ಮೈದಾನದಲ್ಲಿ ನಡೆಯುತ್ತಿರುವ ರಣಜಿ ಟ್ರೋಫಿ ಫೈನಲ್‌ನಲ್ಲಿ ಕರ್ನಾಟಕದ ಪ್ರಥಮ ಇನಿಂಗ್ಸ್ ವೇಳೆ 5 ವಿಕೆಟ್ ಎಗರಿಸಿದ ಜಮ್ಮು ಮತ್ತು ಕಾಶ್ಮೀರದ ಯುವ ವೇಗದ ಬೌಲರ್ ಆಖಿಬ್ ನಬಿ ಎಲ್ಲ ಕಡೆಯಿಂದ ಮೆಚ್ಚುಗೆಯನ್ನು ಪಡೆಯುತ್ತಿದ್ದಾರೆ. ಅವರು ಪಡೆದಿದ್ದು ಸಾಮಾನ್ಯ ವಿಕೆಟ್‌ಗಳನ್ನಲ್ಲ, ಕೆ.ಎಲ್. ರಾಹುಲ್, ಮಾಯಾಂಕ್, ಕರುಣ್ ನಾಯರ್, ರವಿಚಂದ್ರನ್ ಸ್ಮರಣ್‌ರಂತಹ ಘಟಾನುಘಟಿಗಳ ವಿಕೆಟ್‌ಗಳನ್ನು! ಬಂಗಾಳ ವಿರುದ್ಧ ಸೆಮಿಫೈನಲ್, ಮಧ್ಯಪ್ರದೇಶದ ವಿರುದ್ಧ ಕ್ವಾರ್ಟರ್ ಫೈನಲ್‌ನಲ್ಲೂ ಸತತ 5 ವಿಕೆಟ್‌ಗಳನ್ನು ಗಳಿಸಿದ್ದರು.